
# ಕುಮಾರಭಾರತಿ

## ಒಂಬತ್ತನೆಯ ಇಯತ್ತೆ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

## ಕನ್ನಡ ಪ್ರಥಮ ಮತ್ತು ದ್ವಿತೀಯ ಭಾಷೆ

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ - 2116/(ಪ್ರ.ಕ. 43/16) ಎಸ್‌ಡಿ-4 ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿ. 3.3.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ನಿರ್ಧಾರಿತಗೊಳಿಸಲು ಮಾನ್ಯತೆ ಕೊಡಲಾಗಿದೆ.

# ಕುಮಾರಭಾರತಿ

## ಒಂಬತ್ತನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

C5X1JU

ತಮ್ಮ ಸ್ಮಾರ್ಟ್‌ಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

**ಪ್ರಥಮಾವೃತ್ತಿ : 2017**
**ಪುನರ್ಮುದ್ರಣ : 2022**

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ – 4

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ** :
ಡಾ. ಕೆ. ಕೆ. ಪತ್ತಾರ, ಅಧ್ಯಕ್ಷ
ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯ
ಶ್ರೀ. ಬಿ. ಎಸ್. ಕಾಪಸೆ, ಸದಸ್ಯ
ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯ
ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆ
ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ- ಸಚಿವ

**ಮುಖ್ಯ ಸಮನ್ವಯಕ**
ಶ್ರೀಮತಿ. ಪ್ರಾಚಿ ರವೀಂದ್ರ ಸಾಠೆ

**ಕನ್ನಡ ಅಭ್ಯಾಸಗಟ ಸದಸ್ಯರು** :
ಶ್ರೀ. ಶ್ರೀಶೈಲ ಜಿ. ಅವಟಿ
ಶ್ರಿ. ಜಿ. ಡಿ. ಮೋರೆ
ಶ್ರೀ. ಟಿ. ವ್ಹಿ. ಸದಾನಂದ

**ಸಂಯೋಜನ ಪ್ರಮುಖರು** :
ಡಾ. ಸದಾನಂದ ಎಂ ಬಿಳ್ಳೂರ, ವಿಶೇಷಾಧಿಕಾರಿ, ಕನ್ನಡ
ಶ್ರೀ. ಆರ್. ಎಮ್. ಗಣಾಚಾರಿ, ವಿಷಯ ಸಹಾಯಕ ಕನ್ನಡ

**ಮುಖಪುಟ** : ಶ್ರಿ. ಆಭಾ ಭಾಗವತ

**ಅಕ್ಷರ ಜೋಡಣೆ** : ಕೇಸನ್ ಲ್ಯಾಂಗ್ವೇಜ್ ಬ್ಯೂರೋ

**ನಿರ್ಮಿತಿ** : ಶ್ರೀ. ಸಚ್ಚಿತಾನಂದ ಆಫಳೆ.
ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ರಾಜೇಂದ್ರ ಚಿಂದರಕರ,
ನಿರ್ಮಿತಿ ಅಧಿಕಾರಿ
ಶ್ರೀ. ರಾಜೇಂದ್ರ ಪಾಂಡಲೋಸಕರ,
ಸಹಾಯಕ ನಿರ್ಮಿತಿ ಅಧಿಕಾರಿ

**ಕಾಗದ** : 70 ಜಿ. ಎಸ್. ಎಮ್. ಕ್ರೀಮ್‌ವೋವ್ಹ್

**ಮುದ್ರಣಾದೇಶ** :

**ಮುದ್ರಕ** :

**ಪ್ರಕಾಶಕ** : ಶ್ರೀ. ವಿವೇಕ ಗೋಸಾವಿ, ನಿಯಂತ್ರಕ,
ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ – 25.

# ಪ್ರಸ್ತಾವನೆ

ಪ್ರೀಯ ವಿದ್ಯಾರ್ಥಿ ಗೆಳೆಯರೆ,

ಒಂಬತ್ತನೆಯ ತರಗತಿಯಲ್ಲಿ ಸ್ವಾಗತವಿದೆ. ಎಂಟನೆಯ ಇಯತ್ತೆಯ ಕನ್ನಡ 'ಬಾಲಭಾರತಿ' ಪುಸ್ತಕ ಓದಿದ್ದೀರಿ. ನೀವು ಹೊಸ ಪಠ್ಯ ಪುಸ್ತಕವನ್ನು ನೋಡುವ ಸಲುವಾಗಿ ಬಹಳ ಉತ್ಸುಕರಾಗಿದ್ದೀರಿ. ಒಂಬತ್ತನೆ ಇಯತ್ತೆಯ 'ಕುಮಾರಭಾರತಿ' ಈ ಹೊಸ ಪಠ್ಯಪುಸ್ತಕ ನಿಮ್ಮ ಕೈಯಲ್ಲಿಡಲು ನಮಗೆ ಅತ್ಯಂತ ಆನಂದವಾಗುತ್ತದೆ.

ಪಠ್ಯಪುಸ್ತಕವು ನಿಮ್ಮ ಗೆಳೆಯ ಅದರ ಸಂಬಂಧವು ನಿಮ್ಮ ದಿನ ನಿತ್ಯದ ಜೀವನಕ್ಕೆ ಸಂಬಂಧವಿದೆ. ಈ ಪುಸ್ತಕವು ನಿಮ್ಮ ಜ್ಞಾನವನ್ನು ಹೆಚ್ಚಿಸುವುದ್ದಾಗಿದ್ದು, ಜ್ಞಾನನಿರ್ಮಿತಿಗೆ ಸಂಧಿ ನೀಡುವುದಾಗಿದೆ. ನಿಮ್ಮ ಭಾವನೆ, ಕಲ್ಪನೆ, ಇಚ್ಛೆಯನ್ನು ವ್ಯಕ್ತಪಡಿಸುವ ಸಲುವಾಗಿ ವಿಷಯದ ವಾಚನ, ಬರೆಯುವ ಸಲುವಾಗಿ ಭಾಷೆಯ ಉಪಯೋಗ ಆಗುವುದು. ನಿಮಗೆ ಭಾಷಾಕೌಶಲ್ಯಗಳು ಮನದಟ್ಟು ಆಗುವ ಸಲುವಾಗಿ ವೈವಿಧ್ಯಮಯ ಅಧ್ಯಯನ-ಅನುಭವ ಈ ಪಠ್ಯಪುಸ್ತಕದಲ್ಲಿ ಸಮಾವೇಶ ಗೊಳಿಸಲಾಗಿದೆ. ಉದಾ. ಗದ್ಯ, ಪದ್ಯ, ಸಂವಾದ, ಚರ್ಚೆ, ವ್ಯಾಕರಣ ಮತ್ತು ಲೇಖನ ಕೌಶಲ್ಯಗಳ ವಿಕಾಸ ಇತ್ಯಾದಿ. ನಿಮ್ಮ ಅಧ್ಯಯನ ಪ್ರಕ್ರಿಯೆ ರಂಜಕವಾಗುವ ದೃಷ್ಟಿಯಿಂದ ಪಾಠದ ಕೊನೆಗೆ ವಿವಿಧ ಕೃತಿ, ಉಪಕ್ರಮ, ಭಾಷಾ ಆಟಗಳನ್ನು ಕೊಡಲಾಗಿದೆ. ನೀವು ಈ ಸ್ವಾಧ್ಯಾಯಗಳನ್ನು ಬಿಡಿಸುವಾಗ ನಿಮಗೆ ಅವು ಸರಳವಾಗಿರುವಂತೆ ಅವುಗಳ ದಕ್ಷತೆಯನ್ನು ತೆಗೆದುಕೊಳ್ಳಲಾಗಿದೆ. ನಿಮಗೆ ಭಾಷಾ ವಿಷಯದ ಆಸಕ್ತಿ ಆಗುವಂತೆ ಈ ದೃಷ್ಟಿಯಿಂದ ಪ್ರಯತ್ನ ಮಾಡಲಾಗಿದೆ. ಭಾಷಾ ಕೌಶಲ್ಯಗಳ ಜೊತೆಗೆ ನಿರೀಕ್ಷಣೆಯ ಕ್ಷಮತೆ, ನಿರ್ಣಯ ಕ್ಷಮತೆ, ಚಿಕಿತ್ಸಕ ವಿಚಾರ ಪ್ರಕ್ರಿಯೆ, ಭಾವ-ಭಾವನೆಗಳ ಸಮಾಯೋಜನೆ ಈ ಜೀವನ ಕೌಶಲ್ಯಗಳು ನಿಮಗೆ ರೂಢಿಯಾಗುವ ದೃಷ್ಟಿಯಿಂದ ಈ ಪುಸ್ತಕದಲ್ಲಿ ಅಧ್ಯಯನ-ಅನುಭವಗಳನ್ನು ಕೊಡಲಾಗಿದೆ.

ಕನ್ನಡವು ನಿಮ್ಮ ಮಾತೃಭಾಷೆ ಇದೆ. ಈ ಭಾಷೆಯ ಉಪಯೋಗವು ಸಮೃದ್ಧಿಯಾಗುವ ಅಪೇಕ್ಷೆ ಇದೆ. ಲಕ್ಷ್ಯಪೂರ್ವಕವಾಗಿ ಕೇಳುವುದು. ಸ್ಪಷ್ಟವಾಗಿ, ಆತ್ಮ ವಿಶ್ವಾಸದಿಂದ ಮಾತನಾಡಲು ಬರುವಂತೆ, ಮಾತನಾಡುವಾಗ ಗ್ರಾಂಥಿಕ ಪರಿಭಾಷೆಯ ಉಪಯೋಗ ಮಾಡಲು ಬರುವಂತೆ; ನಿಮ್ಮ ವಿಚಾರಗಳನ್ನು ಮೌಖಿಕ ಅಥವಾ ಬರವಣಿಗೆಯ ಸ್ವರೂಪದಲ್ಲಿ ವ್ಯವಸ್ಥಿತವಾಗಿ ಮಂಡಿಸಲು ಬರುವ ಸಲುವಾಗಿ ಈ ಪುಸ್ತಕದಲ್ಲಿ ವೈವಿಧ್ಯಮಯ ಆಶೆಯ ಕೊಡಲಾಗಿದೆ. ಅವುಗಳನ್ನು ನೀವು ಅಭ್ಯಾಸ ಮಾಡಬೇಕೆಂಬುದೇ ನಮ್ಮ ಅಪೇಕ್ಷೆ ಇದೆ.

ಕೃತಿ ಪ್ರಧಾನವಾಗಿರುವ ಈ ಒಂಬತ್ತನೆ ಇಯತ್ತೆಯ ಕುಮಾರಭಾರತಿ ಹೊಸ ಪಠ್ಯಪುಸ್ತಕವು ನಿಮಗೆ ನಿಜವಾಗಿಯೂ ಹಿಡಿಸುತ್ತದೆ ಎಂಬುದೆ ನಮ್ಮ ಆಸೆ ಇದೆ.

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ
ದಿನಾಂಕ: 28 ಎಪ್ರಿಲ್ 2017, ಅಕ್ಷಯ ತೃತೀಯಾ
2, ವೈಶಾಖ, ಶಕೆ 1939

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ

ಮತ್ತು ಉಪಾಸನಾ **ಸ್ವಾತಂತ್ರ್ಯ;**

ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು

ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು

ಆಶ್ವಾಸನೆ ನೀಡುವ **ಬಂಧುತ್ವವನ್ನು**

ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**

ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ

**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

| | ಕನ್ನಡ ಕುಮಾರಭಾರತಿ ಒಂಬತ್ತನೆಯ ಇಯತ್ತೆ |
|---|---|
| ಕ್ಷೇತ್ರಗಳು | ಕ್ಷಮತೆಗಳು |
| ಶ್ರವಣ | 1. ದಿನಪತ್ರಿಕೆಯನ್ನು ಕ್ರಮವಾಗಿ ವಿದ್ಯಾಥಿಗಳಿಂದ ಓದಿಸುವುದು; ಇತರ ವಿದ್ಯಾರ್ಥಿಗಳು ಲಕ್ಷ್ಯಪೂರ್ವಕವಾಗಿ ಆಲಿಸುವರು.<br>2. ವಾರ್ತೆ, ಪ್ರಕಟನೆಗಳನ್ನು ರೇಡಿಯೋ, ದೂರದರ್ಶನದ ಮುಖಾಂತರ ಉದ್ದೇಶಪೂರ್ವಕವಾಗಿ ವರ್ಗದಲ್ಲಿ ಕೇಳಿಸುವುದು.<br>3. ಪಠ್ಯದ ಮಾದರಿ ವಾಚನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮಾಡುವುದು.<br>4. ಪ್ರಭಾವಿ ಭಾಷಣಕಾರರ ಭಾಷಣವನ್ನು ವರ್ಗದಲ್ಲಿ ಕೇಳಿಸುವುದು.<br>5. ಸಾಹಿತಿಗಳ ಜೊತೆಗೆ ಸಂಭಾಷಣೆ ಏರ್ಪಡಿಸುವುದು.<br>6. ಆಯ್ದ ಉಪಯುಕ್ತ ಸುದ್ದಿಗಳನ್ನು ವರ್ಗದಲ್ಲಿ ಓದಿಸಿ, ಚರ್ಚೆ ಮಾಡುವುದು. |
| ಭಾಷಣ/ ಸಂಭಾಷಣ | 1. ಜೀವನೋಪಯೋಗಿ ವಿಷಯಗಳನ್ನು ನೀಡಿ, ಸಹಾಯಕ ಅಂಶಗಳನ್ನು ವರ್ಗದಲ್ಲಿ ಚರ್ಚಿಸಿ ಭಾಷಣ ಮಾಡಲು ಪ್ರೋತ್ಸಾಹಿಸುವುದು.<br>2. ಪಠ್ಯಾಧಾರಿತ ಅಂಶಗಳ ಆಧಾರದ ಮೇಲೆ ವಿದ್ಯಾರ್ಥಿಗಳ ಅನುಭವಗಳನ್ನು ಸೇರಿಸಿ ಭಾಷಣರ್ಥಿ ಮಾಡಲು ಹುರಿದುಂಬಿಸುವುದು.<br>3. ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಡೆಗಟ್ಟಲು ನಗರಪಾಲಿಕಯವರು ಹೊರಡಿಸಿದ ಪ್ರಕಟನೆಯ ಆಧಾರದ ಮೇಲೆ ವರ್ಗ ಮಿತ್ರರೊಂದಿಗೆ ಸಂಭಾಷಣೆ ಮಾಡಿಸುವುದು.<br>4. ಕಸದ ವಿಂಗಡನೆಯ ಕುರಿತು ವರ್ಗದಲ್ಲಿ ಚರ್ಚಿಸಿ, 'ಕಸದಿಂದ ರಸ' ಈ ಮಾದರಿಯ ವಿದ್ಯಾರ್ಥಿಗಳ ಅನುಭವ ಪ್ರಪಂಚಕ್ಕೆ ಪರಿಚಯವಿರುವ ವಿಷಯಗಳ ಮೇಲೆ ಭಾಷಣ ಸ್ಪರ್ಧೆ ಏರ್ಪಡಿಸುವುದು.<br>5. ಪಠ್ಯಕ್ಕೆ ಆಧರಿಸಿದ ವಿಷಯಕ್ಕೆ ತಕ್ಕಂತೆ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ನೀತಿ, ಮೌಲ್ಯಗಳನ್ನು ವರ್ಗದಲ್ಲಿ ಚರ್ಚಿಸಿ, ವಿದ್ಯಾರ್ಥಿಗಳಿಗೆ ಒಂದು ಸನ್ನಿವೇಶ ನೀಡಿ, ನಾಲ್ಕೈದು ವಿದ್ಯಾರ್ಥಿಗಳು ಸಂಭಾಷಣೆ ಮಾಡಲು ಪ್ರೊತ್ಸಾಹಿಸುವುದು.<br>6. ಕೌಟುಂಬಿಕ ಪರಿಸರಕ್ಕೆ ಸಂಬಂಧಿಸಿದ ಉತ್ತಮ ಮೌಲ್ಯ, ರೂಢಿಗಳನ್ನು ಆಚರಿಸುವ ಕುರಿತು ಸಂಭಾಷಣೆಯ ವಿಷಯಗಳನ್ನು ನೀಡಿ ವರ್ಗದಲ್ಲಿ ಸಾದರಪಡಿಸುವುದು. |
| ವಾಚನ | 1. ದಿನಪತ್ರಿಕೆ, ಪಠ್ಯೇತರ ಲೇಖನಗಳನ್ನು ಸರಾಗವಾಗಿ ಓದಲು ಸಕಾರಾತ್ಮಕವಾಗಿ ಯತ್ನಿಸುವುದು.<br>2. ಆಕಾಶವಾಣಿ, ದೂರದರ್ಶನ, ಸಿ.ಡಿ.ಗಳ ಮಾಧ್ಯಮದಿಂದ ನಿರರ್ಗಳ ಭಾಷೆಯನ್ನು ಕೇಳಿಸುವುದು.<br>3. ಪ್ರಕಟವಾಚನ ಹಾಗೂ ಮೌನವಾಚನಗಳ ಮೂಲಕ ಪಠ್ಯ ಹಾಗೂ ಪಠ್ಯೇತರ ವಿವರಗಳನ್ನು ಅರ್ಥೈಸಿಕೊಂಡು ಉತ್ತಮ ವಾಚನ ಕಲೆಯನ್ನು ಮೈಗೂಡಿಸಿಕೊಳ್ಳುವುದು.<br>4. ಪ್ರಚಲಿತ ವಿದ್ಯಮಾನಗಳನ್ನು ಸುಲಲಿತವಾಗಿ ಓದುವುದನ್ನು ರೂಢಿಸಿಕೊಳ್ಳುವುದು.<br>5. ಗುಂಪಿನಲ್ಲಿ ಸಮರ್ಥವಾಗಿ ಓದಲು ಬರುವುದು.<br>6. ಪಠ್ಯದ ಗದ್ಯ, ಪದ್ಯಗಳನ್ನು ಧ್ವನಿಯ ಏರಿತಗಳೊಂದಿಗೆ, ರಾಗಬದ್ಧವಾಗಿ, ಸ್ಪಷ್ಟವಾಗಿ ಓದುವುದನ್ನು ರೂಢಿಸಿಕೊಳ್ಳಬೇಕು. |

| | | |
|---|---|---|
| ಲೇಖನ | 1. | ಸ್ವತಂತ್ರವಾಗಿ ವಿಚಾರಗಳನ್ನು ಬರೆಯುವುದು. |
| | 2. | ಕಾಗುಣಿತ ದೋಷರಹಿತ ಸುಂದರ ಬರವಣಿಗೆ ಇರುವುದು. |
| | 3. | ವ್ಯಾಕರಣಶುದ್ಧ ಬರೆಹ ರೂಢಿಸಿಕೊಳ್ಳುವುದು. |
| | 4. | ಸ್ವಯಂ ಬರೆಹದ ಆನಂದವನ್ನು ಅನುಭವಿಸಿ, ವಿಚಾರಗಳನ್ನು ಸ್ಪಷ್ಟವಾಗಿ ಮಂಡಿಸುವುದು. |
| | 5. | ನಿಬಂಧ ಬರಹ, ಗಾದೆಮಾತು, ನಾಣ್ಣುಡಿಗಳ ಯೋಗ್ಯ ಬಳಕೆ ಮಾಡುವುದು; ಅರ್ಥ, ಉದಾಹರಣೆ ಸಹಿತ ಬರೆಯುವುದು. |
| | 6. | ಪತ್ರಲೇಖನದ ಶೈಲಿ ನಿರ್ದಿಷ್ಟ ಉದ್ದೇಶಕ್ಕೆ ಅನುಸರಿಸಿ ಕರಾರುವಕ್ಕಾಗಿ ಇರುವುದು. |
| | 7. | ಕವಿತೆಗಳ ಭಾವಾರ್ಥ; ನಿಮ್ಮ ಅನುಭವಗಳೊಂದಿಗೆ ಅನ್ವಯಿಸಿ ಬರೆಯುವುದು. |
| | 8. | ಸಾರಾಂಶ ಲೇಖನ, ಕಲ್ಪನಾ ವಿಸ್ತಾರ, ಕಥಾಲೇಖನ ಕಲೆಯನ್ನು ಪ್ರಭಾವಶಾಲಿಯಾಗಿ ರೂಢಿಸಿಕೊಳ್ಳುವುದು. |

| | | |
|---|---|---|
| ಅಧ್ಯಯನ ಕೌಶಲಗಳು | 1. | ಮಹತ್ವದ ವಾರ್ತೆ, ಶಾಲೆಯಲ್ಲಿ ಜರುಗಿದ ವಿಶೇಷ ಕಾರ್ಯಕ್ರಮಗಳಲ್ಲಿ ಶೈಕ್ಷಣಿಕವಾಗಿ ಮಹತ್ವವಿರುವ ಅಂಶಗಳನ್ನು ಟಿಪ್ಪಣಿ ಮಾಡುವುದು. |
| | 2. | ರಸಪ್ರಶ್ನೆ, ಸಮೂಹಗೀತೆ, ಭಾಷಣ ಸ್ಪರ್ಧೆ ಮುಂತಾದವುಗಳಲ್ಲಿ ಭಾಗವಹಿಸುವುದು. |
| | 3. | ಪದಬಂಧ, ಅಂತ್ಯಾಕ್ಷರಿ (ಹಾಡಿನ ಬಂಡಿ) ಶಬ್ದಗಳಿಂದ ಅನೇಕ ಶಬ್ದಗಳನ್ನು ರಚಿಸುವ ಕೃತಿಗಳನ್ನು ರಚಿಸುವುದು. |
| | 4. | ಶಾಲಾಬಾಹ್ಯ ಪರಿಸರದಲ್ಲಿ ಭಾಷಾ ಕೌಶಲಗಳ ವಿಕಾಸ ಪ್ರಕ್ರಿಯೆಯನ್ನು ಗುರುತಿಸಿ, ಅವುಗಳನ್ನು ಬೆಳೆಸಿಕೊಳ್ಳುವುದು. ಉದಾ : ವಿವಿಧ ಸಂಘ, ಸಂಸ್ಥೆಗಳಲ್ಲಿ ಏರ್ಪಡಿಸುವ ಸಾಂಸ್ಕೃತಿಕ, ಶೈಕ್ಷಣಿಕ ಸ್ಪರ್ಧೆಗಳು. |
| | 5. | ಶಾಲೆಯ ಸಾಂಸ್ಕೃತಿಕ, ಕ್ರೀಡಾ ಮಹೋತ್ಸವಗಳ ಮೂಲಕ ಭಾಷಾ ಕೌಶಲಗಳನ್ನು ಬೆಳೆಸಿಕೊಳ್ಳುವುದು. |
| | 6. | ಆಡುಭಾಷೆಯ ವಿವರಗಳನ್ನು ಶಿಷ್ಟಭಾಷೆಯಲ್ಲಿ ಪರಿವರ್ತಿಸಲು ಬರುವುದು. |
| | 7. | ನಮಗೆ ಬೇಕಾದಂಥ ಚಿತ್ರಗಳು, ವ್ಹಿಡಿಯೋ ಕ್ಲಿಪ್ಸ್, ಫಿಲ್ಮಗಳು ಇತ್ಯಾದಿಗಳನ್ನು ಶೋಧಿಸಲು ಬರುವುದು. |
| | 8. | ಸಂಗಣಕದಲ್ಲಿಯ ಸಾಹಿತ್ಯವನ್ನು ಉಪಯೋಗಿಸುವಾಗ ಯೋಗ್ಯವಾದ ಶ್ರೇಯಸ್ಸು/ ಸಂದರ್ಭಗಳನ್ನು ನಮೂದಿಸುವ ದಕ್ಷತೆ ವಹಿಸುವುದು. |
| | 9. | ಸಂಗಣಕದಲ್ಲಿಯ ಸಾಹಿತ್ಯವನ್ನು ಉಪಯೋಗಿಸುವಾಗ ಸಂಬಂಧಿತರ ಹಕ್ಕುಗಳ ಉಲ್ಲಂಘನೆವಾಗದಂತೆ ದಕ್ಷತೆ ವಹಿಸುವುದು. |
| | 10. | ಸಂಗಣಕದಲ್ಲಿಯ ಮಾಹಿತಿಯನ್ನು ಇದ್ದಕ್ಕಿದ್ದಂತೆ ಬಳಸದೆ ಅದನ್ನು ಯೋಗ್ಯ ರೀತಿಯಲ್ಲಿ ಸಂಕಲನ, ಸಂಪಾದನೆ ಮಾಡಬೇಕೆಂಬುದರ ಬಗ್ಗೆ ತಿಳಿದುಕೊಳ್ಳುವುದು. |

# ಪರಿವಿಡಿ (ಪ್ರಥಮ ಭಾಷೆ)

## ಪದ್ಯ ವಿಭಾಗ


| ಅ.ಕ್ರ | ಪದ್ಯ | ಕವಿಗಳು | ಪುಟ ಸಂಖ್ಯೆ | ಕ್ಯುಆರ್. ಕೋಡ |
|---|---|---|---|---|
| 1. | ಕನ್ನಡ ತಾಯಿಯ ಸುಪ್ರಭಾತ | – ಚಂದ್ರಶೇಖರ ಕಂಬಾರ | 1 | |
| 2. | ಮಾಡಿಸು ಶಕ್ತಿ ಸ್ನಾನ | – ಸಿದ್ದಯ್ಯ ಪುರಾಣಿಕ | 4 | |
| 3. | ಮರಳಿ ಯತ್ನವ ಮಾಡು | – ಇಂದಿರಾ ಸಾಲಿಯಾನ | 6 | |
| 4. | ದಿವ್ಯ ಭಾರತ ಗೀತೆ | – ನರಸಿಂಹ ಪರಾಂಜಪೆ | 8 | |
| 5. | ಪ್ರೀತಿ ಮತ್ತು ಕರ್ತವ್ಯ | – ಯು. ಆರ್. ಅನಂತಮೂರ್ತಿ | 10 | |
| 6. | ಇಲ್ಲೇ ಸರಿ | – ಅರವಿಂದ ನಾಡಕರ್ಣಿ | 12 | |
| 7. | ಯುಗಾದಿಯ ಹಾಡು | – ಜಿ. ಎಸ್. ಶಿವರುದ್ರಪ್ಪ | 14 | |
| 8. | ಬಿಂಕವು ಬಣ್ಣವಡೆಯದು | – ಸಂಚಿಯ ಹೊನ್ನಮ್ಮ | 16 | |
| 9. | ಸೋಮೇಶ್ವರ ಶತಕ | – ಪಾಲ್ಕುರಿಕೆ ಸೋಮನಾಥ | 19 | |
| 10. | ಕರ್ಣಾನಾರೆಂದ | – ಕುಮಾರವ್ಯಾಸ | 22 | |


## ಗದ್ಯ ವಿಭಾಗ


| ಅ.ಕ್ರ | ಗದ್ಯ | ಲೇಖಕರು | ಪುಟ ಸಂಖ್ಯೆ | ಕ್ಯುಆರ್. ಕೋಡ |
|---|---|---|---|---|
| 1. | ಶ್ರೀ ಕೃಷ್ಣ ಪಾರಿಜಾತ | – ಅರ್ಜುನ ಕೊರಟಕರ | 26 | |
| 2. | ಹಸಿರು ಕ್ರಾಂತಿ – | – ನಾಗೇಶ ಹೆಗಡೆ | 32 | |
| 3. | ನೀನಾರಿಗಾದೆಯೋ ಎಲೆ ಮಾನವಾ | – ಹೆಚ್. ದುಂಡಿರಾಜ | 36 | |
| 4. | ಭಾರತ ಹೃದಯಕ್ಕೆ ಮರುಜೀವ | – ಜಿ.ಕೆ. ಮಧ್ಯಸ್ಥ | 42 | |
| 5. | ಬಾಹುಬಲಿ – | – ವಾಗೇಶ್ವರೀ ಶಿವರಾಮ | 45 | |
| 6. | ಜೈವಿಕ ತಂತ್ರಜ್ಞಾನ | – ಎ. ಬಾಲರಾಜು | 52 | |
| 7. | ಏಣಗಿ ಬಾಳಪ್ಪ – | – ಗಣೇಶ ಅಮೀನಗಡ | 60 | |
| 8. | ಒಂದು ಲೋಟ ಹಾಲಿನ ಋಣ | – ಎ. ಆರ್. ಮಣಿಕಾಂತ | 65 | |
| 9. | ಹಚ್ಚೆ | – ಹೆಚ್. ಎಂ. ಮಹೇಶ್ವರಯ್ಯ | 71 | |
| 10. | ನೀವಾವೋದುಗಳಂ ಬಲ್ಲಿರಿ | – ಶಿವಕೋಟ್ಯಾಚಾರ್ಯ | 78 | |


## ಸ್ಥೂಲ ಅಭ್ಯಾಸ

### ಅನುಕ್ರಮಣಿಕೆ


| ಅ.ಕ್ರ | ಪಾಠಗಳು | ಲೇಖಕರು | ಪುಟ ಸಂ | ಕ್ಯುಆರ್. ಕೋಡ |
|---|---|---|---|---|
| 1) | ವಿಮೋಚನೆ | – ಎಫ್.ಪಿ. ಲಕ್ಷ್ಮೀಶ್ವರ ಮಠ | 82 | |
| 2) | ಗಂಗಜ್ಜಿ | – ಎಂ. ಕೆ. ಇಂದಿರಾ | 86 | |
| 3) | ಅಂತಃಕರಣ ಮಿಡಿದಾಗ | – ಶಾಂತಾದೇವಿ ಮಾಳವಾಡ | 92 | |


## ಬರವಣಿಗೆಯ ಕೌಶಲಗಳು ಹಾಗೂ ಮೌಖಿಕ ಕಲೆ


| ಅ.ಕ್ರ | ಪಾಠಗಳು ಪುಟ | |
|---|---|---|
| 1) | ಪತ್ರಲೇಖನ | 98 |
| 2) | ಆಮಂತ್ರಣ ಪತ್ರಿಕೆ | 100 |
| 3) | ಪತ್ರಿಕಾ ವರದಿಯ ಮಾದರಿ | 101 |
| 4) | ಭಾಷಣ ಕೌಶಲ | 101 |
| 5) | ನಿಬಂಧ ಬರಹ | 103 |
| 6) | ಕಥಾ ಲೇಖನ | 104 |
| 7) | ಗಾದೆ ಮಾತಿನ ವಿಸ್ತರಣೆ | 104 |
| 8) | ಅಪರಿಮಿತ ಗದ್ಯ ಖಂಡ | 105 |
| 9) | ಸಂಭಾಷಣ ಕೌಶಲ | 105 |
| 10) | ಜಾಹೀರಾತಿನ ಮಾದರಿ | 106 |


## ವ್ಯಾಕರಣ ವಿಭಾಗ


| ಅ.ಕ್ರ | ಪಾಠಗಳು | ಪುಟ |
|---|---|---|
| I) | ವ್ಯಾಕರಣ | 109 |
| | 1) ಸಂಧಿಗಳು | 109 |
| | 2) ಸಮಾಸಗಳು | 111 |
| | 3) ವಾಕ್ಯ ಪ್ರಕಾರಗಳು | 113 |
| | 4) ವಾಕ್ಯ ಪ್ರಯೋಗಗಳು | 114 |
| | 5) ಪಡೆ ನುಡಿಗಳು | 114 |
| II) | ಅಲಂಕಾರ | 115 |
| III) | ಛಂದಸ್ಸು | 116 |

# ಪರಿವಿಡಿ (ದ್ವಿತೀಯ ಭಾಷೆ)

## ಪದ್ಯ ವಿಭಾಗ


| ಅ.ಕ್ರ | ಪದ್ಯ | ಕವಿಗಳು | ಪುಟ ಸಂಖ್ಯೆ | ಕ್ಯುಆರ್. ಕೋಡ |
|---|---|---|---|---|
| 1. | ಮಾಡಿಸು ಶಕ್ತಿ ಸ್ನಾನ | – ಸಿದ್ದಯ್ಯ ಪುರಾಣಿಕ | 4 | |
| 2. | ಮರಳಿ ಯತ್ನವ ಮಾಡು | – ಇಂದಿರಾ ಸಾಲಿಯಾನ | 6 | |
| 3. | ಪ್ರೀತಿ ಮತ್ತು ಕರ್ತವ್ಯ | – ಯು. ಆರ್. ಅನಂತಮೂರ್ತಿ | 10 | |
| 4. | ಇಲ್ಲೇ ಸರಿ | – ಅರವಿಂದ ನಾಡಕರ್ಣಿ | 12 | |
| 5. | ಯುಗಾದಿಯ ಹಾಡು | – ಜಿ. ಎಸ್. ಶಿವರುದ್ರಪ್ಪ | 14 | |


## ಗದ್ಯ ವಿಭಾಗ


| ಅ.ಕ್ರ | ಗದ್ಯ | ಲೇಖಕರು | ಪುಟ ಸಂಖ್ಯೆ | ಕ್ಯುಆರ್. ಕೋಡ |
|---|---|---|---|---|
| 1. | ಹಸಿರು ಕ್ರಾಂತಿ – | – ನಾಗೇಶ ಹೆಗಡೆ | 32 | |
| 2. | ನೀನಾರಿಗಾದೆಯೋ ಎಲೆ ಮಾನವಾ | – ಹೆಚ್. ದುಂಡಿರಾಜ | 36 | |
| 3. | ಬಾಹುಬಲಿ – | – ವಾಗೇಶ್ವರೀ ಶಿವರಾಮ | 45 | |
| 4. | ಏಣಗಿ ಬಾಳಪ್ಪ | – ಗಣೇಶ ಅಮೀನಗಡ | 60 | |
| 5. | ಒಂದು ಲೋಟ ಹಾಲಿನ ಋಣ | – ಎ. ಆರ್. ಮಣಿಕಾಂತ | 65 | |
| 6. | ಹಚ್ಚೆ | – ಹೆಚ್. ಎಂ. ಮಹೇಶ್ವರಯ್ಯ | 71 | |


## ಸ್ಥೂಲ ಅಭ್ಯಾಸ


| ಅ.ಕ್ರ | ಪಾಠಗಳು | ಲೇಖಕರು | ಪುಟ ಸಂ | ಕ್ಯುಆರ್. ಕೋಡ |
|---|---|---|---|---|
| 1) | ಗಂಗಜ್ಜಿ | – ಎಂ. ಕೆ. ಇಂದಿರಾ | 86 | |
| 2) | ಅಂತಃಕರಣ ಮಿಡಿದಾಗ | – ಶಾಂತಾದೇವಿ ಮಾಳವಾಡ | 92 | |


## ಬರವಣಿಗೆಯ ಕೌಶಲಗಳು ಹಾಗೂ ಮೌಖಿಕ ಕಲೆ


| ಅ.ಕ್ರ | ಪಾಠಗಳು | ಪುಟ |
|---|---|---|
| 1) | ಪತ್ರಲೇಖನ | 98 |
| 2) | ಆಮಂತ್ರಣ ಪತ್ರಿಕೆ | 100 |
| 3) | ಪತ್ರಿಕಾ ವರದಿಯ ಮಾದರಿ | 101 |
| 4) | ಭಾಷಣ ಕೌಶಲ | 101 |
| 5) | ನಿಬಂಧ ಬರಹ | 103 |
| 6) | ಕಥಾ ಲೇಖನ | 104 |
| 7) | ಗಾದೆ ಮಾತಿನ ವಿಸ್ತರಣೆ | 104 |
| 8) | ಅಪರಿಮಿತ ಗದ್ಯ ಖಂಡ | 105 |
| 9) | ಸಂಭಾಷಣ ಕೌಶಲ | 105 |
| 10) | ಜಾಹೀರಾತಿನ ಮಾದರಿ | 106 |


## ವ್ಯಾಕರಣ ವಿಭಾಗ


| ಅ.ಕ್ರ | ಪಾಠಗಳು | ಪುಟ |
|---|---|---|
| I) | ವ್ಯಾಕರಣ | 109 |
| | 1) ಸಂಧಿಗಳು | 109 |
| | 2) ಸಮಾಸಗಳು | 111 |
| | 3) ವಾಕ್ಯ ಪ್ರಕಾರಗಳು | 113 |
| | 4) ವಾಕ್ಯ ಪ್ರಯೋಗಗಳು | 114 |
| | 5) ಪಡೆ ನುಡಿಗಳು | 114 |
| II) | ಅಲಂಕಾರ | 115 |

# 1. ಕನ್ನಡ ತಾಯಿಯ ಸುಪ್ರಭಾತ

**ಕವಿ ಪರಿಚಯ :** ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟ ಚಂದ್ರಶೇಖರ ಕಂಬಾರ ಇವರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೇರಿ ಗ್ರಾಮದಲ್ಲಿ 2/1/1927ರಂದು ಜನಿಸಿದರು. 1968-1970ರವರೆಗೆ ಕಂಬಾರರು ಅಮೇರಿಕೆಯ ಚಿಕಾಗೋ ವಿ.ವಿದಲ್ಲಿ ಪ್ರಾಧ್ಯಾಪಕರಾಗಿ ಮತ್ತು 1991ರಿಂದ 1998ರವರೆಗೆ ಕನ್ನಡ ವಿ.ವಿ ಹಂಪಿಯ ಸ್ಥಾಪಕ ಉಪಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಜೋಕುಮಾರಸ್ವಾಮಿ', ಜೈಸಿದನಾಯಕ ನಾಟಕಗಳನ್ನು, ಕವಿಗಳಾಗಿ ಹೇಳತೀನಿ ಆಯ್ದ ಕವನಗಳು. ಚಕೋರಿ ಮಹಾಕಾವ್ಯ ಮೊದಲಾದ 8 ಕವನ ಸಂಕಲನಗಳನ್ನು ಸಿಂಗಾರವ್ವ ಮತ್ತು ಅರಮನೆಯಂತಹ ಕಾದಂಬರಿಯನ್ನು ರಚಿಸಿದ್ದಾರೆ. 'ಕಾಡುಕುದುರೆ' 'ಸಂಗೀತಾ' ಕನ್ನಡ ಚಲನ ಚಿತ್ರ ನಿರ್ಮಾಪಕರಾಗಿ ಕೆಲಸ ಮಾಡಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕಮಲಾದೇವಿ ಚಟ್ಟೋಪಾಧ್ಯಾಯ, ಆಶಾನ್ ಅವಾರ್ಡ, ಕಬೀರ ಸಮ್ಮಾನ ಪಂಪ ಪ್ರಶಸ್ತಿ ಹೀಗೆ ಮೊದಲಾದ ಪ್ರಶಸ್ತಿಗಳು ಲಭಿಸಿವೆ. ಕನ್ನಡ ತಾಯಿಯನ್ನು ವರ್ಣಿಸುತ್ತ, ಕನ್ನಡ ನಾಡಿನ ನಿಸರ್ಗ ವೈಭವ, ಸಾಹಿತ್ಯದ ಹೊಂಬೆಳಕು, ವಿಶಾಲ ಮನೋಭಾವ ಮತ್ತು ಸಂಸ್ಕೃತಿಯ ಸಿರಿಯನ್ನು ಕಾಣುತ್ತೇವೆ ಎಂಬುದು ಈ ಪದ್ಯದ ಆಶಯವಾಗಿದೆ.

ಮುಂಗೋಳಿ ಕೂಗ್ಯಾವು ಮೂಡಣ ಬೆಳಗಿ
ತಂಗಾಳಿ ಬೀಸ್ಯಾವು ತವರೀ ಹೂವರಳಿ
ಹೂ ಹೂವಿನೊಳಗೊಂದು ಕೈಲಾಸವರಳ್ಯಾವು
ಕೈಲಾಸ ಕೈಮುಗಿದು ಭೂಲೋಕಕಿಳಿದಾವು
ಸಾವಿರದ ಶರಣವ್ವ ಕನ್ನಡದ ತಾಯೇ ॥ತಾಯೇ॥

ಸೂಸುನಗೆಯಲಿ ಜಗದ ಲೇಸ ತುಳುಕಿಸುವವಳೆ
ಕಲ್ಲಿನ ಎದೆಯೊಳಗ ಹುಲ್ಲು ಚಿಗುರಿಸುವವಳೆ
ಹಕ್ಕಿ ಹಾರ್ಯಾಡ್ಯಾವು ಹಾಡೂತ, ಏನಂತ?
ಇದೊ ನಿನ್ನ ಪಾದಕ್ಕೆ ಆದಿ ಮೂರುತಿಯೆ
ಸಾವಿರದ ಶರಣವ್ವ ಕನ್ನಡದ ತಾಯೇ ॥ತಾಯೇ॥

ಪಡುಗಡಲ ತೆರೆಗಳಲಿ ಪಾದ ತೊಳೆವವಳೆ
ಬೆಟ್ಟ ಬಯಲುಗಳನ್ನ ತೊಟ್ಟು ನಿಂತವಳೆ
ಮಲೆನಾಡ ಶಿಖರದಲಿ ಮಳೆಬಿಲ್ಲ ಮುಡಿದವಳೆ
ಅವ್ವಾ ಅಂದಾಗೊಮ್ಮೆ ಸಾಕಾರಗೊಂಬವಳೆ
ನಗೆಮೊಗದ ಜಗದಂಬೆ ಬೆಳಕಿನ ತಾಯೇ ॥ತಾಯೇ॥

ಕುರಿತು ಓದದ ಕಾವ್ಯ ಪರಿಣತರ ಮಾತೆ
ಸಂತರ ಶರಣರ ಮಂತ್ರದ ಮಾತೆ
ಶಬ್ದಕ್ಕ ಬೆಳಕನ್ನ ಮುಡಿಸುವ ಕವಿಗಣ
ದಿನಬೆಳಗು ಹೊಗಳುವರು ನಿನ್ನ ಕೀರ್ತಿಯನೆ
ಸಾವಿರದ ಶರಣವ್ವ ಕನ್ನಡದ ತಾಯೇ ॥ತಾಯೇ॥

ಜಾಣಜಾಣೆಯರೆದೆಗೆ ಕನಸು ಕೊಡುವವಳೆ
ಬಾಗಿದವರಿಗೆ ಭಾಗ ಹೃದಯ ಕೊಡುವವಳೆ
ನಿನ್ಹಾಂಗ ಧರ್ಮದಲಿ ಧಾರಾಳತನದಲ್ಲಿ
ಈ ಭೂಮಿಯಲಿ ಕಾಣೆ ಧರೆಗೆ ದೊಡ್ಡವಳೆ
ಸಾವಿರದ ಶರಣವ್ವ ಕನ್ನಡದ ತಾಯೇ ॥ತಾಯೇ॥

ಮ್ಯಾಲೇಳು ಲೋಕಕ್ಕ ಕೀಳೇಳು ಲೋಕಕ್ಕ
ಅಧಿಕವಾಗಲಿ ಹಬ್ಬಿ ನಿನ್ನ ಕಾರಣಿಕ
ಹಾಲೊಕ್ಕಲಾಗಲಿ ಹೊನ್ನೊಕ್ಕಲಾಗಲಿ
ತೂಗು ತೊಟ್ಟಿಲ ಬೆಳ್ಳಿಬಟ್ಟಲದ ತಾಯೇ
ಸಾವಿರದ ಶರಣವ್ವ ಕನ್ನಡದ ತಾಯೇ ॥ತಾಯೇ॥

- ಚಂದ್ರಶೇಖರ ಕಂಬಾರ

---

**ಶಬ್ದಗಳ ಅರ್ಥ:-** ಮೂಡಣ – ಪೂರ್ವ; ಪಡುವಣ – ಪಶ್ಚಿಮ; ಮಳೆಬಿಲ್ಲು – ಕಾಮನಬಿಲ್ಲು; ಸಾಕಾರ – ಕಣ್ಣಿಗೆ ಕಾಣಿಸುವ

**ಕೃತಿ. 1) ಕನ್ನಡ ತಾಯಿಯನ್ನು ಕವಿ ಸಂಬೋಧಿಸಿದ ಹೆಸರುಗಳನ್ನು ಕವಿತೆಯಿಂದ ಆಯ್ದು ಬರೆಯಿರಿ.**




**ಕೃತಿ. 2) ಹೊಂದಿಸಿ ಬರೆಯಿರಿ.**

ಪದ್ಯದಲ್ಲಿ ಬಂದ ಸಂದರ್ಭವನ್ನು ಗಮನಿಸಿ ಹೊಂದಿಸಬೇಕು.

| | |
|---|---|
| 1) ತಂಗಾಳಿ | ಅ) ಹಾರಾಡ್ಯಾವು |
| 2) ಹಕ್ಕಿ | ಬ) ಅರಳ್ಯಾವು |
| 3) ಮುಂಗೋಳಿ | ಕ) ಬೀಸ್ಯಾವು |
| 4) ಕೈಲಾಸ | ಡ) ಕೂಗ್ಯಾವು |

### ಕೃತಿ. 3) ಯೋಗ್ಯ ಪರ್ಯಾಯಗಳನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.

ಹುಲ್ಲು, ಮಲೆನಾಡು, ಹೃದಯ, ಮಳೆಬಿಲ್ಲು, ಬೆಟ್ಟ, ಪಾದ.

1) ಮಲೆನಾಡ ಶಿಖರದಲಿ -------- ಮುಡಿದವಳೆ

2) ಪಡುಗಡಲ ತೆರೆಗಳಲಿ -------- ತೊಳೆವವಳೆ

3) ಕಲ್ಲಿನ ಎದೆಯೊಳಗೆ --------- ಚಿಗುರಿಸುವವಳೆ

4) ಬಾಗಿದವರಿಗೆ ಭಾಗ --------- ಕೊಡುವವಳೆ

### ಕೃತಿ. 4) ಕೆಳಗಿನ ಕೋಷ್ಟಕದಲ್ಲಿಯ ತತ್ಸಮ - ತದ್ಭವ ಪದಗಳ ಜೋಡಿಗಳನ್ನು ಬರೆಯಿರಿ.

| | | | |
|---|---|---|---|
| ಶಬ್ದ | ಕೀರ್ತಿ | ಕಬ್ಬ | ಸಾವಿರ |
| ಸಾಸಿರ | ಮೊಗ | ಧರ್ಮ | ಶಬುದ |
| ಕಾವ್ಯ | ದಮ್ಮ | ಮುಖ | ಕಿರುತಿ |

C66HLH

# 2. ಮಾಡಿಸು ಶಕ್ತಿ ಸ್ನಾನ

**ಕವಿ ಪರಿಚಯ :** ಸಿದ್ಧಯ್ಯ ಪುರಾಣಿಕರು ರಾಯಚೂರ ಜಿಲ್ಲೆಯ ದ್ಯಾಂಪುರದಲ್ಲಿ1918ರಂದು ಜನಿಸಿದರು. ತಂದೆ ಪಂಡಿತಶಾಸ್ತ್ರಿ, ತಾಯಿ ದಾನಮ್ಮ, ಇವರು ತಾಲೂಕು ತಹಶೀಲ್ದಾರರಾಗಿ ವೃತ್ತಿಜೀವನ ಪ್ರಾರಂಭಿಸಿದರು. ಮುಂದೆ ಸರಕಾರದ ವಿವಿಧ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು. ಇವರು ರಜತರೇಖೆ, ಭಿನ್ನನೂಪುರ (ನಾಟಕ), ನ್ಯಾಯನಿರ್ಣಯ, ತುಪ್ಪಾರೊಟ್ಟಿ (ಮಕ್ಕಳ ಕೃತಿ) ಸಿದ್ಧರಾಮ, ಬಸವಣ್ಣ (ಜೀವನ ಚರಿತ್ರೆ) ತುಷಾರಹಾರ (ಕಥಾಸಂಕಲನ) ಜಲಪಾತ, ಕರುಣಾಶ್ರಾವಣ (ಕವನ ಸಂಕಲನ) ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ಕರ್ನಾಟಕ ಸರಕಾರಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ.

ಪ್ರಸ್ತುತ ಪದ್ಯವನ್ನು ಅವರ 'ಸಮಗ್ರ ಕಾವ್ಯ'ದಿಂದ ಆಯ್ದುಕೊಳ್ಳಲಾಗಿದೆ ಬಲಿಷ್ಠ ದೇಶವನ್ನು ನಿರ್ಮಿಸುವದಕ್ಕಾಗಿ ಇಂದಿನ ಯುವಕರು ಕೂಡ ಬಲಿಷ್ಠರಾಗಿರಬೇಕು, ನಿರ್ಭಯರಾಗಿರಬೇಕು. ಇಂಥ ಬಲಿಷ್ಠರಾಷ್ಟ್ರವನ್ನು ಕಂಡು ಶತ್ರುಗಳು ಹೆದರಬೇಕೆಂಬುದು ಈ ಕವಿತೆಯ ಆಶಯವಾಗಿದೆ.

ಲೋಹದ ಬಾಹು ಉಕ್ಕಿನ ಸ್ನಾಯು
ವಜ್ರದ ವಕ್ಷಸ್ಥಲವು
ಬೇಕು ಭಾರತಕೆ ಭಾರತೀಯರಿಗೆ
ಹನುಮ ಭೀಮರಾ ಬಲವು
ಶಕ್ತಿಯಿಂದಲೇ ಮುಕ್ತಿ ಭಾರತಕೆ
ಶಕ್ತಿಸಾಧಿಸಿರಿ ಸತತ
ನಿರ್ಭಯರಾಗಿರಿ ಭೀತಿಯ ನೀಗಿರಿ
ಭೀತ ಮಾನಮನೆ ಪತಿತ
ಶಕ್ತಿ ಸಾಹಸವೆ ಸ್ವರ್ಗ ಭಾವಿಸಲು
ಬಲಹೀನತೆಯೇ ನರಕ
ಬಲವನಾರ್ಜಿಸಿರಿ ಬಲಿದು ಗರ್ಜಿಸಿರಿ
ಸುರಿದು ಸಿಡಿಲಿನ ಸುರುಕ
ನರಿಗಳಂದದಲಿ ಒರಲಬೇಡಿರಿ
ನರಸಿಂಹರು ನೀವು
ಮೃತ್ಯುಂಜಯರು ಕಾಲಕಾಲರು
ಮುರಮರ್ದನರು ನೀವು
ಎಂದು ಗರ್ಜಿಸಿದ ವೀರಕೇಸರಿಯೆ
ಗುರು ವಿವೇಕಾನಂದ
ಪ್ರಾಣದಾಯಿನೀ ನಿನ್ನ ವಾಣಿಯಿದು
ನೀಡಲಿ ಶಕ್ತಿಸ್ಪಂದ !
ಶತ್ರು ಮುತ್ತಿರುವ ನಿನ್ನ ಭಾರತಕೆ
ಶಸ್ತ್ರದೀಕ್ಷೆಯನು ನೀಡು !
ಅರಿಭಯಂಕರತೆ ಬರಲಿ ಭಾರತಕೆ

ಶಕ್ತಿಪಾತವನು ಮಾಡು!
ಹೇಡಿತನವ ಹೊಡೆದೋಡಿಸು ಸ್ವಾಮಿ
ಮಾಡಿಸು ಶಕ್ತಿಸ್ನಾನ
ಮೊಳಗಲಿ ಮತ್ತೆ ಹಿಮಗಿರಿ ಶಿಖರದಿ
ಭಾರತ ವಿಜಯಧ್ವಾನ !

- ಸಿದ್ಧಯ್ಯ ಪುರಾಣಿಕ

**ಶಬ್ದಗಳ ಅರ್ಥ:-** ವೃಕ್ಷಸ್ಥಲ - ಎದೆ; ಮೃತ್ಯುಂಜಯ - ಸಾವನ್ನು ಜಯಿಸಿದವ; ಮುರಮರ್ದನ - ವಿಷ್ಣು; ಕೇಸರಿ - ಸಿಂಹ

**ಕೃತಿ. 1)**

**(i) ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ ಗುರುತಿಸಿರಿ.**

1) ಲೋಹ, ಶಕ್ತಿ, ವಜ್ರ, ಉಕ್ಕು

2) ಭಾರತ, ಹಿಮಗಿರಿ, ಸ್ವರ್ಗ, ಶಿಖರ

**(ii) ಯೋಗ್ಯ ಪರ್ಯಾಯಗಳನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ.**

**ಮುಕ್ತಿ, ಹೇಡಿತನವ, ನಿರ್ಭಯ, ನರಸಿಂಹರು, ವಕ್ಷಸ್ಥಲ ಶಸ್ತ್ರದೀಕ್ಷೆ**

1) -------- ರಾಗಿರಿ ಭೀತಿಯ ನೀಗಿರಿ

2) ನರಿಗಳಂದದಿ ಒರಲಬೇಡಿರಿ -------- ನೀವು

3) ಶಕ್ತಿಯಿಂದಲೇ ------- ಭಾರತಕೆ

4) -------- ಹೊಡೆದೋಡಿಸು ಸ್ವಾಮಿ.

**(iii) 'ಸದೃಢ ಶರೀರದಲ್ಲಿ ಸದೃಢ ಮನಸ್ಸು'-- ಈ ಉಕ್ತಿಯನ್ನು ವಿಶ್ಲೇಷಿಸಿ ಬರೆಯಿರಿ.**

**ಕೃತಿ. 2)**

**(i) ಕೆಳಗಿನ 'ತತ್ಸಮ' ಶಬ್ದಗಳಿಗೆ 'ತದ್ಭವ'ಗಳನ್ನು ಬರೆಯಿರಿ.**

ಶಕ್ತಿ, ಮುಕ್ತಿ, ಸ್ವರ್ಗ, ಸ್ನಾನ, ಪ್ರಾಣ

**(ii) ಸಮಾಸ ವಿಗ್ರಹಿಸಿ ಹೆಸರಿಸಿರಿ.**

1) ನರಸಿಂಹ 2) ಮುರಮರ್ದನ 3) ಬಲವನಾರ್ಜಿಸು

C6F5N5

**ಕೃತಿ. 3) ಬಲಿಷ್ಠ ರಾಷ್ಟ್ರನಿರ್ಮಾಣಕಾರ್ಯದಲ್ಲಿ ಯುವಕರ ಪಾತ್ರ ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.**

# 3. ಮರಳಿ ಯತ್ನವ ಮಾಡು

**ಕವಿ ಪರಿಚಯ:** ಶ್ರೀಮತಿ ಇಂದಿರಾ ಸಾಲಿಯಾನ ಅವರು ಹೊರನಾಡಿನ ಪ್ರಮುಖ ಕವಿಯಿತ್ರಿ, ಪುಣೆಯಲ್ಲಿ ನೆಲೆಸಿರುವ ಅವರು ಬಹುಮುಖ ಪ್ರತಿಭೆಯುಳ್ಳವರು. ಇಲ್ಲಿಯ ಕರ್ನಾಟಕ ಹೈಸ್ಕೂಲಿನಲ್ಲಿ ಕೆಲಕಾಲ ಶಿಕ್ಷಕಿಯಾಗಿದ್ದರು. ಉದ್ಯಮ ಸಂಸ್ಥೆಯ ಡೈರೆಕ್ಟರ್‌ಗಾಗಿ, ಇಂಜನಿಯರಿಂಗ್ ಕಂಪೆನಿಯ ಒಡತಿಯಾಗಿ, ಪುಣೆಯ ಸಂಗೀತಪ್ರೇಮಿಗಳಿಗೆ ಸಂಗೀತ ಸುಧೆಯ ರಸದೌತಣ ನೀಡುವ ಗಾಯಕಿಯಾಗಿ ಹೆಸರುವಾಸಿಯಾಗಿರುವರು. ಪರರೆಲ್ಲ ನಮ್ಮವರು ಎಂಬ ಕವನ ಸಂಕಲನವನ್ನು ಹೊರತಂದಿರುವ ಇವರು ಸ್ಪಂದನಶೀಲ ಕಮಿಯಿತ್ರಿ ಎನಿಸಿದ್ದಾರೆ. 'ಪ್ರೇಮತರಂಗ' ಎಂಬ ಕನ್ನಡ ಧ್ವನಿಸುರಳಿ, 'ಅಬೋಲಪ್ರೀತಿ' ಎಂಬ ಮರಾಠಿ ಧ್ವನಿ ಸುರಳಿಯನ್ನು ಹೊರತಂದಿದ್ದಾರೆ. ಪುಣೆಯ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾಮುಂಚೂಣಿಯಲ್ಲಿರುವ ಅವರ ವ್ಯಕ್ತಿತ್ವ ವೈಶಿಷ್ಟ್ಯಪೂರ್ಣವಾದುದು.

ಸೋಲು-ಗೆಲುವುಗಳನ್ನು ಸಮಾನವಾಗಿ ಕಂಡು, ಛಲ, ಪ್ರಯತ್ನಮಾಡಿಸಫಲರಾಗುವುದೆ ಬದುಕಿನ ಗುಟ್ಟಾಗಿದೆ ಎಂಬುದು ಈ ಕವಿತೆಯ ಆಶಯವಾಗಿದೆ.

ಸೋಲಾದರೇನೊಮ್ಮೆ? ಗೆಲುವಿಗದೆ ಸೋಪಾನ,
ಮರಳಿಯತ್ನವ ಮಾಡು, ಜಾಣಮರಿ ಜೋಪಾನ,
ಸೋಲು ಗೇಲುಗಳೆರಡು ಜೀವನದ ಉಯ್ಯಾಲೆ,
ಸಮಭಾವವಿರಬೇಕು ಸುಖ ದುಃಖಗಳ ಮೇಲೆ,

ಕೆಲಸ ಕಷ್ಟವೆಂದಳುಕಿ ಬಿಡದವನೆ ವೀರ,
ಅಪಾಯವಿರುವಲ್ಲಿ ಅಂಜದವ ಧೀರ;
ಛಲ ಬಿಡದೆ ಯತ್ನವ ಮಾಡುವವ ಶೂರ,
ಸೋಲಿಗೆ ಹೆದರದ ವೀರನಿಗೆ ಹಾರ !

ಯತ್ನ ಬಿಟ್ಟರೆ ಜೇಡ ಬಲೆ ಹೆಣೆಯುವುದೇನು?
ಸಫಲರಾದವರೆಲ್ಲ ಮೊದಲೆ ಗೆದ್ದವರೇನು?
ಮರಳಿ ಯತ್ನವ ಮಾಡು ವೈಫಲ್ಯ ತಪ್ಪಲ್ಲ,
ತೊರೆಯದಿರು ಯತ್ನವನು ಕಾಯುತಿದೆ ಜಯವೆಲ್ಲ.

– ಇಂದಿರಾ ಸಾಲಿಯಾನ

**ಶಬ್ದಗಳ ಅರ್ಥ:-** ಸೋಪಾನ – ಮೆಟ್ಟಲು; ಉಯ್ಯಾಲೆ – ಜೋಕಾಲಿ; ವೈಫಲ್ಯ – ವಿಫಲ

**ಕೃತಿ. 1) (i) ಕೆಳಗಿನ ಶಬ್ದಗಳಿಗೆ ವಿರುದ್ಧಾರ್ಥ ಶಬ್ದಗಳನ್ನು ಕವಿತೆಯಿಂದ ಆಯ್ದು ಬರೆಯಿರಿ.**

ಸೋಲು x ------- ಸುಖ x ------- ಸಫಲ x --------


**(ii) 'ರ' ಅಂತ್ಯ ಪ್ರಾಸವಿರುವ ಶಬ್ದಗಳನ್ನು ಕವಿತೆಯಿಂದ ಆಯ್ದು ಬರೆಯಿರಿ.**

-------- --------- -------- ---------

**(iii) ಕೆಳಗಿನವುಗಳಲ್ಲಿ ಯಾವ ಗಾದೆಮಾತು ಕವಿತೆಯ ತಿರುಳನ್ನು ಬಿಂಬಿಸುತ್ತಿದೆ.**

1) ಮನೆಗೆದ್ದು ಮಾರು ಗೆದೆ
2) ಕೈಕೆಸರಾದರೆ ಬಾಯಿ ಮೊಸರು
3) ಸೋಲು ಗೆಲುವಿನ ಮೂಲ
4) ಕಾರ್ಯಕವೇ ಕೈಲಾಸ

(iv) **ಕೆಳಗಿನ ಪದಬಂಧವನ್ನು ಕೊಟ್ಟ ಶಬ್ದಗಳಿಂದ ಪೂರ್ಣಗೊಳಿಸಿರಿ.**




ಜೋಪಾನ
ಸೋಪಾನ
ಸೋಲು
ಗೇಲು

**ಕೃತಿ. 2) (i) ಯೋಗ್ಯ ಪರ್ಯಾಯವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ.**

**ಸಮಭಾವ, ಹಾರ ಜೋಪಾನ, ಉಯ್ಯಾಲೆ, ಛಲ, ವೈಫಲ್ಯ**

1) ಸೋಲು ಗೇಲುಗಳೆರಡು ಜೀವನದ -----------

2) ಮರಳಿಯತ್ನವ ಮಾಡು ಜಾಣಮರಿ -----------

3) ಸೋಲಿಗೆ ಹೆದರದ ವೀರನಿಗೆ -----------

4) ಮರಳಿ ಯತ್ನವ ಮಾಡು -------------ತಪ್ಪಲ್ಲ.

(ii) **ಹೊಂದಿಸಿ ಬರೆಯಿರಿ.**

(ಪದ್ಯದಲ್ಲಿರುವ ಅಂತ್ಯಪ್ರಾಸ ಪದಗಳನ್ನು ಗಮನಿಸಿ ಹೊಂದಿಸಬೇಕು)

| | | | |
|---|---|---|---|
| i) | ಅಪಾಯವಿರುವಲ್ಲಿ ಅಂಜದವ | ಅ) | ವೀರ |
| ii) | ಕೆಲಸ ಕಷ್ಟವೆಂದಳುಕಿ ಬಿಡದವನೆ | ಬ) | ಶೂರ |
| iii) | ಛಲಬಿಡದೆ ಯತ್ನವ ಮಾಡುವವ | ಕ) | ಧೀರ |

**ಕೃತಿ. 3) i) ಕೆಳಗಿನ ವಾಕ್ಯದಲ್ಲಿಯ ಉಪಸರ್ಗಯುಕ್ತ ಪದಗಳನ್ನು ಆಯ್ದು ಬರೆಯಿರಿ.**

**ರಾಜನ ವಿಚಿತ್ರ ಪ್ರಶ್ನೆಗಳಿಗೆ ನಿರುತ್ತರನಾಗಿ ಪಂಡಿತನು ಅಪಮಾನಗೊಂಡನು.**

ii) **ಕೆಳಗಿನ ಶಬ್ದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

ಸೋಪಾನ, ಛಲ, ಸಫಲ, ಸಮಭಾವ

**ಕೃತಿ. 4) 'ಸೋಲು ಗೆಲುವಿನ ಮೆಟ್ಟಿಲು ಈ ಗಾದೆಯನ್ನು ನಿಮ್ಮ ಮಾತುಗಳ ಮೂಲಕ ಸಮರ್ಥಿಸಿರಿ.**

C6PNPS

# 4. ದಿವ್ಯ ಭಾರತ ಗೀತೆ

**ಕವಿ ಪರಿಚಯ :** ನರಸಿಂಹ ಪರಾಂಜಪೆಯವರು ಕನ್ನಡನಾಡಿನ ಒಳ್ಳೆಯ ಬರಹಗಾರರು. ವೇನಕಾ ಸಾಕಿನ್ನು, ಪುಷ್ಪಾಂಜಲಿ, ಬೆಳ್ಳಿತೇರು, ಹೊಂಬೆಳಕು, ಪಾರಿಜಾತ, ಭಾಗ್ಯತಾರೆ, ಮಂದಹಾಸದ ಹಿಂದೆ, ಮಧ್ಯಂತರ,ತಾರಂಗಣ ಅವರ ಪ್ರಮುಖ ಕೃತಿಗಳು.

ಭಾರತದ ನಿಸರ್ಗರಮ್ಯತೆ, ವಿವಿಧತೆ, ಮೌಲ್ಯಗಳು ಮತ್ತು ಹೊಸ ದಿಕ್ಕಿಗೆ ಸಾಗುವ ನವಜನಾಂಗದ ಬಯಕೆಯನ್ನು ಕುರಿತು ಈ ಪದ್ಯದಲ್ಲಿ ಬಣ್ಣಿಸಲಾಗಿದೆ.

ದಿವ್ಯ ಭಾರತ ಬೋಧಿಸತ್ವದ
ಕೋಟಿ ದಳಗಳ ಸಂಪದ ।
ಶಾಂತಿ ಸಹನೆಯ ಭಾವ ಸಮರಸ
ಪಯಣ ಸಾಗಿದೆ ಗಾವುದ ।।

ಬೆಟ್ಟ, ಗುಡ್ಡ, ಗಿರಿ, ಶಿಖರ ಸಾಲುಗಳು
ಮುಡಿಯ ಹೂವ ವಿಹಂಗಮ ।
ಗಂಗೆ ಯಮುನೆ ಕಾವೇರಿ ಕಪಿಲೆಯರ
ನೂರು ನದಿಗಳ ಸಂಗಮ ।।

ಹಲವು ಭಾಷೆ ಹಲವುರೂಪ ಬಣ್ಣಗಳ
ಇಂದ್ರ ಧನುಸಿನ ಸಂಭ್ರಮ ।
ಕಷ್ಟಸುಖಗಳ ಸುಪ್ತಸಾಗರ
ಜೀವಕೋಟಿ ಸಮಾಗಮ ।।

ಶೂರ ಸಾಹಸಿ ಬಾಹುವೀರರ
ತ್ಯಾಗ ಭೂಮಿಯ ಮಂದಿರ ।
ದಿವ್ಯ ಕಲೆಗಳ ಕುಶಲ ಕಾವ್ಯದ
ನಮ್ಮ ದೇಶವು ಸುಂದರ ।।

ಅಂತರಂಗದಿ ಬಯಸಿ ನಿಂತಿದೆ
ಹೊಸದಿಗಂತಕೆ ಬಯಕೆಯು
ತಂತು ತಂತುಗಳು ಮಿಡಿದಿದೆ
ನವಜನಾಂಗದ ಹರಕೆಯು ।।

**– ನರಸಿಂಹ ಪರಾಂಜಪೆ**

## ಶಬ್ದಗಳ ಅರ್ಥ

ಸಂಪದ–ಏಳಿಗೆ; ಪಯಣ – ಸಂಚಾರ; ಗಾವುದ – ದೂರವನ್ನು ಅಳೆಯುವ ಒಂದು ಪ್ರಮಾಣ; ವಿಹಂಗಮ – ಸ್ಥೂಲ ಅವಲೋಕನ; ಇಂದ್ರಧನುಷ – ಕಾಮನಬಿಲ್ಲು; ಬಾಹು-ಭುಜ; ಕಾವ್ಯ–ಕವಿತೆ

**ಕೃತಿ: 1** i) **ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**


1) ಭಾರತವು ಯಾವ ಭಾವನೆಗಳ ಸಮರಸವಾಗಿದೆ?

2) ಇಂದ್ರಧನುಷದಲ್ಲಿ ಯಾವ ಸಂಭ್ರಮವಿದೆ?

3) ನಮ್ಮ ದೇಶವು ಯಾವುದರಿಂದ ಸುಂದರವಾಗಿದೆ?

4) ತಂತು ತಂತುಗಳಲ್ಲಿ ಏನು ಮಿಡಿದಿದೆ?

ii) ಕವಿತೆಯಲ್ಲಿ ಬರುವ ನದಿಗಳ ಹೆಸರುಗಳನ್ನು ಬರೆಯಿರಿ.




**ಕೃತಿ: 2 ದಿವ್ಯ ಭಾರತದ ನಿಸರ್ಗದ ವರ್ಣನೆಯನ್ನು 8–10 ಸಾಲುಗಳಲ್ಲಿ ಬಣ್ಣಿಸಿರಿ.**

**ಕೃತಿ: 3 'ಅ' ಗುಂಪಿನ ಪದಗಳೊಂದಿಗೆ 'ಬ' ಗುಂಪಿನಲ್ಲಿಯ ಯೋಗ್ಯ ಪದಗಳನ್ನು ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| 1) ಬೋಧಿಸತ್ವ | ಅ) ಗಾವುದ |
| 2) ಪಯಣ | ಬ) ಕಾವ್ಯ |
| 3) ಶೂರ | ಕ) ದಳ |
| 4) ಕುಶಲ | ಡ) ತ್ಯಾಗ |

**ಕೃತಿ: 4 ಕೆಳಗಿನ ಪದಗಳಿಗೆ ತತ್ಸಮ, ತದ್ಭವಗಳನ್ನು ಬರೆಯಿರಿ.**

ಬಣ್ಣ, ಪ್ರಯಾಣ, ಭಾಷೆ, ಸೊಗ

# 5. ಪ್ರೀತಿ ಮತ್ತು ಕರ್ತವ್ಯ

**ಕವಿ ಪರಿಚಯ :** ಡಾ. ಯು. ಆರ್. ಅನಂತಮೂರ್ತಿಯವರು 21/12/1932ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆ ಹಳ್ಳಿಯಲ್ಲಿ ಜನಸಿದರು. ತಂದೆ ರಾಜಗೋಪಾಲಾಚಾರ್ಯ, ತಾಯಿ-ಸತ್ಯಮ್ಮ ಬಹುಮುಖ ಪ್ರತಿಭೆಯ ಶ್ರೀಮಂತ ಲೇಖಕರು, ಉತ್ತಮ ಕತೆಗಾರ, ಕಾದಂಬರಿಕಾರ, ಕವಿ, ವಿಮರ್ಶಕ ಹಾಗೂ ಪತ್ರಿಕಾಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಸಂದರ್ಶಕ ಪ್ರಾಧ್ಯಾಪಕರಾಗಿ ವಿಶ್ವದಾದ್ಯಂತ ಸುತ್ತಿದ್ದಾರೆ. ಇವರ ಬಹಳಷ್ಟು ಕೃತಿಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದ ಗೊಂಡಿದೆ. ಸಂಸ್ಕಾರ, ಭಾರತೀಪುರ, ಎಂದೆಂದೂ ಮುಗಿಯದ ಕಥೆ... ಮುಂತಾದ ಕೃತಿಗಳು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಇವರ ಸಮಗ್ರ ಸಾಹಿತ್ಯಕ್ಕೆ 1994ರಲ್ಲಿ ಈ ಪ್ರಶಸ್ತಿ ದೊರಕಿದೆ. ಹಾಗೂ ಇವರ ಶಾಂತಲಾಕೃತಿಗೆ ರಾಜ್ಯ ಸಾಹಿತ್ಯ ಆಕಾಡೆಮಿ ಬಹುಮಾನ ಬಂದಿದೆ. ಇವರು 22/08/2014ರಲ್ಲಿ ನಿಧನರಾದರು.

ಚಿಕ್ಕ ಹುಡುಗಿ ಹೇಳಿದ ಪ್ರೀತಿ ಮತ್ತು ಕರ್ತವ್ಯದ ಮಾತುಗಳನ್ನು ಕೇಳಿ ಗಾಂಧೀಜಿಯವರಿಗೆ ಅವುಗಳ ಬಗ್ಗೆ ಸಾಕ್ಷಾತ್ಕಾರವಾಗಿದ್ದೇ ಈ ಕವಿತೆಯ ಆಶಯವಾಗಿದೆ.

ಒಂದು ಬೆಟ್ಟದ ತಪ್ಪಲಲ್ಲಿ
ಗಾಂಧಿ ವಿಶ್ರಾಂತಿಗೇಂತ ತಂಗಿದ್ದಾಗ ಅಕಸ್ಮಾತ್ ಪಡೆದ
ಅನಿರೀಕ್ಷಿತ ಉತ್ತರದಿಂದಾಗಿ ಅವರಿಗೆ
ಸಾಕ್ಷಾತ್ಕಾರವಾದ್ದನ್ನ
ನನ್ನ ಅಪ್ಪ ಹೇಳಿದ್ದರು.

ಒಬ್ಬ ಹುಡುಗಿ, ಚಿಕ್ಕವಳು
ಕಂಕುಳಲ್ಲಿ ಹುಷಾರಾಗಿ ಅಕ್ಕರೇಂದ
ಒಂದು ಮಗುವನ್ನು ಎತ್ತಿಕೊಂಡು
ಹುಡುಗಾಟಿಕೆಗೆ ಬರಿಗಾಲಲ್ಲಿ, ಲಂಗದ ನಿರಿ ಚಿಮ್ಮುತ್ತ
ಏದುಸಿರು ಬಿಡುತ್ತ
ಗುಡ್ಡ, ಹತ್ತಿ ಬರುತ್ತಿದ್ದಾಳೆ, ಬಿಸಿಲು.
ನೋಡಕ್ಕೆ ಲಕ್ಷಣವಾಗಿದಾಳೆ.
ಬರಿಕತ್ತಿನ ಮೇಲೆ ಬಿದ್ದಿರೊ ಜಡೇಲಿ ಹೂ ಮುಡಿದಿದಾಳೆ.

ಮರದ ನೆರಳಲ್ಲಿ ಕೂತು ನೋಡುತ್ತಿದ್ದ
ಗಾಂಧಿಗೆ ಕನಿಕರ ಉಕ್ಕಿ ಕೆಳಗಿಳಿದು ಹೋಗಿ
ಕೇಳುತ್ತಾರೆ:
''ಭಾರವೇನಮ್ಮ?''
ಹುಡುಗಿ ನಡೀತಾನೆ
ಒಂದು ಕಂಕುಳಿಂದ ಇನ್ನೊಂದಕ್ಕೆ ಅಕ್ಕರೇಂದ,
ಹುಷಾರಾಗಿ, ಗೆಲುವಾಗಿ, ಮಗೂನ್ನ ಬದಲಾಯಿಸಿ
ಹೇಳುತ್ತಾಳೆ:
''ಇವನು ನನ್ನ ತಮ್ಮ.''

**- ಯು. ಆರ್. ಅನಂತಮೂರ್ತಿ**

## ಶಬ್ದಗಳ ಅರ್ಥ

ತಂಗು-ಇಳಿದುಕೊಳ್ಳು: ಕಂಕುಳ - ಬಗಲು;
ಕತ್ತು -ಕೊರಳು; ಮುಡಿ - ತಲೆಯಲ್ಲಿ ಹೂವನ್ನು ಧರಿಸು.

**ಕೃತಿ:1 ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಗಾಂಧೀಜಿಯವರು ವಿಶ್ರಾಂತಿಗಾಗಿ ಎಲ್ಲಿ ತಂಗಿದ್ದರು ?

2) ಹುಡುಗಿಯ ಕಂಕುಳಲ್ಲಿ ಏನಿತ್ತು?

3) ಹುಡುಗಿ ಎಲ್ಲಿಗೆ ಬರುತ್ತಿದ್ದಳು?

4) ಹುಡುಗಿಯನ್ನು ಕಂಡು ಗಾಂಧೀಜಿಯವರ ಮನದಲ್ಲಿ ಯಾವ ಭಾವ ಬಂದಿತು?

5) ಹುಡುಗಿ ಗಾಂಧೀಜಿಯವರಿಗೆ ಏನೆಂದು ಉತ್ತರ ಕೊಟ್ಟಳು?

**ಕೃತಿ:2 ಕಂಕುಳಲ್ಲಿ ಇದ್ದ ಮಗು ಏಕೆ ಭಾರವಾಗಲಿಲ್ಲ ? ಈ ವಿಷಯ ಕುರಿತು ನಿಮ್ಮ ಅಭಿಪ್ರಾಯಗಳನ್ನು 8-10 ಸಾಲುಗಳಲ್ಲಿ ಬರೆಯಿರಿ.**


**ಕೃತಿ: 3 ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.**

1) ಅನಿರೀಕ್ಷಿತ x

2) ಭಾರ x

3) ಗೆಲುವು x

**ಕೃತಿ: 4 ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



# 6. ಇಲ್ಲೇ ಸರಿ

**ಕವಿ ಪರಿಚಯ :** ಅರವಿಂದ ನಾಡಕರ್ಣಿ : (ಜ. 1931) ಇವರು ಆಧುನಿಕ ಕನ್ನಡ ಕಾವ್ಯಲೋಕದಲ್ಲಿ ತಮ್ಮದೇ ಆದ ವ್ಯಕ್ತಿತ್ವವನ್ನು ನಿರ್ಮಿಸಿಕೊಂಡವರು. ''ಸೃಜನ ವೇದಿ'' ಎಂಬ ತ್ರೈಮಾಸಿಕದಸಹ ಸಂಪಾದಕರಾಗಿದ್ದರು. ಇವರು ವಿಮರ್ಶೆಯ ಕ್ಷೇತ್ರದಲ್ಲೂ ಕೃಷಿ ಮಾಡಿದ್ದಾರೆ. 'ಜರಾಸಂಧ, ಮಾಯಾವಿ, ನಗರಾಯಣ, ನಾ ಭಾರತೀ ಕುಮಾರ, ಜಂಕ್ಷನ್ ಕವಿತೆಗಳು, ಸಂಗ್ರಹ ಕಾವ್ಯ ಮುಂತಾದವು ಅವರ ಪ್ರಕಟಿತ ಕೃತಿಗಳು.

ಪ್ರಸ್ತುತ ಕವಿತೆಯಲ್ಲಿ ಯಾಂತ್ರೀಕೃತ ಬದುಕನ್ನು ಸಾಗಿಸುವ ಹಾಗೂ ಪುಟ್ಟ ಮನೆಯಲ್ಲಿ ವಾಸವಾಗಿ ತೊಂದರೆಯನ್ನು ಅನುಭವಿಸುವ ಮುಂಬಯಿಯಂತಹ ನಗರಗಳಿಗಿಂತ ವಿಶಾಲವಾದ ಜಾಗದಲ್ಲಿ ಹಲವಾರು ಕೋಣೆಗಳನ್ನು ಹೊಂದಿದ ಗ್ರಾಮೀಣ ಜೀವನವೇ ಶ್ರೇಷ್ಠ ಈಗ ಪ್ರತಿ ಹಳ್ಳಿಯೂ ಕೂಡ ಆಧುನಿಕ ಸಕಲ ಸೌಲಭ್ಯಗಳನ್ನುಹೊಂದಿ ಯಾವ ನಗರಗಳಿಗಿಂತಲೂ ಹಳ್ಳಿಗಳು ಕಡಿಮೆ ಇಲ್ಲಎಂಬುದೇ ಈ ಕವಿತೆಯ ಸಾರವಾಗಿದೆ.

ಇಲ್ಲೇ ಸರಿ ಎಂದಳಮ್ಮ ......
ಕೂಡಲೊಂದು, ಹಸೆಹರಹಿ ಒರಗಲೊಂದು
ಬಂದವರೊಡನೆ ಗಪ್ಪಾಹೊಡಯಲೊಂದು
ಮಡಿಗೊಂದು ಭಜನೆಗೊಂದು
ಹೀಗಿ ಕೋಣೆ ಕೋಣೆ
ಮನದಭೀ ಷ್ಟಗಳಂತೆ ಬದಲಾಯಿಸುವಾಗ
ಯಾಕೆ ಬಂದಾಳಲ್ಲಿ
ಮುಂಬೈ ಬೀಡಾದ ಜೇಲಿಗೆ?

ಇಲ್ಲೇ ಸರಿ ಎನ್ನುತ್ತಾಳಮ್ಮ
ನಿನ್ನೆಂಟೂ ಮಕ್ಕಳು
ಸಂಸಾರದ ರತ್ನಗಂಬಳಿ ಹರವಿ
ಸುಖಕ್ಷಣ ಮೆಲುಕಾಡುವದ ಕಾಣಲು
ಬರುವದಿಲ್ಲವೇ ತೊರೆದು ಹನೇಹಳ್ಳಿ
ಎಂದೆ.
ಛೇ ಛೇ ಇಲ್ಲೇ ಸರಿ ಎಂದಳಮ್ಮ.
ಎಂಭತ್ತನೇ ಜನ್ಮ ದಿನ
ಹೂ ಗುಚ್ಛ ವಸಂತ ತಂದಾಗ
ಹೇಮಂತನೋ ಎಂದಳು ಕದತೆರೆದು
ಚಷ್ಮ ವೇರಿಸಿ ಹಾ ನೀನೋ ಎಂದಳು.

ಇಲ್ಲೇ ಸರಿ ಎನ್ನುತ್ತಾಳೆ.
ಇದ್ದಾರೆ ಹೊಸ ಡಾಕ್ಟರು, ಸೂಜಿ, ಮದ್ದು .....
ಆಯಿತು ಇದ್ದೇನೆ ......

ಬೇಡ ನಿಮ್ಮ ಜೇಲಿನ ಹದ್ದು,
ಇಲ್ಲೇ ಇಲ್ಲೇ .....ಎಂತ
ಗಾಳಿಯಲ್ಲಿ ಕೈಸವರುತ್ತ
ಒಳಗೆ ಹೋದಳು ......


– ಅರವಿಂದ ನಾಡಕರ್ಣಿ

## ಶಬ್ದಗಳ ಅರ್ಥ

ಅಭಿಷ್ಟ - ಇಚ್ಛೆ ; ಹಸೆ - ಹಾಸಿಗೆ ;
ಒರಗು - ಮಲಗು ; ಹದ್ದು -ಸೀಮೆ

**ಕೃತಿ: 1**

**(i) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**(ii) ಕೆಳಗಿನ ಚೌಕಟ್ಟುಗಳಲ್ಲಿ ಯೋಗ್ಯ ಶಬ್ದ ತುಂಬಿರಿ.**

ಮುಂಬೈಯಲ್ಲಿ ಮನೆ ಎಂದರೆ →

ಅಮ್ಮನಿಗಿರುವ ಮಕ್ಕಳ ಸಂಖ್ಯೆ →

ಅಮ್ಮನ ವಯಸ್ಸು →

ಅಮ್ಮನ ಜನ್ಮದಿನ →

ಹೂಗುಚ್ಛ ತಂದವ →

**(iii) ಅಮ್ಮ ಹಳ್ಳಿಯಲ್ಲೇ ಇರಲು ಬಯಸಿದ ಎರಡು ಬಲವಾದ ಕಾರಣಗಳನ್ನು ಮುಂದಿನ ಚೌಕಟ್ಟುಗಳಲ್ಲಿ ಬರೆಯಿರಿ.**

**ಕೃತಿ: 2)**

(i) ನಿಮಗೆ ಹಳ್ಳಿಯ ಜೀವನ ಇಷ್ಟವೋ ಅಥವಾ ಪಟ್ಟಣದ ಜೀವನ ಇಷ್ಟವೋ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

# 7. ಯುಗಾದಿಯ ಹಾಡು

**ಕವಿ ಪರಿಚಯ :** ಜಿ. ಎಸ್. ಶಿವರುದ್ರಪ್ಪನವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಈಸೂರಿನಲ್ಲಿ 7/2/1926ರಲ್ಲಿ ಜನಿಸಿದರು ತಂದೆ-ಶಾಂತಿವೀರಪ್ಪ ತಾಯಿ-ವೀರಮ್ಮ ಮೈಸೂರು ಮತ್ತು ಹೈದರಾಬಾದಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಇವರು ಬೆಂಗಳೂರು ವಿ.ವಿ.ದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರೂ ಆಗಿದ್ದರು. ಜಿ.ಎಸ್.ಎಸ್. ಇವರು ನವೋದಯ ಮತ್ತು ನವ್ಯ ಎರಡೂ ಸಂಪ್ರದಾಯಗಳಲ್ಲಿ ಸಮಾನವಾದ ಕಾವ್ಯ ಸಾಧನೆ ಮಾಡಿದ್ದಾರೆ. ಆದ್ದರಿಂದ ಇವರನ್ನು ಸಮನ್ವಯ ಮಾರ್ಗದ ಕವಿಗಳೆಂದು ಗುರುತಿಸಲಾಗುತ್ತದೆ.

ಸಾಮಗಾನ, ಚೆಲುವು ಒಲವು, ದೇವಶಿಲ್ಪ, ಕಾರ್ತಿಕ, ದೀಪದಹೆಜ್ಜೆ ಗೋಡೆ, ಪ್ರೀತಿ ಇಲ್ಲದ ಮೇಲೆ, ಮೊದಲಾದ 12 ಕವನ ಸಂಕಲನಗಳನ್ನಲ್ಲದೆ, ಸಾಹಿತ್ಯ ವಿಮರ್ಶೆ, ಕಾವ್ಯಮೀಮಾಂಸೆ, ಸೌಂದರ್ಯ ಸಮೀಕ್ಷೆ. ಪ್ರವಾಸಕಥನ ಮೊದಲಾದವುಗಳು. ಜಿ.ಎಸ್.ಎಸ್ ಅವರ ಬರವಣಿಗೆಯ ವ್ಯಾಪಕತೆ ಮತ್ತು ವೈವಿಧ್ಯತೆಯನ್ನು ಪರಿಚಯಿಸುತ್ತವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾದ ಜಿ.ಎಸ್.ಎಸ್ ಅವರನ್ನು 2008ರಲ್ಲಿ ಕರ್ನಾಟಕ ಸರಕಾರವು 'ರಾಷ್ಟ್ರಕವಿ' ಪ್ರಶಸ್ತಿ ನೀಡಿ ಗೌರವಿಸಿದೆ. ದಾವಣಗೆರೆಯಲ್ಲಿ 1992 ನಡೆದ 61ನೇ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ವಸಂತ ಋತುವಿನ ಆಗಮನದೊಂದಿಗೆ ಬರುವ ಯುಗಾದಿ ಭಾರತೀಯರೆಲ್ಲರಿಗೂ ಹೊಸವರ್ಷ, ಬೇವು ಬೆಲ್ಲಗಳ ಸೇವನೆಯು ಬದುಕಿನಲ್ಲಿಯ ಕಷ್ಟ-ಸುಖಗಳ ಸಂಕೇತ. ಜೀವನದಲ್ಲಿ ಏನೇ ಬಂದರೂ ಸಂತೋಷದಿಂದ ಮುನ್ನುಗ್ಗಬೇಕು ಎಂಬುದೇ ಈ ಪದ್ಯದ ಆಶಯ.

ಬಂದ ಚೈತ್ರದ ಹಾದಿ ತೆರೆದಿದೆ
ಬಣ್ಣ-ಬೆಡಗಿನ ಮೋಡಿಗೆ
ಹೊಸತು ವರ್ಷದ ಹೊಸತು ಹರ್ಷದ
ಬೇವು-ಬೆಲ್ಲದ ಬೀಡಿಗೆ.

ಕೊಂಬೆ ಕೊಂಬೆಯ ತುಂಬ ಪುಟಿದಿದೆ
ಅಂತರಂಗದ ನಂಬಿಕೆ
ಚಿಗುರು ಹೂವಿನ ಬಣ್ಣದಾರತಿ
ಯಾವುದೋ ಆನಂದಕೆ !

ಇದ್ದುದೆಲ್ಲವು ಬಿದ್ದು ಹೋದರು
ಎದ್ದು ಬಂದಿದೆ ಸಂಭ್ರಮ
ಕಿತ್ತುಕೊಂಡರು ಕೊಟ್ಟು ಸುಖಿಸುವ
ಸೋಲನರಿಯದ ಸಂಗಮ.

ಒಳಿತು ಕೆಡುಕೋ ಏನು ಬಂದರು
ಇರಲಿ ಎಲ್ಲಕು ಸ್ವಾಗತ
ಸ್ಪರ್ಧೆಯಿಲ್ಲದ ಶ್ರದ್ಧೆಯೊಂದೇ
ಸ್ಫೂರ್ತಿಯಾಗಲಿ ಸಂತತ.

ಹಳತು-ಹೊಸತೂ ಕೂಡಿ ಮೂಡಿಸುವಂಥ
ಪಾಕವ ನೋಡಿರಿ
ಎಲ್ಲ ರುಚಿಗೂ ರಸನೆಯಾಗುತ
ಪುಷ್ಟಿಗೊಳ್ಳುತ ಬಾಳಿರಿ.

ಯುಗ ಯುಗಾದಿಗೆ ಹೊಸತು ಹರ್ಷವು
ಬರಲಿ, ಬಾರದೆ ಹೋಗಲಿ;
ಬಂದ ಚೈತ್ರದ ಚಿಗುರಿನಂದದ
ಮಂದಹಾಸವೆ ಉಳಿಯಲಿ.

– ಜಿ. ಎಸ್. ಶಿವರುದ್ರಪ್ಪ

**ಶಬ್ದಗಳ ಅರ್ಥ:-** ಬೆಳಗು - ಸೌಂದರ್ಯ; ಪುಷ್ಟಿ - ಗಟ್ಟಿ, ಬಲ; ಸಂತತ - ನಿರಂತರ; ಸ್ಫೂರ್ತಿ - ಪ್ರೇರಣೆ

**ಕೃತಿ: 1 ಪದ್ಯದಲ್ಲಿಯ ಅಂತ್ಯಪ್ರಾಸದ ಶಬ್ದಗಳನ್ನು ಆಯ್ದು ತೂಗುಪಟದಲ್ಲಿ ಬರೆಯಿರಿ.**

**ಕೃತಿ: 2 ಬಿಟ್ಟಸ್ಥಳಗಳನ್ನು ಯೋಗ್ಯ ಪರ್ಯಾಯ ಶಬ್ದದಿಂದ ಪೂರ್ಣಮಾಡಿ ಬರೆಯಿರಿ.**

(ಬೇವು, ರುಚಿಗೂ, ಸ್ವಾಗತ, ಬಣ್ಣ, ಇದ್ದುದೆಲ್ಲವು, ಚೈತ್ರದ.

i) ---------- ಬಿದ್ದು ಹೋದರು ಎದ್ದು ಬಂದಿದೆ ಸಂಭ್ರಮ.

ii) ಎಲ್ಲ ----------- ರಸನೆಯಾಗುತ ಪುಷ್ಟಿಗೊಳ್ಳುತ ಬಾಳಿರಿ.

iii) ಬಂದ ----------- ಚಿಗುರಿನಂದದ ಮಂದಹಾಸವೆ ಉಳಿಯಲಿ.

iv) ಒಳಿತು ಕೆಡಕೋ ಏನು ಬಂದರು ಇರಲಿ ಎಲ್ಲಕು -------------.

**ಕೃತಿ: 3 ಜೋಡಿಪದಗಳನ್ನು ಹೊಂದಿಸಿ ಬರೆಯಿರಿ**

| | |
|---|---|
| i) ಹಳತು | ಅ) ಬೆಡಗಿನ |
| ii) ಬೇವು | ಆ) ಹೊಸತು |
| iii) ಬಣ್ಣ | ಇ) ಬೆಲ್ಲ |

**ಕೃತಿ: 4 ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಹೊಸತು ವರ್ಷ ಏನನ್ನು ತಂದಿದೆ?

2) ಚೈತ್ರದ ಚಿಗುರಿನಂದದಲ್ಲಿ ಏನು ಉಳಿಯಲಿ?

3) ಕವಿ ಯಾವುದಕ್ಕೆ ಸ್ವಾಗತವನ್ನು ಕೋರಿದ್ದಾರೆ?

**ಕೃತಿ: 5 ಕವಿತೆಯಲ್ಲಿ ಬರುವ ಅನುಸ್ವಾರಯುಕ್ತ ಶಬ್ದಗಳನ್ನು ಕೆಳಗಿನ ಆಕೃತಿಯಲ್ಲಿ ಬರೆಯಿರಿ**

**ಕೃತಿ: 6 ಕೆಳಗಿನ ಚೌಕಟ್ಟಿನಲ್ಲಿಯ ತತ್ಸಮ-ತದ್ಭವಗಳನ್ನು ಜೋಡಿಸಿ ಬರೆಯಿರಿ.**

| | | | |
|---|---|---|---|
| ಯುಗ | ಹರ್ಷ | ವರ್ಷ | ಬಣ್ಣ |
| ವರ್ಣ | ವರುಷ | ಹರುಷ | ಜುಗ |

**ಕೃತಿ: 7 ನಿಮ್ಮ ಅಕ್ಕನಿಗೆ ಯುಗಾದಿಯ ಹಬ್ಬಕ್ಕೆ ಬರಹೇಳಲು ಒಂದು ಪತ್ರ ಬರೆಯಿರಿ.**

C7R7HD

# 8. ಬಿಂಕವು ಬಣ್ಣವಡೆಯದು

**ಕವಿ ಪರಿಚಯ :** ಸಂಚಿಯ ಹೊನ್ನಮ್ಮ (ಕ್ರಿ. ಶ. ಸು. 1700): ಈಕೆ ಮೈಸೂರು ಅರಸನಾದ ಚಿಕ್ಕದೇವರಾಯನ ಕಾಲದ ಸಾಹಿತ್ಯಕಾರರಲ್ಲಿ ಒಬ್ಬಳು. ಸ್ವಪ್ರಯತ್ನದಿಂದ ಅಕ್ಷರಾಭ್ಯಾಸ ಮಾಡಿ ಕಾವ್ಯಾಲಂಕಾರಗಳನ್ನು ಸಿಂಗಿರಾರ್ಯ ಗುರುವಿನಲ್ಲಿ ವ್ಯಾಸಂಗ ಮಾಡಿದಳು. 'ಹದಿಬದೆಯ ಧರ್ಮ' ಎಂಬ ಇವಳ ನೀತಿಕಾವ್ಯ, ಸಾಹಿತ್ಯ ಚರಿತ್ರೆಯಲ್ಲಿಯೇ ವೈಶಿಷ್ಟ್ಯಪೂರ್ಣವಾಗಿದೆ. ಇದೊಂದು ನೀತಿಕಾವ್ಯವಾಗಿದ್ದರೂ ಹೊನ್ನಮ್ಮ ಅದನ್ನು ಸರಸಗೊಳಿಸಿ ''ಸರಸ ಸಾಹಿತ್ಯದ ವರದೇವತೆ'' ಎಂಬ ಗೌರವ ಪಡೆದಿದ್ದಾಳೆ.

ಗೃಹಸ್ಥಾಶ್ರಮ ಧರ್ಮದಿಂದ ಕೂಡಿದ ಬಾಳಿನ ಚೆಲುವನ್ನು ಹೆಣ್ಣುಮಕ್ಕಳ ಹಾಡಿನಲ್ಲಿ ಹಾಡಿ, ನಿತ್ಯ ಸಂಸಾರದ ನಿಷ್ಕಾಮ ಕರ್ಮವೇ ಮುಕ್ತಿ ಪಡೆಯುವ ಎಂಬುದನ್ನು ಈ ಕಾವ್ಯದಲ್ಲಿ ಹೇಳಿದೆ. ಇದನ್ನು 'ಹದಿಬದೆಯಧರ್ಮ' ದಿಂದ ಆಯ್ದು, ಸಂಪಾದಿಸಲಾಗಿದೆ.

ಸಾಂಗವೇದವನೋದಿ ಸಕಲ ಧರ್ಮದ ತ
ತ್ವಂಗಳನರಿತಾಚರಿಸಿ
ತುಂಗ ಮಹಿಮೆವೆತ್ತ ದೋಷವಳಿದು ಮುನಿ
ಪುಂಗವನೋರ್ವನೆಸೆದನು ॥ 1 ॥

ಒಂದು ದಿವಸ ವೇದವನೋದುತ ಬೇಸಗೆ
ಯಿಂದ ಬಳೆದ ಬಿಸಿಲಿನೊಳು
ಬೆಂದುರೆ ಬೆಮರುತ ಬಿಸುಸುಯ್ಯುತ್ತಂದು
ನಿಂದನು ಮರದ ನೆಳಲೊಳು ॥ 2 ॥

ಆ ಋಷಿವರನಂತಿರ್ಪ ವೇಳೆಯೊಳಾ
ಭೂರುಹದಗ್ರಶಾಖೆಯೊಳು
ಸೇರಿದ ಬಿಳುವಕ್ಕಿ ಚೀರುವ ದನಿ ಮಿಗೆ
ಕೂರಮಾಗಿರೆ ಕೊನರಿದುದು ॥ 3 ॥

ಆ ಪರಿ ದನಿ ಯಾವ ಬಳಿಯೊಳು ಪೊಣ್ಮಿದು
ದಾ ಪರಿಸರವನಾರೈದು
ಕೋಪವೆರಸಿ ಕೂರ್ತು ನೋಡೆ ತಾಪಸನಂ
ದಾ ಪಕ್ಷಿಗಸುವಡಗಿದುದು ॥ 4 ॥

ಹರಣವಳಿದು ಧರೆಗುರುಳಿದ ಪಕ್ಷಿಯ
ಪರಿಯ ನಿಟ್ಟಿಸಿ ಪರಿತಪಿಸಿ
ಇರದೆ ತಾನೆಸಗಿದ ತಪಗಳ ಮೈಮೆಗೆ
ಸರಿಯಿಲ್ಲೆಂದೆಣಿಸಿದನು ॥ 5 ॥

ಬಳಿಕ ಪಸಿದು ಪಾರ್ವರ ಬೀದಿಯೊಳೊಂದು
ನಿಳಯವ ಪೊಕ್ಕು ನಿಂದಲ್ಲಿ
ಬಳಲಿದೆನೆನಗುಣಬಡಿಸೆಂದಲ್ಲಿರ್ದ
ಕುಲಪಾಲಿಕೆಗುಸುರಿದನು ॥ 6 ॥

ಪತಿಸೇವೆಯೊಳಂತು ಪಸಿದ ಪಾರ್ವನ ಮರೆ
ದತಿ ವಿಳಂಬವನಾಚರಿಸೆ
ಸತಿಯರ ಧರ್ಮದ ಸಾರವನರಿಯದೆ
ಖತಿಗೊಂಡು ಮುನಿ ಗಳಪಿದನು ॥ 7 ॥
ಅತಿಘೋರ ತಪವೆಮ್ಮದದನು ನೀನರಿಯದೆ
ಮತಿಗೆಟ್ಟು ಮರುಳಾಗದಿರು
ಪತಿಶುಶ್ರೂಷೆಯ ಬಲ್ಮೆ ಫಲಿಸದಿಲ್ಲಿ
ಯತಿಧರ್ಮದಿರವಿದು ಬೇರೆ ॥ 8 ॥
ಬಳಲಿದೆ ಸಾಕಿನ್ನು ಬಡಿಸಿದನ್ನವನುಂಡು
ತಳುವದೆ ತಪವನಾಚರಿಸು
ಬಿಳುವಕ್ಕಿಯ ಬೀಳಗೆಡಹಿದ ಬಿಂಕವೀ
ಬಳಿಯೊಳು ಬಣ್ಣವಡೆಯದು ॥ 9 ॥

– ಸಂಚಿಯ ಹೊನ್ನಮ್ಮ

## ಶಬ್ದಗಳ ಅರ್ಥ:

ಸಾಂಗ=ಸಂಪೂರ್ಣವಾದ ; ತತ್ವ–ಸಾರ; ಪುಂಗವ=ಶ್ರೆಷ್ಠವ್ಯಕ್ತಿ; ತುಂಗ=ಶ್ರೇಷ್ಠ; ಬಳೆದ=ಹೆಚ್ಚಾದ; ಬೂರುಹ=ಮರ; ಬಿಳುವಕ್ಕಿ=ಬಲಾಕ; ಮಿಗೆ=ಹೆಚ್ಚಾಗಿ; ಕೂರ್=ಹರಿತ; ಅಸು=ಪ್ರಾಣ; ಪರಿತಪಿಸು=ಅತಿಯಾಗಿ ಕಳವಳಪಡು; ಮೈಮೆ=ಹಿರಿಮೆ; ಪಾರ್ವ–ಬ್ರಾಹ್ಮಣ; ಕುಲಪಾಲಿಕೆ=ಪತಿವ್ರತೆ ಖತಿ=ಕೋಪ; ತಳುವು=ನಿಧಾನಿಸು; ಬಿಂಕ–ಗರ್ವ

### ಕೃತಿ: 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

i) ಮುನಿಯು ಯಾವುದರಲ್ಲಿ ಪರಿಣಿತನಾಗಿದ್ದನು?

ii) ವಿಶ್ರಾಂತಿಗಾಗಿ ಮುನಿಯು ಎಲ್ಲಿ ಆಶ್ರಯ ಪಡೆದನು?

iii) ಪಕ್ಷಿಯ ಪ್ರಾಣ ಹೇಗೆ ಹೋಯಿತು?

iv) ಪತಿವ್ರತೆಯು ಭಿಕ್ಷೆ ನೀಡಲು ಏಕೆ ತಡಮಾಡಿದಳು?

### ಕೃತಿ: 2) ಪಠ್ಯದ ಪದ್ಯಭಾಗವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಬಿಡಿಸಿರಿ.

#### ಅ) ಕೆಳಗಿನ ವಿಧಾನಗಳನ್ನು ಪೂರ್ತಿ ಮಾಡಿರಿ.

i) ಮುನಿಯು ಇವುಗಳನ್ನು ತಿಳಿದುಕೊಂಡಿದ್ದನು. [ ]

ii) ಋಷಿಯು ಯಾವುದರಿಂದ ಬಳಲಿದ್ದನು. [ ]

iii) ಹಕ್ಕಿಯ ಧ್ವನಿ ಹೀಗಿತ್ತು. [ ]

iv) ಮುನಿಯು ಭಿಕ್ಷೆಗೆ ಬಂದ ಕೇರಿ. [ ]

ಬ) ಪೌರಾಣಿಕ ಕಥೆಗಳ ಆಧಾರದಿಂದ ಐದು ಜನ ಪತಿವ್ರತೆಯರ ಹೆಸರು ಬರೆಯಿರಿ.

ಕೃತಿ:3) ಅ) ಕೆಳಗಿನ ಶಬ್ದಗಳಿಗೆ ತತ್ಸಮ-ತತ್ಭವಗಳನ್ನು ಬರೆಯಿರಿ.

ಬೇಸಗೆ ______ ದನಿ ______ ಹರಣ ______

ಹದಿಬದೆ ______ ಪಕ್ಷಿ ______

ಬ) ಕೆಳಗಿನ ಶಬ್ದಗಳಿಗೆ ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.

ಬೆಂದು → ______
ಕೋಪ → ______
ಧರೆ → ______
ಸತಿ → ______

ಕ) ಸಮಾಸ ವಿಗ್ರಹಿಸಿ ಹೆಸರಿಸಿರಿ.

ಬಿಳುವಕ್ಕಿ ______ + ______ = ______

ಮತಿಗೆಡು ______ + ______ = ______

ಡ) ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಧರ್ಮ x ______ ದೋಷ x ______ ದಿವಸ x ______

# 9. ಸೋಮೇಶ್ವರ ಶತಕ

**ಕವಿ ಪರಿಚಯ :** ಈ ಗ್ರಂಥದ ಕವಿಯ ವಿಷಯ ಹೆಚ್ಚಾಗಿ ತಿಳಿದಿಲ್ಲ. ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಗ್ರಂಥದ ಎರಡನೆಯ ಪದ್ಯದಲ್ಲಿ ಕವಿಯು ತನ್ನ ಹೆಸರು ಸೋಮನೆಂದು ಹೇಳಿಕೊಂಡಿರುವನು. ಹನ್ನೆರಡನೆಯ ಶತಮಾನದ ಅಂತ್ಯದಲ್ಲಿ ಇದ್ದು, ಸಂಸ್ಕೃತ, ತೆಲುಗು ಮತ್ತು ಕನ್ನಡ ಈ ಮೂರು ಭಾಷೆಗಳಲ್ಲಿ ಕವಿತ್ವ ಮಾಡಿ ಪ್ರಸಿದ್ಧನಾದ ಪಾಲ್ಕುರಿಕೆ ಸೋಮನಾಥ ಸೋಮೇಶ್ವರ ಶತಕವನ್ನು ರಚಿಸಿದನೆಂದು ಪ್ರತೀತಿ ಇದೆ.

ಈ ಭಾಗವನ್ನು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಪ್ರಕಟಿಸಿರುವಸೋಮೇಶ್ವರ ಶತಕ' ಎಂಬ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

ಅರೆಯಂ ಸೀಳುವೊಡಾನೆ ಮೆಟ್ಟಲಹುದೇ ಚಾಣಂಗಳಿಂದಲ್ಲದೇ ।
ಕಿರಿದಾಗಿರ್ದೊಡದೇನುಪಾಯ ಪರನೊರ್ವಂಕೋಟಿಗೀಡಕ್ಕು ಹೆ ॥
ಮ್ಮರನಿರ್ದೇನದರಿಂದಲೆತ್ತಬಹುದೇ ಬಲ್ಭಾರಮಂ ಸನ್ನೆ ಸಾ ।
ವಿರ ಕಾಲಾಳಿನ ಸತ್ವವೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

ಉಣದಿರ್ಪಾ ದನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ ।
ಒಣಗಲ್ಪೈರಿಗೆ ಬಾರದಿರ್ದಮಳೆ ತಾಂ ಬಂದೇನದಾಪತ್ತಿನೊಳ್ ॥
ಮಣಿದುಂನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ ।
ತೃಣವೇ ಪರ್ವತವಲ್ಲವೇ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

ಪೊಡೆಯೊಳ್ ತುಂಬಿರೆ ಪಂಕ –ಮೇಲೆ ತೊಳೆಯಲ್ ತಾಂ ಶುದ್ಧನೇನಪ್ಪನೇ ।
ಕಡುಪಾಪಂ ಬಲುಮೀಯಲಾತ ಶುಚಿಯೇ ಕಾಕಾಳಿಯೇಂ ಮೀಯದೇ ॥
ಗುಡಪಾನಂಗಳೊಳದ್ದೆ ಬೇವಿನ ಫಲಂ ಸ್ವಾದಪ್ಪುದೇ ಲೋಕದೊಳ್ ।
ಮಡಿಯೇ ನಿರ್ಮಲ ಚಿತ್ತವೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

– ಪಾಲ್ಕುರಿಕೆ ಸೋಮನಾಥ

## ಶಬ್ದಗಳ ಅರ್ಥ:

ಅರೆ – ಬಂಡೆ; ಚಾಣ – ಉಳಿ; ಈಡು – ಸಮ; ಉಪಾಯಪರ – ಉಪಾಯಬಲ್ಲವ; ಅಕ್ಕು – ಆಗುತ್ತಾನೆ; ಹೆಮ್ಮರ – ದೊಡ್ಡಮರ; ಮಣಿದು – ಬಗ್ಗಿ; ಐದಿದಾ – ಒದಗಿದ; ಕಾಲೋಚಿತಕ್ಕೆ – ಕಾಲಕ್ಕೆ ಸರಿಯಾಗಿ; ತೃಣ – ಹುಲ್ಲು; ಪೊಡೆ – ಹೊಟ್ಟೆ; ಪಂಕ – ಕೆಸರು; ಕಾಕಾಳಿ – ಕಾಗೆಗಳ ಗುಂಪು; ಕಡುಪಾಪಂ – ಬಹಳ ಪಾಪ ಮಾಡಿದವ; ಗುಡಪಾನ – ಬೆಲ್ಲದ ಪಾನಕ; ಸ್ವಾದು – ಸಿಹಿ, ರುಚಿ; ಏಂ – ಏನು

**ಕೃತಿ: 1) ಕೆಳಗಿನ ಶಬ್ದಗಳನ್ನು ಹೀಗೆ ಬಿಡಿಸಿ ಓದಿರಿ**

ಸೀಳುವೊಡಾನೆ– ಸೀಳುವೊಡೆ + ಆನೆ
ಮೆಟ್ಟಲಹುದೇ– ಮೆಟ್ಟಲು + ಅಹುದೇ

ಚಾಣಂಗಳಿಂದಲ್ಲದೇ – ಚಾಣಂಗಳಿಂದ + ಅಲ್ಲದೇ
ಕಿರಿದಾಗಿರ್ದೊಡೇನುಪಾಯ ಪರನೊರ್ವಂ – ಕಿರಿದು + ಆಗಿ + ಇರ್ದೊಡೆ + ಏನು + ಉಪಾಯಪರಂ + ಒರ್ವನ್

ಕೋಟಿಗೀಡಕ್ಕು – ಕೋಟಿಗೆ + ಈಡು + ಅಕ್ಕು
ಹೆಮ್ಮರನಿರ್ದೇದರಿಂದ ಲೆತ್ತಬಹುದೇ – ಹೆಮ್ಮರಂ + ಇರ್ದು + ಏ + ಅದರಿಂದಲ್ + ಎತ್ತಬಹುದೇ

ಬಲ್ಭಾರಮಂ – ಬಲ್ + ಭಾರಮಂ
ಉಣದಿರ್ಪಾ ಧನಮಿರ್ದೊಡೇನು – ಉಣದೆ + ಇರ್ಪ + ಧನಂ + ಇರ್ದೊಡೆ + ಏನು

ಸುತನಿರ್ದೇಂ – ಸುತನ್ + ಇರ್ದು + ಏನ್
ಮುಪ್ಪಿನಲ್ಲಾಗದಾ – ಮುಪ್ಪಿನಲ್ಲಿ + ಆಗದ + ಆ

ಬಾರದಿರ್ದ ಮಳೆ – ಬಾರದೆ + ಇರ್ದ + ಮಳೆ
ಬಂದೇನದಾಪತ್ತಿನೊಳ್ – ಬಂದು + ಏನ್ + ಅದು + ಆಪತ್ತಿನೊಳ್

ಬಂಧುವೇತಕೆಣಿಸಲ್ – ಬಂಧು + ಏತಕೆ + ಎಣಿಸಲ್
ಕಾಲೋಚಿತಕ್ಕೈದಿದಾ – ಕಾಲ + ಉಚಿತಕ್ಕೆ + ಐದಿದ + ಆ

ತೃಣವೇ ಪರ್ವತವಲ್ಲವೇ – ತೃಣವೇ + ಪರ್ವತ + ಅಲ್ಲವೇ
ಪೊಡೆಯೊಳ್ ತುಂಬಿರೆ ಪಂಕ – ಪೊಡೆ + ಒಳ್ + ತುಂಬಿರೆ + ಪಂಕ

ಶುದ್ಧನೇನಪ್ಪನೇ – ಶುದ್ಧನ್ + ಏನ್ + ಅಪ್ಪನೇ
ಕಾಕಾಳಿಯೇಂ – ಕಾಕ + ಅಳಿಯು + ಏನ್

ಗುಡಪಾನಂಗಳೊಳದ್ದೆ – ಗುಡಪಾನಂಗಳೊಳ್ + ಅದ್ದೆ
ಸ್ವಾದಪ್ಪುದೇ – ಸ್ವಾದು + ಅಪ್ಪುದೇ

**ಕೃತಿ: 2) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

ಅ. ಬಂಡೆಯನ್ನು ಯಾವುದರಿಂದ ಸೀಳಲು ಸಾಧ್ಯವಿಲ್ಲ ?

ಆ. ಬಂಡೆಯನ್ನು ಹೇಗೆ ಸೀಳಬೇಕು ?

ಇ. ಉಪಾಯಬಲ್ಲವನು ಯಾರಿಗೆ ಸಮಾನನು ಆಗಿರುತ್ತಾನೆ ?

ಈ. ಹೆಚ್ಚು ಭಾರವನ್ನು ಹೇಗೆ ಎತ್ತಬಹುದು ?

ಉ. ಯಾವುದು ನಿಜವಾದ ಮಡಿ ?

**ಕೃತಿ:3)**

**ಕೆಳಗೆಕೊಟ್ಟ ಸಾಲುಗಳ ಹೊಸಗನ್ನಡ ರೂಪವನ್ನು ಪರ್ಯಾಯಗಳಿಂದ ಗುರುತಿಸಿ ಬರೆಯಿರಿ.**

(1) ಸುತನಿರ್ದೇಂ ಮುಪ್ಪಿನಲ್ಲಾಗದಾ

i) ಮುಪ್ಪಿನಲ್ಲಿ ಆಸರೆಯಾಗದ ಮಗನಿದ್ದು ಉಪಯೋಗವೇನು ?

ii) ಸುತನು ಮುಪ್ಪಿನವನಾಗುವನು.

iii) ಸುತನಿಗೆ ಮುಪ್ಪು ಬರುವುದಿಲ್ಲ.

(2) ಆಪತ್ತಿನೊಳ್ ಮಣಿದುಂನೋಡದ ಬಂಧುವೇತಕೆ

i) ಬಂಧುಗಳಿಗೆ ಕಷ್ಟ ಬರುವುದಿಲ್ಲ.

ii) ಕಷ್ಟಕಾಲದಲ್ಲಿ ಸಹಾಯ ಮಾಡದ ಬಂಧುಗಳಿದ್ದು ಏನು ಪ್ರಯೋಜನ ?

iii) ಆಪತ್ತಿನಲ್ಲಿ ಬಂಧುಗಳು ಮಣಿಯುತ್ತಾರೆ.

(3) ಗುಡಪಾನಂಗಳೊಳದ್ದೆ ಬೇವಿನ ಫಲಂ ಸ್ವಾದಪ್ಪುದೇ

i) ಬೆಲ್ಲದ ಪಾನಕದಲ್ಲಿ ಬೇವಿನ ಫಲವನ್ನು ಎದ್ದಬಾರದು.

ii) ಬೇವಿನ ಹಣ್ಣಿನಿಂದ ಮಾಡಿದ ಪಾನಕ ಸಿಹಿಯಾಗಿರುತ್ತದೆ.

iii) ಬೆಲ್ಲದಪಾನಕದಲ್ಲಿ ಬೇವಿನ ಹಣ್ಣನ್ನು ಎದ್ದಿದರೆ ಅದು ಸಿಹಿಯಾಗುವುದೇ?

**ಕೃತಿ: 4) ಕೆಳಗಿನ ಸಾಲುಗಳನ್ನು ಹೊಸಗನ್ನಡಕ್ಕೆ ರೂಪಾಂತರಿಸಿರಿ.**

i) ಉಣದಿರ್ಪಾ ಧನಮಿರ್ದೊಡೇನು

ii) ಒಣಗಲ್ ಪೈರಿಗೆ ಬಾರದಿರ್ದಮಳೆ ತಾಂ ಬಂದೇನು ?

iii) ಕಡುಪಾಪಂ ಬಲುಮೀಯಲಾತ ಶುಚಿಯೇ

**ಕೃತಿ: 5) ಈ ಕೆಳಗಿನ ವಚನದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ?
ಚೆನ್ನಮಲ್ಲಿಕಾರ್ಜುನಾ ?

C89YZN

# 10. ಕರ್ಣನಾರೆಂದ

**ಕವಿ ಪರಿಚಯ :** 'ಕರ್ಣಾಟಕ ಭಾರತ ಕಥಾ ಮಂಜರಿ'(ಗದುಗಿನ ಭಾರತ)ಯನ್ನು ರಚಿಸಿದ ನಾರಣಪ್ಪನು ಗದಗ ಜಿಲ್ಲೆಯ ಗದುಗಿನ ಬಳಿಯ ಕೋಳಿವಾಡದವನು. ಈತನ ಕಾಲ ಕ್ರಿ.ಶ. 1430. ಗದುಗಿನ ವೀರನಾರಾಯಣನ ಪರಮಭಕ್ತನಾದ ಈತನು ಕೃಷ್ಣಭಕ್ತಿಗೆ ಒತ್ತುಕೊಟ್ಟು ವ್ಯಾಸಭಾರತದ ಮೊದಲ ಹತ್ತು ಪರ್ವಗಳನ್ನು ಕನ್ನಡದಲ್ಲಿ ಬರೆದಿದ್ದಾನೆ. ಈತನ ರೂಪಕಗಳು ಜನಜನಿತವಾಗಿದ್ದು ವಿಮರ್ಶಕರು ಇವನನ್ನು 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಪ್ರಶಂಸಿಸಿದ್ದಾರೆ. ವ್ಯಾಸರ ಬಗೆಗಿನ ಗೌರವಸೂಚಕವಾಗಿ ಕವಿ ತನ್ನನ್ನು ಕುಮಾರವ್ಯಾಸನೆಂದು ಕರೆದುಕೊಂಡಿದ್ದಾನೆ. ಈ ಪದ್ಯಭಾಗವನ್ನು ಕುಮಾರವ್ಯಾಸ ಭಾರತದ ಕರ್ಣಪರ್ವದಿಂದ ಆರಿಸಿಕೊಂಡಿದೆ. ಕುರುಕ್ಷೇತ್ರದಲ್ಲಿ ಕರ್ಣಾರ್ಜುನರ ನಡುವೆ ಯುದ್ಧ ನಡೆಯುತ್ತಿರುವಾಗ, ಕರ್ಣನ ರಥದ ಚಕ್ರ ಹೂತುಹೋಗುತ್ತದೆ. ಚಕ್ರವನ್ನು ಮೇಲೆತ್ತಲು ಕೆಳಗಿಳಿದ ಕರ್ಣನ ಮೇಲೆ ಬಾಣವನ್ನು ಪ್ರಯೋಗಿಸುವಂತೆ ಕೃಷ್ಣನು ಅರ್ಜುನನನ್ನು ಪ್ರಚೋದಿಸುತ್ತಾನೆ. ಆದರೆ ಅರ್ಜುನನಿಗೆ ಮನಸ್ಸಾಗುವುದಿಲ್ಲ. ಅವನು ಆತಂಕಗೊಳ್ಳುತ್ತಾನೆ. 'ಕರ್ಣನು ತನ್ನ ಸೋದರನೋ?' ಎಂಬ ಸಂಶಯ ಹುಟ್ಟಿ ಕೃಷ್ಣನನ್ನು ಪ್ರಶ್ನಿಸುತ್ತಾನೆ. ಆ ಸಂದರ್ಭ ಇಲ್ಲಿದೆ.

ದೇವ ಹಗೆಯಾಗಿರನು ಕರ್ಣನ
ದಾವ ಹದನೆಂದರಿಯೆ ಮನದಲಿ
ನೋವು ಮಿಗುವುದು ಕೈಗಳೇಳವು ತುಡುಕುವಡೆ ಧನುವ ।
ಜೀವವೀತನ ಮೇಲೆ ಕರಗುವು-
ದಾವ ಸಖನೋ ಶತ್ರುವೆಂಬೀ
ಭಾವನೆಯ ಬಗೆ ಬೀಳುಕೊಂಡುದು ಕರ್ಣನಾರೆಂದ ।।1।।

ಕೌರವನ ಮೇಲಿಲ್ಲದಗ್ಗದ
ವೈರವೀತರ ಮೇಲೆ ನಮಗಪ-
ಕಾರಿಯೀತನು ಮರಣದನುಸಂಧಾನವಿನ್ನೆಬರ ।
ವೈರವುಪಶಮಿಸಿತ್ತು ಯುಧಿಷ್ಠಿರ
ವೀರನಿಂದಿಮ್ಮಡಿಯ ನೇಹದ
ಭಾರವಣೆ ತೋರುವುದಿದೇನ್ನೆ ಕರ್ಣನಾರೆಂದ ।।2।।

ಋಷಿಗಳನುಮತದಿಂದ ಕುಂತಿಯ
ಬಸುರಲೇನುದಯಿಸಿದನಲೆ ನೀ-
ನಸುರರಿಪು ಬಹುಕಪಟ ನಾಟಕ ಸೂತ್ರಧಾರನಲೆ ।
ವಸುಮತಿಯ ಭಾರವನು ಸಲೆ ಹಿಂ-
ಗಿಸುವ ಕೃತ್ಯವು ನಿನ್ನದೆನಗು-
ಬ್ಬಸವಿದೇನೆಂದರಿಯೆನಕಟಾ ಕರ್ಣನಾರೆಂದ ।।3।।

ಧರೆಯ ಬಿಡುವೆವು ಕುರುಪತಿಗೆ ನಾ-
ವರುವರೊಡವುಟ್ಟಿದರು ವಿಪಿನಾಂ-
ತರದೊಳಗೆ ಭಜಿಸುವೆವು ನಿನ್ನನು ಭಾವಶುದ್ಧಿಯಲಿ ।
ತೆರಳುವೀ ಸಿರಿಗೋಸುಗರ ಸೋ-

ದರನ ಕೊಲುವೆನೆ ಕೃಷ್ಣ ಕರುಣಿಸು
ಕರುಣಿಸಕಟಾ ಕೃಷ್ಣಕರುಣಿಸು ಕರ್ಣನಾರೆಂದ ||4||

ದೂರುವವರಾವಲ್ಲ ಕರುಣವ
ತೋರಿ ಬಿನ್ನಹ ಮಾಡಿದೆನು ಹಗೆ-
ಯೇರದಿವನಲಿ ಸೇರುವುದು ಸೋದರರದ ಸಂಬಂಧ ।
ಆರೆನೀತನ ಕೊಲೆಗೆ ಹೃದಯವ
ಸೂರೆಗೊಂಡನು ಕರ್ಣನೆಕಟಾ
ತೋರಿನುಡಿಯಾ ಕೃಷ್ಣ ಕರುಣಿಸು ಕರ್ಣನಾರೆಂದ ||5||

– 'ಕುಮಾರವ್ಯಾಸ'

## ಶಬ್ದಗಳ ಅರ್ಥ:

ಹಗೆ – ವೈರಿ; ಸಂಧಾನ – ಒಪ್ಪಂದ; ರಿಪು – ವೈರಿ; ಅಸುರರಿಪು – ಕೃಷ್ಣ ; ವಸುಮತಿ – ಭೂಮಿ; ವಿಪಿನ – ಕಾಡು, ಅರಣ್ಯ; ಬಿನ್ನಹ – ವಿನಂತಿ; ಉಬ್ಬಸ – ಸಂಕಟ, ಕಷ್ಟ

### ಕೃತಿ: 1 ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.


i) ಕಪಟನಾಟಕ ಸೂತ್ರಧಾರಿ ಯಾರು ?
ii) ಅರ್ಜುನನು ಕುರುಪತಿಗೆ ಏನನ್ನು ಬಿಟ್ಟುಕೊಡಲು ಸಿದ್ಧನಿದ್ದನು ?
iii) ಕರ್ಣನು ಯಾರ ಮಗ ?
iv) ಅರ್ಜುನನು ಕೃಷ್ಣನನ್ನು ಮೇಲಿಂದ ಮೇಲೆ ಕೇಳಿದ ಪ್ರಶ್ನೆ ಯಾವುದು ?

### ಕೃತಿ: 2 ಕೆಳಗಿನ ಪದಗಳ ಅರ್ಥ ಬರೆಯಿರಿ.


ವಸುಮತಿ = -------------- ಕುರುಪತಿ = --------------

ಬಿನ್ನಹ = ---------------- ಹಗೆ = ---------------


**ಕೃತಿ:3 ಕೃಷ್ಣನ ಇನ್ನಿತರ ಹೆಸರುಗಳನ್ನು ಕೆಳಗಿನ ಕೋಷ್ಟಕದಲ್ಲಿ ತುಂಬಿರಿ.**




**ಕೃತಿ: 4 ಪಾಂಡವರ ಹೆಸರುಗಳನ್ನು ಕೆಳಗಿನ ಕೋಷ್ಟಕದಲ್ಲಿ ತುಂಬಿರಿ.**




**ಕೃತಿ: 5 ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



# ಗದ್ಯ ವಿಭಾಗ

# 1. ಶ್ರೀ ಕೃಷ್ಣ ಪಾರಿಜಾತ

- ಅರ್ಜುನ ಕೊರಟಕರ

**ಲೇಖಕರ ಪರಿಚಯ :** ಅರ್ಜುನ ಕೊರಟಕರ ಇವರು ಮೂಲತಃ ಬಾಗಲಕೋಟ ಜಿಲ್ಲೆಯ ಜಮಖಂಡಿಯಲ್ಲಿ 1/6/1954ರಂದು ಜನಿಸಿದರು. ಭಾವಜ್ಞ ಇವರ ಕಾವ್ಯನಾಮ. ತುಂಬಿದ ಕೊಡ, ಬದುಕೂರಿನ ದಾರಿಯಲ್ಲಿ ಮುಂ. ಇವರ ಕೃತಿಗಳು. ಸಾಹಿತ್ಯ ಶ್ರೀ ಚೌಡಯ್ಯ, ರಾಜಪುರೋಹಿತ ಕಥಾ ಪ್ರಶಸ್ತಿ 'ಸಿದ್ಧಗಿರಿ ಶ್ರೀ' ಮೊದಲಾದ ಪ್ರಶಸ್ತಿಗಳಿಗೆ ಭಾಜಣಾಗಿದ್ದಾರೆ.

ಪ್ರಸ್ತುತ 'ಶ್ರೀಕೃಷ್ಣ ಪಾರಿಜಾತ' ಪೌರಾಣಿಕ ಹಿನ್ನೆಲೆಯನ್ನು ಹೊಂದಿದ ಈ ಕೃತಿ ಉತ್ತರ ಕರ್ನಾಟಕದ ಜನರ ಅತ್ಯಂತ ಪ್ರೀತಿಗೆ ಪಾತ್ರವಾದ ಇದರಲ್ಲಿ ಶ್ರೀಕೃಷ್ಣ, ರುಕ್ಮಿಣಿ, ಸತ್ಯಭಾಮೆಯರ ನಡುವೆ ನಡೆಯುವ 'ಪ್ರೇಮಕಲಹ' ಕಥಾ ವಸ್ತುವಾಗಿದೆ. ಸ್ವಲ್ಪದರಲ್ಲಿ ಶ್ರೀಕೃಷ್ಣ ಪಾರಿಜಾತದ ಪರಿಚಯವನ್ನು ಮಾಡಿಕೊಡುವುದೇ ಇದರ ಆಶಯವಾಗಿದೆ.

ಕರ್ನಾಟಕದಲ್ಲಿ ಸಣ್ಣಾಟ, ದೊಡ್ಡಾಟ, ದಾಸರಾಟ, ಯಕ್ಷಗಾನ, ಭರತನಾಟ್ಯ, ನಾಟಕ, ಕಥಕ್ಕಳಿ ಹೀಗೆ ಹಲವಾರು ಬಗೆಯ ಜಾನಪದ ಆಟಗಳು ಪ್ರಚಲಿತದಲ್ಲಿವೆ.

ಈ ಪ್ರಕಾರಗಳಲ್ಲಿಶ್ರೀಕೃಷ್ಣಪಾರಿಜಾತವು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿಮನೆ ಮಾತಾಗಿರುವ ಬಯಲಾಟವು. ಭಕ್ತಿರಸ, ಪ್ರೇಮರಸ, ವಿನೋದ ರಸಗಳು ಪ್ರಮುಖವಾದರೂ ಇದು ನವರಸ ಅಂತರ್ಗತವಾಗಿರುವ ರಂಗ ಪ್ರದರ್ಶನ.

ವ್ಯಾಸರ ಶ್ರಿಮದ್ಭಾಗವತವು ಒಂದು ಅತ್ಯಮೂಲ್ಯ ಜನಜನಿತ ಕೃತಿ. ಇದರೊಳಗಿನ ಒಂದು ಸಣ್ಣ ಘಟನಾವಳಿಯ ಸ್ಫೂರ್ತಿಯಿಂದ ಶ್ರೀಕೃಷ್ಣ ಪಾರಿಜಾತವೆಂಬ ಮಿಥಕರ ಕೃತಿ ಕನ್ನಡದ ಮೂಲಕವೇ ರಾಷ್ಟ್ರವ್ಯಾಪಿ ಹೆಸರು ಮಾಡಿದೆ.

ಗಣಪತಿಯ ಪೂಜೆ ಪ್ರಾರ್ಥನೆಯೊಂದಿಗೆ ಶುರುವಾಗುವ ಭಾಗವತನ ಹೆಸರಿಗೆ ಭಗವದ್ಗೀತೆಯ ದಶಮಸ್ಕಂದ ಘಟನಾವಳಿಯ ಪ್ರೇರಣೆಯೇ ಸಾಕ್ಷಿ. ದೇವಲೋಕದ ವೈಶಿಷ್ಟ್ಯಗಳಲ್ಲಿ ಗ್ರಾಮಲೋಕಗಳ ಜೀವನದ ಮೌಢ್ಯಗಳು ಜನಜೀವನದಲ್ಲಿ ಹಾಸುಹೊಕ್ಕಾಗಿರುವುದರ ದ್ಯೋತಕ ದೂತಿ ಪಾತ್ರದ ಮೂಲಕ ಎಂಬುದು ತಿಳಿಯುತ್ತದೆ. ಆಡುಭಾಷೆಯ ಪಾರಿಜಾತ ಪ್ರದರ್ಶನವು ಅಪಭ್ರಂಗ ದೋಷಗಳಿಂದ ಅಭಿನಯಿಸಲ್ಪಟ್ಟರೂ ಆಕರ್ಷಿತವಾಗಿದೆ.

ಕೃಷ್ಣೆ, ಘಟಪ್ರಭೆ, ಮಲಪ್ರಭೆ, ಮಾರ್ಕಂಡೇಯ ನದಿಗಳ ಸಂಸ್ಕೃತಿಯೂ ಪ್ರಕೃತಿಯ ಪರಿಸರದಲ್ಲಿ ಹುಟ್ಟಿದೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿವ್ಯಾಪಿಸಿಕೊಂಡಿದ್ದರೂ ಅಪ್ಪಾಲಾಲ ನದಾಪರಂಥ ಹಲವಾರು ಜನ ಕೃಷ್ಣನ ಪರಮಭಕ್ತ ಕಲಾವಿದರಿಂದ ಇದು ದೇಶದ ರಾಜಧಾನಿ ದೆಹಲಿಯನ್ನೊಳಗೊಂಡು ಹಲವಾರು ಪಟ್ಟಣಗಳಲ್ಲಿ ಪ್ರದರ್ಶನಗೊಂಡದ್ದು ಇತಿಹಾಸದ ಮಾತು, ಮಾತ್ರವಲ್ಲ ಪ್ರಚಲಿತವೂ ಹೌದು. ಇದರ ಮೂಲ ಆಂದ್ರಪ್ರದೇಶದ ಕೃಷ್ಣಾತಟದಪುಟ್ಟಪುರ, ಅಪರಾಳ ಮತ್ತು ಮಹಾರಾಷ್ಟ್ರ-ಕರ್ನಾಟಕ ಗಡಿ ಪ್ರದೇಶದ 'ಸವದಿ' ಗ್ರಾಮಗಳು, ದಾಖಲೆಗೆ ಸಾಕ್ಷಿಯಾದರೂ ಕುಲಗೋಡ ತಮ್ಮಣ್ಣನನ್ನು ಮರೆಯುವಂತಿಲ್ಲ. ಕ್ರಿ.ಶ. 1860ರಲ್ಲಿ ಅಪರಾಳ ತಮ್ಮಣ್ಣ-ಶಿರಗುಪ್ಪಿ ಸದಾಶಿವಪ್ಪನವರು ಪಾರಿಜಾತದ ಹೊಸ ರಚನೆ ಮಾಡಿದ್ದರೂ ಕೂಡಾ ಇವರಿಗಿಂತ ನೂರು ವರುಷಗಳ ಹಿಂದೆ ಅಂದರೆ ಕ್ರಿ.ಶ. 1760ರಲ್ಲಿಯೇ ಇದು ಸಾಕಷ್ಟು ಜನ-ಮನ ಗೆದ್ದುಕೊಂಡಿತ್ತು ಎಂಬುದನ್ನು ಶ್ರೀರಾಮ ಇಟ್ಟಣ್ಣವರ ಅವರ ಸಂಶೋಧನಾ ಮಹಾಪ್ರಬಂಧದಿಂದ ತಿಳಿಯಬಹುದಾಗಿದೆ.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿವಿಶೇಷವಾಗಿ ಬಾಗಲಕೋಟ, ವಿಜಯಪುರ, ಬೆಳಗಾವಿ ಜಿಲ್ಲೆಗಳಲ್ಲಿಪಾರಿಜಾತದ ಪ್ರಭಾವ ಹೆಚ್ಚು. ಬಾಗಲಕೋಟ ಜಿಲ್ಲೆಯ ಗ್ರಾಮಗಳಾದ ನಾವಲಗಿ, ಲೋಕಾಪುರ, ಜಮಖಂಡಿ, ಮುಗಳಖೋಡ ಮಹಾಲಿಂಗಪುರ ಮೊದಲಾದ ಗ್ರಾಮಗಳು ಪಾರಿಜಾತದ ಬಯಲಾಟಗಳಿಗೆ ಪ್ರಸಿದ್ಧವಾಗಿವೆ.

ಶ್ರೀಕೃಷ್ಣ ಪಾರಿಜಾತ ಬಯಲಾಟವನ್ನು ಜನಪ್ರೀಯತೆಗೊಳಿಸಿದವರಲ್ಲಿ ಜಮಖಂಡಿ ಅಪ್ಪಾಲಾಲ, ಅಥಣಿ ಮಲ್ಲಯ್ಯ, ಲೋಕಾಪುರ ದೇಶಪಾಂಡೆ, ಟಕ್ಕಳಕಿ ವಿಠ್ಠಲ, ಬರಗಿ ರಾಚಯ್ಯ, ಕೌಜಲಗಿ ನಿಂಗಮ್ಮ ಮೊದಲಾದವರ

ಪಾತ್ರ ದೊಡ್ಡದು. ಶ್ರೀಕೃಷ್ಣ ಪಾರಿಜಾತಕ್ಕೆ ಭದ್ರ ಬುನಾದಿ ಹಾಕಿದವಳು ಕೌಜಲಗಿ ನಿಂಗಮ್ಮ. ಈಕೆ ಸ್ವತಃ ಮೇಳ ಕಟ್ಟಿ ಕರ್ನಾಟಕದಾದ್ಯಂತ ಸಂಚರಿಸಿ ಜನಪ್ರೀಯಗೊಳಿಸಿದಳು. ಪ್ರಪ್ರಥಮವಾಗಿ ಕೌಜಲಗಿ ನಿಂಗಮ್ಮನೇ ಶ್ರೀಕೃಷ್ಣ ಪರಿಜಾತವನ್ನು ಮೂರು ದಿನಗಳವರೆಗೆ ಆಡಿ ದಾಖಲೆ ಸ್ಥಾಪಿಸಿದ್ದಾಳೆ. ಒಂದನೆಯ ದಿನ ಗೊಲ್ಲತಿ-ರುಕ್ಮಿಣಿಯ ಭಾಗ. ಎರಡನೆಯ ದಿನ ಸತ್ಯಭಾಮೆಯ ಭಾಗ. ಮೂರನೆಯ ದಿನ ಕೊರವಂಜಿಯ ಭಾಗ. ಹೀಗೆ ಮೂರು ದಿನಗಳವರೆಗೆ ಆಡಿ ತೋರಿಸಿದಳು.

**ಕಥಾವಸ್ತು:** ಒಂದು ದಿನ ನಾರದನು ಅಪರೂಪದ ಪಾರಿಜಾತ ಪುಷ್ಪವನ್ನು ಕೃಷ್ಣನ ಕೈಯಲ್ಲಿ ತಂದು ಕೊಟ್ಟನು. ಕೃಷ್ಣ ಅದನ್ನು ರುಕ್ಮಿಣಿಗೆ ನೀಡಿದ. ಈ ಪುಷ್ಪ ಯಾರ ಹತ್ತಿರವಿರುವುದೋ ಶ್ರೀ ಕೃಷ್ಣಪರಮಾತ್ಮ ಅಲ್ಲಿಯೇ ವಾಸವಾಗಿರುತ್ತಾನೆ ಎಂದು ನಾರದನು ಸತ್ಯಭಾಮೆಯ ಮುಂದೆ ಪಾರಿಜಾತ ಪುಷ್ಪವನ್ನು ಕೊಂಡಾಡಿ ನಾನು ಅದನ್ನು ಕೃಷ್ಣನಿಗೆ ಕೊಟ್ಟರೆ, ಅವನು ಅದನ್ನು ರುಕ್ಮಿಣಿಗೆ ಕೊಟ್ಟನಲ್ಲಾ ಎಂದು ಚಾಡಿ ಹೇಳಿ ಹೋದ. ಕೃಷ್ಣನ ಪಕ್ಷಪಾತವನ್ನು ಕಂಡ ಸತ್ಯಭಾಮೆ ದೂತರಮುಖಾಂತರ ಕೃಷ್ಣನನ್ನುಕರೆತರಿಸುವ ಪ್ರಯತ್ನಮಾಡುತ್ತಾಳೆ. ಕೃಷ್ಣಬರದೆ ಇದ್ದಾಗ ಸ್ವತಃ ತಾನೇ ಹೋಗುತ್ತಾಳೆ. ಕೃಷ್ಣರುಕ್ಮಿಣಿಯ ಜೊತೆಗೆ ಪಗಡೆ ಆಟದಲ್ಲಿ ಮಗ್ನನಾಗಿರುತ್ತಾನೆ. ಕೃಷ್ಣತನ್ನನ್ನುನೋಡದ್ದಕ್ಕೆ ಅಪಮಾನದಿಂದ ಸತ್ಯಭಾಮೆ ಮೂರ್ಛೆ ಹೋಗುತ್ತಾಳೆ. ಕೃಷ್ಣ ಉಪಚಾರ ಮಾಡಿ ಸಂತೈಸುತ್ತಾನೆ. ಆಕೆ ಸಮಾಧಾನ ಹೊಂದದೆ ರುಕ್ಮಿಣಿಯನ್ನು ಬೈದು ತಪಸ್ಸು ಮಾಡಿ ನಿನ್ನನ್ನು (ಕೃಷ್ಣನನ್ನು) ಒಲಿಸಿಕೊಳ್ಳುವೆ ಎಂದು ಪ್ರತಿಜ್ಞೆ ಮಾಡಿ ಪಾರ್ವತಿಯನ್ನು ಪೂಜಿಸಿ, ವರ ಪಡೆದು, ಕೃಷ್ಣ ತನ್ನ ಮನೆಗೆ ಬರುವಂತೆ ಮಾಡುತ್ತಾಳೆ. ಕೃಷ್ಣ ಕೊರವಂಜಿಯ ರೂಪ ಧರಿಸಿ ಅವಳ ಮನೆಗೆ ಬಂದು ಅವಳಿಗೆ ಕೃಷ್ಣಬೇಗನೆ ಬರುವನೆಂಬ ಸಂತಸದ ವಿಷಯ ತಿಳಿಸಿ ಅವಳಿಂದ ಸತ್ಕರಿಸಿಕೊಂಡು ರುಕ್ಮಿಣಿಯ ಮನೆಗೆ ಕೊರವಂಜಿಯ ವೇಷದಲ್ಲಿ ಹೋಗುತ್ತಾನೆ. ಅವಳು ಆತನನ್ನು ಗುರುತಿಸುತ್ತಾಳೆ. ನಂತರ ಸತ್ಯಭಾಮೆಗೆ ಭವಿಷ್ಯ ಹೇಳಿದಂತೆ ಕೃಷ್ಣ ಸತ್ಯಭಾಮೆಯ ಮನೆಗೆ ಹೋಗಿ ಬಾಗಿಲು ತಟ್ಟುತ್ತಾನೆ. ಆದರೆ ಅವಳು ಬಾಗಿಲು ತೆರೆಯುವದಿಲ್ಲ. ತನ್ನ ಗುರುತು ಪರಿಚಯವನ್ನು ಹೇಳಿದಾಗ ಬಾಗಿಲು ತೆರೆದು ತನ್ನನ್ನುಕ್ಷಮಿಸುವಂತೆ ಬೇಡಿಕೊಳ್ಳುತ್ತಾಳೆ. ಕೇವಲ ಒಂದು ಹೂವಿಗಾಗಿ ಇಷ್ಟು ಸಿಟ್ಟಾಗುವುದೇ ಆ ಹೂವಿನ ಗಿಡವನ್ನೇ ತಂದು ನಿನಗೆ ಕೊಡುತ್ತೇನೆ ಎಂದು ಹೇಳುತ್ತಾನೆ. ನರಕಾಸುರನ ಬಾಧೆಯನ್ನು ತಪ್ಪಿಸುವುದಕ್ಕಾಗಿ ದೇವಲೋಕಕ್ಕೆ ಬರಬೇಕೆಂದು ದೇವೇಂದ್ರನು ಕೃಷ್ಣನನ್ನು ವಿನಂತಿಸುತ್ತಾನೆ. ಆತನ ಮಾತಿನಂತೆ ಕೃಷ್ಣ ಸತ್ಯಭಾಮೆಯೊಂದಿಗೆ ದೇವಲೋಕಕ್ಕೆ ಹೋಗಿ ನರಕಾಸುರನ ಸಂಹಾರ ಮಾಡಿ, ಗರುಡನ ಮೇಲೆ ಕುಳಿತು ಮರಳಿ ಬರುವಾಗ ದಾರಿಯಲ್ಲಿಯ ಪಾರಿಜಾತಕ್ಕೆ ಸತ್ಯಭಾಮೆ ಸೋತು ಕೃಷ್ಣಕೊಟ್ಟ ವಚನವನ್ನು ನೆನಪಿಸುತ್ತಾಳೆ. ಗರುಡನಿಂದ ಆ ಪಾರಿಜಾತ ವೃಕ್ಷವನ್ನು ಕಿತ್ತು ತರಿಸಿ ಸತ್ಯಭಾಮೆಯ ಅಂಗಳದಲ್ಲಿ ಕೃಷ್ಣನು ಅದನ್ನು ನೆಡುತ್ತಾನೆ. ಗಾಳಿಗೆ ಅದರ ಹೂಗಳೆಲ್ಲ ರುಕ್ಮಿಣಿ ಮನೆಯ ಅಂಗಳದಲ್ಲಿ ಬೀಳುತ್ತವೆ. ಸತ್ಯಭಾಮೆ ಕೃಷ್ಣನನ್ನುಕೇಳುತ್ತಾಳೆ. ಕೃಷ್ಣನು ಅಹಂಕಾರ ಬಿಟ್ಟು ರುಕ್ಮಿಣಿ ಮನೆಗೆ ನಡೆ ಎನ್ನುತ್ತಾನೆ. ಭಾಮೆ ಹಾಗೇ ಮಾಡುತ್ತಾಳೆ. ರುಕ್ಮಿಣಿ ಬಾಗಿಲಲ್ಲಿ ತಂಗಿಯನ್ನು ತಬ್ಬಿಕೊಂಡು ಸ್ವಾಗತಿಸಿ ಕರೆದೊಯ್ಯುತ್ತಾಳೆ. ಇದನ್ನು ಕಂಡು ಕೃಷ್ಣ ಸಂತೋಷ ಭರಿತನಾಗುತ್ತಾನೆ. ಇದು ಪಾರಿಜಾತದ ಕಥಾವಸ್ತು.

ಶ್ರೀಕೃಷ್ಣ ಪಾರಿಜಾತದಲ್ಲಿ ನವಿರಾದ ಹಾಸ್ಯವಿದೆ. ವಿಡಂಬನೆಯ ರೂಪದ ಹಾಸ್ಯವು ಬೆಳಗಿನತನಕ ಶ್ರೀ ಕೃಷ್ಣ ಪಾರಿಜಾತ ನೋಡುವ ಪ್ರೇಕ್ಷಕರಿಗೆ ಚೇತನಾ ಶಕ್ತಿಯನ್ನು ಕೊಡುತ್ತದೆ. ಸಹಜತೆಯನ್ನು ನೆನಪು ಮಾಡಿಕೊಂಡು ನಕ್ಕು ನಗಿಸುವ ಹಾಸ್ಯ ಶ್ರೀಕೃಷ್ಣ ಪಾರಿಜಾತದ್ದು. ಇದರಿಂದಾಗಿ ಶ್ರೀಕೃಷ್ಣ ಪಾರಿಜಾತವನ್ನು ಎಷ್ಟು ಸಲ ನೋಡಿದರೂ ಬೇಸರವೆನಿಸುವುದಿಲ್ಲ. ಶ್ರೀಕೃಷ್ಣ ಪಾರಿಜಾತದ ಹಾಸ್ಯ ಆರಂಭದಿಂದ ಅಂತ್ಯದವರೆಗೆ ನಿರಾಯಾಸವಾಗಿ ಸಾಗುತ್ತದೆ. ಶ್ರೀಕೃಷ್ಣಪಾರಿಜಾತದ ಹಾಸ್ಯದ ಕೇಂದ್ರ ಬಿಂದುಗಳು ಭಾಗವತ ಅಥವಾ ಮರಿ ಭಾಗವತ. ಇವರನ್ನೇ 'ದೂತಿ' ಎಂದು ಕರೆಯುತ್ತಾರೆ. ಪಾರಿಜಾತದಲ್ಲಿಯ ಹಾಸ್ಯದಿಂದಾಗಿ ಪ್ರೇಕ್ಷಕರ ಮನಸ್ಸು ಪೂರ್ತಿಯಾಗಿ ರಂಗದ ಮೇಲೆಯೇ ಇರುತ್ತದೆ. ಆದ್ದರಿಂದ ಗಂಭೀರ ವಿಷಯವನ್ನೂ ಹಾಸ್ಯವನ್ನೂ ಮುಂದೆ ಮಾಡಿಕೊಂಡೇ ಆಟ ಸಾಗಿಸುತ್ತಾರೆ. ಗಣಪತಿಯ ಪೂಜೆ ಪ್ರಾರಂಭವಾದಾಗ ಕಂಡು ಬರುವ ಹಾಸ್ಯದ ಉದಾಹರಣೆಗಳು.

**ಮರಿ ಭಾಗವತ** - ಏನ್ರೆಪಾ ಇವರು ಬಂದಂಥವರು ದಾರು ?

**ಭಾಗವತ** - ಏನ್ರೆಪಾ ಇವರು ಬಂದಂಥವರು ದಾರು ? ನಿಮಗೇನ ತಿಳಿಲಿಲ್ಲ ?

**ಮರಿ ಭಾಗವತ** - ನಮಗೇನು ತಿಳಿಲಿಲ್ಲಪಾ. ಮ್ಯಾಲ ನೋಡಿದ್ರ ಆನೆಯ ಮುಖ ಕೆಳಗ ನೋಡಿದ್ರ ಮಾನವಾಕಾರ ಭಾರೀ ವಿಚಿತ್ರ ಇದ್ದಾರೆ.

**ಭಾಗವತ** - ಮೂರ್ಖಾ, ಹಾಗಲ್ಲ ಇವರಿಗೆ ಪ್ರಥಮದಲ್ಲಿ ಬಂದು ವಿಘ್ನೇಶ್ವರಾ ವಿಘ್ನೇಶ್ವರಾ ಅಂತಾರ.

**ಮರಿ ಭಾಗವತ** - ಅಲೆ ಇವ್ನ; ಬಂದ ಕೂಡಲೇ ವಿಘ್ನ ಸುರುವೇನು ?

**ಭಾಗವತ** - ಹುಚ್ಚಾ ! ಹಾಗಲ್ಲ ಇವರು ಬಂದಂಥಾ ವಿಘ್ನಗಳನ್ನ ದೂರ ಮಾಡುವವರು.

**ಮರಿ ಭಾಗವತ** - ಎಷ್ಟು ದೂರ ಮಾಡತಾರಪ್ಪಾ ?

**ಭಾಗವತ** - ಸರಾಸರಿ ಏಳೆಂಟು ಹರದಾರಿ ಮಾಡತಾರ

**ಮರಿ ಭಾಗವತ** - ಯಾಕ ಇನ್ನೊಂದು ಎಂಟ್ಹತ್ತು ಹರದಾರಿ ಮಾಡುದಿಲ್ಲ? ಗಣಪತಿ ಪೂಜೆಗೆ ಕರಿಕೆ ಬೇಕು ಎಂದು ಹೇಳಿದಾಗ.

**ಭಾಗವತ** - ಮಾಡ್ತಾರ ಇರ್ಲಿ, ಈಗ ಇವರ ಪೂಜಾ ಮಾಡಾಕ ಕರಿಕೆಬೇಕು.

**ಮರಿ ಭಾಗವತ** - ಏಸ್ ಹೊರಿ?

**ಭಾಗವತ** - ಮೂರ್ಖಾ ! ಹೊರಿಗಟ್ಲೆ ತಿನಲಿಕ್ಕೆ ಇವರ್ನೇನ ಕುದರಿ ಮಾಡಿಯೇನು? ಇಪ್ಪತ್ತೊಂದು ಕಡ್ಡಿ ಆದ್ರ ಸಾಕ ಇರ್ಲಿ ಊಟಕ್ಕ ಹ್ಯಾಂಗ

**ಮರಿ ಭಾಗವತ** - ಹೌದ್ರಿ ಊಟಾ ಮಾಡ್ಸಬೇಕು. ಅಂದಾಗ ಇವ್ರ ಊಟಕ್ಕ ಏನಬೇಕ್ರಿ?

**ಭಾಗವತ** - ಸಣ್ಣಕ್ಕಿ ಬೇಕು ?

**ಮರಿ ಭಾಗವತ** - ಖಬರ್ ದಾರ್

**ಭಾಗವತ** - ಯಾಕೋ ?

**ಮರಿ ಭಾಗವತ** - ಏನ್ರಿ ಇಷ್ಟತ್ತನಕ ನೀವು ಹೇಳಿದ್ದೆಲ್ಲಾ ಹೂಂ ಅಂದ್ಯಾ. ಸಲಿಗಿ ಸಿಕ್ತೇನ ನಿಮಗ? ಬಾಳ ಎಚ್ಚರದಿಂದ ಮಾತಾಡ್ರಿ ಈಗ ಸಣ್ಣಕಿ ಅಂತೀರಿ ಇನ್ನೋಟ ನಿಂತು ದೊಡ್ಡಾಕಿ ಅಂತೀರಿ

ಈ ರೀತಿಯ ಹಾಸ್ಯ ಶ್ರೀಕೃಷ್ಣ ಪಾರಿಜಾತದುದ್ದಕ್ಕೂ ಕಂಡುಬರುತ್ತದೆ. ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಚೊಕ್ಕದಾದ ಅರ್ಥವನ್ನು ಕೊಡುವ ಸಂಭಾಷಣೆಯ ರೂಪವನ್ನು ಕೃಷ್ಣ ಪಾರಿಜಾತದಲ್ಲಿ ಕಾಣುತ್ತೇವೆ.

ಶ್ರೀಕೃಷ್ಣ ಪಾರಿಜಾತದಲ್ಲಿ ಸಾಮಾನ್ಯವಾಗಿ ಎಂಟು ಜನರಿರುತ್ತಾರೆ. ಭಾಗವತನ ನಾಂದಿ ಹಾಡಿನೊಂದಿಗೆ ಆಟ ಪ್ರಾರಂಭವಾಗುತ್ತದೆ. ರಂಗಮಂದಿರದ ಮಧ್ಯಕ್ಕೆ ಮುಖವಾಡ ಧರಿಸಿದ ಬಾಲ ಗಣಪತಿ ಬಂದು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾನೆ. ಭಾಗವತನು ಗಣಪತಿಯ ಸ್ತುತಿ ಪದ್ಯವನ್ನು ಹಾಡುತ್ತಾನೆ. ಗಣಪತಿಯ ಪೂಜೆಯ ಕಾರ್ಯ ಮುಗಿದ ಮೇಲೆ ವರವನ್ನು ಪಡೆದುಕೊಂಡು ಕಥಾ ಭಾಗವನ್ನು ಆರಂಭಿಸುತ್ತಾನೆ. ಗೊಲ್ಲತಿ ಕೃಷ್ಣ ರಂಗಸ್ಥಳಕ್ಕೆ ಬರುತ್ತಾರೆ. ಕೃಷ್ಣ ಗೊಲ್ಲತಿಯನ್ನು ಒಲಿಸಿಕೊಂಡ ಮೇಲೆ ಪೂರ್ವರಂಗ ಮುಕ್ತಾಯವಾಗುತ್ತದೆ. ಭಾಗವತ ಅಥವಾ ದೂತಿ ಆಟದ ಆರಂಭದಿಂದ ಮುಕ್ತಾಯದವರೆಗೆ ರಂಗಸ್ಥಳದಲ್ಲಿಯೇ ಇರಬೇಕಾಗುತ್ತದೆ. ಬಂದ ಪಾತ್ರಗಳನ್ನು ಪರಿಚಯಿಸುವುದು ಆ ಪಾತ್ರಗಳಿಗೆ ಸೇವಕನಾಗಿ ಕೆಲಸ ಮಾಡುವುದು, ಹಾಡುವುದು, ಹಾಸ್ಯ ಮಾಡುವುದು ಮುಂತಾದ ಪ್ರತಿಯೊಂದು ಜವಾಬ್ದಾರಿ ದೂತಿಯ ಮೇಲೆ ಇರುತ್ತದೆ. ಶ್ರೀಕೃಷ್ಣ ಪಾರಿಜಾತ ಪ್ರದರ್ಶನದ ಕೀರ್ತಿ- ಅಪಕೀರ್ತಿಗೆ ದೂತಿಯೆ ಕಾರಣೀಭೂತಳಾಗುತ್ತಾಳೆ. ಅಷ್ಟರ ಮಟ್ಟಿಗೆ ಅವಳೇ ಪ್ರಮುಖ ಪಾತ್ರ. ಇತರ ಪಾತ್ರಗಳು ತಾವೇ ಸಂಭಾಷಣೆಗೆ

ತೊಡಗುವುದಕ್ಕಿಂತ ಹೆಚ್ಚಾಗಿ ಭಾಗವತನೊಂದಿಗೆ ಮಾತಿಗೆ ಆರಂಭಿಸುತ್ತವೆ. ಇದೇ ಪಾರಿಜಾತದ ಪ್ರಮುಖ ವೈಶಿಷ್ಟ್ಯವೂ ಆಗಿದೆ. ಇಂತಹ ಹಿನ್ನೆಲೆ ಹೊಂದಿದ ಶ್ರೀಕೃಷ್ಣಪಾರಿಜಾತವು ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದರೂ ಇಂದು ಆಧುನಿಕತೆಯ ಪ್ರಭಾವಕ್ಕೆಸಿಲುಕಿ ಅವಸಾನದತ್ತ ಹೊರಟಿದೆ. ಆದ್ದರಿಂದ ಈ ಕಲೆಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

**ಶಬ್ದಗಳ ಅರ್ಥ:**

ಅಪರೂಪ - ಯಾವಾಗಲಾದರೊಮ್ಮೆ; ಸಂಹಾರ - ನಾಶ; ಹರದಾರಿ - ಒಂದು ಪ್ರಕಾರದ ಅಳತೆ.

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

i) ಉತ್ತರ ಕರ್ನಾಟಕದ ಮನೆ ಮಾತಾಗಿರುವ ಬಯಲಾಟವು ಯಾವುದು ?


ii) ಶ್ರೀ ಕೃಷ್ಣ ಪಾರಿಜಾತಕ್ಕೆ ಬದ್ರ ಬುನಾದಿ ಹಾಕಿದರು ಯಾರು ?

iii) ಶ್ರೀ ಕೃಷ್ಣನು ಯಾವ ವೇಷ ಧರಿಸಿಕೊಂಡು ರುಕ್ಮಿಣಿಯ ಮನೆಗೆ ಹೋಗುತ್ತಾನೆ ?

iv) ಪಾರಿಜಾತ ನಾಟಕದಲ್ಲಿ ಮೊದಲು ಯಾರ ಪೂಜೆ ನಡೆಯುತ್ತದೆ?

**ಕೃತಿ 2) ಅ) ಪಾಠವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಕೃತಿಗಳನ್ನು ಸೂಚನೆಗೆ ಅನುಗುಣವಾಗಿ ಪೂರ್ಣ ಮಾಡಿರಿ.**

i) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.




ii) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.




**ಬ) ಕೊಟ್ಟ ಸೂಚನೆಯಂತೆ ಕೃತಿ ಮಾಡಿರಿ.**

ಕೆಳಗಿನ ವಾಕ್ಯಗಳ ಶಬ್ದ ಹೊಂದಿಸಿ ಅರ್ಥ ಗರ್ಭಿತವಾದ ವಾಕ್ಯಗಳನ್ನು ತಯಾರಿಸಿರಿ.

i) ಜನಜನಿತ ಅತ್ಯಮೂಲ್ಯ ಶ್ರೀಮದ್ಭಾಗವತವು ಒಂದು ಕೃತಿ

ii) ವಿನೋದ ರಸಗಳು ಪ್ರಮುಖವಾದವು ಭಕ್ತಿರಸ ಬಯಲಾಟವು ಪ್ರೇಮರಸ

iii) ಪರಮಭಕ್ತರು ಜಮಖಂಡಿ ಅಪ್ಪಾಲಾಲರಂಥ ಕೃಷ್ಣನ ಹಲವಾರು ಜನ


iv) ಗೆದ್ದುಕೊಂಡಿತ್ತು ಇದು ಜನಮನ ಸಾಕಷ್ಟು

ಕ) ಗದ್ಯಪಾಠದಲ್ಲಿ ಇರುವ ಶ್ರೀಕೃಷ್ಣ ಪಾರಿಜಾತ ನಾಟಕದ ಕಥಾ ವಿಸ್ತಾರವನ್ನುನಿಮ್ಮ ಮಾತುಗಳಲ್ಲಿ 8-10 ಸಾಲುಗಳಲ್ಲಿ ಬರೆಯಿರಿ.

ಡ) ಕೆಳಗಿನ ಪದಬಂಧವನ್ನು ಪೂರ್ಣಗೊಳಿಸಿರಿ.

**ಕೃತಿ 3) ಅ) ಕೆಳಗಿನ ಜಾಲಾಕೃತಿಯನ್ನು ಪೂರ್ತಿಗೊಳಿಸಿರಿ.**

i) ಈ ನಾಟಕದಲ್ಲಿ ಬರುವ ಪ್ರಮುಖ ರಸಗಳು ಮತ್ತು ಸ್ತ್ರೀ ಪಾತ್ರಗಳು





ಬ) ಕೆಳಗಿನ ಶಬ್ದಗಳ ಅರ್ಥ ಹೊಂದಿಸಿ ಬರೆಯಿರಿ.

| | | |
|---|---|---|
| ದೂತಿ | - | ಕದ |
| ಬಾಗಿಲು | - | ಹೊಗಳು |
| ಸಂಹಾರ | - | ಸೂತ್ರದಾರ |
| ಕೊಂಡಾಡು | - | ನಾಶ |

ಕ) ಓದಿದ ಈ ನಾಟಕದಿಂದ ತಿಳಿದುಕೊಂಡಿರುವ ಮೌಲ್ಯಗಳನ್ನು 8-10 ಸಾಲುಗಳಲ್ಲಿನಿಮ್ಮ ಮಾತುಗಳಲ್ಲಿ ಬರೆಯಿರಿ.

ಡ) ಕೆಳಗಿನ ಅಕ್ಷರ ಸಮೂಹದಿಂದ ಅಕ್ಷರಗಳನ್ನು ತೆಗೆದುಕೊಂಡು ಅರ್ಥಪೂರ್ಣವಾದ ನಾಲ್ಕು ಶಬ್ದಗಳನ್ನು ನಿರ್ಮಿಸಿರಿ.

ಸೂಚನೆ : ಒಮ್ಮೆ ಬಳಸಿದ ಅಕ್ಷರ ಮತ್ತೊಮ್ಮೆ ಬಳಸಬಾರದು.



**ಕೃತಿ 4) ಕೆಳಗೆ ಕೊಟ್ಟ ಪ್ರಸಂಗದ ಆಧಾರದಿಂದ ಒಂದು ಕಥೆ ಬರೆಯಿರಿ.**

ಶಾಲೆಯ ಮೈದಾನದಲ್ಲಿ ಒಂದು ಮೋಟಾರು ಬಂದು ನಿಂತಿತು. ಅದರ ಮೇಲೆ ಪುಸ್ತಕ ಮೋಟಾರು ಎಂಬ ಫಲಕ ಇತ್ತು. ಮೋಟಾರಿನೊಳಗಿಂದ ಮೂರುಜನ ಇಳಿದರು. ಮತ್ತು ಪುಸ್ತಕಗಳು ಇರುವ ಟ್ರೇ ಶಾಲೆಯ ಕಡೆಗೆ ತರುತ್ತಿದ್ದರು.

**ಕೃತಿ 5) ಅ) ಕೆಳಗಿನ ವಾಕ್ಯದಲ್ಲಿ ಗೆರೆ ಹೊಡೆದ ಶಬ್ದದ ಲಿಂಗ, ವಚನ, ವಿಭಕ್ತಿ ಗುರುತಿಸಿ ಬರೆಯಿರಿ.**

1) ಶ್ರೀ ಕೃಷ್ಣ ಪಾರಿಜಾತಕ್ಕೆ ಬದ್ರಬುನಾದಿ ಹಾಕಿದವಳು ಕೌಜಲಗಿ ನಿಂಗಮ್ಮ

2) ಅವರು ಪಾರಿಜಾತದ ಹೊಸ ರಚನೆ ಮಾಡಿದರು.

| ಶಬ್ದ | ಲಿಂಗ | ವಚನ | ವಿಭಕ್ತಿ |
|---|---|---|---|
| | | | |
| | | | |

**ಬ) ಕೆಳಗಿನ ಕೃತಿಗಳನ್ನು ಸೂಚನೆಯಂತೆ ಬಿಡಿಸಿರಿ.**

**I) ವಾಕ್ಯದ ಪ್ರಕಾರಗಳನ್ನು ಗುರುತಿಸಿ ಬರೆಯಿರಿ.**

i) ಶ್ರೀಕೃಷ್ಣ ಪಾರಿಜಾತದಲ್ಲಿ ನವೀರಾದ ಹಾಸ್ಯವಿದೆ.

ii) ಗಣಪತಿಯ ಪೂಜೆ ಪ್ರಾರ್ಥನೆಯೊಂದಿಗೆ ಶುರುವಾಗುವ ಭಾಗವತನ ಹೆಸರಿಗೆ ಭಗವದ್ಗೀತೆಯ ದಶಮಸ್ಕಂದ ಘಟನಾವಳಿಯ ಪ್ರೇರಣೆಯೇ ಸಾಕ್ಷಿ.

iii) ಕೃಷ್ಣನನ್ನು ಕರೆತರಿಸುವ ಪ್ರಯತ್ನ ಮಾಡುತ್ತಾಳೆ. ಮತ್ತೆ ಕೃಷ್ಣ ಬರದೆ ಇದ್ದಾಗ ಸ್ವತಃ ತಾನೇ ಹೋಗುತ್ತಾಳೆ.

**II) ಕೆಳಗಿನವುಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.**

| | | | |
|---|---|---|---|
| ರೂಪ | | ಸಂತೋಷ | |
| ವರುಷ | | ಭಕುತ | |

**III) ಕೆಳಗಿನ ಶಬ್ದವನ್ನು ಕೋಷ್ಟಕದಲ್ಲಿ ತೋರಿಸಿದಂತೆ ವಿಭಕ್ತಿ ಪ್ರತ್ಯಯವನ್ನು ಬದಲಿಸಿ ಬರೆಯಿರಿ.**

i)

| ಶಬ್ದ | ಪ್ರಥಮಾ | ಸಪ್ತಮಿ |
|---|---|---|
| ಬಾಗಿಲನ್ನು | | |

CBSR3Y

2.

# ಹಸಿರು ಕ್ರಾಂತಿ

– ನಾಗೇಶ ಹೆಗಡೆ

**ಲೇಖಕರ ಪರಿಚಯ :** ನಾಗೇಶ ಹೆಗಡೆ ಇವರು 1948ರಲ್ಲಿ ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ಜನಿಸಿದರು. ಪಶ್ಚಿಮ ಬಂಗಾಳದ ಖರಗಪುರದ ಐಐಟಿ ಕಾಲೇಜಿನಲ್ಲಿ ಇಂಜಿನಿಯರಿಂಗ ಪದವಿ ಮತ್ತು ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಹಿಮಾಲಯದ ನೈನಿತಾಲ್ ವಿಶ್ವವಿದ್ಯಾಲಯದ ಪರಿಸರ ಭೂವಿಜ್ಞಾನ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಪರಿಸರ ಪ್ರೇಮಿಗಳಾದ ಇವರು ಕರ್ನಾಟಕದಲ್ಲಿ ನಡೆದ ಪರಿಸರ ಆಂದೋಲನ, ಕೈಗಾ ವಿರೋಧಿ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ. ಪರಿಸರ ಕುರಿತು ಇರುವುದೊಂದೇ ಭೂಮಿ, ಗಗನ ಸಖಿಯರ ಸೆರಗು ಹಿಡಿದು, ನಮ್ಮೊಳಗಿನ ಬ್ರಹ್ಮಾಂಡ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ

ದುರಾಲೋಚನೆಯಿಂದ ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಗಣಿಗಾರಿಕೆಯ ಮೂಲಕ ಪರಿಸರವನ್ನೆಲ್ಲಾ ಹಾಳು ಮಾಡುತ್ತಿದ್ದಾನೆ. ಇದರ ಪರಿಣಾಮವಾಗಿ ಅರಣ್ಯ, ನದಿ, ಕೆರೆ, ಸಮುದ್ರ, ಗಿರಿಕಂದರ, ಅಂತರ್ಜಲಗಳೆಲ್ಲ ಬರಿದಾಗುತ್ತಿವೆ. ಇದರಿಂದ ಹಲವಾರು ಪ್ರಕೃತಿವಿಕೋಪಗಳನ್ನು ಅನುಭವಿಸುವಂತಾಗಿದೆ. ಆದ್ದರಿಂದ ನಾವೆಲ್ಲರೂ ಹಸಿರುಕ್ರಾಂತಿಯ ಮೂಲಕ ಪರಿಸರವನ್ನು ಕಾಯ್ದುಕೊಳ್ಳುವುದು ಆವಶ್ಯಕವಾಗಿದೆ ಎಂಬುದು ಈ ಗದ್ಯದ ಆಶಯವಾಗಿದೆ. ಇದನ್ನು 'ಬರ್ಗರ ಭಾರತ' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**ಉ**ತ್ತಮ ಕನಸುಗಳಿಗೆ ನಾವು ಯಾವಾಗಲೂ 'ಹೊಂಗನಸು' –ಅಂದರೆ ಬಂಗಾರದಂಥ ಕನಸು ಎಂತಲೇ ಹೇಳುತ್ತೇವೆ. ಹೊಂಗನಸು, ಹೊಂಗನ್ನಡಿ, ಹೊಂಬೆಳಕು, ಹೊಂಗದಿರು, ಹೊಂಬಣ್ಣ ... ಹೀಗೆ ಅತ್ಯುತ್ತಮವಾದುದೆಲ್ಲವನ್ನೂ ನಮ್ಮ ಕವಿಗಳು ಚಿನ್ನಕ್ಕೇ ಹೋಲಿಸಿದ್ದಾರೆ. ಲೋಹವಿಜ್ಞಾನಿಗಳಿಗೆ ಮತ್ತು ಅಕ್ಕಸಾಲಿಗರಿಗೆ ಅದು ಅಮೋಘ ಗುಣಗಳಿರುವ ಧಾತು ನಿಜ. ಕುಟ್ಟಿದಷ್ಟೂ ಅಗಲವಾಗುತ್ತದೆ. ಎಳೆದಷ್ಟೂ ಅದು ಉದ್ದವಾಗುತ್ತದೆ. ಆದರೆ ಜನಸಾಮಾನ್ಯರ ಮಟ್ಟಿಗೆ ಚಿನ್ನದಷ್ಟು ಅಪಾಯಕಾರಿ ಮತ್ತು ನಿರರ್ಥಕ ವಸ್ತು ಬೇರೊಂದಿಲ್ಲ. ಲೋಭ, ಮೋಹ, ಮದ, ಮತ್ಸರ ಮುಂತಾದ ಎಲ್ಲ ಆರು ವೈರಿಗಳು ಅದಕ್ಕೆ ಅಂಟಿಕೊಂಡಿವೆ. ದರೋಡೆ, ಜಗಳ, ಯುದ್ಧ, ಕಗ್ಗೊಲೆ ಎಲ್ಲ ಅನಿಷ್ಟಗಳಿಗೂ ಅದು ಕಾರಣವಾಗುತ್ತದೆ. ಚಿನ್ನದ ಉಗಮಸ್ಥಾನ–ಅಂದರೆ ಚಿನ್ನದ ಗಣಿ ಪ್ರದೇಶ ಎಂದರೆ ಎಲ್ಲ ಬಗೆಯ ಶೋಷಣೆ, ಕ್ರೌರ್ಯ, ದಾಸ್ಯತ್ವದಂಥ ಮಹಾಪಾಪ ಮತ್ತು ಮಹಾಕೂಪಗಳ ಸಂಗಮವೇ ಸರಿ. ಕೆ.ಜಿ.ಎಫ್. ಸುತ್ತ ಚೆಲ್ಲಾಡಿರುವ ಸೈನೈಡ್ ಧೂಳು ಮತ್ತು ಕೆಸರು ತೊಳೆದು ಹೋಗಿ ನಿಸರ್ಗ ಮತ್ತೆ ಮೊದಲಿನಂತಾಗಲು ಶತಮಾನಗಳೇ ಬೇಕು.

ಹೊನ್ನಿನ ಬದಲು ಹಸಿರನ್ನೇ ನಾವೇಕೆ ಮುಂಚೂಣಿಗೆ ತರಬಾರದು? ಭೂಮಿಯ ಇಂದಿನ ಎಲ್ಲ ಸಂಕಷ್ಟಗಳಿಗೆ 'ಹಸಿರು ಆರ್ಥಿಕತೆ'ಯೇ ಏಕೈಕ ಪರಿಹಾರ ಎಂದು ವಿಶ್ವಸಂಸ್ಥೆ ಹೇಳುತ್ತದೆ. ಪ್ರತಿ ವರ್ಷದ ಜೂನ್ 5 'ವಿಶ್ವ ಪರಿಸರ ದಿನ'ದಂದು ಅದು ನೀಡಿದ ಘೋಷವಾಕ್ಯವೇ 'ಹಸಿರು ಆರ್ಥಿಕತೆ.

ಮೇಲ್ನೋಟಕ್ಕೆ ಅಷ್ಟೇನೂ ಅರ್ಥವಾಗದ ಪದಪುಂಜದಂತಿದ್ದರೂ 'ಹಸಿರು ಆರ್ಥಿಕತೆ'ಯಲ್ಲಿ ಬಹುದೊಡ್ಡ ಯುಗ ಪಲ್ಲಟ ಸಾಧ್ಯತೆಗಳು ಅಡಗಿವೆ.

ಇಂಥದೊಂದು ಮಹಾನ್ ಪರಿವರ್ತನೆ. ಆದರೆ ಮಾತ್ರ ಮನುಕುಲಕ್ಕೆ ಭವಿಷ್ಯವಿದೆ ಎಂಬ ಹಂತಕ್ಕೆ ನಾವು ಮುಟ್ಟಿದ್ದೇವೆ. ಇದುವರೆಗಂತೂ ನಾವು ಮುಟ್ಟಿದ್ದೆಲ್ಲ ನರಕವಾಗಿದೆ. ಅರಣ್ಯ, ನದಿ, ಕೆರೆ, ಸಮುದ್ರ, ಗಿರಿಕಂದರ, ವಾಯುಮಂಡಲ, ಅಂತರ್ಜಲ ಎಲ್ಲವೂ ಬರಿದಾಗುತ್ತಿವೆ ಇಲ್ಲವೆ ಕಲುಷಿತಗೊಳ್ಳುತ್ತಿವೆ. ಆಕಾಶದಲ್ಲಿ ಕಾರ್ಬನ್ ಡೈ ಆಕ್ಸೈಡ್ ತುಂಬಿಕೊಳ್ಳುತ್ತಿದೆ. ನೆಲಮಟ್ಟದಲ್ಲಿ ಮರುಭೂಮಿಗಳ ವಿಸ್ತರಣೆಯಾಗುತ್ತಿದೆ. ಪಾತಾಳದ ಜಲಖಜಾನೆ ಬರಿದಾಗುತ್ತಿದೆ. ಇವಕ್ಕೆಲ್ಲ ಕಾರಣ ಏನೆಂದರೆ ಕಚ್ಚಾತೈಲದ ಮೇಲಿನ ಅತಿ ಅವಲಂಬನೆ ಮತ್ತು ಪಶ್ಚಿಮದ ಮಾದರಿಯ ದುಂದುಜೀವನ. ಅವೆರಡಕ್ಕೂ ಕಡಿವಾಣ ಹಾಕಬೇಕೆಂದರೆ ತೈಲಾಧಾರಿತ ಆರ್ಥಿಕತೆಯ ಬದಲಿಗೆ ಹಸಿರನ್ನು ಆಧರಿಸಿದ ಹೊಸ ಆರ್ಥಿಕತೆ ಬರಬೇಕು.

ತಂತ್ರಜ್ಞಾನ ಸುಧಾರಿಸಿದರೆ  ಹಸಿರಿನಿಂದ ಏನೆಲ್ಲ ಸಾಧ್ಯತೆಗಳಿವೆ. ಅದರಿಂದ ಪ್ಲಾಸ್ಟಿಕ್ ತಯಾರಿಸಬಹುದು; ಲೋಹಗಳ ಬಳಕೆ ಇರುವಲ್ಲೆಲ್ಲ ಬಹುಮಟ್ಟಿಗೆ ಜೈವಿಕ ಪ್ಲಾಸ್ಟಿಕ್ಕನ್ನೇ ಬಳಸಬಹುದು. ಅಂಥ ಪ್ಲಾಸ್ಟಿಕ್ ಮರಳಿ ಮಣ್ಣಿಗೆ ಸೇರುವಂತೆ ಮಾಡಬಹುದು. ಹಸಿರಿನಿಂದ ಮೀಥೇನ್, ವುಡ್‌ಗ್ಯಾಸ್, ಬಯೋಗ್ಯಾಸ್ ಬಳಸಿ, ಫ್ಯುಯೆಲ್ ಸೆಲ್‌ಗಳ ಮೂಲಕ ನೇರವಾಗಿ ವಿದ್ಯುತ್ ಉತ್ಪಾದನೆ ಮಾಡಬಹುದು. ವಿದ್ಯುತ್ ಶಕ್ತಿ ಮತ್ತು ಜೈವಿಕ ಇಂಧನದಿಂದ ಎಲ್ಲ ಬಗೆಯ ವಾಹನಗಳನ್ನು ಓಡಿಸಬಹುದು. ಇವೆಲ್ಲ ಚಟುವಟಿಕೆಗಳಿಗೆ ಬುನಾದಿಯಾಗಿ ಬಹುದೊಡ್ಡ ಪ್ರಮಾಣದಲ್ಲಿ ಗಿಡಮರಗಳನ್ನು ಬೆಳೆಸಬೇಕಾಗುತ್ತದೆ.

ಹಾಗೆ ಎಲ್ಲ ಕಡೆ ಅಂದಾದುಂದಿ ಗಿಡಮರ ಬೆಳೆಸಿದರೆ ಏನಾದರೂ ಅಡ್ಡ ಪರಿಣಾಮ ಆದೀತೆ? ಖಂಡಿತ ಆಗುತ್ತದೆ; ಮತ್ತು ಇಡೀ ಭೂಮಿ ಆ ಅಡ್ಡಪರಿಣಾಮಕ್ಕಾಗಿ ಕಾಯುತ್ತಿದೆ! ಹಾಗೆ ತಲೆದೋರುವ ಅಡ್ಡ ಪರಿಣಾಮಗಳೆಲ್ಲವೂ ಭೂಮಿಗೆ ಹೊಸ ಚೈತನ್ಯವನ್ನು ನೀಡುತ್ತವೆ. ನಮ್ಮೆಲ್ಲರ ಶತಮಾನದ ಪಾಪಫಲಗಳನ್ನು ಅದು ನಿವಾರಿಸುತ್ತದೆ. ಅಂದರೆ–ಜಲಚಕ್ರದ ರಿಪೇರಿಯಾಗುತ್ತದೆ; ನೀರು ನೆಲದೊಳಗೆ ಇಂಗುತ್ತದೆ; ಮಣ್ಣಿನ ಸವಕಳಿ ತಗ್ಗುತ್ತದೆ; ಬರ ಮತ್ತು ನೆರೆಹಾವಳಿಯ ಸಮಸ್ಯೆ ನೀಗುತ್ತದೆ; ವನ್ಯಜೀವಿಗಳಿಗೆ ಆಸರೆ ಸಿಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ವಾಯುಮಂಡಲದ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಕಡಿಮೆಯಾಗುತ್ತದೆ. ವಾತಾವರಣ ಮತ್ತೆ ಸಮತೋಲಕ್ಕೆ ಬಂದು, ಋತುಚಕ್ರ ಹತೋಟಿಗೆ ಬರುತ್ತದೆ. ಮೊದಲು ಅವಿಷ್ಕಾಗಲಿ, ನಂತರದ ಅಡ್ಡಪರಿಣಾಮಗಳನ್ನು ಆಮೇಲೆ ನೋಡೋಣ.

ಇಂಥದ್ದೊಂದು ಮಹಾ ಪರಿವರ್ತನೆಗೆ ಮುಖ್ಯ ಬೇಕಾಗಿದ್ದು 'ನೀವು'. ಆ ನೀವು ಯಾರೇ ಆಗಿರಿ–ವ್ಯಾಪಾರಿ, ವಿಜ್ಞಾನಿ, ಎಂಜಿನಿಯರ್, ಗುಮಾಸ್ತ, ವಿದ್ಯಾರ್ಥಿ, ವಾಸ್ತುಶಿಲ್ಪಿ, ಐಟಿಗಾರ, ರಾಜಕಾರಣಿ, ಪ್ರೊಫೆಸರ್, ಕೃಷಿಕ, ಪತ್ರಕರ್ತ, ಗೃಹಿಣಿ, ನಿರ್ದೇಶಕ, ಶೇರುದಲ್ಲಾಳಿ, –ಹೆಚ್ಚುಹೆಚ್ಚು ಜನರು ತೊಡಗಿಕೊಂಡಷ್ಟೂ ಈ ಕ್ರಾಂತಿಯ ಪರಿಣಾಮ ಶೀಘ್ರವಾಗುತ್ತದೆ. ಕೆಲವರು ಈ ಕ್ರಾಂತಿಯ ಪ್ರವರ್ತಕರಾಗಬಹುದು; ಇನ್ನು ಕೆಲವರು ಪ್ರಚಾರಕರಾಗಬಹುದು. ಬಹುಪಾಲು 'ನೀವು'ಗಳು ಕೇವಲ ಬಳಕೆದಾರರಾಗುವ ಮೂಲಕ ಈ ಅಸಲೀ ಹಸಿರು ಕ್ರಾಂತಿಗೆ ನೀರೆರೆಯಬಹುದು. ಅದು ಸೋಲಾರ್ ವಾಟರ್ ಹೀಟರ್ ಹಾಕಿಸಿಕೊಳ್ಳುವ ಮೂಲಕವೂ ಆರಂಭವಾಗಬಹುದು ಅಥವಾ (ಬಳಸಿ ಬಿಸಾಕುವ) ಪ್ಲಾಸ್ಟಿಕ್ ಚಮಚದ ಬಳಕೆಯನ್ನು ನಿರಾಕರಿಸುವ ಮೂಲಕವೂ ಆರಂಭವಾಗಬಹುದು. ಹೊಂಗೆ/ ಇಪ್ಪೆ/ಬೇವು ಬೀಜವನ್ನು ಹಸಿನೆಲಕ್ಕೆ ಊರುವ ಮೂಲಕವೂ. ಇದು ಹೊಂಗನಸಲ್ಲ, ಹಸಿರುಗನಸು, ದೊಡ್ಡ ಸಾಧ್ಯತೆಯುಳ್ಳ ಸರಳ ಕನಸು. ಇದರ ಮೂಲ ಉದ್ದೇಶವೆಂದರೆ ಕಚ್ಚಾತೈಲವನ್ನು ಗಣಿಗಾರಿಕೆಯನ್ನು ಆದಷ್ಟು ಕಡಿಮೆ ಮಾಡಬೇಕು. ಕಚ್ಚಾತೈಲ ಮತ್ತು ಗಣಿಕೆಗಾರಿಕೆಯ ಸರಕುಗಳು ಸೀಮಿತ ಪ್ರಮಾಣದಲ್ಲಿವೆ.

ಮನುಷ್ಯ ತನ್ನ ಅವಶ್ಯಕತೆಗಳಿಗನುಸಾರವಾಗಿ ಉಪಯೋಗಿಸದೇ ಮಿತಿಮೀರಿ ಬಳಸುತ್ತಿದ್ದಾನೆ. ಭೂಗರ್ಭದಲ್ಲಿ ಬೇರೆ ಬೇರೆ ಖನಿಜದ್ರವ್ಯಗಳಿವೆ. ಇವುಗಳನ್ನು ಇತಿ ಮಿತಿಯಲ್ಲಿ ಬಳಸಿದರೆ ಅದು ಮುಂದಿನ ತಲೆಮಾರಿನವರೆಗೆ ಉಳಿಯಬಹುದು. ಈ ಸಂಪತ್ತು ಉಳಿಯಬೇಕಾದರೆ ನಿಸರ್ಗದತ್ತವಾದ ಅಕ್ಷಯ ಸಾಧನಗಳ ಬಳಕೆ ಮಾಡಿಕೊಳ್ಳಬೇಕು. ಅಂದರೆ ಸೌರಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಬಳಕೆ ಮಾಡಿಕೊಳ್ಳಬೇಕು. ಇದರಿಂದ ಕಚ್ಚಾತೈಲದ ಉಳಿತಾಯವಾಗುತ್ತದೆ. ಆಳವಾಗಿ ಭೂಮಿಯನ್ನು ಅಗೆಯುವುದು ಮತ್ತು ಕೊಳವೆಬಾವಿ ಕೊರೆಯುವುದು ಕಡಿಮೆಯಾಗುತ್ತದೆ. ಗಣಿಗಾರಿಕೆಗಾಗಿ ಆಳವಾಗಿ ಅಗೆಯುವುದು, ಭೂಕಂಪನಕ್ಕೆ ಆಹ್ವಾನ ನೀಡಿದಂತಾಗುತ್ತದೆ ಮತ್ತು ಗಣಿಗಾರಿಕೆಗಾಗಿ ವೃಕ್ಷಸಂಹಾರದಂತಹ ಭೀಕರ ದುರಂತ ತಡೆಗಟ್ಟಿದಂತಾಗುತ್ತದೆ. ಸೂರ್ಯ, ಗಾಳಿ, ನೀರು ಮತ್ತು ಇತರ ಜೀವದ್ರವ್ಯಗಳಂಥ ನಿರಂತರ ಶಕ್ತಿ ಮೂಲಗಳಿಂದಲೇ ನಮ್ಮ ಎಲ್ಲ ಶಕ್ತಿ ಮೂಲಗಳಿಗೂ ಪವರ್ ಸಿಗುತ್ತದೆ. ಈ ಪ್ರಯತ್ನದಲ್ಲಿ ಅಪಾರ ಉದ್ಯೋಗ ಸೃಷ್ಟಿಯಾಗಿ ಹಸಿವೆ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಕೊಂಚ ಪರಿಹಾರ ದೊರೆತಂತಾಗುತ್ತದೆ. ಇದೆಲ್ಲ ಸಾಧ್ಯವಾಗಬೇಕಾದರೆ ಹಸಿರು ಆರ್ಥಿಕತೆಯಲ್ಲಿ ನೀವು ಪಾಲ್ಗೊಳ್ಳಬೇಕು. ಅಂದರೆ ಎಲ್ಲರೂ ಈ ಪ್ರಯತ್ನದಲ್ಲಿ ಮನಃಪೂರ್ವಕ ಭಾಗಿಯಾಗಬೇಕು. ಇದರಿಂದ ಹೊಸ ಉದ್ಯೋಗ ಸೃಷ್ಟಿಯಾಗುತ್ತದೆ.


ಬೇರೆ ಬೇರೆ ಪ್ರಕಾರದ ಔಷಧಿವೃಕ್ಷಗಳ ಬೆಳವಣಿಗೆಯಿಂದ ಔಷಧ ತಯಾರಿಕೆ ಉದ್ಯೋಗ, ಜೇನು ಸಾಕಾಣಿಕೆ, ಅಂಟು, ರಾಳ, ಶೀಗೇಕಾಯಿ, ಬಿದಿರಿನ ಉದ್ಯೋಗ ಹೀಗೆ ಹಲವಾರು ಉದ್ಯೋಗಗಳು ತಲೆಎತ್ತುತ್ತವೆ. ಕಾಡು ಪ್ರಾಣಿಗಳ ರಕ್ಷಣೆ ಮಾಡಿದಂತಾಗುತ್ತದೆ. ಪ್ರವಾಸಿ ತಾಣಗಳು ನಿರ್ಮಾಣವಾಗುತ್ತವೆ. ಉದ್ಯೋಗಕ್ಕಾಗಿ ನಗರಗಳ ಕಡೆಗೆ ಹೋಗುವ ಜನರ ವಲಸೆ ಪ್ರಮಾಣ ತಗ್ಗುತ್ತದೆ. ಹಳ್ಳಿಗಳಲ್ಲಿಯೇ ಆನಂದದ ಜೀವನ ಪ್ರಾರಂಭವಾಗುತ್ತದೆ.

**ಶಬ್ದಗಳ ಅರ್ಥ:**

ದಾಸ್ಯ - ದಾಸನಭಾವ; ಆವಿಷ್ಟ - ಹೊಂದಿದ; ಮಿತಿ - ಪ್ರಮಾಣ ಭೀಕರ - ಭಯಂಕರ

**ಕೃತಿ:1**

**ಪಾಠವನ್ನು ಓದಿ ಕೆಳಗಿನ ಚಟುವಟಿಕೆಯನ್ನು ಪೂರ್ಣಮಾಡಿರಿ.**




**ಕೃತಿ: 2**

**ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದ ತುಂಬಿ ವಾಕ್ಯ ಪೂರ್ಣ ಮಾಡಿರಿ.**

1. ಉತ್ತಮ ಕನಸುಗಳಿಗೆ --------- ಎಂದು ಕರೆಯುತ್ತಾರೆ.
2. ಚಿನ್ನವು ಕುಟ್ಟಿದಷ್ಟೂ---------- ಹಾಗೂ ಎಳೆದಷ್ಟೂ --------- ವಾಗುತ್ತದೆ.
3. ವಿಶ್ವ ಪರಿಸರ ದಿನವನ್ನು ---------- ರಂದು ಆಚರಿಸುತ್ತಾರೆ.

**ಕೃತಿ: 3**

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ಚಿನ್ನದ ಗಣಿ ಇರುವ ಸ್ಥಳ ಯಾವುದು?
2. ಹೊನ್ನಿನ ಬದಲು ನಾವು ಯಾವುದನ್ನು ಮುಂಚೂಣಿಗೆ ತರಬೇಕು?
3. ಆಕಾಶದಲ್ಲಿ ಯಾವುದು ತುಂಬಿಕೊಳ್ಳುತ್ತಿದೆ?
4. ಯಾವುದರಿಂದ ಎಲ್ಲ ಬಗೆಯ ವಾಹನಗಳನ್ನು ಓಡಿಸಬಹುದು?
5. ಹಸಿರುಕ್ರಾಂತಿ ಯಾವುದರಿಂದ ಆರಂಭವಾಗಬೇಕು?

**ಕೃತಿ: 4**

**ಕೆಳಗಿನ ದಿನಗಳನ್ನು ಎಂದು ಆಚರಿಸುತ್ತಾರೆ ?**

i) ವಿಶ್ವ ಆರೋಗ್ಯ ದಿನ ------------

ii) ಸಾಕ್ಷರತಾ ದಿನ ------------


iii) ಜಾಗತಿಕ ಯೋಗದಿನ ------------

iv) ವಾಚನ ಪ್ರೇರಣಾದಿನ ------------

v) ವಿಶ್ವ ಮಹಿಳಾದಿನ ------------

**ಕೃತಿ: 5**

**ಹಸಿರು ಕ್ರಾಂತಿಗೆ ನೀವು ಕೈಗೊಳ್ಳುವ ಕ್ರಮಗಳನ್ನು ಕೆಳಗಿನ ಜಾಲಾಕೃತಿಗಳಲ್ಲಿ ತುಂಬಿರಿ.**




**ಕೃತಿ: 6**

**ಕೆಳಗಿನವುಗಳನ್ನು ಸೂಚನೆಗನುಗುಣವಾಗಿ ಬಿಡಿಸಿರಿ.**

i) ಕೆಳಗಿನ ಸಮಾಸಗಳನ್ನು ಬಿಡಿಸಿ ಹೆಸರಿಸಿರಿ.

ಹೊಂಗನಸು, ಗಿಡಮರ, ಕೊಳವೆಬಾವಿ

ii) ಕೆಳಗಿನ ಸಂಧಿಗಳನ್ನು ಬಿಡಿಸಿ ಹೆಸರಿಸಿರಿ.

ನೀರೆರೆ, ಅತ್ಯುತ್ತಮ

# 3. ನೀನಾರಿಗಾದೆಯೋ ಎಲೆ ಮಾನವಾ

- ಎಚ್. ದುಂಡಿರಾಜ

**ಲೇಖಕರ ಪರಿಚಯ :** ಎಚ್. ದುಂಡಿರಾಜ್‌ರು 1956ರಲ್ಲಿ ಜನಿಸಿದರು. ಎಂ.ಎಸ್.ಸಿ. ಪದವಿಧರರು ವೃತ್ತಿಯಿಂದ ಬ್ಯಾಂಕ ಮಾನೇಜರ್, ಪ್ರವೃತ್ತಿಯಿಂದಸಾಹಿತಿಗಳು ಇವರು ಇಡಿಗವನ ನಾಟಕ ಹಾಗೂ ಹಾಸ್ಯಲೇಖನ ಬರೆದಿದ್ದರೂ - ಜನ ಇವರನ್ನು ಗುರುತಿಸಿದ್ದು ಹನಿಗವನಗಳ ಮೂಲಕ ನಮ್ಮ ಗೋಡೆಯ ಹಾಡು, ನೀನಿಲ್ಲದೆ, ನನ್ನ ಕವಿತೆ ನನ್ನ ಹಾಗೆ, ನಾಟಕಕಾರರಾಗಿ - ನಾಳೆಬನ್ನಿ, ಅಜ್ಜಿ ಕತೆ, ಹುಡುಕಾಟ, ಯಾರಿಗೂ ಹೇಳಬೇಡಿ, ಹನಿಖಜಾನೆ ಹಾಗೂ ಅಕ್ಷತಾ ಲಕ್ಷತಾ ಎಂಬ ಎರಡು ಹನಿಗವನಸಂಕಲನಗಳನ್ನು ರಚಿಸಿದ್ದಾರೆ.

ಗಾದೆಮಾತುಗಳು, ಅವುಗಳ ಮಹತ್ವ ಹಾಗೂ ಅವುಗಳನ್ನು ಪ್ರತಿದಿನ ಹಲವಾರು ಜನ ತಮ್ಮ ಮಾತುಗಳಲ್ಲಿ ಬಳಸಿಕೊಂಡು ಬರುವ ರೀತಿಯನ್ನು ಹಾಸ್ಯಮಯವಾಗಿ ಪ್ರಸ್ತುತ ಗದ್ಯದಲ್ಲಿ ತಿಳಿಸಿದ್ದಾರೆ.

ಗಾದೆಗಳ ಬಗ್ಗೆ ನನಗೆ ಚಿಕ್ಕಂದಿನಿಂದಲೂ ವಿಶೇಷ ವ್ಯಾಮೋಹ. ಶಾಲೆಯಲ್ಲಿ ಪ್ರಬಂಧ ಸ್ಪರ್ಧೆ ಅಥವಾ ಭಾಷಣ ಸ್ಪರ್ಧೆ ಏರ್ಪಡಿಸಿದ್ದಾರೆ ಅಂತ ಗೊತ್ತಾದ ತಕ್ಷಣ ನಾನು ಮಾಡುತ್ತಿದ್ದ ಮೊದಲ ಕೆಲಸವೆಂದರೆ, ಗಾದೆಗಳನ್ನು ಸಂಗ್ರಹಿಸುವುದು. ಯಾಕೆಂದರೆ, ಇಂತಹ ಸ್ಪರ್ಧೆಗಳಲ್ಲಿ ಯಾರು ಹೆಚ್ಚು ಗಾದೆಗಳನ್ನು ಪ್ರಯೋಗಿಸುತ್ತಾರೊ ಅವರಿಗೇ ಬಹುಮಾನ ಸಿಗುತ್ತಿತ್ತು. ಎಷ್ಟೋ ಸಲ 'ಮೂಗಿಗಿಂತ ಮೂಗುತಿಭಾರ' ಎಂಬಂತೆ ಮುಖ್ಯ ವಿಷಯ ಮರೆಯಾಗಿ ಗಾದೆಗಳೇ ಉದ್ದಕ್ಕೂ ವಿಜೃಂಭಿಸುತ್ತಿದ್ದವು. ಉದಾಹರಣೆಗೆ ಚಾಚಾ ನೆಹರೂ ಎಂಬ ವಿಷಯದ ಬಗ್ಗೆ ಭಾಷಣ ಸ್ಪರ್ಧೆ ಇದ್ದರೆ ನಮ್ಮ ಭಾಷಣ ಹೀಗಿರುತ್ತಿತ್ತು:

''ನಮ್ಮ ದೇಶದ ಮಾಜಿ ಪ್ರಧಾನಿಗಳಾದ ಪಂಡಿತ ಜವಾಹರ ಲಾಲ್ ನೆಹರೂರವರು ಅತ್ಯಂತ ಪ್ರತಿಭಾವಂತರಾಗಿದ್ದರು. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ನೆಹರೂರವರು ಬೋಧಿಸದ ವಿಚಾರಗಳೇ ಇಲ್ಲ ಎನ್ನಬಹುದು. ಮಕ್ಕಳು ಅವರನ್ನು ಪ್ರೀತಿಯಿಂದ 'ಚಾಚಾ' ಎನ್ನುತ್ತಿದ್ದರು. ಇಂದಿನ ಮಕ್ಕಳೇ ಮುಂದಿನ ಜನಾಂಗ ಎಂಬುದನ್ನು ನಂಬಿದ್ದ ನೆಹರೂರವರು, ಮಕ್ಕಳೇ ಮನೆಗೆ ಮಾಣಿಕ್ಯ ಅನ್ನುತ್ತಿದ್ದರು''. ಹೀಗೆ ಐದು ನಿಮಿಷಗಳ ಭಾಷಣದಲ್ಲಿ 15-20 ಗಾದೆಗಳನ್ನು ಉದುರಿಸುತ್ತಿದ್ದೆವು. ಗಾದೆಗಳ ಆ ಸಂದರ್ಭಕ್ಕೆ, ವಿಷಯಕ್ಕೆ ಎಷ್ಟು ಪ್ರಸ್ತುತ ಅನ್ನುವುದಕ್ಕಿಂತ ಗಾದೆಗಳ ಒಟ್ಟು ಸಂಖ್ಯೆ ಎಷ್ಟು ಎಂಬುದೇ ನಿರ್ಣಾಯಕರಿಗೆ ಮುಖ್ಯವಾಗಿದ್ದು ಅದರ ಮೇಲೆಯೇ ಬಹುಮಾನಗಳನ್ನು ನಿರ್ಣಯಿಸುತ್ತಿದ್ದರು.

ವಿದ್ಯಾರ್ಥಿಗಳ ಚರ್ಚಾಸ್ಪರ್ಧೆ ಎಂದರೆ ನಿಜವಾಗಿ ಅದು ಗಾದೆಗಳ ಸ್ಪರ್ಧೆಯೇ ಆಗಿರುತ್ತಿತ್ತು. ಈ ಹಿಂದೆ ಮಾತನಾಡಿದ ವಿದ್ಯಾರ್ಥಿ ನಾಲ್ಕು ಗಾದೆಗಳನ್ನು ಬಳಸಿದ್ದರೆ, ಮುಂದಿನ ವಿದ್ಯಾರ್ಥಿ ಹೇಗಾದರೂ ಮಾಡಿ ಒಂದೆರಡು ಹೆಚ್ಚು ಗಾದೆಗಳನ್ನು ಪ್ರಯೋಗಿಸಲು ಒದ್ದಾಡುವುದು ತುಂಬಾ ಸ್ವಾರಸ್ಯಕರವಾಗಿರುತ್ತಿತ್ತು. ಉದಾಹರಣೆಗೆ: 'ತನ್ನ ಕತ್ತೆಗೆ ಮೂರೇ ಕಾಲು' ಎಂಬಂತೆ ನನ್ನ ಮಿತ್ರರು ಧರ್ಮಕ್ಕಿಂತ ವಿಜ್ಞಾನವೇ ಮೇಲೆಂದು ಸಾಧಿಸಲು ಹೆಣಗಿದ್ದಾರೆ. ಆದರೆ 'ಬರ್‍ತಾ ಬರ್‍ತಾ ರಾಯರ ಕುದುರೆ ಕತ್ತೆ ಆಗ್ತಾ ಬಂತು' ಎಂಬ ಗಾದೆಯಂತೆ ವಿಜ್ಞಾನದ ದುಷ್ಪರಿಣಾಮಗಳು ಜಗತ್ತನ್ನು ಕಾಡುತ್ತಿರುವ ವಿಚಾರ ಅವರಿಗೆ ಬಹುಶಃ ತಿಳಿದಿರಲಾರದು-ಎಂದು ಧರ್ಮದ ಪರವಾಗಿ ಮಾತನಾಡಿದವ ಹೇಳಿದರೆ, ವಿರುದ್ಧವಾಗಿ ಮಾತನಾಡುವ ಮುಂದಿನ ವಿದ್ಯಾರ್ಥಿ:

''ಈಗಷ್ಟೇ ಮಾತನಾಡಿದ ನನ್ನ ಮಾನ್ಯ ಮಿತ್ರರು ಎರಡು ಬಾರಿ ಕತ್ತೆಯ ಪ್ರಸ್ತಾಪ ಮಾಡಿದ್ದಾರೆ. 'ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ' ಎಂಬಂತೆ ತಾನು ಎಲ್ಲಾ ವಿಚಾರಗಳನ್ನು ಹೇಳಿಬಿಟ್ಟಿದ್ದೇನೆ ಎಂದು ಅವರು ತಿಳಿದಿದ್ದರೆ ಅದು ತಪ್ಪು. 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು' ಎನ್ನುವಹಾಗೆ ವಿಜ್ಞಾನದ ಬಗ್ಗೆ ಗೊತ್ತಿಲ್ಲದವರಿಗೆ ಅದರ ದುಷ್ಪರಿಣಾಮಗಳು ಮಾತ್ರ ಕಾಣುತ್ತದೆ ...'' ಈ ರೀತಿಯಾಗಿ ಮುಂದುವರಿಯುವ ಚರ್ಚಾಸ್ಪರ್ಧೆ ಕೇಳುವವರ ಪಾಲಿಗೆ ರಸದೌತಣ! ಭೀಮ ದುರ್ಯೋಧನರ ಗದಾಯುದ್ಧದ ಹಾಗೆ ಅಂದಿನ ನಮ್ಮ ಶಾಲಾದಿನಗಳ ಚರ್ಚಾಸ್ಪರ್ಧೆಗಳನ್ನು 'ಗಾದೆಯುದ್ದ' ಅನ್ನಬಹುದು.

ಈಗಲೂ ಕೂಡಾ ಗಾದೆಗಳು, ಸೂಕ್ತಿಗಳು, ಅಣಿಮುತ್ತುಗಳು ಇವೆಲ್ಲ ಭಾಷಣಕಾರರ ಬತ್ತಳಿಕೆಯ ಬಾಣಗಳಿದ್ದ ಹಾಗೆ. ಸರಿಯಾದ ಸಂದರ್ಭ ನೋಡಿ ಗಾದೆಯೆಂಬ ವರುಣಾಸ್ತ್ರ ಪ್ರಯೋಗಿಸಿ ಚಪ್ಪಾಳೆಯ ಸುರಿಮಳೆ ಬರಿಸುವ, ಸೂಕ್ತಿ ಎಂಬ ಸಮ್ಮೋಹನಾಸ್ತ್ರವನ್ನು ಬಳಸಿ ಶ್ರೋತೃಗಳು ತಲೆದೂಗುವಂತೆ ಮಾಡುವ ಮಾತುಗಾರರನ್ನು ನೀವೂ ನೋಡಿರಬಹುದು. ಆದರೆ ಆ ಬಗೆಯ ಭಾಷಣಕಾರರನ್ನು ಮತ್ತೇ ಮತ್ತೇ ಕೇಳುವುದು ಕೊಂಚ ಕಷ್ಟ, ಕರ್ಣ ಕಠೋರ, ಯಾಕೆಂದರೆ ಇವರು ಕರ್ಣನ ಹಾಗೆ 'ತೊಟ್ಟ ಬಾಣವನ್ನು ಇನ್ನೊಮ್ಮೆ ತೊಡೆನು' ಎಂದು ಪ್ರತಿಜ್ಞೆ ಮಾಡಿದವರಲ್ಲ. ಇಂಥ ಮಹನೀಯರ ಭಾಷಣವನ್ನು ಎರಡು ಬಾರಿ ಕೇಳಿದರೆ ಮೂರನೇ ಸಲ ಅವರು ಯಾವಾಗ ಯಾವ ಗಾದೆ ಉರುಳಿಸುತ್ತಾರೆ ಎಂಬುದನ್ನು ಯಾರೂ ಊಹಿಸಬಹುದು.

''ಕುಲ ಕುಲ ಕುಲವೆಂದು ಹೊಡೆದಾಡದಿರಿ'' ಎಂದು ಪುರಂದರ ದಾಸರು ಬಹಳ ಹಿಂದೆಯೇ ಹೇಳಿದ್ದಾರೆ. 'ದಯವೇ ಧರ್ಮದ ಮೂಲವಯ್ಯಾ' ಎಂದು ಗೌತಮ ಬುದ್ಧ ಸಾರಿದ್ದಾನೆ. 'ರಸವೆ ಜನನ ವಿರಸವೇ ಮರಣ ಸಮರಸವೇ ಜೀವನ' ಎಂದು ರಾಷ್ಟ್ರಕವಿ ಕುವೆಂಪು ಹಾಡಿದ್ದಾರೆ…'' ಈ ರೀತಿಯಾಗಿ ಯಾರದೋ ಅಣಿಮುತ್ತುಗಳನ್ನು ಇನ್ನಾರ ತಲೆಗೋ ಕಟ್ಟಿ ಭರ್ಜರಿ ಭಾಷಣ ಬಿಗಿಯುವವರನ್ನು ನೀವೂ ಕೇಳಿರಬಹುದು. ಇಂತಹ ಹಾಸ್ಯಾಸ್ಪದ ಭಾಷಣಗಳನ್ನು ಕೇಳಿ ನೀವು ಮನಃ ಪೂರ್ವಕ ನಕ್ಕು ಬಿಡುವಂತಿಲ್ಲ. ಯಾಕೆಂದರೆ ಈ ರೀತಿ ಮಾತನಾಡುವವರು ಎಷ್ಟೋ ಸಲ ನಮ್ಮ ಕಚೇರಿಯ ಮೇಲಾಧಿಕಾರಿಗಳೋ, ನಮ್ಮ ಊರಿನ ಮುಖಂಡರೋ ಆಗಿರುತ್ತಾರೆ. ಹೀಗಾಗಿ ಈ 'ಸೂಕ್ತಿ-ಸಂಕರ'ವನ್ನು ಸಹಿಸಿಕೊಂಡು ಚಪ್ಪಾಳೆ ತಟ್ಟುವುದು ಅನಿವಾರ್ಯವಾಗುತ್ತದೆ.

ವೇದಿಕೆಯ ಮೇಲೆ ಮಾತ್ರವಲ್ಲದೆದಿನನಿತ್ಯದಮಾತುಕತೆಗಳಲ್ಲೂಧಾರಾಳವಾಗಿಗಾದೆಗಳನ್ನುಬಳಸುವವರಿದ್ದಾರೆ. ನನ್ನ ಸ್ನೇಹಿತ ಮಾದಯ್ಯ ಎಂಬವರಿಗೆ ಇದೇ ಕಾರಣಕ್ಕಾಗಿ ಗಾದೆಮಾದಯ್ಯ ಎಂಬ ಅಡ್ಡ ಹೆಸರು ಬಂದಿದೆ. ಹೇಗಾದರೂ ಮಾಡಿ ಮಾತಿನ ನಡುವೆ ಗಾದೆ ತೂರಿಸದೆ ಇದ್ದರೆ ಅವರಿಗೆ ನಿದ್ದೆ ಬರೋದಿಲ್ಲ. ತಿಂದದ್ದು ಕರಗೋದಿಲ್ಲ. ಆಶ್ಚರ್ಯದ ಸಂಗತಿ ಎಂದರೆ ಅವರ ಧರ್ಮಪತ್ನಿಗೂ ಈ ರೋಗವಿದೆ. ಗಂಡನ ಸಹವಾಸದಿಂದ ಹೆಂಡತಿಗೆ ಗಾದೆ ಚಟ ಅಂಟಿತೋ ಅಥವಾ ಅಂಥವಳನ್ನೇ ಹುಡುಕಿ ತನಗೆ ಸರಿಯಾದ ಜೋಡಿ ಎಂದು ಮಾದಯ್ಯನವರೆ ಮೆಚ್ಚಿ ಮದುವೆಯಾದರೋ ಎಂಬುದು ನನಗೆ ಗೊತ್ತಿಲ್ಲ. ಜಾನಪದ ವಿದ್ವಾಂಸರು ಮುಂದೆ ಈ ಬಗ್ಗೆ ಸಂಶೋಧನೆ ಮಾಡಿಯಾರು.

ಒಮ್ಮೆ ನಾನು ಗಾದೆ ಮಾದಯ್ಯನವರ ಮನೆಗೆ ಹೋಗಿದ್ದಾಗ ನನ್ನ ಕಿವಿಯ ಮೇಲೆ ಬಿದ್ದ ಆ ಗಾದೆ ದಂಪತಿಗಳ ಸಂಭಾಷಣೆಯ ತುಣುಕು ಹೇಗಿತ್ತು ಎಂಬುದನ್ನು ಅವರ ಮಾತುಗಳಲ್ಲೇ ಕೇಳಿ:

**ಹೆಂಡತಿ :** ಏನ್ರೀ? ಇವತ್ತಾದರೂ ಸೊಸೈಟಿಯಿಂದ ಸಕ್ರೆ ತಂದಿದೀರಾ? ಅಥವಾ ಪುನಃ ಮರೆತು ಬಿಟ್ರಾ? ನಿಮಗೆ ಹೇಳೋದು ಅಂದ್ರೆ, ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ?

**ಗಂಡ :** ಸದಾಶಿವನಿಗೆ ಅದೇ ಧ್ಯಾನ ಅನ್ನೋ ಹಾಗೆ ಯಾವಾಗ್ಲೂ ಸಕ್ರೆ ಸಕ್ರೆ ಅಂತ ಬಡ್ಕೋಬೇಡ. ಆಮೇಲೆ ನಿನಗೆ ಸಕ್ರೆ ಕಾಯಿಲೆ ಶುರುವಾಗುತ್ತೆ, ನೋಡ್ತಾ ಇರು.

**ಹೆಂಡತಿ :** ಕಂಡದನ್ನು ಹೇಳಿದ್ರೆ ಕೆಂಡದಂಥಾ ಕೋಪ. ಹೊಗ್ಲಿ ಈಗಲಾದರೂ ಹೋಗಿ ಬರಬಹುದಲ್ಲಾ?

**ಗಂಡ :** ಅಲ್ಲ ಕಣೆ! ಅಷ್ಟು ಅವಸರ ಯಾಕೆ? ನಿಧಾನವೇ ಪ್ರಧಾನ.' ನಾಳೆ ತಂದ್ರಾಯ್ತು ಬಿಡು.

**ಹೆಂಡತಿ :** ನಾಳೆ ಅಂದವನ ಮನೆ ಹಾಳು.

**ಗಂಡ :** ಶಾಂತಂ ಪಾಪಂ ಶಾಂತ ಪಾಪಂ 'ಮನೆ ಬೆಳಗಬೇಕಾದ ನೀನೆ ಮನೆ ಹಾಳು ಅಂತೀಯಲ್ಲೆ? 'ಬೇಲೀನೆ ಎದ್ದು ಹೊಲ ಮೇದ ಹಾಗೆ ಆಯ್ತು'.

ದಂಪತಿಗಳ ಈ ವಾಗ್ವಾದ ಅಲ್ಲ, 'ಗಾದೆ-ವಾದ' ಇನ್ನೂ ಎಷ್ಟು ಹೊತ್ತು ಮುಂದುವರೀತಿತ್ತೋ ಏನೋ? ಆದರೆ, ಅಷ್ಟರಲ್ಲಿ ನಾನು ಬಂದದ್ದನ್ನು ಗಮನಿಸಿದ ಮಾದಯ್ಯನವರು ''ಓಹೋ ಹೋ ಬರಬೇಕು, ಬರಬೇಕು.

ಬರಗಾಲದಲ್ಲಿ ಅಧಿಕ ಮಾಸ ಬಂದ ಹಾಗಾಯ್ತು, ಬನ್ನಿ'' ಎಂದು ನನ್ನನ್ನು ಸ್ವಾಗತಿಸಿದ್ದರಿಂದ, ದಂಪತಿಗಳ ಗಾದೆ ಸರಪಣಿ ತುಂಡಾಯಿತು.

ನಿಮ್ಮನ್ನ ಯಾರಾದರೂ 'ಬರಗಾಲದಲ್ಲಿ ಅಧಿಕ ಮಾಸ ಬಂದ ಹಾಗಾಯ್ತು ಬನ್ನಿ, ಅಂತ ಸ್ವಾಗತಿಸಿದ್ದರೆ ನೀವು ಖಂಡಿತ ಒಳಗೆ ಕಾಲಿಡ್ತಾ ಇರಲಿಲ್ಲ. ನನಗೆ ಮಾದಯ್ಯನವರ ಸ್ವಭಾವ ಗೊತ್ತಿದ್ದರಿಂದ ಅವರ ಗಾದೆಯ ಅರ್ಥಕ್ಕೆ ಬೆಲೆ ಕೊಡುವುದಿಲ್ಲ. ಗಾದೆ ಬಳಸುವ ಉತ್ಸಾಹದಲ್ಲಿ ಹೇಳಬಾರದ್ದನ್ನು ಹೇಳಿ ಮಾದಯ್ಯನವರು ಅನೇಕ ಬಾರಿ ತೊಂದರೆ ಅನುಭವಿಸಿದ್ದಾರೆ. ಅವರ ಮೇಲಾಧಿಕಾರಿಗೆ ಭಡ್ತಿಯಾದಾಗ ಸಹೋದ್ಯೋಗಿಗಳೆಲ್ಲ ಅಭಿನಂದನಾ ಭಾಷಣ ಮಾಡಿದರು. ಕೊನೆಯಲ್ಲಿ ಮಾತನಾಡಲು ಹೋದ ಮಾದಯ್ಯನವರು ''ಈಗಾಗಲೇ ಎಲ್ಲರೂ ಮಾತಾಡಿದ್ದಾರೆ. ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎಂಬಂತೆ ನಾನೂ ನಾಲ್ಕು ಮಾತುಗಳನ್ನು ಆಡಲು ನಿಮ್ಮ ಮುಂದೆ ನಿಂತಿದ್ದೇನೆ'' ಎಂದು ಆರಂಭಿಸಿದರು. ಕೂಡಲೇ ಅವರ ಆ ಬಾಸ್-ಆಭಾಸವನ್ನು ತಡೆಯಲಾರದೆ ಗೆಟ್‌ಔಟ್ ಅಂದರಂತೆ.

ಮಾದಯ್ಯನವರ ಆತ್ಮೀಯ ಸ್ನೇಹಿತನೆಂಬ ನೆಲೆಯಲ್ಲಿ ಈ ಗಾದೆ ಚಟ ಬಿಟ್ಟು ಬಿಡುವಂತೆ ನಾನೊಮ್ಮೆ ಅವರಿಗೆ ಅರ್ಧಗಂಟೆ ಕೊರೆದಿದ್ದೆ. ಜನರೆಲ್ಲ ಅವರಿಗೆ ಹೇಗೆ ತಮಾಷೆ ಮಾಡ್ತಾರೆ ಎಂಬುದನ್ನು ವಿವರಿಸಿದ್ದೆ. ಎಲ್ಲವನ್ನೂ ಸಮಾಧಾನದಿಂದ ಕೇಳಿದ ಮಾದಯ್ಯನವರು ಕೊನೆಯಲ್ಲಿ ''ನೀವು ಹೇಳೋದು ನೂರಕ್ಕೆ ನೂರು ನಿಜ. ಆದರೆ ಏನ್ ಮಾಡೋದು? ಹುಟ್ಟು ಗುಣ ಗಟ್ಟ ಹತ್ತಿದರೂ ಬಿಡೋದಿಲ್ಲ'' ಎಂದರು. ಈ ಮಾದಯ್ಯನವರಿಗೆ ಬುದ್ಧಿ ಹೇಳೋದು ಅಂದರೆ 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ' ಎಂಬುದು ಖಾತ್ರಿಯಾಗಿ ನಾನು ಸುಮ್ಮನಾದೆ.

ಅಂದ ಹಾಗೆ ಗಾದೆ ಮಾದಯ್ಯನವರ ಬಗ್ಗೆ ಮಾತಾಡ್ತ ನಾನೂ ಕೆಲವು ಗಾದೆಗಳನ್ನು ಬರೆದಿದ್ದನ್ನು ನೀವು ಗಮನಿಸಿರಬಹುದು. ಸ್ನೇಹಿತನ ಗಾದೆ ರೋಗ ನನಗೂ ಅಂಟಿರಬಹುದೇ? ಎಂಬ ಅನುಮಾನವೂ ಕೆಲವರಲ್ಲಿ ಮೂಡಿರಬಹುದು. ಆದ್ದರಿಂದ ಈ ಬಗ್ಗೆ ಈಗಲೇ ಸ್ಪಷ್ಟೀಕರಣ ನೀಡುತ್ತೇನೆ. ನನಗೆ ಗಾದೆಗಳ ಬಗ್ಗೆ ಪ್ರೀತಿಯಿದೆಯಾದರೂ ಅದೊಂದು ಚಟವಾಗಿ ಬೆಳೆದಿಲ್ಲ. ಬಹುಶ: ಮುಂದೆಯೂ ಬೆಳೆಯಲಾರದು. ಯಾಕೆಂದರೆ ಗಾದೆಗಳನ್ನು ವಾಸ್ತವದ ಒರೆಗಲ್ಲಿನಲ್ಲಿ ತಿಕ್ಕಿ ಪರೀಕ್ಷಿಸುವವ ನಾನು. ಈ ರೀತಿ ಪರಾಮರ್ಶೆ ಮಾಡಿದ್ದರಿಂದ ನನಗೆ ಒಂದು ಅಂಶ ಸ್ಪಷ್ಟವಾಗಿದೆ. ಅದೇನು ಅಂತಂದ್ರೆ, ನಮ್ಮ ಕೆಲವು ಜನಪ್ರಿಯ ಗಾದೆಗಳು, ಸೂಕ್ತಿಗಳು ಈಗ ತಮ್ಮ ಅರ್ಥವ್ಯಾಪ್ತಿಯನ್ನು, ಪ್ರಸ್ತುತತೆಯನ್ನು ಕಳೆದುಕೊಂಡಿವೆ. ಅವುಗಳಿಗೆ ಕಾಯಕಲ್ಪ ಮಾಡಬೇಕಾದ ಅಗತ್ಯವಿದೆ ಎಂದು ನನ್ನ ಭಾವನೆ.

'ಗಾದೆಗಳ ಜೀರ್ಣೋದ್ಧಾರ ಸಮಿತಿ' ಎಂದು ಸರಕಾರದವರು ಒಂದು ಸಮಿತಿಯನ್ನೊ, ಆಯೋಗವನ್ನೋ ನೇಮಿಸುವಂತೆ ನೀವು ಒತ್ತಾಯಿಸಬೇಕು. ಗಾದೆಗಳನ್ನು ಉಳಿಸಲು, ಬೆಳೆಸಲು ನೀವೆಲ್ಲರೂ ಹೋರಾಡಬೇಕು. ಒಂದು ವೇಳೆ ಆಯೋಗ ರಚಿಸಲು ಸರಕಾರದವರು ಒಪ್ಪಿ ಅದಕ್ಕೆ ಸಾಕಷ್ಟು ಹಣ ಬಿಡುಗಡೆ ಮಾಡಿದರೆ ಆಯೋಗದ ಅಧ್ಯಕ್ಷನಾಗಿ ದುಡಿಯಲಿಕ್ಕೆ ನಾನು ಸಿದ್ಧ. ಈ ವಿಚಾರದಲ್ಲಿ ನನ್ನ ಅರ್ಹತೆಯನ್ನು ನಿಮಗೆ ಮನದಟ್ಟು ಮಾಡಲಿಕ್ಕೆ ಗಾದೆಗಳ ಬಗ್ಗೆ ನಾನು ನಡೆಸಿದ ಪ್ರಯೋಗಗಳ ಕುರಿತು ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ.

''ಮಾಡಿದ್ದುಣ್ಣೋ ಮಹರಾಯಾ'' ಎಂಬ ಗಾದೆಯನ್ನೇ ತಗೊಳ್ಳಿ. ಇವತ್ತಿನ ಸಂದರ್ಭದಲ್ಲಿ ಈ ಗಾದೆ ಸತ್ಯಕ್ಕೆ ದೂರವಾಗಿದೆ. ಯಾರೋ ಕಳ್ಳತನ ಮಾಡಿದ್ದಕ್ಕೆ ಇನ್ನಾರಿಗೋ ಶಿಕ್ಷೆಯಾಗುವುದು; ಯಾರೋ ಕೊಲೆ ಮಾಡಿದ್ದಕ್ಕೆ ಇನ್ಯಾರಿಗೋ ಗಲ್ಲಿಗೇರುವುದು ಈಗ ಸಾಮಾನ್ಯವಾಗಿ ಬಿಟ್ಟಿದೆ. ಹಾಗಂತ ಈ ಗಾದೆಯನ್ನು ರದ್ದು ಪಡಿಸಿದರೆ ನಮ್ಮ ಜನಪದ ಸಾಹಿತ್ಯ ಪ್ರೇಮಿಗಳಿಗೆ ಬೇಸರವಾಗಬಹುದು. ಆದ್ದರಿಂದ ಈ ಗಾದೆಯ ಒಂದೇ ಒಂದು ಅಕ್ಷರವನ್ನು ಬದಲಾಯಿಸಿದರೆ ''ನಾಡಿದ್ದುಣ್ಣೋ ಮಹರಾಯಾ'' ಅಂದರೆ ಇಂದಿನ ಕಾಲಕ್ಕೆ ಈ ಗಾದೆ ಅತ್ಯಂತ ಪ್ರಸ್ತುತವಾಗುತ್ತದೆ. ಇವತ್ತು ಮಾಡಿದ ಅಡಿಗೆಯನ್ನು ಫ್ರಿಜ್‌ನಲ್ಲಿಟ್ಟು , ನಾಡಿದ್ದು ಅದನ್ನೇ ಉಣ್ಣುವ ನಾವೆಲ್ಲರೂ, ನಾಡಿದ್ದುಣ್ಣೋ ಮಹಾರಾಯರಲ್ಲವೇ?

''ಬೆಳ್ಳಗಿರುವುದೆಲ್ಲ ಹಾಲಲ್ಲ'' ಎಂಬ ಗಾದೆಯನ್ನು ನಾವು ಈಗಲೂ ಬಳಸ್ತಾ ಇದ್ದೇವೆ. ಈ ಗಾದೆಯ ಪ್ರಕಾರ ಬೆಳ್ಳಗಿರುವುದೇ ಹಾಲಿನ ಪ್ರಧಾನ ಲಕ್ಷಣ. ಆದರೆ, ಮಳೆಗಾಲದಲ್ಲಿ ಹಾಲಿಗೆ ಕೊಂಚ ಕೆಸರು ನೀರಿನ ಬಣ್ಣ ಬರುವುದನ್ನು ನೀವು ಗಮನಿಸಿರಬಹುದು. ಆದ್ದರಿಂದ 'ಬೆಳ್ಳಗಿರುವುದೆಲ್ಲ ಹಾಲಲ್ಲ' ಅನ್ನುವ ಬದಲು 'ತೆಳ್ಳಗಿರುವುದೆಲ್ಲ ಹಾಲಲ್ಲ' ಅಂತ ತಿದ್ದಿದರೆ ಈ ಗಾದೆ ಚಿರಕಾಲ ಚಲಾವಣೆಯಲ್ಲಿ ಉಳಿಯಬಹುದು. ಇದೇ ರೀತಿ ದನಕ್ಕಾಗಿ ಸಾಲ ಕೇಳಲು ಬ್ಯಾಂಕುಗಳ ಮುಂದೆ ಜಮಾಯಿಸುವ ಜನಸಂದಣಿಯನ್ನು ಕಂಡಾಗ ನನಗೆ ಅನ್ನಿಸಿದ್ದು – ''ದನ ಕಪ್ಪಾದರೂ ದನದ ಸಾಲ ಕಪ್ಪೆ''? ಎರಡು ಲಕ್ಷ ರೂಪಾಯಿ ಸಾಲ ಮಾಡಿ ಕಟ್ಟಿಸಿದ ಮನೆಯನ್ನು ಬಾಡಿಗೆದಾರರ ಮಕ್ಕಳು ಲಗಾಡಿ ತೆಗೆಯುವುದನ್ನು ಕಂಡಾಗ ನಾವು ಹೇಳಬಹುದಾದ ಹೊಸ ಗಾದೆ ''ಮನೆ ಕಟ್ಟಿನೋಡು, ಬಾಡಿಗೆಗೆ ಕೊಟ್ಟು ನೋಡು.' ಇದೇ ರೀತಿ 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂಬ ಸಂಸ್ಕೃತದ ಗತಕಾಲದ ಅಣಿಮುತ್ತನ್ನೇ ಮತ್ತೆ ಮತ್ತೆ ಹೇಳುವ ಬದಲು ಅದನ್ನು ಕೊಂಚ ಕನ್ನಡೀಕರಿಸಿ 'ಕೃಷಿತೋ ಜಾಸ್ತಿದುರ್ಭಿಕ್ಷಂ ? ಅಂದರೆ ನಮ್ಮ ರೈತ ಬಾಂಧವರ ಅಮೂಲ್ಯಮತಗಳೆಲ್ಲ ನಿಮಗೇ ಬೀಳುವುದು ಖಂಡಿತ.

ಗಾದೆಗಳ ನವೀಕರಣದ ಬಗ್ಗೆ ಇನ್ನೂ ಹಲವಾರು ಸಲಹೆಗಳು ನನ್ನ ಬಳಿ ಇವೆ. ಆದರೆ ಅವುಗಳನೆಲ್ಲ ನಾನು ಈಗಲೇ ಬಹಿರಂಗ ಪಡಿಸಿದರೆ ನಾಳೆ ಸರಕಾರದವರು ನೇಮಿಸಬಹುದಾದ ಗಾದೆ ನವೀಕರಣ ಸಮಿತಿಯ ಅಧ್ಯಕ್ಷ ಪದಕ್ಕೆ ನೀವೂ ನನ್ನ ಜತೆ ಸ್ಪರ್ಧಿಸುವ ಅಪಾಯವಿದೆ. ಕೋಲು ಕೊಟ್ಟು ಹೊಡೆಸಿಕೊಳ್ಳಲು ನಾನು ತಯಾರಿಲ್ಲ.

''ಗಾದಿಗಾಗಿ ಗುದ್ದಾಡುವವರು ಗಾದೆಗಳ ಉದ್ಧಾರದ ಬಗ್ಗೆ ಚಿಂತಿಸುತ್ತಾರೆಯೇ? ಸಮಿತಿ, ಆಯೋಗ ಎಲ್ಲ ನಿಮ್ಮ ಕನಸು. ಆಯೋಗದ ಅಧ್ಯಕ್ಷರಾಗುವ ಆ ಯೋಗ ನಿಮಗೆ ಖಂಡಿತಾ ಬರುವುದಿಲ್ಲ'' ಎಂದು ನನ್ನ ಹೆಂಡತಿ ನನಗೆ ಆಗಾಗ ಬುದ್ಧಿ ಹೇಳುತ್ತಾಳೆ. ಆದರೆ ನಾನು ಆಶಾವಾದಿ. ಗಾದೆಗಳ ಬಗ್ಗೆ ನನ್ನ ಚಿಂತನೆ ಹಾಗೂ ಸಂಶೋಧನೆಗಳನ್ನು ನಿಲ್ಲಿಸುವುದಿಲ್ಲ. ತಾಳಿದವ ಬಾಳಿಯಾನು. ಊಟದಲ್ಲಿ ಉಪ್ಪಿನಕಾಯಿಯ ಹಾಗೆ ಮಾತಿನಲ್ಲಿ ಗಾದೆ ಎಲ್ಲ ಜನರಿಗೆ ಎಲ್ಲ ಕಾಲಕ್ಕೆ ಅತ್ಯಗತ್ಯ. ಗಾದೆ ನಮಗೆ ಬೇಡ ಎಂದು ಯಾರಾದರೂ ಹೇಳಿದರೆ ಅವರಿಗೆ ನಾನು ಕೇಳುವ ಪ್ರಶ್ನೆ ಒಂದೇ. ನೀನಾರಿ 'ಗಾದೆ'ಯೋ ಎಲೆ ಮಾನವಾ?


---

**ಶಬ್ದಗಳ ಅರ್ಥ:**

ವ್ಯಾಮೋಹ – ಹಂಬಲ; ಶ್ರೋತೃ – ಆಲಿಸುವ; ವಿದ್ವಾಂಸ – ಪಂಡಿತ ಅನುಮಾನ – ಸಂಶಯ; ಅರ್ಹತೆ – ಯೋಗ್ಯತೆ

**ಕೃತಿ 1) ಪಾಠವನ್ನು ಓದಿ ಕೆಳಗಿನ ಚಟುವಟಿಕೆಗಳನ್ನು ಪೂರ್ಣ ಮಾಡಿರಿ.**

i) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ



ii) ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿರಿ.

| ಪ್ರಸ್ತುತದಲ್ಲಿದ್ದ ಗಾದೆ | ಲೇಖಕರ ದೃಷ್ಟಿಯಲ್ಲಿ ನವೀಕರಿಸಬಹುದಾದ ಗಾದೆ |
|---|---|
| ಮಾಡಿದ್ದುಣ್ಣೋ ಮಹಾರಾಯಾ | |
| ಬೆಳ್ಳಗಿರುವುದೆಲ್ಲ ಹಾಲಲ್ಲ | |
| ಆಕಳು ಕಪ್ಪಾದರೆ ಹಾಲು ಕಪ್ಪೇ? | |
| ಮನೆಕಟ್ಟಿ ನೋಡು, ಮದುವೆ ಮಾಡಿ ನೋಡು | |

iii) ನೀವು ಗಾದೆಮಾತುಗಳನ್ನು ಹೇಗೆ ಬಳಸುತ್ತೀರಿ ಎಂಬುದನ್ನು 8ರಿಂದ 10 ವಾಕ್ಯಗಳಲ್ಲಿ ಬರೆಯಿರಿ.

(ಉದಾ-ಮನೆಯಲ್ಲಿ, ಶಾಲೆಯಲ್ಲಿ, ರಸ್ತೆಗಳಲ್ಲಿ, ದೈನಂದಿನ ಚಟುವಟಿಕೆಗಳಲ್ಲಿ)

iv) ನಿಮಗೆ ಗೊತ್ತಿರುವ ಗಾದೆಮಾತುಗಳನ್ನು ಬಳಸಿ ಒಂದು ವಿಶಿಷ್ಟ ಪ್ರಸಂಗದಲ್ಲಿ ನಡೆಯುವ ಸಂಭಾಷಣೆಯನ್ನು ಬರೆಯಿರಿ.

**ಕೃತಿ 2)** i) ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸಿರಿ.

1. ಊಟದಲ್ಲಿ ಉಪ್ಪಿನ ಕಾಯಿಯ ಹಾಗೆ ------
2. ಕಂಡದ್ದನ್ನು ಹೇಳಿದರೆ ------------
3. ಕತ್ತೆ ಮೇದಲ್ಲಿ ------------
4. ಮೂಗಿಗಿಂತ ----------

ii) ಕೆಳಗಿನ ಗ್ರಾಮ್ಯ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

| | |
|---|---|
| ಸಕ್ರೆ | |
| ಹೋಗ್ಲಿ | |
| ಸೊಸೈಟಿ | |

iii) ಕೆಳಗಿನ ಜಾಲವನ್ನು ಪೂರ್ಣ ಮಾಡಿರಿ.

**ಭಾಷಣಕಾರರ ಬತ್ತಳಿಕೆಯ ಬಾಣಗಳು**

**ಕೃತಿ 3)** i) ಪಾಠದಲ್ಲಿ ಗಾದೆ ಮಾದಯ್ಯನವರು ಹಾಗೂ ಅವರ ಧರ್ಮಪತ್ನಿಯ ನಡುವೆನಡೆದ ಸಂಭಾಷಣೆಯಲ್ಲಿ ಬಳಕೆಯಾದ ಗಾದೆಮಾತುಗಳನ್ನು ಆಯ್ದು ಬರೆಯಿರಿ.

ii) 'ತಾಯಿ' ಈ ಪದವನ್ನು ಸಂಬೋಧಿಸುವ ಗಾದೆಮಾತುಗಳನ್ನು ಬರೆಯಿರಿ.

iii) ಕೆಳಗಿನ ಶಬ್ದಗಳನ್ನು ಸರಿಪಡಿಸಿ ಅರ್ಥಪೂರ್ಣ ವಾಕ್ಯ ರಚಿಸಿರಿ.

1. ಹಾಳು ಎಂದವನ ನಾಳೆ ಮನೆ
2. ಕಾಲು ಹಾಸಿಗೆ ಚಾಚು ಇದ್ದಷ್ಟು

iv) 'ಉಪಾಯವಿದ್ದಲ್ಲಿ ಅಪಾಯವಿಲ್ಲ' ಈ ಗಾದೆ ಮಾತಿನ ಅರ್ಥವನ್ನು ವಿಸ್ತರಿಸಿ ಬರೆಯಿರಿ.

**ಕೃತಿ 4)** i) ಕೆಳಗಿನ ಪ್ರಸಂಗವನ್ನು ಓದು ಮತ್ತು ಅದಕ್ಕೆ ಸುಸಂಗತವಾದ ಗಾದೆ ಮಾತನ್ನು ಕಂಸಿನಿಂದ ಆಯ್ದು ಬರೆ.

ಗುರುಗಳು ವರ್ಗದಲ್ಲಿ ಮಕ್ಕಳಿಗೆ ಚಿತ್ರ ಬಿಡಿಸಲು ಹೇಳಿದರು. ಎಲ್ಲರೂ ಬಿಡಿಸಲು ಪ್ರಾರಂಭಿಸಿದರು. ರಂಗನು ಮಾತ್ರ ಹಾಗೆ ಕುಳಿತಿದ್ದನು. ಗುರುಗಳು ರಂಗನನ್ನು ನೀನೇಕೆ ಚಿತ್ರ ಬಿಡಿಸುತ್ತಿಲ್ಲ ಎಂದು ವಿಚಾರಿಸಿದಾಗ ರಂಗ, ಗುರುಗಳೇ ನನ್ನ ಪೆನ್ಸಿಲು ಮೂಡುತ್ತಿಲ್ಲ; ಕಾಗದ ಬಹಳ ಚಿಕ್ಕದಾಗಿದೆಯೆಂದನು. ಅದಕ್ಕೆ ಅಂತಾರಲ್ಲ --------

(ಹಿತ್ತಲ ಗಿಡ ಮದ್ದಲ್ಲ, ನಾಳೆ ಅಂದವನ ಮನೆ ಹಾಳು, ಕುಣಿಯಲು ಬಾರದವಳಿಗೆ ಅಂಗಳ ಡೊಂಕು)

ii) ''ದಿನಕರನು ಮಾಡಿದ ತಪ್ಪುಗಳನ್ನು ಎತ್ತಿತೋರಿಸಿದರೆ ಬಹಳ ಸಿಟ್ಟಿಗೆ ಬರುತ್ತಾನೆ'' - ದಿನಕರನ ಈ ವರ್ತನೆ ಕೆಳಗಿನವುಗಳಲ್ಲಿ ಯಾವ ಗಾದೆ ಮಾತನ್ನು ಹೋಲುತ್ತದೆ?

1. ನಾಳೆ ಅಂದವನ ಮನೆ ಹಾಳು.
2. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.
3. ಕಂಡದ್ದನ್ನು ಕಂಡಂತೆ ಹೇಳಿದರೆ ಕೆಂಡಂತ ಕೋಪ.

**ಕೃತಿ 5)** ಕೆಳಗಿನ ಗಾದೆ ಮಾತುಗಳ ಸೂಕ್ತವಾದ ಅರ್ಥಗಳನ್ನು ಪರ್ಯಾಯಗಳಿಂದ ಶೋಧಿಸಿರಿ.

1. ಹಾಸಿಗೆ ಇದ್ದಷ್ಟು ಕಾಲು ಚಾಚು ಎಂದರೆ -------
   (ಅ) ಕಾಲುಗಳನ್ನು ಹಾಸಿಗೆಯ ಮೇಲೆ ಎಳೆದುಕೊ (ಬ) ಹೊದ್ದುಕೊಂಡು ಮಲಗಿಕೊ
   (ಕ) ಆದಾಯವನ್ನರಿತು ವ್ಯಯ ಮಾಡು
2. ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು. ಎಂದರೆ --------
   (ಅ) ನಾವು ನಾಲಿಗೆಯನ್ನು ಸ್ವಚ್ಛವಾಗಿಡಬೇಕು. (ಬ) ನಾವು ಒಳ್ಳೆಯ ಮಾತುಗಳನ್ನು ಆಡಬೇಕು.
   (ಕ) ನಾವು ಮಿತ ಭಾಷಿಗಳಬೇಕು.

C98I79

# 4. ಭಾರತ ಹೃದಯಕ್ಕೆ ಮರುಜೀವ

- ಜಿ.ಕೆ. ಮಧ್ಯಸ್ಥ

**ಲೇಖಕರ ಪರಿಚಯ :** ಶ್ರೀ ಜಿ.ಕೆ ಮಧ್ಯಸ್ಥ ಇವರು ಉತ್ತಮ ಬರಹಗಾರರು. ಕನ್ನಡ ಭಾಷಾ ಪ್ರೇಮಿಗಳು. ಇವರು ಡಾ. ಎ.ಪಿ.ಜೆ. ಅಬ್ದುಲ ಕಲಾಂ ಅವರ 'ದ ಟರ್ನಿಂಗ ಪಾಯಿಂಟ' ಎಂಬ ಇಂಗ್ಲಿಷ ಕೃತಿಯನ್ನು ಜಿ.ಕೆ. ಮಧ್ಯಸ್ಥ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ಈ ಗದ್ಯಭಾಗವನ್ನು ಅವರ ಅನುವಾದಿತ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಪ್ರಸ್ತುತ ಪಾಠದಲ್ಲಿ ಡಾ. ಕಲಾಂ ಅವರು ಹಳ್ಳಿಯ ಪ್ರಗತಿ ಹಾಗೂ ಏಳ್ಗೆಗಳನ್ನು ಕುರಿತು ಹೇಳಿದ್ದಾರೆ.

**ಗ್ರಾಮ ಆಂದೋಲನವೆಂಬುದು ಗ್ರಾಮಗಳೊಂದಿಗೆ**
**ಆರೋಗ್ಯಕರ ಸಂಪರ್ಕವನ್ನು ಹೊಂದುವ**
**ಒಂದು ಪ್ರಯತ್ನವಾಗಿದೆ. ಸೇವೆಯ ಬಯಕೆ ಯಾರಲ್ಲಿ**
**ಜ್ವಲಿಸುತ್ತಿದೆಯೋ ಅವರನ್ನು ಸೇರಿಸಿಕೊಂಡು, ಅವರನ್ನು**
**ಹಳ್ಳಿಗಳಲ್ಲಿ ನೆಲೆಗೊಳಿಸಿ. ಅವರ ಸೇವೆಯಲ್ಲಿ ತಮ್ಮ**
**ಬದುಕಿನ ಧ್ಯೇಯಗಳ ಅಭಿವ್ಯಕ್ತಿಯನ್ನು ಕಾಣುವ**
**ಒಂದು ಯತ್ನವಾಗಿದೆ .......**

**- ಮಹಾತ್ಮಾ ಗಾಂಧಿ**

**ಭಾ**ರತವು ಹಳ್ಳಿಗಳಲ್ಲಿ ಬದುಕುತ್ತದೆ. ಅದರ ಸಂಸ್ಕೃತಿ, ಪರಂಪರೆ ಸಂಪ್ರದಾಯಗಳು ಹಾಗೂ ಜೀವನ ದರ್ಶನವು ರೂಪುಗೊಂಡು ಪ್ರಸಾರವಾಗುವುದು ಅಲ್ಲಿಂದಲೇ., ನಾನು ಹುಟ್ಟಿದ್ದು, ಬೆಳೆದಿದ್ದು ಹಳ್ಳಿಯಲ್ಲೇ., ಹಳ್ಳಿ ಜೀವನದ ಲಯವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಈಚೆಗಿನ ವರ್ಷಗಳಲ್ಲಿ ಹಳ್ಳಿಯಿಂದ ಪಟ್ಟಣಕ್ಕೆ ವಲಸೆಯೂ ತೀವ್ರವಾಗಿ ಅಧಿಕಗೊಂಡಿದೆ. ಈ ವಲಸೆಗಾರರಿಗೆ ಸಿಗುವುದು ಆತಂಕಭರಿತ, ನರಕಸದೃಶವಾದ ಕೊಳಚೆ ಪ್ರದೇಶದ ಜೀವನ. ಮೂರು ಹೊತ್ತಿನ ಊಟಕ್ಕೆ ಬೇಕಾದಷ್ಟು ಸಂಪಾದನೆ ಮಾಡುವುದೇ ಅವರಿಗೆ ಒಂದು ಹೋರಾಟವಾಗುತ್ತದೆ. ಪ್ರೀತಿ ಹಾಗೂ ಅಸ್ಮಿತೆಗಳು ಅವರಿಗೆ ದೂರ. ಹಳ್ಳಿಗಳನ್ನು ಸುಧಾರಿಸಿ, ಅಲ್ಲಿ ಜೀವನಕ್ಕೆ ಬೇಕಾದ ಸೌಲಭ್ಯಗಳನ್ನೂ ಸಂಪಾದನೆಯ ಮಾರ್ಗವನ್ನೂ ಒದಗಿಸಿ ಕೊಡುವುದರಿಂದ ಭಾರತದ ಮುಖವನ್ನೇ ಬದಲಿಸಬಹುದು ಎಂದು ನಾನು ನಂಬಿದ್ದೇನೆ. ಇದರಿಂದ ಹಳ್ಳಿಯಿಂದ ನಗರಕ್ಕೆ ವಲಸೆ ನಿಲ್ಲುವುದು, ಆ ಮೂಲಕ ವಲಸೆಗಾರ ಕಾರ್ಮಿಕರ ಸಂಕಷ್ಟಗಳೂ ಕಡಿಮೆಯಾಗುವವು. ಈ ಆಲೋಚನೆಯಿಂದ ಹುಟ್ಟಿದ್ದೇ 'ಪುರ' ಎಂಬ ಕಾರ್ಯಕ್ರಮದಕಲ್ಪನೆ (ಪ್ರೊವೈಡಿಂಗ್ ಅರ್ಬನ್ ಅಮೆನಿಟೀಸ್ ಟು ರೂರಲ್ ಏರಿಯಾಸ್). ಹಳ್ಳಿ ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯಗಳನ್ನು ಒದಗಿಸುವುದೇ ''ಪುರ''.

ಯಾವುದೇ ರಾಜ್ಯವನ್ನು ಅಭಿವೃದ್ಧಿ ಪಡಿಸಬೇಕಿದ್ದರೂ ಅಲ್ಲಿನ ಹಳ್ಳಿಗಳನ್ನು ಅಭಿವೃದ್ಧಿಪಡಿಸಬೇಕು. ಈ ವಿಷಯದಲ್ಲಿ ನೇರ ಅನುಭವವನ್ನು ಪಡೆಯಲು 2002ರಲ್ಲಿ ಭೂಪಾಲದ ನನ್ನ ಭೇಟಿ ವೇಳೆ ಒಂದು ಹಳ್ಳಿ ಪ್ರದೇಶಕ್ಕೆ ಹೋಗಲು ನಿರ್ಧರಿಸಿದೆ. ಸಮರ್ಪಕವಾದ ರಸ್ತೆಯಿಲ್ಲದ, ವಿದ್ಯುತ್ ಸಂಪರ್ಕವೂ ಇಲ್ಲದ ತೋರ್ನಿ ಎಂಬ ಹಳ್ಳಿಗೆ ಹೋಗಲು ನಾವು ನಿರ್ಧರಿಸಿದೆವು. ಆ ಹಳ್ಳಿಗೆ ಹೋಗಬೇಕೆಂದು ನಾನು ತೀರ್ಮಾನಿಸಿದ್ದೇ ತಡ, ರಾಜ್ಯ ಸರಕಾರದ ಅಧಿಕಾರಿಗಳು ಆ ಹಳ್ಳಿಗೆ ಸಂಬಂಧಿಸಿ ಅನೇಕ ಕ್ರಮಗಳನ್ನು ಕೈಗೊಂಡರು. ಮೊದಲನೆಯದಾಗಿ ಆ ಹಳ್ಳಿಗೆ ಹೋಗಲು ಹಲವಾರು ಕಿಲೋಮೀಟರು ಉದ್ದನೆಯ ಪಕ್ಕಾ ಸರ್ವಋತು ರಸ್ತೆಯನ್ನು ನಿರ್ಮಿಸಲಾಯಿತು. ವಿದ್ಯುತ್ ಕೂಡಾ ಆ ಗ್ರಾಮಕ್ಕೆ ಜೆಟ್ ವಿಮಾನದ ವೇಗದಲ್ಲಿ ಬಂತು.

ಆ ಹಳ್ಳಿಗೆ ನನ್ನ ಭೇಟಿಯ ಸಂದರ್ಭದಲ್ಲಿ ಹಳ್ಳಿಗರು ತಾವೇ ನಿರ್ಮಿಸಿದ ಜಲಾನಯನ ನಿರ್ವಹಣೆ ಹಾಗೂ ಜೈವಿಕ ಕೀಟನಾಶಕಗಳ ಬಳಕೆಯನ್ನು ಹೆಮ್ಮೆಯಿಂದ ತೋರಿಸಿದರು. ತೋರ್ನಿ ಗ್ರಾಮಸ್ಥರ ಸಾಧನೆಯನ್ನು ಆ ಜಿಲ್ಲೆಯ

ಬೇರೆ ಹಳ್ಳಿಗರಿಗೂ ಪ್ರಚಾರ ಮಾಡುವಂತೆ ನಾನು ಜಿಲ್ಲೆಯ ಅಧಿಕಾರಿಗಳಿಗೆ ಹೇಳಿದೆ. ಇದರಿಂದ ಇತರ ಹಳ್ಳಿಗಳೂ ಈ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುವುದು ಎಂಬುದು ನನ್ನ ನಂಬಿಕೆ. ಹಳ್ಳಿಗಳನ್ನು ಒಂದು ಗುಂಪಾಗಿಸಿ ಅನುಕೂಲಕರವಾದ ಒಂದು ಸ್ಥಳದಲ್ಲಿ ಆರೋಗ್ಯ ಸೇವೆ, ಶಿಕ್ಷಣ ಸಂಸ್ಥೆಗಳು, ತರಕಾರಿ, ಹಣ್ಣು ಮುಂತಾದ ಬೇಗ ಕೆಡುವ ಬೆಳೆಗಳಿಗೆ ಸಂಗ್ರಹಾಗಾರ ಇತ್ಯಾದಿಗಳನ್ನು ಒದಗಿಸುವುದಲ್ಲದೆ ಈ ಸಂಕೀರ್ಣದ ಸುತ್ತಲಿನ ಎಲ್ಲಾ ಹಳ್ಳಿಗಳಿಂದಲೂ ಉತ್ತಮ ರಸ್ತೆ ವ್ಯವಸ್ಥೆ ಮಾಡುವಂತೆ ನಾನು ರಾಜ್ಯ ಸರಕಾರಕ್ಕೆ ಸಲಹೆ ಮಾಡಿದೆ. ಈ ಸಂಕೀರ್ಣದಲ್ಲಿ ಸಂಸ್ಕರಣೆಯಂತಹ ಉದ್ಯಮಗಳನ್ನು ಸ್ಥಾಪಿಸಿದರೆ ಜನರಿಗೆ ಉದ್ಯೋಗವಲ್ಲದೆ ಬೆಳೆದ ಪದಾರ್ಥಗಳಿಗೆ ಮಾರುಕಟ್ಟೆಯೂ ದೊರೆತಂತಾಯಿತು. ಈಚೆಗಿನ ದಿನಗಳಲ್ಲಿ ಬೆಳೆಗಳು ಹಾಗೂ ಮರದ ಮೇಲೆ ಆಧಾರಿತವಾದ ಉದ್ಯಮಗಳು ಜನರ ಬೇಡಿಕೆಯ ಕಾರಣದಿಂದ ತೀವ್ರವಾಗಿ ಬೆಳೆಯುತ್ತಿವೆ. ಇವುಗಳಿಂದ ಉಂಟಾಗುವ ಉತ್ಪನ್ನಗಳ ಸಂಖ್ಯೆಯೂ ತುಂಬಾ ಜಾಸ್ತಿಯಾಗಿದೆ.

ಮಧ್ಯಪ್ರದೇಶದ ಎಲ್ಲಾ ಹಳ್ಳಿಗಳಲ್ಲಿರುವ ಎಲ್ಲಾ ಜಲಾಶಯ, ಕೆರೆ ಇತ್ಯಾದಿಯನ್ನು ಉಪಗ್ರಹ ಚಿತ್ರಗಳ ನೆರವಿನಿಂದ ಸಮೀಕ್ಷೆಮಾಡಿ, ಹೂಳನ್ನು ಎತ್ತಿ, ಶುಚಿಗೊಳಿಸಿ ನೀರು ಒಳಬರಲು ಹಾಗೂ ಹೊರ ಹೋಗಲು ಸೂಕ್ತವಾದ ವ್ಯವಸ್ಥೆಯನ್ನು ಮಾಡುವಂತೆ ನಾನು ಮುಖ್ಯಮಂತ್ರಿಗೂ ಜಿಲ್ಲೆಯ ಅಧಿಕಾರಿಗಳಿಗೂ ಸೂಚಿಸಿದೆ.

ತೋರ್ನಿಯ ಮಿಡಲ್‌ಸ್ಕೂಲನ್ನು ಹೈಸ್ಕೂಲು ಆಗಿ ಭಡ್ತಿಗೊಳಿಸುವಂತೆ ಅಲ್ಲಿನ ಯುವಕರು ಮನವಿ ಮಾಡಿಕೊಂಡರು. ಹಾಗೆ ಮಾಡಲು ಮಧ್ಯಪ್ರದೇಶ ಸರಕಾರ ಒಪ್ಪಿಕೊಂಡಿತು.

ತೋರ್ನಿಯ ನನ್ನ ಭೇಟಿ ನನಗೆ ಹಲವು ಸಮಸ್ಯೆಗಳ ದರ್ಶನ ಮಾಡಿಸಿತು. ಗ್ರಾಮೀಣ-ನಗರ ಅಂತರ ಹೋಗಲಾಡಿಸಲು ಮುಖ್ಯವಾಗಿ ಆಗಬೇಕಾದ್ದು ಸಂಪರ್ಕ ಸೌಲಭ್ಯಗಳ ಸುಧಾರಣೆ ಎಂಬುದನ್ನೂ ಅದು ತೋರಿಸಿಕೊಟ್ಟಿತು.

ಭಾರತದ ಅಭಿವೃದ್ಧಿಗೆ ಹಳ್ಳಿಗಳ ಅಭಿವೃದ್ಧಿ ಅತ್ಯಂತ ಅಗತ್ಯವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುವರು. ಹಳ್ಳಿಗಳ ಉದ್ಧಾರ ಎಂದರೆ ಏನು?


ಭೌತ ಹಾಗೂ ವಿದ್ಯುನ್ಮಾನ ಸಂಪರ್ಕಗಳು ದೊರೆತರೆ ''ಜ್ಞಾನ ಸಂಪರ್ಕ'' ದೊರೆತಂತಾಯಿತು. ಇದರಿಂದ ಅನೇಕ ಉಪಯೋಗಗಳಿವೆ- ಉತ್ಪಾದಕತೆಯನ್ನು ಜಾಸ್ತಿ ಮಾಡುವ ಸಾಮರ್ಥ್ಯ ಬರುವುದು. ಉತ್ಪಾದಿತ ವಸ್ತುವಿಗೆ ಮಾರುಕಟ್ಟೆ ಹಿಡಿಯಲು ಸಾಧ್ಯವಾಗುವುದು. ಗುಣಮಟ್ಟದ ಬಗ್ಗೆ ಅರಿವು ಉಂಟಾಗುವುದು. ತಮ್ಮಂತೆಯೇ ಇರುವವರ ಜತೆ ಸಂಪರ್ಕ ಸಾಧ್ಯವಾಗಿ ಹಿತಾಸಕ್ತಿ ರಕ್ಷಣೆಗೆ ಅನುಕೂಲವಾಗುವುದು. ಅತ್ಯುತ್ತಮ ಉಪಕರಣಗಳನ್ನು ಪಡೆಯಲು ಸಾಧ್ಯವಾಗುವುದು. ಅಲ್ಲದೆ ವಿರಾಮದ ವೇಳೆಯ ಕಾರಣದಿಂದ ಜೀವನದ ಸೌಲಭ್ಯ-ಸೌಖ್ಯಗಳನ್ನು ಹೆಚ್ಚಿಸಲು ಸಾಧ್ಯವಾಗುವುದು. ಆದ್ದರಿಂದ ಇದನ್ನು ನಾವು ''ಜ್ಞಾನ-ಸಂಪರ್ಕ'' ಎಂದು ಕರೆಯುತ್ತೇವೆ.

ಈ ಮೇಲಿನ ಸಂಪರ್ಕಗಳ ಸ್ಥಾಪನೆ ಆದಾಗ ಹಳ್ಳಿಗರ ಸಂಪಾದನೆಯ ಸಾಮರ್ಥ್ಯವೂ ಹೆಚ್ಚುವುದು. ಹೀಗಾಗಿ ''ಪುರ''ವನ್ನು ಒಂದು ಕಾಣ್ಕೆಯಾಗಿ ಇಟ್ಟುಕೊಂಡು ಅಭಿವೃದ್ಧಿ ಪಡಿಸಿದರೆ ಹಳ್ಳಿಗಳನ್ನು ಸಂಪನ್ನವಾದ ಜ್ಞಾನ ಕೇಂದ್ರಗಳಾಗಿ ಬೆಳೆಸುವ ಮೂಲಕ ಹಳ್ಳಿಗರು ಉದ್ಯಮಶೀಲರಾಗಿ ಉದಯಿಸುವುದನ್ನು ಕಾಣಬಹುದು.

**ಶಬ್ದಗಳ ಅರ್ಥ:**

ವಲಸೆ - ಸ್ಥಳಾಂತರ; ಕೊಳಚೆ - ಹೊಲಸು; ಸಮರ್ಪಕ - ಯೋಗ್ಯ; ಸಂಕೀರ್ಣ - ಮಳಿಗೆ; ಬಡ್ತಿಗೊಳಿಸು - ಮೇಲ್ದರ್ಜೆಗೇರಿಸು; ಆಸ್ಮಿತಾ - ಅಹಂಕಾರ

**ಕೃತಿ:1 ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**



**ಕೃತಿ: 2)** **ಅಂತರ್ಜಾಲ ಹೆಚ್ಚಾಗಲು ನೀವು ಕೈಕೊಳ್ಳಬಹುದಾದ ವಿವಿಧ ಕ್ರಮಗಳನ್ನು ಮತ್ತು ಸಲಹೆಗಳನ್ನು ಬರೆಯಿರಿ.**

**ಕೃತಿ: 3)** **ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

i) ಪುರ ಕಾರ್ಯಕ್ರಮ ಎಂದರೇನು?

ii) ಜೆಟ್ ವಿಮಾನದ ವೇಗದಲ್ಲಿ ಬಂದ ಸೌಲಭ್ಯ ಯಾವುದು?

iii) ಯುವಕರು ಯಾವ ಮನವಿಯನ್ನು ಮಾಡಿಕೊಂಡರು ?

iv) ನಿಜವಾದ ಭಾರತ ಎಲ್ಲಿದೆ?

**ಕೃತಿ: 4)** ಅ) 'ಕೊಳಚೆ ಪ್ರದೇಶದಲ್ಲಿಯ ಜನಜೀವನ' ಈ ಶಬ್ದ ಸಮೂಹದಿಂದ ಅಕ್ಷರಗಳನ್ನು ಬಳಸಿಕೊಂಡು ಹೊಸ ಶಬ್ದಗಳನ್ನು ಬರೆಯಿರಿ.


**ಕೃತಿ: 5)** **ಉಪಗ್ರಹಗಳಿಂದ ಆಗುತ್ತಿರುವ ಲಾಭಗಳ ಕುರಿತು ರೇಖಾ ವೃಕ್ಷ ರಚಿಸಿರಿ.**

**ಕೃತಿ: 6)** **ಡಾ|| ಕಲಾಂ ಅವರ ತೋರ್ನಿ ಹಳ್ಳಿಯ ಭೇಟಿಗಿಂತ ಮುಂಚೆ ಹಳ್ಳಿಯ ಪರಿಸ್ಥಿತಿಯಕುರಿತು ನಿಮ್ಮ ಸ್ನೇಹಿತರೊಂದಿಗೆ ಒಂದು ಸಂಭಾಷಣೆಯನ್ನು ರಚಿಸಿರಿ.**

**ಕೃತಿ: 7)** **'ನನ್ನ ನೆಚ್ಚಿನ ವಿಜ್ಞಾನಿ' ಈ ವಿಷಯ ಕುರಿತು 10 ಸಾಲುಗಳಲ್ಲಿ ನಿಬಂಧ ಬರೆಯಿರಿ**

**ಕೃತಿ: 8)** **ಆದರ್ಶ ಗ್ರಾಮದಲ್ಲಿ ಇರಬೇಕಾದ ಸೌಲಭ್ಯಗಳನ್ನು ಕೆಳಗಿನ ಜಾಲಾಕೃತಿಯಲ್ಲಿಬರೆಯಿರಿ.**

**ಕೆಳಗೆ ಕೊಟ್ಟಿರುವ ಆದರ್ಶಗ್ರಾಮದಲ್ಲಿ ಇರಬೇಕಾದ ಸೌಲಭ್ಯಗಳನ್ನು ನಿರೀಕ್ಷಿಸಿರಿ. ಅವುಗಳಲ್ಲಿ ನಿಮ್ಮ ಗ್ರಾಮದಲ್ಲಿರುವ ಸೌಲಭ್ಯಗಳನ್ನು ಆಯ್ದು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ.**




**ಆದರ್ಶ ಗ್ರಾಮದಲ್ಲಿ ಇರಬೇಕಾದ ಸೌಲಭ್ಯಗಳು**

| | | | |
|---|---|---|---|
| ವಾಚನಾಲಯ, | ಮಾರುಕಟ್ಟೆ, | ಶಾಲೆ, | ವಾರದ ಮಾರುಕಟ್ಟೆ, |
| ಉದ್ಯಾನವನ, | ವಿದ್ಯುತ್ ಸಂಪರ್ಕ, | ಕಾಲೇಜು, | ಹಾಲು ವಿನಿಮಯ ಕೇಂದ್ರ, |
| ಸಂಸ್ಕರಣಾ ಘಟಕ, | ಗ್ರಾಮಪಂಚಾಯತಿ, | ಬ್ಯಾಂಕು, | ವಾಹನ ಸೌಕರ್ಯ, |
| ಮಾಹಿತಿ ತಂತ್ರಜ್ಞಾನ ಘಟಕ, | ಶುದ್ಧ ಕುಡಿಯುವ ನೀರಿನ ಘಟಕ, | ಪೋಸ್ಟ ಆಫೀಸು, | ಕುಟಿರುದ್ಯೋಗಗಳು, |
| ಅತಿಥ್ಯಾಲಯ, | ದೂರಧ್ವನಿ ಕೇಂದ್ರ, | ಬಸ್ ನಿಲ್ದಾಣ, | ಗ್ರಾಮಸ್ವಚ್ಛತೆ, |
| ಉತ್ತಮವಾದ ರಸ್ತೆಗಳು, | ಆಸ್ಪತ್ರೆ, | ಎ.ಟಿ.ಎಮ್. ವ್ಯವಸ್ಥೆ, | ವೃಕ್ಷಸಂವರ್ಧನೆ, |

# 5. ಬಾಹುಬಲಿ

- ವಾಗೇಶ್ವರೀ ಶಿವರಾಮ್

**ಲೇಖಕರ ಪರಿಚಯ :** ಶ್ರೀಮತಿ ವಾಗೇಶ್ವರಿ ಶಿವರಾಮ್ ಅವರು ಬಾಲಕರಿಗಾಗಿ ಕಥೆಗಳನ್ನು ಅದರಲ್ಲೂ ಪೌರಾಣಿಕ ಮತ್ತು ಐತಿಹಾಸಿಕ ಕಥೆಗಳನ್ನು ಬರೆಯುವಲ್ಲಿ ಸಿದ್ಧ ಹಸ್ತರು. ಅವರು ತಮ್ಮ ಕಥೆಗಳಲ್ಲಿ ನಮ್ಮ ದೇಶದ ಆದರ್ಶ ಸ್ತ್ರೀ-ಪುರುಷರ ಉಜ್ವಲ ವ್ಯಕ್ತಿತ್ವವನ್ನು ಅತ್ಯಂತ ಸರಳ ಹಾಗೂ ಸುಂದರ ಭಾಷೆಯಲ್ಲಿ ನಿರೂಪಿಸಿದ್ದಾರೆ ಮಕ್ಕಳಲ್ಲಿ ಜ್ಞಾನ, ಪ್ರತಿಭೆ ಇದ್ದೇ ಇರುತ್ತದೆ. ಅದು ಸರಿಯಾದ ರೀತಿಯಲ್ಲಿ ಬಳಕೆಯಾಗಬೇಕು. ಉತ್ತಮ ನಡತೆ, ಆತ್ಮವಿಶ್ವಾಸ, ಅದಮ್ಯ ಶಕ್ತಿ ಉಂಟಾಗಿ ಜೀವನದ ಸಮಸ್ಯೆಗಳನ್ನು ಎದುರಿಸುವ ದೃಢತೆ ಬರಬೇಕೆಂಬುದು ಶ್ರೀಮತಿ ವಾಗೇಶ್ವರಿ ಶಿವರಾಮ್ ಅವರ ಸದಾಶಯ. ಪ್ರಸ್ತುತ ಬಾಹುಬಲಿ ಬಾಲಕಥೆಯನ್ನು ಅವರು ಬರೆದ ಬಾಲಕಥಾ ಮಾಲಾ'ದಿಂದ ಆಯ್ದುಕೊಳ್ಳಲಾಗಿದ್ದು ಬಾಹುಬಲಿಯ ತ್ಯಾಗ ಗುಣವನ್ನು ಮನೋಜ್ಞವಾಗಿ ನಿರೂಪಿಸಿದ್ದಾರೆ.

ವೃಷಭನಾಥ ಎಂಬ ರಾಜ ಇದ್ದ. ಅಯೋಧ್ಯೆ ಆತನ ರಾಜಧಾನಿ. ಅವನಿಗೆ ಇಬ್ಬರು ರಾಣಿಯರಿದ್ದರು. ಹಿರಿಯ ರಾಣಿ ಯಶಸ್ವತಿ ದೇವಿ, ಕಿರಿಯ ರಾಣಿ ಸುನಂದಾ ದೇವಿ. ಈತನ ಆಳ್ವಿಕೆಯಲ್ಲಿ ಪ್ರಜೆಗಳಸುಖಕ್ಕೆ ಯಾವ ಕೊರತೆಯೂ ಇರಲಿಲ್ಲ.

ಕಾಲಕ್ರಮದಲ್ಲಿ ಹಿರಿಯ ರಾಣಿಗೆ ಗಂಡು ಮಕ್ಕಳಾದರು. ಅವರಲ್ಲಿ ಹಿರಿಯವನು ಭರತ. ಆನಂತರ ಸುಂದರಿ ಎಂಬ ಒಂದೇ ಒಂದು ಹೆಣ್ಣುಮಗು. ಕಿರಿಯ ರಾಣಿಗೆ ಒಂದು ಗಂಡು ಮಗು, ಆ ಮಗುವೇ ಬಾಹುಬಲಿ. ಮತ್ತೊಂದು ಹೆಣ್ಣು ಮಗು, ಬ್ರಾಹ್ಮೀ ಎಂದು ಹೆಸರು.

ಮಕ್ಕಳು ಬೆಳೆದು ಮೂರು-ನಾಲ್ಕು ವರ್ಷದವರಾದರು. ಸ್ವತಃ ರಾಜನೇ ತನ್ನ ಮಕ್ಕಳಿಗೆ ವಿದ್ಯೆ ಹೇಳಿಕೊಟ್ಟ. ಎಲ್ಲ ಮಕ್ಕಳೂ ಶ್ರದ್ಧೆಯಿಂದ ಪಾಠ ಕಲಿತು ಬುದ್ಧಿವಂತರಾದರು.

ಭರತ ಬಾಲಕನಾಗಿದ್ದಾಗಲೇ ಅವನಲ್ಲಿ ಮುಂದೆ ಚಕ್ರವರ್ತಿಯಾಗುವ ಲಕ್ಷಣಗಳೆಲ್ಲಾ ಕಾಣುತ್ತಿದ್ದವು.

ಬಾಹುಬಲಿ ಹೆಸರಿಗೆ ತಕ್ಕಂತೆಯೇ ಇದ್ದ. ಮಲ್ಲಯುದ್ಧದಲ್ಲಿ ಎತ್ತಿದ ಕೈ. ತುಂಬಾ ಧೈರ್ಯಶಾಲಿ.

ಬಾಲಕರು ಬೆಳೆದು ಯುವಕರಾದರು. ವೃಷಭನಾಥ ಹಿರಿಯ ಮಗನಾದ ಭರತನನ್ನು ಅಯೋಧ್ಯಾನಗರದ ರಾಜನನ್ನಾಗಿ ಮಾಡಿದ. ಬಾಹುಬಲಿ ಪೌದನಪುರದ ರಾಜನಾದ. ಉಳಿದೆಲ್ಲ ಮಕ್ಕಳಿಗೂ ಸಣ್ಣ ಸಣ್ಣ ರಾಜ್ಯಗಳನ್ನು ಹಂಚಿದ. 'ಪ್ರಜೆಗಳನ್ನು ಪ್ರೀತಿಸುತ್ತಾ, ನ್ಯಾಯವಾಗಿ ರಾಜ್ಯವಾಳುತ್ತ ಒಳ್ಳೆಯ ಹೆಸರನ್ನು ಪಡೆಯಿರಿ' ಎಂದು ಉಪದೇಶಿಸಿದ. ಅವರನ್ನು ಹರಸಿ, ತಾನು ಎಲ್ಲವನ್ನೂ ತ್ಯಾಗ ಮಾಡಿ ತಪಸ್ಸಿಗೆ ಹೊರಟುಹೋದ.

ಮಕ್ಕಳೆಲ್ಲರೂ ತಮ್ಮ ತಮ್ಮ ರಾಜ್ಯಗಳಲ್ಲಿ ಚೆನ್ನಾಗಿ ಆಡಳಿತ ನಡೆಸಿದರು. ಒಂದು ದಿನ ಭರತ ತನ್ನ ಒಡ್ಡೋಲಗದಲ್ಲಿ ಸಭೆ ನಡೆಸುತ್ತಿದ್ದಾನೆ. ದೂತನೊಬ್ಬ ಓಡಿಬಂದು ಸಂತೋಷದ ಸುದ್ದಿಯನ್ನು ಹೇಳಿದ. 'ರಾಜನ ಆಯುಧ ಶಾಲೆಯಲ್ಲಿ 'ಚಕ್ರರತ್ನ' ಹುಟ್ಟಿದೆ!' ರಾಜನಿಗೆ ಸಂತೋಷ, ಆಶ್ಚರ್ಯ.

ಆ ಚಕ್ರರತ್ನ ಸಾಮಾನ್ಯವಾದುದಲ್ಲ. ಅದರ ಶಕ್ತಿಯಿಂದ ಎಷ್ಟೇ ದೊಡ್ಡ ಶತ್ರುವನ್ನಾದರೂ ಸುಲಭವಾಗಿ ಗೆಲ್ಲಬಹುದು. ಭರತ ಮುಂದೆ ಚಕ್ರವರ್ತಿಯಾಗುವ ಶುಭ ಸೂಚನೆಯಿದು.

ಭರತ ಹೊಳೆಯುತ್ತಿದ್ದ ಚಕ್ರರತ್ನವನ್ನು ಭಕ್ತಿಯಿಂದ ಪೂಜಿಸಿದ. ಇಡೀ ಭೂಮಂಡಲವನ್ನೇ ಗೆದ್ದು ತಾನು ಚಕ್ರವರ್ತಿಯಾಗಬೇಕೆಂಬ ಆಶೆ ಉಂಟಾಯಿತು.

ರಾಜನ ಚತುರಂಗಬಲ ವೆಲ್ಲ ಸಿದ್ಧವಾಯಿತು. ಭರತ ದೇವರಿಗೆ ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದ. ರಣಕಹಳೆ ಮೊಳಗಿತು. ತನ್ನ ದಿವ್ಯ ರಥವನ್ನೇರಿ ಸಕಲ ಸೈನ್ಯದೊಡನೆ ದಿಗ್ವಿಜಯಕ್ಕೆ ಹೊರಟ.

ಎಲ್ಲರಿಗೂ ದಾರಿ ತೋರಿಸುತ್ತಾ ಮುಂದೆ ಮುಂದೆ ಚಕ್ರರತ್ನ ಸಾಗಿತು. ಎಲ್ಲರೂ ಅದರ ಹಿಂದೆ ನಡೆದರು. ಎದುರಾದ ರಾಜರೆಲ್ಲ ಸೋಲೊಪ್ಪಿಕೊಂಡು, ಕಪ್ಪಕಾಣಿಕೆಗಳನ್ನು ಕೊಟ್ಟು ರಾಜನನ್ನು ಗೌರವಿಸಿದರು. ಭರತನಿಗೆ ಸೋಲೆಂಬುದೇ ಇಲ್ಲ. ಚಕ್ರರತ್ನದ ಸಹಾಯದಿಂದ ಭೂಮಂಡಲವನ್ನೆಲ್ಲ ಗೆದ್ದ ಭರತ 'ಚಕ್ರವರ್ತಿ' ಎನಿಸಕೊಂಡ. ಸೈನ್ಯವೆಲ್ಲಾ ಜಯಭೇರಿ ಬಾರಿಸುತ್ತಾ ವಿಜಯಘೋಷದೊಡನೆ ಅಯೋಧ್ಯೆಯ ಕಡೆಗೆ ನಡೆಯಿತು.

ಭರತನಿಗೆ ''ಇಡೀ ಭೂಮಂಡಲದ ಚಕ್ರವರ್ತಿ ನಾನು. ತನ್ನಷ್ಟು ಬಲಶಾಲಿ, ಪರಾಕ್ರಮಿ ಬೇರಾರು ಇಲ್ಲ.

ತಿನ್ನಂಥ ಶ್ರೇಷ್ಠ ಚಕ್ರವರ್ತಿ ಹಿಂದೆ ಇರಲಿಲ್ಲ ಮುಂದೆ ಬರುವುದಿಲ್ಲ'' ಎಂಬ ಅಹಂಕಾರ ಹೆಮ್ಮೆ ಉಂಟಾಯಿತು. ವಿಜಯೋತ್ಸಾಹದಿಂದ ರಾಜಧಾನಿಗೆ ಹಿಂತಿರುಗಿದ.

ಪ್ರಜೆಗಳೆಲ್ಲಸಂತೋಷದಿಂದ, ದಿಗ್ವಿಜಯದಿಂದ ಬರುತ್ತಿದ್ದ ಚಕ್ರವರ್ತಿಯನ್ನುಸ್ವಾಗತಿಸಲು ಸಕಲ ಸಿದ್ಧತೆಗಳೊಡನೆ ಕಾದುನಿಂತರು.

ಭರತನ ಸೈನ್ಯ ರಾಜಧಾನಿಯ ಬಳಿಗೆ ಬಂದಿತು. ಇನ್ನೇನು ಎಲ್ಲರೂ ಪುರ ಪ್ರವೇಶ ಮಾಡಬೇಕು, ಅಷ್ಟರಲ್ಲಿ, ಮುಂದೆ ಮುಂದೆ ಸಾಗುತ್ತಿದ್ದ ಚಕ್ರರತ್ನ ಥಕ್ಕನೆ ನಿಂತಿತು!

ಹಠಾತ್ತನೆ ನಿಂತ ಚಕ್ರರತ್ನ ಕಂಡು ಎಲ್ಲರಿಗೂ ಆಶ್ಚರ್ಯವೋ ಆಶ್ಚರ್ಯ. ಭರತನಿಗಂತೂ ಕಳವಳ, ಚಿಂತೆ, ಆಶ್ಚರ್ಯ. ತಾನು ಗೆಲ್ಲದ ಒಬ್ಬ ಶತ್ರು–ಇದ್ದಾನೆ ಎಂದು ಈಗ ಸ್ಪಷ್ಟವಾಯಿತು.

ಕೂಡಲೇ ಭರತ ಪುರೋಹಿತರನ್ನು ಕರೆಸಿ ಚಕ್ರರತ್ನ ಬಾಗಿಲಲ್ಲೇ ನಿಲ್ಲಲು ಕಾರಣವೇನೆಂದು ಕೇಳಿದ.

ಪುರೋಹಿತರು ಯೋಚಿಸಿ ಉತ್ತರಿಸಿದರು. ''ಮಹಾರಾಜ, ಚಕ್ರರತ್ನದಸಹಾಯದಿಂದ ಎಂಥ ವೈರಿಯನ್ನಾದರೂ ಸೋಲಿಸಬಹುದು. ನಿನಗೆ ಹೊರಗಿನ ಶತ್ರುಗಳಾರೂ ಉಳಿದಿಲ್ಲ. ಇದ್ದರೆ ಅವರು ನಿನ್ನ ಸ್ವಂತ ತಮ್ಮಂದಿರು ಮಾತ್ರ. ಭರತನಿಗೇಕೆ ಶರಣಾಗಬೇಕು ಎಂದು ಅವರು ಗರ್ವದಿಂದಿದ್ದಾರೆ'' ಎಂದರು.

ಅದನ್ನು ಕೇಳಿದ ಭರತನಿಗೆ ಕೋಪ ತಡೆಯಲಾಗಲಿಲ್ಲ. ಕೂಡಲೇ, ''ಎಲ್ಲರೂ ತನಗೆ ಶರಣಾಗತರಾಗಬೇಕು, ತಪ್ಪಿದರೆ ಯುದ್ಧಕ್ಕೆ ಸಿದ್ಧರಾಗಬೇಕು'' ಎಂಬ ರಾಜ ಶಾಸನವನ್ನು ಬರೆಸಿ ತನ್ನೆಲ್ಲ ತಮ್ಮಂದಿರ ಬಳಿಗೆ ಕಳುಹಿಸಿದ.

ಭರತನ ಎಲ್ಲಾ ತಮ್ಮಂದಿರಿಗೂ ರಾಜಾಜ್ಞೆ ತಲುಪಿತು. ಎಲ್ಲ ತಮ್ಮಂದಿರು ರಾಜಶಾಸನವನ್ನು ನೋಡಿ, ''ತಂದೆಯ ಸಮಾನ ಎಂದು ಬೇಕಾದರೆ ಹಿರಿಯಣ್ಣನಿಗೆ ಗೌರವಿಸಬಹುದು. ಆದರೆ ಚಕ್ರವರ್ತಿ ಎಂದು ಅವನಿಗೆ ಶರಣಾಗಲಾರೆವು'' ಎಂದು ಕೊಂಡರು. ಅವರಿಗೆ ''ಕೇವಲ ರಾಜ್ಯದ ಆಸೆಗಾಗಿ ಅಣ್ಣನೊಡನೆ ಏಕೆ ಕಾದಾಡಬೇಕು'' ಎನ್ನಿಸಿತು. ಜೀವನದಲ್ಲೆ ವೈರಾಗ್ಯ ಮೂಡಿತು. ಎಲ್ಲವನ್ನೂ ತ್ಯಾಗಮಾಡಿ, ತಂದೆಯೊಡನೆ ತಪಸ್ಸು ಮಾಡಲು ಹೊರಟುಹೋದರು.

ಪೌದನಪುರಕ್ಕೆ ಹೋದ ದೂತ ಬಾಹುಬಲಿಯನ್ನು ನೋಡಿದ. ನಮಸ್ಕರಿಸಿ, ಭರತನ ಸಂದೇಶವನ್ನು ತಿಳಿಸಿದ.

ಆವರೆಗೆ ಅಣ್ಣ ಭರತ ಚಕ್ರವರ್ತಿಯ ಪರಾಕ್ರಮವನ್ನು ಕೇಳಿ ಬಾಹುಬಲಿ ಬಹು ಸಂತೋಷದಿಂದಿದ್ದ. ದೂತನ ರಾಜಾಜ್ಞೆಯನ್ನು ಕೇಳಿ ಮಹಾ ಅಭಿಮಾನಿಯೂ ಬಲಶಾಲಿಯೂ ಆದ ಆತ ಕೋಪದಿಂದ ಕೆಂಡವಾದ. ''ಭರತೇಶ ಇಡೀ ಭೂ ಮಂಡಲಕ್ಕೇ ಚಕ್ರವರ್ತಿಯಾದರೂ ನಮಗಲ್ಲ. ತಂದೆಯಿಂದ ಪಡೆದ ರಾಜ್ಯದಲ್ಲಿನಾನಿರಲು ಅವನದೇನು ಹಂಗು? ನಾನೆಂದಿಗೂ ಅವನ ಅಡಿಯಾಳಾಗಲಾರೆ. ಅಗತ್ಯವಾದರೆ ಯುದ್ಧಕ್ಕೆ ಸಿದ್ಧ'' ಎಂದು ಹೇಳಿದ.

ದೂತ ಬಾಹುಬಲಿಯ ಉತ್ತರವನ್ನು ಭರತನಿಗೆ ತಿಳಿಸಿದ.

ಇದೇ ಉತ್ತರವನ್ನು ನಿರೀಕ್ಷಿಸಿದ್ದ ಭರತ, ತನ್ನ ಸೈನ್ಯದೊಡನೆ ಪೌದನ ಪುರದತ್ತ ಹೊರಟ. ಮುಂದೆ ಚಕ್ರರತ್ನ ಹೋಗುತ್ತಿತ್ತು.

ಬಾಹುಬಲಿ ತನ್ನ ಸೈನ್ಯದೊಡನೆ ಯುದ್ಧಕ್ಕೆ ಸಿದ್ಧನಾಗಿ ನಿಂತ. ಎರಡು ಕಡೆಯ ಸೈನ್ಯಗಳು ಹೋರಾಡಲು ಸಿದ್ಧವಾಗಿ ನಿಂತವು.

ಎರಡೂ ಕಡೆಯ ಮಂತ್ರಿಗಳು ಸಮಾಲೋಚಿಸಿದರು. ''ಯುದ್ಧವೆಂದರೆ ಸಾವು, ನೋವು, ಕಷ್ಟ, ನಷ್ಟ. ಇದನ್ನು ತಪ್ಪಿಸಲು ಅಣ್ಣ ತಮ್ಮಂದಿರಲ್ಲೇ ಧರ್ಮ ಯುದ್ಧ ಏರ್ಪಡಿಸಿದರೆ ಈ ದುರಂತ ತಪ್ಪುವುದು.'' ಇವರಿಬ್ಬರಲ್ಲೇ ಸೋಲು ಗೆಲುವು ನಿರ್ಣಯವಾದರೆ ಎಲ್ಲರಿಗೂ ಹಿತ–ಎಂಬ ತೀರ್ಮಾನಕ್ಕೆ ಬಂದರು.

ಮಂತ್ರಿಗಳಿಬ್ಬರೂಧರ್ಮಯುದ್ಧ ಮಾಡುವಂತೆ ಭರತ, ಬಾಹುಬಲಿಗಳ ಮನವೊಲಿಸಿದರು. ಮೊದಲು ತಮ್ಮ ತಮ್ಮ ಸೈನ್ಯದ ಶಕ್ತಿ ಪ್ರದರ್ಶನ ಮಾಡಬೇಕೆಂಬ ಆಸೆ ಇಬ್ಬರಿಗೂ ಇತ್ತು. ಹಿರಿಯರಮಾತು ಮೀರಲಾದರೆ ಇಬ್ಬರೂ ಒಪ್ಪಿದರು.

ರಣಕಹಳೆ ಮೊಳಗಿತು. ಒಬ್ಬರಿಗಿಂತ ಒಬ್ಬರು ಮಹಾಪರಾಕ್ರಮಿಗಳಾದ ಭರತ–ಬಾಹುಬಲಿಗಳಿಬ್ಬರಿಗೂ ಪರಸ್ಪರ ಯುದ್ಧ ಆರಂಭವಾಯಿತು.

ಧರ್ಮಯುದ್ಧದಲ್ಲಿ ಮೊದಲು ದೃಷ್ಟಿಯುದ್ಧ. ಒಬ್ಬರನೊಬ್ಬರು ರೆಪ್ಪೆ, ಕಣ್ಣುಗುಡ್ಡೆ ಆಡಿಸದೆ ಒಂದೇ ಸಮನೆ ನೋಡುತ್ತಿರಬೇಕು. ಯಾರ ಕಣ್ಣುಗುಡ್ಡೆ ಮೊದಲು ಚಲಿಸುವುದೊ ಅವರು ಸೋತಂತೆ.

ಭರತ–ಬಾಹುಬಲಿಗಳು ಒಬ್ಬರನೊಬ್ಬರು ದಿಟ್ಟಿಸಿ ನೋಡತೊಡಗಿದರು. ಕೊನೆಗೆ ಬಾಹುಬಲಿಗೆ ಗೆಲುವಾಯಿತು.

ಎರಡನೆಯದು ಜಲಯುದ್ಧ. ಪರಸ್ಪರ ಮೈಮೇಲೆ ನೀರು ಎರುಚುವುದು. ಇಬ್ಬರು ಸಹೋದರರೂ ಸರೋವರ ಹೊಕ್ಕರು. ಸೋತ ಸಿಟ್ಟಿನಿಂದ ಭರತ ಎಷ್ಟೇ ಜೋರಾಗಿ ಬೀಸಿ ಬೀಸಿ ನೀರನ್ನು ಎರಚಿದರೂ, ಎತ್ತರವಿದ್ದ ಬಾಹುಬಲಿಯ ಎದೆಯ ಮಟ್ಟಕ್ಕಷ್ಟೇ ಹೋಗುತ್ತಿತ್ತು. ಬಾಹುಬಲಿ ಜೋರಾಗಿ ಚಿಮ್ಮಿದ ನೀರು ಭರತದ ಮುಖಕ್ಕೆ, ತಲೆಗೆ ಅಪ್ಪಳಿಸುತ್ತಿತ್ತು. ಅವನ ಹೊಡೆತದ ರಭಸವನ್ನು ತಾಳಲಾರದೆ ಭರತೇಶ ಸೋಲಬೇಕಾಯಿತು.

ಕೊನೆಯದಾಗಿ ಮಲ್ಲಯುದ್ಧ ಪ್ರಾರಂಭವಾಯಿತು. ಭರತ ಕೋಪ, ಛಲದಿಂದ ಕುಸ್ತಿಯಾಡುವ ಜಾಗಕ್ಕೆ ಇಳಿದಿದ್ದ. ಆದರೇನು? ಬಾಹುಬಲಿಯದೇ ಕೈ ಮೇಲಾಯಿತು. ಕೊನೆಗೆ ಒಮ್ಮೆ ಬಾಹುಬಲಿ ಭರತನನ್ನು ಮೇಲಕ್ಕೆ ಎತ್ತಿದ. ನೋಡುತ್ತಿದ್ದವರೆಲ್ಲ ಉಸಿರು ಬಿಗಿಹಿಡಿದು, ರೆಪ್ಪೆ ಮಿಟುಕಿಸದೆ ಗಮನಿಸುತ್ತಿದ್ದರು.

ಬಾಹುಬಲಿ ಅಣ್ಣನನ್ನು ಮೆಲ್ಲನೆ ಕೆಳಗಿಳಿಸಿದ. ನೆಲ ತಾಕಿದ ಭರತನಿಗೆ ತನ್ನ ಅವಸ್ಥೆಯನ್ನು ಕಂಡು ಕೋಪ ಉಕ್ಕಿತು. ಸೋಲಿನ ಅವಮಾನ ಸಹಿಸಲು ಅಸಾಧ್ಯವಾಯಿತು. ತಕ್ಷಣ ಭರತನು ತನ್ನ ಚಕ್ರರತ್ನಕ್ಕೆ ''ಬಾಹುಬಲಿಯನ್ನು ಕೊಂದು ಬಾ'' ಎಂದು ಆಜ್ಞಾಪಿಸಿದ.

ಹೊಳೆಯುತ್ತಿದ್ದ ಚಕ್ರ ಬಾಹುಬಲಿಯೆಡೆಗೆ ವೇಗವಾಗಿ ಸಾಗಿತು. 'ತಾನು ಸೋತ ಮೇಲೆ ಚಕ್ರವನ್ನು ತಮ್ಮನ ಮೇಲೆ ಪ್ರಯೋಗಿಸಬಹುದೆ? ಎಂಥಹ ಅನ್ಯಾಯ ಇದು. ಅಧರ್ಮ ಇದು' ಎಂದು ಭಯದಿಂದ ಸೈನ್ಯಗಳವರೂ, ಪೌರರೂ ನೋಡುತ್ತಿದ್ದರು. ಚಕ್ರ ಬಾಹುಬಲಿಯನ್ನು ಸಮೀಪಿಸಿತು. ಅವನ ಸುತ್ತ ಒಂದು ಪ್ರದಕ್ಷಿಣೆಹಾಕಿ ಬಂದಿತು, ಅವನ ಬಲಗಡೆ ನಿಂತು ಬಿಟ್ಟಿತು. ಜನರೆಲ್ಲ ಸಂತೋಷದಿಂದ ಜಯಘೋಷ ಮಾಡಿದರು. ಅಪಮಾನದಿಂದ ನಾಚಿ ತಲೆತಗ್ಗಿಸಿ ನಿಂತ ಭರತ.

ಅಣ್ಣನ ಸ್ಥಿತಿಯನ್ನು ಕಂಡು ಬಾಹುಬಲಿಗೆ ಮರುಕ ಮೂಡಿತು. ಅಣ್ಣನ ಮೇಲಿದ್ದ ಕೋಪವೆಲ್ಲ ಕರಗಿ ನೀರಾಯಿತು. ಕೇವಲ ರಾಜ್ಯದಾಸೆಗಾಗಿ ನಾವಿಬ್ಬರೂ ಅಣ್ಣ ತಮ್ಮಂದಿರೆಂಬ ಭಾವನೆಯನ್ನು ಮರೆತು ಒಬ್ಬರನ್ನೊಬ್ಬರು ಕೊಲ್ಲಲೂ ಹಿಂಜರಿಯಲಿಲ್ಲವಲ್ಲ. ಆಸೆ ಎನ್ನುವುದು ಎಷ್ಟು ಕೆಟ್ಟದ್ದು ಎನಿಸಿತು. ಜೀವನದ ಬಗ್ಗೆ ಜುಗುಪ್ಸೆ ಮೂಡಿತು. ಎಲ್ಲವನ್ನೂ ಬಿಟ್ಟು ತಪಸ್ಸಿಗೆ ಹೊರಡುವುದೇ ಸರಿ ಎನ್ನಿಸಿತು.

ಬಾಹುಬಲಿ, ಭರತನ ಕಾಲಿಗೆ ಬಿದ್ದು, ''ಅಣ್ಣಾ, ನನ್ನನ್ನು ಕ್ಷಮಿಸು, ನಿನ್ನೊಡನೆ ಯುದ್ಧ ಮಾಡಿ ತಪ್ಪು ಮಾಡಿದೆ. ನಿನ್ನನ್ನು ಅವಮಾನಗೊಳಿಸಿದೆ. ಈ ರಾಜ್ಯ ನೀನೇ ತೆಗೆದುಕೊ ನನ್ನ ಪಾಪ ಕಳೆದುಕೊಳ್ಳಲು ನಾನು ತಪಸ್ಸಿಗೆ ಹೋಗುತ್ತೇನೆ. ಅಪ್ಪಣೆ ಕೊಡು'' ಎಂದು ಬೇಡಿದ.

ಭರತನಿಗೆ ಚಕ್ರವರ್ತಿ ಪದವಿಯ ಮೇಲಿನ ಮೋಹ, ಕೋಪ, ಛಲ ಎಲ್ಲ ಕರಗಿಹೋದವು.

ತಮ್ಮನ ಉದಾತ್ತ ಗುಣವನ್ನು ಕಂಡ ಭರತನಿಗೆ ಅವನ ಮಾತು ಕೇಳಿ ಬಹಳ ದುಃಖವಾಯಿತು. ಕಣ್ಣೀರು ಸುರಿಸುತ್ತಾ ಬಾಹುಬಲಿಯನ್ನು ಹಿಡಿದೆತ್ತಿ, ''ತಮ್ಮಾ, ತಪ್ಪು ನನ್ನದು, ನನ್ನ ಅಹಂಕಾರದಿಂದ, ದುಡುಕಿನಿಂದ ಎಲ್ಲಾ ತಮ್ಮಂದಿರೂ ತಪಸ್ಸು ಮಾಡಲು ಕಾಡಿಗೆ ಹೊರಟುಹೋದರು. ನೀನೂ ದೂರವಾದರೆ ನನಗಿನ್ನಾರು? ನೀನೊಬ್ಬನೇ ನನಗುಳಿದಿರುವ ತಮ್ಮ. ಈ ಸಾಮ್ರಾಜ್ಯದಿಂದ ಏನು ತಾನೆ ಪ್ರಯೋಜನ? ದಯವಿಟ್ಟು ನನ್ನನ್ನು ಬಿಟ್ಟು ನೀನು ಹೋಗಬೇಡ'' ಎಂದು ಕೈಹಿಡಿದು ದೈನ್ಯದಿಂದ ಬೇಡಿಕೊಂಡ.

ಬಾಹುಬಲಿ ಯಾರು ಎಷ್ಟೇ ಹೇಳಿದರೂ ಬೇಡಿದರೂ ತನ್ನ ನಿರ್ಧಾರ ಬದಲಿಸಲಿಲ್ಲ. ಎಲ್ಲವನ್ನೂ ತ್ಯಜಿಸಿ ತಪಸ್ಸಿಗೆ ಹೊರಟೇ ಬಿಟ್ಟ.

ಕಾಡಿನಲ್ಲಿ ಜ್ಞಾನವನ್ನು ಪಡೆದಿದ್ದ ತನ್ನ ತಂದೆಯಾದ ವೃಷಭಸ್ವಾಮಿಯಿಂದ ಮಂತ್ರೋಪದೇಶ ಪಡೆದು (ದೀಕ್ಷೆ) ಎಲ್ಲವನ್ನೂ ತೊರೆದು ಪೂರ್ಣ ಬೆತ್ತಲೆಯಾಗಿ (ನಗ್ನನಾಗಿ) ಕಠಿಣ ತಪಸ್ಸನ್ನು ಆಚರಿಸಲು ನಿಂತ.

ಎಷ್ಟೋ ದಿನಗಳು ಉರುಳಿದವು. ನಿಂತ ಸ್ಥಳದಿಂದ ಅಲುಗಾಡಲಿಲ್ಲ. ಊಟ, ತಿಂಡಿ, ನಿದ್ರೆ ಯಾವುದೂ ಇಲ್ಲ. ಆತನ ಸುತ್ತಲೂ ದೊಡ್ಡ ದೊಡ್ಡ ಹುತ್ತಗಳು ಅವನ ಎತ್ತರಕ್ಕೂ ಬೆಳೆದವು. ಹಾವುಗಳು ಮೈಮೇಲೆಲ್ಲಾ ಹರಿದಾಡಿದವು. ಕಾಡು ಬಳ್ಳಿಗಳು ಕೈಕಾಲಿಗೆಲ್ಲಾ ಸುತ್ತಿಕೊಂಡವು. ಪಕ್ಷಿಗಳು ಅವುಗಳಲ್ಲಿ ಗೂಡುಕಟ್ಟಿ ಕೊಂಡವು. ಯಾವುದಕ್ಕೂ ಜಗ್ಗಲಿಲ್ಲ, ಬಗ್ಗಲಿಲ್ಲ, ಬೆಚ್ಚಲಿಲ್ಲ, ಬೆದರಲಿಲ್ಲ, ಸಿಡಿಲು, ಮಿಂಚು, ಮಳೆ, ಬಿರುಗಾಳಿ ಎಲ್ಲಕ್ಕೂ ಮೈಯೊಡ್ಡಿ ನಿಂತಿದ್ದ. ದೃಢ ಮನಸ್ಸಿನಿಂದ ಕಠೋರ ತಪಸ್ಸು ಮುಂದುವರೆಸಿದ. ವರ್ಷಗಳು ಉರುಳಿದವು, ಆದರೆ ಬಾಹುಬಲಿಗೆ ಜ್ಞಾನೋದಯ ಆಗಲಿಲ್ಲ.

ಘೋರ ತಪಸ್ಸು ಮಾಡಿದರೂ ಬಾಹುಬಲಿಗೆ ಜ್ಞಾನೋದಯವಾಗದಿದ್ದುದನ್ನು ಕಂಡು ಭರತನಿಗೆ ಆಶ್ಚರ್ಯವಾಯಿತು. ಜ್ಞಾನವನ್ನು ಪಡೆದಿದ್ದ ತಂದೆ ವೃಷಭನಾಥನ ಬಳಿ ಕಾರಣ ಕೇಳಿದ. ''ರಾಜ್ಯವನ್ನೆಲ್ಲ ಭರತನಿಗೆ ಕೊಟ್ಟೆ. ತಪಸ್ಸು ಮಾಡುತ್ತಿರುವ ನೆಲ ಅವನಿಗೆ ಸೇರಿದ್ದು, ಅಣ್ಣನ ನೆಲದಲ್ಲಿ ನಿಂತಿದ್ದೇನೆ ಎಂಬ ಕೊರಗು ಅವನಿಗಿದೆ; ಈ ಅಭಿಮಾನವೇ ಅವನ ಜ್ಞಾನಕ್ಕೆ ತಡೆಯಾಗಿದೆ'' ಎಂದು ತಂದೆ ತಿಳಿಸಿದ.

ಭರತ ಬಾಹುಬಲಿಯನ್ನು ಸಮೀಪಿಸಿದ. ಆತನ ಕಾಲಿಗೆ ನಮಸ್ಕರಿಸಿ ''ತಮ್ಮಾ, ನನ್ನ ರಾಜ್ಯದಲ್ಲಿ ನಿಂತಿದ್ದೇನೆಂಬ ಅಭಿಮಾನವನ್ನು ಬಿಡು. ಈ ರಾಜ್ಯ ನನ್ನದಲ್ಲ, ಗೆದ್ದ ನೀನೇ ನನಗೆ ಉದಾರವಾಗಿ ಕೊಟ್ಟದ್ದು. ನೀನು ಅಭಿಮಾನ ಬಿಟ್ಟು ತಪಸ್ಸು ಮಾಡು'' ಎಂದು ಕೇಳಿಕೊಂಡ.

ಆಗ ಬಾಹುಬಲಿಯ ಮನದಲ್ಲಿದ್ದ ಸ್ವಲ್ಪ ಅಭಿಮಾನವು ಇಲ್ಲವಾಯಿತು. ಅಭಿಮಾನ ಬಿಟ್ಟು ತಪಸ್ಸನ್ನು ಮುಂದುವರಿಸಿದ. ಜ್ಞಾನೋದಯವಾಯಿತು.

ಜನರೆಲ್ಲ ಬಾಹುಬಲಿಯ ಮಹಿಮೆಯನ್ನು ಕೊಂಡಾಡಿದರು. ಎಲ್ಲರೂ ಆತನನ್ನು ಭಕ್ತಿಯಿಂದ ಪೂಜಿಸಿದರು. ಆತನ ಉಪದೇಶ ಕೇಳಿ ಸಂತೋಷಪಟ್ಟರು. ಅಣ್ಣ ಭರತನೂ ಈ ಸಂಭ್ರಮಗಳಲ್ಲಿ ಪಾಲ್ಗೊಂಡ.

ಬಾಹುಬಲಿ ದೇಶ ದೇಶಗಳನ್ನು ಸುತ್ತಿ ಜನರಿಗೆಲ್ಲ ಧರ್ಮಬೋಧೆ ಮಾಡಿದ. ಜನಗಳ ಅಜ್ಞಾನವನ್ನು ತನ್ನ ಜ್ಞಾನದಿಂದ ಹೋಗಲಾಡಿಸಿದ. ಸಾರ್ಥಕ ಬದುಕಿನ ಮಾರ್ಗವನ್ನು ತೋರಿಸಿದ. ಆದರ್ಶಜೀವಿಯಾಗಿ ಕೊನೆಗೆ ಮುಕ್ತಿ ಪಡೆದ.

ಸೋದರನ ಕೀರ್ತಿ ಶಾಶ್ವತವಾಗಿ ಉಳಿಯಬೇಕೆಂದು ಭರತ ಚಕ್ರವರ್ತಿ, ಬಾಹುಬಲಿಯ ರೂಪವನ್ನೇ ಹೋಲುವ ಒಂದು ಭವ್ಯವವಾದ ವಿಗ್ರಹವನ್ನು ಪೌದನಪುರದಲ್ಲಿ ಪಚ್ಚೆಯಿಂದ ಕೆತ್ತಿಸಿದ. ಆ ಸ್ವಾಮಿಯ ಪೂಜೆ ತುಂಬ ವೈಭವದಿಂದ ನಡೆಯಿತು. ಪ್ರಜೆಗಳೆಲ್ಲ ಆ ದಿವ್ಯದರ್ಶನವನ್ನು ಕಂಡು ಧನ್ಯರಾದರು.


## ಶಬ್ದಗಳ ಅರ್ಥ:

ಕಪ್ಪ ಕಾಣಿಕೆ - ಸೋಲನ್ನು ಒಪ್ಪಿಕೊಂಡು ಕೊಡುವ ಉಡುಗೊರೆ; ಸಮೃದ್ಧಿ - ಬೆಳವಣಿಗೆ ಐಶ್ವರ್ಯ ಅಭಿವೃದ್ಧಿ; ದಿಗ್ವಿಜಯ - ವಿಜಯಸಾಧನೆ; ಚತುರಂಗ ಬಲ -ಆನೆ, ರಥ, ಕುದುರೆ, ಕಾಲಾಳು ಕೂಡಿ ಚತುರಂಗಬಲ; ಉದಾತ್ತ - ವಿಶಾಲ; ತಪಸ್ಸು - ವ್ರತ, ನಿಯಮಾದಿಗಳಿಂದ ದೇಹವನ್ನು ದಂಡಿಸುತ್ತ ಧ್ಯಾನ ಮಾಡುವದು.

### ಕೃತಿ:1 ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1) ವೃಷಭನಾಥನ ರಾಜಧಾನಿ ಯಾವುದು ?
2) ಬಾಹುಬಲಿಯ ತಾಯಿಯ ಹೆಸರು ಏನು?
3) 'ಚಕ್ರರತ್ನ'ವು ಯಾರ ಆಯುಧ ಶಾಲೆಯಲ್ಲಿ ಹುಟ್ಟಿತು?
4) ಮಂತ್ರಿಗಳಿಬ್ಬರು ನಿರ್ಣಯಿಸಿದ ಯುದ್ಧಗಳು ಯಾವವು?
5) ಬಾಹುಬಲಿ ಎಲ್ಲ ತ್ಯಜಿಸಿ ಎಲ್ಲಿಗೆ ಹೋದನು?

**ಕೃತಿ:2 ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**




**ಕೃತಿ:3 ಕೆಳಗಿನ ವಾಕ್ಯವನ್ನು ಪೂರ್ಣಗೊಳಿಸಿ ಶಬ್ದ ಚೌಕಟ್ಟಿನಲ್ಲಿ ತುಂಬಿರಿ.**

1) ರಾಜನ ಆಯುಧ ಶಾಲೆಯಲ್ಲಿ ಹುಟ್ಟಿದ್ದು.

2) ರಾಜನ ಯುದ್ಧಕ್ಕೆ ಬಳಸುವ ನಾಲ್ಕು ಪ್ರಕಾರದ ಸೈನ್ಯ.

**ಕೃತಿ:4 ಕೊಟ್ಟ ಸೂಚನೆಯಂತೆ ಕೃತಿ ಮಾಡಿರಿ.**

ಉದಾಹರಣೆಯಲ್ಲಿ ತೋರಿಸಿದಂತೆ ಕೆಳಗಿನ ಆದ್ಯಾಕ್ಷರಗಳಿಂದ ಆಗುವ ಶಬ್ದಗಳನ್ನು ರಚಿಸಿರಿ.

| | | | |
|---|---|---|---|
| ಉದಾ: ಚ | – ಚಮಚ | ಭೂ | – |
| ತು | – ತುತ್ತೂರಿ | ಮಂ | – |
| ರಂ | – ರಂಗ | ಡ | – |
| ಗ | – ಗಜಾನನ | ಲ | – |
| ಬ | – ಬವಣೆ | ದ | – |
| ಲ | – ಲವಂಗ | ಅ | – |
| | | ಧಿ | – |
| | | ಪ | – |
| | | ತಿ | – |

**ಕೃತಿ: 5 ಕೆಳಗಿನ ಶಬ್ದದ ಅಕ್ಷರಗಳನ್ನು ಬಳಸಿಕೊಂಡು ಕನಿಷ್ಟ ನಾಲ್ಕು ಅರ್ಥಪೂರ್ಣ ಶಬ್ದಗಳನ್ನು ತಯಾರಿಸಿರಿ.**

'ಭರತ ಬಾಹುಬಲಿ'

**ಕೃತಿ: 6 ಕೆಳಗಿನ ಜಾಲ ಪೂರ್ಣಗೊಳಿಸಿರಿ.**

'ಚತುರಂಗ' ಬಲ ಸೈನ್ಯದ ಭಾಗಗಳು

**ಕೃತಿ: 7 ಕೆಳಗಿನ ಶಬ್ದಗಳ ಅರ್ಥವನ್ನು ವರ್ತುಳದಲ್ಲಿ ಕೊಟ್ಟ ಶಬ್ದ ಸಮೂಹದಿಂದಆಯ್ದು ಚೌಕಟ್ಟಿನಲ್ಲಿ ಬರೆಯಿರಿ.**

ನಗರ

ಶತ್ರು

ಕೋಪ

ಹೋರಾಟ

ಸಿಟ್ಟು
ಹಳ್ಳಿ ಸೈನಿಕ
ಪಟ್ಟಣ ಯಜ್ಞ
ಮಿತ್ರ ವೈರಿ
ಯುದ್ಧ

**ಕೃತಿ: 8 ಕೆಳಗಿನ ವಾಕ್ಯದಲ್ಲಿ 'ಎಚ್ಚರ' ಈ ಶಬ್ದದ ಎರಡು ಭಿನ್ನ ಅರ್ಥಗಳನ್ನು ಬರೆಯಿರಿ.**

ತಾಯಿಯು ಮಗು ಎಚ್ಚರವಾಗದಂತೆ ಎಚ್ಚರಿಕೆ ವಹಿಸಿದಳು.

**ಕೃತಿ: 9 ಭರತ ಬಾಹುಬಲಿಯ ಮಧ್ಯೆ ನಡೆದ ಅಹಿಂಸಾತ್ಮಕ ಯುದ್ಧ ಪ್ರಸಂಗವನ್ನುನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಕೃತಿ: 10 ಕೆಳಗೆ ಕೊಟ್ಟ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.**

1) ಕೊನೆಯದಾಗಿ ಮಲ್ಲಯುದ್ಧ ಪ್ರಾರಂಭವಾಯಿತು.

2) ಜನರೆಲ್ಲ ಬಾಹುಬಲಿಯ ಮಹಿಮೆಯನ್ನು ಕೊಂಡಾಡಿದರು.

3) ಆ ಚಕ್ರರತ್ನ ಸಾಮಾನ್ಯವಾದುದಲ್ಲ.

4) ಪೌದನಪುರಕ್ಕೆ ಹೋದ ದೂತ ಬಾಹುಬಲಿಯನ್ನು ನೋಡಿದ.

### ಕೃತಿ: 11 ಶಬ್ದಗಳ ಪಟ್ಟಿ

ಯುದ್ಧಕ್ಕೆ ಸಂಬಂಧಪಟ್ಟ ಕೆಲವು ಶಬ್ದಗಳನ್ನು ಕೊಡಲಾಗಿದೆ. ತೆರವಾದ ಸ್ಥಳಗಳಲ್ಲಿ ಯೋಗ್ಯವಾದ ಅಕ್ಷರಗಳನ್ನು ತುಂಬಿ ಅವುಗಳನ್ನು ಪೂರ್ಣಗೊಳಿಸಿರಿ.

ಉದಾ: ಜ-ಯು - ಜಲಯುದ್ಧ

1) ಶ - ವೇ - -ದ್ಧ　　2) - ಧಾ ಯು -

3) ಭ - -ದ್ಧ　　4) ಬಿ - - ದ್ಧ

5) - ಲ್ಲ ಯು -　　6) ದ್ವ - - ದ್ಧ

### ಕೃತಿ: 12 I) ಬಿಟ್ಟ ಸ್ಥಳಗಳಲ್ಲಿ ಯೋಗ್ಯವಾದ ವಿಶೇಷಣಗಳನ್ನು ತುಂಬಿರಿ.

1) ಅದೊಂದು --------------- ಕಟ್ಟಡವಾಗಿತ್ತು.

2) ಗಿರಿಜೆಯು ----------- ಹಾಡನ್ನು ಹಾಡಿದಳು.

3) ಗೋಪಾಲನು ---------- ಚಿತ್ರವನ್ನು ತೆಗೆದನು.

#### II) ಕೆಳಗಿನವುಗಳಿಗೆ ಸಂಧಿ ಬಿಡಿಸಿ ಹೆಸರಿಸಿರಿ.

ಜ್ಞಾನೋದಯ, ಸಿಂಹಾಸನ, ವಿಜಯೋತ್ಸಾಹ, ರಾಜಾಜ್ಞೆ

#### III) ವಿರುದ್ಧಾರ್ಥಕ ಪದ ಬರೆಯಿರಿ

1) ದಕ್ಷತೆ　　2) ಸೋಲು

3) ಕಷ್ಟ　　4) ಜ್ಞಾನ

#### IV) ಕೆಳಗಿನ ಶಬ್ದಗಳಿಗೆ ಮೂರು ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.

1) ರಾಜ ---- ---- ---- ----

2) ಭೂಮಿ ---- ---- ---- ----

3) ಸೂರ್ಯ ---- ---- ---- ----

4) ತಾಯಿ ---- ---- ---- ----

# 6. ಜೈವಿಕ ತಂತ್ರಜ್ಞಾನ

- ಎ. ಬಾಲರಾಜು

**ಲೇಖಕರ ಪರಿಚಯ :** ಎ. ಬಾಲರಾಜು ಅವರು ಕನ್ನಡದ ನವಪೀಳಿಗೆಯ ಲೇಖಕರು, ಮಾನಸಿಕ ಸಾಮರ್ಥ್ಯ, ತಂತ್ರಜ್ಞಾನ ಅವರ ಕೃತಿಗಳು. ಅತ್ಯಂತ ಕ್ಲಿಷ್ಟಕರವೆನಿಸುವ ವಿಷಯವನ್ನು ಸರಳ ವಿವರಣೆ ಮಾಡಿದ್ದು ಅವರ ಕೃತಿಗಳ ವಿಶೇಷಣೆ ಎನ್ನಬಹುದು. ಸ್ಪರ್ಧಾತ್ಮಕ ಪರೀಕ್ಷಣೆಯನ್ನು ಬರೆಯುವವರಿಗಂತೂ ಒಳ್ಳೆಯ ಆಕರ ಗ್ರಂಥಗಳಾಗಿವೆ. ಲೇಖಕರು ಪ್ರಸ್ತುತ ಪಾಠದಲ್ಲಿ ಭಾರತದಲ್ಲಿ ಜೈವಿಕ ತಂತ್ರಜ್ಞಾನದ ಬೆಳವಣಿಗೆ, ಅದರ ಕಾರ್ಯತಂತ್ರಗಳು, ತಳಿತಂತ್ರಜ್ಞಾನ, ಬೆರಳಚ್ಚು ತಂತ್ರಜ್ಞಾನ, ಅಂಗಾಂಶ ಕೃಷಿ, ತದ್ರೂಪಿ ಸೃಷ್ಟಿ ಹಾಗೂ ಬಿ.ಟಿ. ಬದನೆಕಾಯಿಬೆಳೆ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.

## (Bio-technology)

ಜೀವಕೋಶ ವಿಜ್ಞಾನ (ಸೈಟಾಲಜಿ), ಸೂಕ್ಷ್ಮಾಣು ಜೀವಿಶಾಸ್ತ್ರ (ಮೈಕ್ರೋಬಯಾಲಜಿ), ತಳಿಶಾಸ್ತ್ರ (ಜೆನೆಟಿಕ್ಸ್) ಹಾಗೂ ಜೀವರಸಾಯನಶಾಸ್ತ್ರ (ಬಯೋಕೆಮಿಸ್ಟ್ರಿ)ಗಳು ಜೀವಶಾಸ್ತ್ರದ ವಿವಿಧ ಶಾಖೆಗಳು. ಜೀವ ವಿಜ್ಞಾನದ ಈ ಶಾಖೆಗಳೊಂದಿಗೆ ತಂತ್ರಜ್ಞಾನವನ್ನು (ಇಂಜಿನಿಯರಿಂಗ್) ಬೆಸುಗೆ ಮಾಡಲಾಗಿದ್ದು ತಳಿಶಾಸ್ತ್ರ ತಂತ್ರಜ್ಞಾನ (ಜೆನಿಟಿಕ್ ಇಂಜಿನಿಯರಿಂಗ್) ಮತ್ತು ಜೈವಿಕ ತಂತ್ರಜ್ಞಾನ (ಬಯೋಟೆಕ್ನಾಲಜಿ) ಎಂಬ ನೂತನ ವಿಜ್ಞಾನ ಶಾಖೆಗಳು ಈಗ ರೂಪಗೊಂಡಿದೆ.

### ವ್ಯಾಖ್ಯೆ (Defination)

ಜೀವಗಳ ಗುಣಲಕ್ಷಣಗಳನ್ನು ಬಳಸಿಕೊಂಡು ಉಪಯುಕ್ತ ಉತ್ಪನ್ನಗಳನ್ನುಪಡೆಯುವ ತಂತ್ರಜ್ಞಾನವೇ ಜೈವಿಕ ತಂತ್ರಜ್ಞಾನ.

### ಭಾರತದಲ್ಲಿ ಜೈವಿಕ ತಂತ್ರಜ್ಞಾನದ ಬೆಳವಣಿಗೆ

1982ರಲ್ಲಿ ಮೈಸೂರಿನಲ್ಲಿ 69ನೇ ರಾಷ್ಟ್ರೀಯ ವಿಜ್ಞಾನ ಕಾಂಗ್ರೆಸ್ ಸಮಾವೇಶಗೊಂಡಿತ್ತು. ಇದರಲ್ಲಿ ಕೈಕೊಂಡ ಒಂದು ಪ್ರಮುಖ ನಿರ್ಣಯದಂತೆ ಜೈವಿಕ ತಂತ್ರಜ್ಞಾನದ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ 'ರಾಷ್ಟ್ರೀಯ ಜೈವಿಕ ತಂತ್ರಜ್ಞಾನದ ಮಂಡಳಿ' (National Biotechnology Board (NBTB)ಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (Department of Science and Technology (DST)ಯ ಅಡಿಯಲ್ಲಿ ಸ್ಥಾಪಿಸಲಾಯಿತು.

### ಭಾರತದಲ್ಲಿ ಜೈವಿಕ ತಂತ್ರಜ್ಞಾನದ ಕೇಂದ್ರಗಳು

* Indian Agricultural Research Institute (IARI) -New Delhi.
* Indian Veterinary Research Institute (IVRI) - Izzatnagar.
* Indian Institute of Science (IISc) - Bengaloru.
* National Dairy of Institute Research (NDRI) - Bengaloru.
* Tata Institute of Fundamental Research (TIFR)- Mumbai.
* Indian Horticulture Research Institute (IHRI) - Bengaloru.

### ಜೈವಿಕತಂತ್ರಜ್ಞಾನದ ಕಾರ್ಯ ತಂತ್ರಗಳು

* ತಳಿತಂತ್ರಜ್ಞಾನ
* ಬೆರಳಚ್ಚು ತಂತ್ರಜ್ಞಾನ
* ಅಂಗಾಂಶ ಕೃಷಿ
* ತದ್ರೂಪಿ ಸೃಷ್ಟಿ

### ತಳಿತಂತ್ರಜ್ಞಾನ (Genetic Engineering)

''ವಂಶವಾಹಿನಿಗಳಲ್ಲಿ ಅಗತ್ಯವಾದ ಬದಲಾವಣೆಗಳನ್ನು ಉಂಟುಮಾಡುವ ತಂತ್ರಜ್ಞಾನವೇ ತಳಿ ತಂತ್ರಜ್ಞಾನ''

ಪ್ರತಿಯೊಂದು ಜೀವಿಯ ದೇಹವು ಜೀವಕೋಶಗಳೆಂಬ ರಚನಾತ್ಮಕ ಮತ್ತು ಕಾರ್ಯ ನಿರ್ವಾಹಕ ಮೂಲ ಘಟಕಗಳಿಂದಾಗಿದೆ. ಪ್ರತಿಜೀವಕೋಶದ ಅತೀಪ್ರಮುಖವಾದ ರಚನೆಯೆಂದರೆ ಕೋಶಕೇಂದ್ರ (ನೂಕ್ಲಿಕ್). ಈ ಕೋಶಕೇಂದ್ರದೊಳಗೆ ಅನುವಂಶೀಯ ಗುಣಗಳನ್ನು ಒಳಗೊಂಡ ಒಂದು ಪ್ರಕಾರದ ದ್ರವ ಪದಾರ್ಥ ಇರುತ್ತದೆ. ಇದಕ್ಕೆ (DNA ಜೀನ್ಸ್ (ಡಿಯಾಕ್ಸಿರೈಬೊ ನ್ಯೂಕ್ಲಿಡ್ ಎಸಿಡ್) ಎಂದು ಕರೆಯುತ್ತಾರೆ.

ತಳಿತಂತ್ರಜ್ಞಾನ ವಿಧಾನದಲ್ಲಿ ನಿರ್ದಿಷ್ಟ ಜೀನ್‌ನ್ನು ಗುರ್ತಿಸಿ. ಅದನ್ನು ಬೇರ್ಪಡಿಸಿ, ಅದರ ಜಾಗದಲ್ಲಿ ಅಗತ್ಯವಾದ ಮತ್ತೊಂದು ಜೀನ್‌ನ್ನು ಸೇರಿಸಿದಾಗ ನಮಗೆ ಬೇಕಾದ ಗುಣಲಕ್ಷಣವುಳ್ಳ ಉತ್ಪನ್ನ ದೊರೆಯುತ್ತದೆ. ಇದಕ್ಕೆ ಪುನರ್ ಸಂಯೋಜಿತ DNA ತಂತ್ರಜ್ಞಾನ ಎನ್ನುವರು.

DNA ಸುರುಳಿಯಲ್ಲಿ ಅವಶ್ಯವಿರುವ ಕಡೆ DNA ತುಣುಕು ಅಂದರೆ ಜೀನ್‌ವನ್ನು ಕತ್ತರಿಸಿ ಆ ಜಾಗದಲ್ಲಿ ನಮಗೆ ಬೇಕಾದ ಮತ್ತೊಂದು DNA ತುಣುಕನ್ನು ಸೇರಿಸಿ ಹೊಸದಾಗಿ ಸುರುಳಿಯನ್ನು ಪಡೆಯುವುದೇ ಪುನರ್ ಸಂಯೋಜಿತ DNA ತಂತ್ರಜ್ಞಾನ.

ಪುನರ್ ಸಂಯೋಜಿತ DNA ತಂತ್ರಜ್ಞಾನದಲ್ಲಿ ಜೀನ್‌ನ್ನು ಸಾಗಿಸಲು ಬಳಸುವ ಸಾಧನವೇ ಪ್ಲಾಸ್ಮಿಡ್, ಪ್ಲಾಸ್ಮಿಡ್‌ಗಳು ಹೆಚ್ಚುವರಿ ಕ್ರೋಮೋಸೋಮ್ ಘಟಕಗಳು. ಇವು ಬ್ಯಾಕ್ಟೀರಿಯಾಗಳ ಸೈಟೋಪ್ಲಾಸಂನಲ್ಲಿರುತ್ತವೆ. ಪುನರ್ ಸಂಯೋಜಿತ DNA ತಂತ್ರಜ್ಞಾನದಲ್ಲಿಕೋಶದ್ರವದ ಎಳೆಯ (ಪ್ಲಾಸ್ಮಿಡ್) ಮುಖಾಂತರ ಜೀನ್‌ಗಳನ್ನು ಸಾಗಿಸುತ್ತಾರೆ.

ಪ್ಲಾಸ್ಮಿಡ್‌ಗಳು ತುಂಬಾ ಚಿಕ್ಕ ಗಾತ್ರದಲ್ಲಿವೆ ಮತ್ತು ಇವುಗಳನ್ನು ಸುಲಭವಾಗಿ ನಿರ್ವಹಿಸಬಹುದು. ಇವುಗಳನ್ನು ವಾಹಕಗಳಾಗಿ ಬಳಸಬಹುದಾಗಿದೆ. ಪ್ಲಾಸ್ಮಿಡ್‌ನ್ನು ಬ್ಯಾಕ್ಟೀರಿಯಾದ ಸೈಟೋಪ್ಲಾಸಂನಿಂದ ಹೊರತೆಗೆದು, ನಮಗೆ ಬೇಕಾದ ರೀತಿ ಅದನ್ನು ನಿರ್ವಹಿಸಿ ಪುನಃ ಜೀವಕೋಶದೊಳಕ್ಕೆ ಸೇರಿಸಲಾಗುತ್ತದೆ. ಈ ಪ್ಲಾಸ್ಮಿಡ್‌ಗಳು ನಾವು ಸೇರಿಸಿದ DNAಯಲ್ಲಿ ನಿರ್ದಿಷ್ಟ ಜಾಗಗಳಲ್ಲಿ ಹೋಗಿ ಸೇರ್ಪಡೆಯಾಗುತ್ತವೆ. ಈ ರೀತಿ ಪುನರ್ ಸಂಯೋಜಿಸಲ್ಪಟ್ಟ DNAಯನ್ನು ಪುನಃ ಬ್ಯಾಕ್ಟೀರಿಯಾ ಕೋಶದೊಳಕ್ಕೆ ಸೇರಿಸಲಾಗುತ್ತದೆ. ಕೋಶವಿಭಜನೆಯ ಸಂದರ್ಭದಲ್ಲಿ ಈ ಪ್ಲಾಸ್ಮಿಡ್‌ನ ಸ್ವಪ್ರತೀಕರಣ ಉಂಟಾಗಿ ಅದರ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತದೆ. ಪ್ಲಾಸ್ಮಿಡ್‌ಗಳು ಈ ರೀತಿ ಅಗತ್ಯವಾದ ಜೀನ್‌ಗಳನ್ನು ಸಾಗಾಣಿಕೆ ಮಾಡುವುದರಿಂದ ಇವುಗಳನ್ನು ಅಣುವಾಹಕಗಳು ಅಥವಾ Molecular Vehicles ಎಂದು ಕರೆಯುವರು.

### ತಳಿ ತಂತ್ರಜ್ಞಾನದ ಅನ್ವಯಗಳು(Applications):

1. **E. Coli ಎಂಬ ಬ್ಯಾಕ್ಟೀರಿಯಾದಿಂದ ಮಾನವ ಇನ್ಸುಲಿನ್ ತಯಾರಿಕೆ :-** (In the production Insulin from E. Coli bacteria)

ಮೊದಲು ಮಧುಮೇಹ ರೋಗದಿಂದ ಬಳಲುತಿದ್ದ ರೋಗಿಗಳಿಗೆ ಪ್ರಾಣಿಗಳ (ಹಂದಿ ಇತ್ಯಾದಿ) ಇನ್ಸುಲಿನ್‌ನ್ನು ಕೊಡುತ್ತಿದ್ದರು. ಆದರೆ ಈಗ ಈ ವಿಧಾನದಲ್ಲಿ E. Coli ಎಂಬ ಬ್ಯಾಕ್ಟೀರಿಯಾದಿಂದ ಮಾನವರ ಇನ್ಸುಲಿನ್‌ಗೆ ಸಮನಾದ ಇನ್ಸುಲಿನ್ ಕಡಿಮೆ ವೆಚ್ಚದಲ್ಲಿ ತಯಾರಿಸಬಹುದು. ಇದು ಮಧುಮೇಹ ರೋಗಿಗಳಿಗೆ ಒಂದು ವರದಾನವಾಗಿದೆ.

ತಳಿತಂತ್ರಜ್ಞಾನವನ್ನು ಬಳಸಿಕೊಂಡು ಅಗಾಧವಾದ ಲಾಭವನ್ನುಪಡೆದುಕೊಳ್ಳಲಾಗಿದೆ.

1) ಮಧುಮೇಹ ರೋಗದ ಇನ್ಸುಲಿನ್, ಮಾನವನ ಬೆಳವಣಿಗೆಯ ಹಾರ್ಮೋನು, ರಕ್ತಹೆಪ್ಪುಗಟ್ಟುವಿಕೆ, ರೋಗನಿರೋಧಕ ಶಕ್ತಿಯನ್ನು ಒದಗಿಸುವ ಅಂಟಿಬಾಡಿ, ಲಸಿಕೆಗಳ ತಯಾರಿಕೆ, ಮಾಲಿನ್ಯತಡೆಗಟ್ಟುವುದು. ಜೈವಿಕ ಗೊಬ್ಬರ ಹಾಗೂ ಕೀಟನಾಶಕ ತಯಾರಿಕೆ.

### DNA ಬೆರಳಚ್ಚು ತಂತ್ರಜ್ಞಾನ(DNA Finger Printing)

ಬೆರಳಚ್ಚು ತಂತ್ರಜ್ಞಾನವು ಅಪರಾಧಶಾಸ್ತ್ರದಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿರುವ ಒಂದು ತಂತ್ರ. ಈ ತಂತ್ರದಲ್ಲಿ ಅಪರಾಧಿಯನ್ನು ಸುಲಭವಾಗಿ ಪತ್ತೆ ಹಚ್ಚಲಾಗುತ್ತಿತ್ತು. ಅಪರಾಧ ನಡೆದು ಸ್ಥಳದಲ್ಲಿ ದೊರೆಯುವ ಕೈ ಮತ್ತು ಕಾಲಿನ ಬೆರಳಚ್ಚು ಸಂಗ್ರಹಿಸಿ. ವಿಶ್ಲೇಷಿಸಿ ಅದನ್ನು ಹೋಲಿಸುವುದರ ಮೂಲಕ ಅಪರಾಧಿಯನ್ನು ಪತ್ತೆಹಚ್ಚಲಾಗುತ್ತಿತ್ತು. ಆದರೆ ಇದರಲ್ಲಿ ತನ್ನದೇ ಆದ ಕೆಲವೊಂದು ಮಿತಿಗಳಿದ್ದವು. ಆದ್ದರಿಂದ ಇದು ಹೆಚ್ಚು ಪರಿಣಾಮಕಾರಿಯಾಗಲಿಲ್ಲ.

ಆದರೆ DNA ಬೆರಳಚ್ಚು ತಂತ್ರಜ್ಞಾನವು ಇದಕ್ಕಿಂತ ವಿಭಿನ್ನವಾದ ಒಂದು ವಿಧಾನವಾಗಿದೆ. DNA ಎನ್ನುವುದು

ಒಂದು ಜೀವಿಯ ನೀಲಿನಕಾಶೆಯಾಗಿದೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನವಾಗಿರುತ್ತದೆ. ಅವಳಿ ಮಕ್ಕಳಲ್ಲೂ ಇದು ವಿಭಿನ್ನವಾಗಿರುವುದು ಇದರ ಮತ್ತೊಂದು ವಿಶೇಷವೆಂದೇ ಹೇಳಬಹುದು.

DNA ಎನ್ನುವುದು ಒಂದು ಜೀವಿಯ ಅನುವಂಶೀಯ ವಸ್ತು. ಇದು ಜೀವಕೋಶದ ನ್ಯೂಕ್ಲಿಯಸ್‌ನಲ್ಲಿರುತ್ತದೆ. ಅಪರಾಧ ನಡೆದ ಸ್ಥಳದಲ್ಲಿ ದೊರೆಯುವ ರಕ್ತ, ಜೀವದ್ರವ್ಯಗಳು, ಚರ್ಮ, ಕೂದಲು ಅಥವಾ ದೇಹದ ಯಾವುದೇ ಭಾಗದ ಜೀವಕೋಶದಿಂದ DNAಯನ್ನು ಹೊರತೆಗೆಯಬಹುದು. ಈ DNAಯ ಬೆರಳಚ್ಚು ತೆಗೆದು ಆ ವ್ಯಕ್ತಿಯ ಬಗ್ಗೆ ಕೆಲವೊಂದು ಮಾಹಿತಿಯನ್ನು ಪಡೆಯಬಹುದು. ಅಲ್ಲಿ ದೊರೆತ ಮಾಹಿತಿಯನ್ನು ಆಪಾದಿತನ DNA ಬೆರಳಚ್ಚಿಗೆ ಹೋಲಿಸಿ ನಿಜವಾದ ಅಪರಾಧಿಯನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ.

ಬೆರಳಚ್ಚು ಪಡೆಯಲು ಅನೇಕ ಹಂತಗಳನ್ನು ಅನುಸರಿಸಲಾಗುತ್ತದೆ. ಅವುಗಳೆಂದರೆ:

### 1. ಮಾದರಿಯ ಸಂಗ್ರಹಣೆ (Collection of Sample):-

ಇದು ಮೊದಲನೆಯ ಬಹು ಮುಖ್ಯವಾದ ಹಂತ. ಪರೀಕ್ಷಿಸಬೇಕಾದ ವ್ಯಕ್ತಿಯ ಜೀವಕೋಶ ಮಾದರಿಯನ್ನು ಈ ಹಂತದಲ್ಲಿ ಸಂಗ್ರಹಿಸಲಾಗುತ್ತದೆ. ಅಪರಾಧ ನಡೆದ ಸ್ಥಳದಲ್ಲಿ ದೊರೆಯುವ ರಕ್ತ, ಚರ್ಮ ಅಥವಾ ದೇಹದ ಯಾವುದೇ ಭಾಗದ ಕೂದಲು ಮುಂತಾದವುಗಳನ್ನು ಸಂಗ್ರಹಿಸಬೇಕು. ನೇರವಾಗಿ ಇವು ದೊರೆಯದಿದ್ದರೆ ಇವು ಬಿದ್ದಿರುವ ಬಟ್ಟೆ ಕಲೆಗಳನ್ನು ಸಂಗ್ರಹಿಸಬಹುದು. ನಂತರ ಇವುಗಳನ್ನು ಸೂಕ್ತವಾದ ರೀತಿಯಲ್ಲಿ ಪ್ಯಾಕ್‌ಮಾಡಿ ಪ್ರಯೋಗಶಾಲೆಗೆ ಕಳುಹಿಸಬೇಕು.

### 2. DNA ಬೇರ್ಪಡಿಸುವಿಕೆ (Isolation of DNA):-

ಸಂಗ್ರಹಿಸಲ್ಪಟ್ಟ ಮಾದರಿಯಿಂದ DNAಅಣುವನ್ನು ಬೇರ್ಪಡಿಸಲಾಗುತ್ತದೆ. ನಂತರ ಇದನ್ನು ಸಂಸ್ಕರಿಸಿ DNAಯನ್ನು ಶುದ್ಧರೂಪದಲ್ಲಿ ಪಡೆಯಲಾಗುತ್ತದೆ. DNAಯ ಪ್ರಮಾಣವು ಹೆಚ್ಚಾಗಿದ್ದರೆ ನೇರವಾಗಿ ಮುಂದಿನ ಹಂತಕ್ಕೆ ಇದನ್ನು ಒಳಪಡಿಸಲಾಗುತ್ತದೆ. ಒಂದು ವೇಳೆ DNA ಕಡಿಮೆ ಇದ್ದರೆ ಅದನ್ನು ಪಾಲಿಮರೈಜ್ ಚೈನ್ ರಿಯಾಕ್ಷನ್ (PCR) ಎಂಬ ವಿಧಾನದ ಮೂಲಕ DNA ಪ್ರಮಾಣವನ್ನು ಹೆಚ್ಚಿಸಲಾಗುತ್ತದೆ. ಈ ರೀತಿ ಹೆಚ್ಚಾದ DNA ಗೂ ಮೂಲ DNAಗೂ ಯಾವುದೇ ವ್ಯತ್ಯಾಸವಿರುವುದಿಲ್ಲ.

### 3. REN ಕಿಣ್ವದಿಂದ DNAಯನ್ನು ತುಂಡರಿಸುವುದು:

(Restriction Endo Nucleases (REN) ಬಳಸಿ DNAಯನ್ನು ನಿರ್ದಿಷ್ಟ ಸ್ಥಳಗಳಲ್ಲಿ ಚಿಕ್ಕ ತುಣುಕುಗಳಾಗಿ ಕತ್ತರಿಸಬೇಕು. ಪರೀಕ್ಷಿಸಬೇಕಾದ DNA ಎಲ್ಲಾ ಮಾದರಿಯನ್ನು ಒಂದೇ ರೀತಿಯ RENಯಿಂದ ಕತ್ತರಿಸುವುದು ಅತೀ ಆವಶ್ಯಕ. ಈ ತುಣುಕುಗಳನ್ನು ಈಗ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಇದನ್ನು Restriction Fragment Length Polymorphism (RFLP)

## DNA ಬೆರಳಚ್ಚು ತಂತ್ರಜ್ಞಾನದ ಅನ್ವಯಗಳು:

1. ಈ ತಂತ್ರಜ್ಞಾನದಿಂದ ಅಪರಾಧಿಯನ್ನು ಸುಲಭವಾಗಿ ಪತ್ತೆಹಚ್ಚಬಹುದಾಗಿದೆ. ಅತ್ಯಾಚಾರ ಮತ್ತು ಕೊಲೆ ಮುಂತಾದ ಕ್ರಿಮಿನಲ್ ಪ್ರಕರಣಗಳಲ್ಲಿ ನಿಜವಾದ ಅಪರಾಧಿಗಳನ್ನು ಗುರ್ತಿಸಲು ಮತ್ತು ನಿರಪರಾಧಿಗಳನ್ನು ಬಿಡುಗಡೆಗೊಳಿಸಲು ಇದೊಂದು ಅತ್ಯುತ್ತಮ ತಂತ್ರವಾಗಿದೆ.

2. ಈ ತಂತ್ರದಿಂದ ಒಂದು ಮಗುವಿನ ನಿಜವಾದ ತಂದೆ ತಾಯಿಗಳನ್ನು ಗುರ್ತಿಸಲು ಸಾಧ್ಯವಾಗುತ್ತದೆ. ಹಿಂದಿನ ಕೆಲವೊಂದು ಪ್ರಕರಣಗಳನ್ನು ಅವಲೋಕಿಸಿದಾಗ ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳ ಅದಲುಬದಲಾದ ಪ್ರಕರಣಗಳು ನಮ್ಮ ಕಣ್ಣಮುಂದಿವೆ.

3. ಭೀಕರ ದುರಂತಗಳು ಸಂಭವಿಸಿ ಸಮೂಹ ಮರಣ ಸಂಭವಿಸಿದಾಗ ಆ ಹೆಣಗಳನ್ನು ಗುರ್ತಿಸಿ ಸಂಬಂಧ ಪಟ್ಟವರಿಗೆ ತಲುಪಿಸಲು ಈ ತಂತ್ರವನ್ನು ಬಳಸಲಾಗುತ್ತಿದೆ.

## ಅಂಗಾಂಶ ಕೃಷಿಯ ಉಪಯೋಗಗಳು:

(1) ಈ ಆಧುನಿಕ ತಂತ್ರಜ್ಞಾನದಿಂದ ರೋಗನಿರೋಧಕ ಮತ್ತು ಹೆಚ್ಚು ಇಳುವರಿ ನೀಡುವ ಸಸ್ಯಗಳನ್ನು ಪಡೆಯಬಹುದು.

(2) ಈ ವಿಧಾನದ ಮೂಲಕ ಅನೇಕ ಸಸ್ಯಗಳ ಜೀವನದ ಅವಧಿಯನ್ನು ಕಡಿಮೆಮಾಡಬಹುದು. ವರ್ಷಕ್ಕೊಮ್ಮೆ ಹೂ ಬಿಡುವ ಗುಲಾಬಿ ಗಿಡ ಮುಂತಾದ ಸಸ್ಯಗಳು ಈ ವಿಧಾನದಿಂದ ವರ್ಷಕ್ಕೆ ಎರಡು ಬಾರಿ ಹೂ ಬಿಡುವಂತೆ ಮಾಡಬಹುದು.

## ಅಂಗಾಂಶ ಕೃಷಿ (Tissue Culture):

ಸಸ್ಯದ ಕತ್ತರಿಸಿದ ಅಂಗ, ಅಂಗಾಂಶ ಅಥವಾ ಜೀವಕೋಶಗಳನ್ನು ಸೂಕ್ತ ಪೋಷಕ ಮಾಧ್ಯಮದ ಸಹಾಯದಿಂದ ನಿಯಂತ್ರಿತ ಸನ್ನಿವೇಶದಲ್ಲಿ ಸಸ್ಯಗಳನ್ನು ಸೃಷ್ಟಿಸುವ ವಿಧಾನಕ್ಕೆ ಅಂಗಾಂಶ ಕೃಷಿ ಎನ್ನುವರು.

ಸಾಮಾನ್ಯವಾಗಿ ಸಸ್ಯದ ಯಾವುದೇ ಜೀವಕೋಶಗಳು ತಮ್ಮದೇ ಆದಂತಹ ಪೂರ್ಣ ಸಸ್ಯವಾಗಿ ಬೆಳೆಯುವ ಸಾಮರ್ಥ್ಯವನ್ನು ಹೊಂದಿವೆ. ಇದನ್ನು ಟೋಟಿಪೊಟೆನ್ಸಿ(Totipotency) ಎನ್ನುವರು.

ಅಂಗಾಂಶ ಕೃಷಿ ವಿಧಾನವು ಈ ತತ್ವದ ಆಧಾರದ ಮೇಲೆ ರೂಪುಗೊಂಡಿದೆ.

ಈ ತಂತ್ರಜ್ಞಾನವನ್ನು ಕಂಡುಹಿಡಿದದ್ದು ಹೇಬರ್‌ಲ್ಯಾಂಡ್(Heberland) ಎಂಬ ವಿಜ್ಞಾನಿ 1902ರಲ್ಲಿ

## ಅಂಗಾಂಶ ಕೃಷಿಯ ಹಂತಗಳು:

**1. ಸಸ್ಯದ ಆಯ್ಕೆ:** ಅಂಗಾಂಶ ಕೃಷಿ ವಿಧಾನದಲ್ಲಿ ಮೊದಲ ಹಂತವೆಂದರೆ ಸಸ್ಯದ ಆಯ್ಕೆ. ನಾವು ಯಾವ ಸಸ್ಯವನ್ನು ಅಂಗಾಂಶ ಕೃಷಿಗೆ ಒಳಪಡಿಸಬೇಕಾಗಿದೆಯೋ ಅಂತಹ ಸಸ್ಯವನ್ನು ಮೊದಲು ಆಯ್ಕೆ ಮಾಡಿಕೊಳ್ಳಬೇಕು. ಸಾಮಾನ್ಯವಾಗಿ ಅಳಿವಿನ ಅಂಚಿನಲ್ಲಿರುವ ಅಥವಾ ಅತಿ ಹೆಚ್ಚು ವಾಣಿಜ್ಯ ಮೌಲ್ಯವನ್ನು ಹೊಂದಿರುವ ಅಥವಾ ಹೆಚ್ಚು ಪೋಷಣಾ ಮೌಲ್ಯವಿರುವ ಅಥವಾ ರಫ್ತು ಮೌಲ್ಯವಿರುವ ಅಥವಾ ರೋಗ ನಿರೋಧಕ ಶಕ್ತಿಯನ್ನು ಹೊಂದಿರುವ ಸಸ್ಯವನ್ನು ಆಯ್ಕೆಮಾಡಿಕೊಂಡು ಅಂಗಾಂಶ ಕೃಷಿ ಮಾಡುತ್ತಾರೆ. ಜೈವಿಕ ತಂತ್ರಜ್ಞಾನದ ಮೂಲಕ ಅಂಗಾಂಶ ಕೃಷಿ ಮಾಡಿದಾಗ ಅನೇಕ ರೀತಿಯ ಉಪಯೋಗಗಳಾಗುತ್ತದೆ.

(3) ಜೀವ ದ್ರವ್ಯ ಸಂಕರಣದ ಮೂಲಕ ವಿವಿಧ ಜಾತಿಯ ಸತ್ವ ಜೀವಕೋಶಗಳನ್ನು ಬೆಳೆದು ಹೊಸ ಜಾತಿಯ ಸಸ್ಯಗಳನ್ನು ಸೃಷ್ಟಿಸಬಹುದಾಗಿದೆ.

## ತದ್ರೂಪಿ ಸೃಷ್ಟಿ(Cloning)

ಒಂದೇ ಮಾತೃಜೀವಕೋವದಿಂದ ಅಲೈಂಗಿಕ ರೀತಿಯಲ್ಲಿ ಉತ್ಪತ್ತಿಯಾಗಿರುವ ಅಣುಗಳ (ಜೀನ್‌ಗಳ) ಅಥವಾ ಜೀವಕೋಶಗಳ ಒಂದು ಇಡೀ ಸಮೂಹಕ್ಕೆ ತದ್ರೂಪಿ ಅಥವಾ ಕ್ಲೋನ್ ಎಂದು ಹೆಸರು.

ಅನುವಂಶಿಯವಾಗಿ ಒಂದೇ ತೆರನಾಗಿರುವ ಅಣುಗಳನ್ನು ಅಥವಾ ಜೀವಕೋಶಗಳನ್ನು ಅಥವಾ ಜೀವಿಗಳನ್ನು ಜೀವಿಯೊಂದರ ದೇಹದ ಒಳಗೆ ಅಥವಾ ದೇಹದ ಹೊರಗೆ ಉತ್ಪತ್ತಿಮಾಡುವ ಪ್ರಕ್ರಿಯೆಗೆ ತದ್ರೂಪಿ ಸೃಷ್ಟಿ ಅಥವಾ ಕ್ಲೋನಿಂಗ್ ಎಂದು ಹೆಸರು. ಸ್ಕಾಟ್‌ಲೆಂಡಿನ ಡಾ|| ಇಯಾನ್ ವಿಲ್ಮೆಟ ಎಂಬ ವಿಜ್ಞಾನಿ. ಈ ವಿಧಾನವನ್ನು ಕಂಡು ಹಿಡಿದನು. ಅವನಿಗೆ ತದ್ರೂಪಿ ಸೃಷ್ಟಿಯ ಜನಕ ಎಂದು ಕರೆಯುತ್ತಾರೆ.

* ಮೇಕೆ, ಹಂದಿ, ಇಲಿ, ಮಂಗ, ಮುಂತಾದ ಪ್ರಾಣಿಗಳಿಗೆ ಮಾನವನ ಅಗತ್ಯ ಜೀನ್‌ಗಳನ್ನು ಸೇರಿಸಿ ಉಪಯುಕ್ತ

ಉತ್ಪನ್ನಗಳನ್ನು ಪಡೆಯುವ ಪ್ರಯತ್ನಗಳಿಗೆ ಈ ತಂತ್ರಜ್ಞಾನ ವರದಾನವಾಗಿದೆ.

* ಹೆಚ್ಚಿನ ಪೌಷ್ಟಿಕಾಂಶಗಳನ್ನು ಹೊಂದಿರುವ 'ರೋಜಿ' ಎಂಬ ಹಸುವಿನ ಹಾಲನ್ನು ಮಕ್ಕಳಿಗೆ ಕೊಡಬಹುದು.
* ಹಲವಾರು ಭಯಾನಕ ರೋಗಗಳನ್ನು ತಡೆಯಬಹುದಾಗಿದೆ.
* ಅಳಿವಿನ ಅಂಚಿನಲ್ಲಿರುವ ಸಸ್ಯ ಮತ್ತು ಪ್ರಾಣಿ ಪ್ರಭೇದಗಳನ್ನು ಉಳಿಸಬಹುದಾಗಿದೆ.
* ಊನಗೊಂಡ ಅಂಗಗಳನ್ನು ಪುನಃ ಬೆಳೆಸಿ ಜೋಡಿಸಬಹುದಾಗಿದೆ.

### ತದ್ರೂಪು ಸೃಷ್ಟಿ ತಂತ್ರಜ್ಞಾನದಲ್ಲಿ ಭಾರತೀಯರ ಸಾಧನೆ

ಪೂರ್ಣ ಪ್ರಮಾಣದಲ್ಲಿ ದೇಹಕಾಯ ಕೋಶಗಳಿಂದ ತದ್ರೂಪುಗೊಂಡ ಮೊದಲ ಜೀವಿ ಡಾಲಿ ಕುರಿ ಇದು ಸಾಧ್ಯವಾದದ್ದು 1996ರಲ್ಲಿ ಇದಕ್ಕೆ ಸಂಶೋಧನೆಗಳು, ಭ್ರೂಣ ಕೋಶಗಳಿಂದ ತದ್ರೂಪಿ ಸೃಷ್ಟಿ ಅನೇಕ ಜೀವಿಗಳಲ್ಲಿ ಯಶಸ್ವಿಯಾಯಿತು. ಪ್ರಪಂಚದ ನಾನಾ ಮೂಲೆಗಳಲ್ಲಿ ಇದಕ್ಕೆ ಸಂಬಂಧಿಸಿದ ಅನೇಕ ಸಂಶೋಧನೆಗಳು ನಡೆದು ಅದರಲ್ಲಿ ಯಶಸ್ವಿಯೂ ದೊರೆಯಿತು.

ಇದೆಲ್ಲದರ ಪರಿಣಾಮ ಭಾರತದಲ್ಲಿ ಜೈವಿಕ ತಂತ್ರಜ್ಞಾನದ ವಿವಿಧ ಶಾಖೆಗಳು ಅಭಿವೃದ್ಧಿಯಾದವು. ಮಾಹಿತಿ ತಂತ್ರಜ್ಞಾನ ಮತ್ತು ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಭಾರತೀಯರಾದ ನಾವು ಗಮನಾರ್ಹವಾದ ಹೆಜ್ಜೆ ಗುರುತುಗಳನ್ನು ಮೂಡಿಸಿದ ಹಾಗೆಯೇ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲೂ ನಮ್ಮ ಸಾಧನೆಗಳು ಗುರುತಿಸಲ್ಪಟ್ಟಿವೆ.

ಕಳೆದ ನಾಲ್ಕು ವರ್ಷಗಳಿಂದೀಚೆಗೆ ತದ್ರೂಪು ಸೃಷ್ಟಿ ತಂತ್ರಜ್ಞಾನ ಕ್ಷೇತ್ರದಲ್ಲಿ ನಮ್ಮ ಸಾಧನೆಯ ರೇಖೆ ಏರುಮುಖವಾಗಿದೆ. ನಂತರ ಭಾರತದಲ್ಲಿ ಅನೇಕ ಜೀವಿಗಳ ತದ್ರೂಪಗಳನ್ನು ಸೃಷ್ಟಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಎಮ್ಮೆ, ಮೇಕೆ, ನೀರೆಮ್ಮೆ, ಬದನೆ, ಈ ರೀತಿಯಾಗಿ ಜೈವಿಕ ತಂತ್ರಜ್ಞಾನವು ಮಾನವನ ಜೀವನದಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿದೆ. ಪ್ರಚಂಡವಾಗಿ ಬೆಳೆಯುತ್ತಿರುವ ಜನಸಂಖ್ಯೆಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸಲು ಸಹಾಯಕಾರಿಯಾಗಿದೆ.

### ನೀರೆಮ್ಮೆ (Water Buffalo)

ಭಾರತೀಯ ವಿಜ್ಞಾನಿಗಳ ಮತ್ತೊಂದು ಹಿರಿಮೆ ಎಂದರೆ 2009ರಲ್ಲಿ ನವದೆಹಲಿಯ ವಿಜ್ಞಾನಿಗಳು 'ಸಂರುಪ' ಎನ್ನುವ 'ನೀರೆಮ್ಮೆ'ಯ ತದ್ರೂಪನ್ನು ಸೃಷ್ಟಿಸಿದರು.

ಹೀಗೆ ಭಾರತೀಯರು ಅನೇಕ ಜೀವಿಗಳ ತದ್ರೂಪನ್ನುಸೃಷ್ಟಿಸುವುದರ ಮೂಲಕ ಈ ತಂತ್ರಜ್ಞಾನದಲ್ಲಿತಮ್ಮದೇ ಆದ ಪ್ರಭುತ್ವವನ್ನು ಸಾಧಿಸಿದ್ದಾರೆ.

### ಬದನೆ ಬೆಳೆ

ಭಾರತ ಜಗತ್ತಿನ ಅತಿ ಹೆಚ್ಚು ಬದನೆಕಾಯಿ ಬೆಳೆಯುವ ರಾಷ್ಟ್ರಗಳಲ್ಲಿ ಎರಡನೆಯದಾಗಿದೆ. ಚೀನಾ ಮೊದಲ ಸ್ಥಾನದಲ್ಲಿದೆ. ಬದನೆ ಕೃಷಿ ಮಾಡಿ, ಪ್ರತಿ ಹೆಕ್ಟೇರಿಗೆ ಸರಾಸರಿ 16.3 ಟನ್‌ನಂತೆ ಒಟ್ಟು 75 ಲಕ್ಷ ಟನ್‌ನಷ್ಟು ಬದನೆಕಾಯಿ ಬೆಳೆಯಲಾಗುತ್ತದೆ. ಇದು ಜಗತ್ತಿನ ಒಟ್ಟು ಉತ್ಪಾದನೆಯ ಶೇ. 26ರಷ್ಟು ಭಾರತ ಮತ್ತು ಚೀನಾ ದೇಶಗಳು ಜಗತ್ತಿನ ಒಟ್ಟು ಉತ್ಪಾದನೆಯ ಶೇ. 60 ರಷ್ಟು ಉತ್ಪಾದಿಸುತ್ತವೆ.

ನಾಟಿ ಬದನೆ ಬೆಳೆಯುವ ರೈತನೊಬ್ಬ ಒಂದು ಬೆಳೆ ಅವಧಿಯಲ್ಲಿ ಕನಿಷ್ಠ 40 ರಿಂದ 50 ಸಾರಿ ಕ್ರಿಮಿನಾಶಕ ಸಿಂಪಡಿಸಬೇಕು. ಇದರಿಂದ ಸಿಂಪಡಿಸುವವರ ದೇಹಕ್ಕೆ ವಿಷ ಸೇರ್ಪಡೆಯಾಗುತ್ತದೆ. ಇದು ಮಾನವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದರೆ ಬಿ.ಟಿ. ಬೆಳೆ ಕೇವಲ ಕ್ರಿಮಿಗಳನ್ನು ಮಾತ್ರ ಕೊಲ್ಲುತ್ತದೆ. ಮನುಷ್ಯರ

ಆರೋಗ್ಯದ ಮೇಲೆ ಪರಿಣಾಮ ಬೀರುವುದಿಲ್ಲ. ಹಾಗೂ ಬಿ.ಟಿ. ಬದನೆಗೆ ಸಿಂಪಡಿಸಬೇಕಾದ ಕ್ರಿಮಿನಾಶಕವೂ ಸಹ ಕಡಿಮೆ ಎಂಬುದು ಮಹಿಕೊಮಾನ್ಯಂಟೊ ಬಯೋಟಿಕ್ ಕಂಪನಿ ಹಾಗೂ ಬೆಂಬಲಿಗರ ವಾದವಾಗಿದೆ.

* ಬಿ.ಟಿ. ಬದನೆ ಬೆಳೆಯುವದರಿಂದ ರೈತರಿಗೆ ಉತ್ತಮ ಫಸಲು ಹಾಗೂ ಲಾಭ ದೊರೆಯುತ್ತದೆ.
* ಬಿ.ಟಿ. ಬದನೆಯಲ್ಲಿ ವಿಷವಿದೆಯೆಂದು ವಿನಾಕಾರಣ ರೈತರಲ್ಲಿ ಗೊಂದಲ ಸೃಷ್ಟಿಸಲಾಗಿದೆ ಯಾವ ವಿಷಕಾರಿ ಅಂಶವೂ ಅದರಲ್ಲಿ ಪತ್ತೆಯಾಗಿಲ್ಲ ಎಂದು ಕೆಲವು ರೈತರು ಬಿ.ಟಿ. ಬದನೆ ಪರನಿಂತಿದ್ದಾರೆ. ಕೃಷಿ ಭಾರತದಲ್ಲಿ ಬಳಕೆ ಮಾಡಲು ಬಹುಸಂಖ್ಯಾತರು ವಿರೋಧಿಸಿದ್ದಾರೆ. ಪ್ರಮುಖವಾಗಿ ರೈತ ಸಂಘದ ಸದಸ್ಯರು ಭಾರತ್ ಕಿಸಾನ್ ಸಂಘದವರು, ಪ್ರಗತಿಪರವಾದಿಗಳು, ಪರಿಸರ ವಾದಿಗಳು, ಕೃಷಿ ವಿಜ್ಞಾನಿಗಳು, ಕವಿ

### ಬಿ.ಟಿ. ಬದನೆ ವಿರೋಧ ಏಕೆ?

* ಬಿ.ಟಿ. ಬದನೆ ಕೃಷಿ ಭಾರತದಲ್ಲಿ ಬಳಕೆ ಮಾಡಲು ಬಹುಸಂಖ್ಯಾತರು ವಿರೋಧಿಸಿದ್ದಾರೆ. ಪ್ರಮುಖವಾಗಿ ರೈತ ಸಂಘದ ಸದಸ್ಯರು ಭಾರತ್ ಕಿಸಾನ್ ಸಂಘದವರು, ಪ್ರಗತಿಪರವಾದಿಗಳು, ಪರಿಸರ ವಾದಿಗಳು, ಕೃಷಿ ವಿಜ್ಞಾನಿಗಳು, ಕವಿ ಹಾಗೂ ಪ್ರಗತಿಪರ ಲೇಖಕರು ಬಿ.ಟಿ. ಬದನೆ ವಿರುದ್ಧವಾಗಿ ನಿಂತಿದ್ದಾರೆ. ವಿರೋಧಕ್ಕೆ ನೀಡಿರುವ ಪ್ರಮುಖ ಕಾರಣಗಳು.
* ಬಿ.ಟಿ. ಯಲ್ಲಿನ ಜೀನ್‌ನಲ್ಲಿ ವಿಷದ ಅಂಶವಿದ್ದು, ಅದು ಮನುಷ್ಯರ ಆರೋಗ್ಯ ಮತ್ತು ಮಣ್ಣಿನ ಫಲವತ್ತತೆ ಮೇಲೆ ದುಷ್ಪರಿಣಾಮ ಬೀರುತ್ತದೆ.
* ದೇಶಿಯ ಬದನೆಯಲ್ಲಿ 55 ವಿವಿಧ ತಳಿಗಳಿದ್ದು ಸಾವಿರಾರು ವರ್ಷದಿಂದ ರೈತರು ಅದನ್ನು ಬೆಳೆಸಿಕೊಂಡು ಬರುತ್ತಿದ್ದಾರೆ.
* ಒಂದು ಬಿ.ಟಿ. ಬದನೆ ಗಿಡವನ್ನು ನೆಟ್ಟರೆ ಅದರ ಪರಾಗಸ್ಪರ್ಶ ಸುಮಾರು 20 ಕಿಮೀ ದೂರದವರೆಗೂ ನಡೆಯುತ್ತದೆ. ಆಗ ನಾಟಿ (ದೇಶಿ) ತಳಿಗಲು ಸಹ ಬಿ.ಟಿ.ಯಾಗುತ್ತದೆ ಎಂಬುದು ವಿಚಾರವಾದಿಗಳ ವಾದ.
* ಕುಲಾಂತರಿ ತಳಿಗಳ ಆಹಾರ ಸೇವಿಸಿದ ಪ್ರಾಣಿಗಳು ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವುದರಿಂದ ಬಿ.ಟಿ. ತಳಿಗಳಿಗೆ ಅತ್ಯಂತ ಅಪಾಯಕಾರಿ ರಾಸಾಯನಿಕ ಬಳಸಬೇಕಾಗುತ್ತದೆ.
* ಅತಿ ಹೆಚ್ಚು ರಾಸಾಯನಿಕ ಬಳಕೆಯಿಂದ ಭೂಮಿಯು ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ.
* ಜಾಂಬಿಯಾ ಮತ್ತು ಫ್ರಾನ್ಸ್ ದೇಶಗಳು ಮನುಷ್ಯ ಮತ್ತು ಪರಿಸರದ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿ.ಟಿ. ಕೃಷಿಯನ್ನು ಸಂಪೂರ್ಣವಾಗಿ ನಿಷೇಧಿಸಿವೆ.


---

### ಶಬ್ದಗಳ ಅರ್ಥ:

ಪ್ರಮುಖ–ಮುಖ್ಯ; ನ್ಯೂಕ್ಲಿಯಸ್ –ಹೊಸದನ್ನು ಸೇರಿಸಿಕೊಳ್ಳುವ ಭಾಗ; ಜಿನ್ – ವಂಶವಾಹಿನಿಯ ಕಣ; ಪ್ಲಾಸ್ಮಿಡ್ – ಕೋಶ ದ್ರವದ ಎಳೆ; ದುರಂತ – ಅಪಘಾತ; ಅಳಿವು – ನಾಶ; ಇಳುವಳಿ – ಲಾಭ; ಊನ – ಅಂಗಹೀನತೆ

### ಕೃತಿ:1 ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.

ಅ)



ಆ) ಸರಿಯಾದ ಮಾಹಿತಿ ತುಂಬಿ ಜಾಲವನ್ನು ಪೂರ್ಣಗೊಳಿಸಿರಿ.

| ಹೆಸರು | ಲಾಭಗಳು |
|---|---|
| DNA | i) |
| | ii) |
| | iii) |

ಇ) ಕೆಳಗಿನ ಶಬ್ದಗಳನ್ನು ಸರಿಯಾಗಿ ಹೊಂದಿಸಿ ಅರ್ಥಪೂರ್ಣ ವಾಕ್ಯ ತಯಾರಿಸಿರಿ.

‘‘ಜನಕ ತದ್ರೂಪಿ ಕರೆಯುತ್ತಾರೆ. ಇಯಾನ ವಿಲ್ಮಟ ಎಂದು ಸೃಷ್ಟಿಯ ಅವರನ್ನು’

**ಕೃತಿ:2 ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

i) ಜೈವಿಕ ತಂತ್ರಜ್ಞಾನ ಎಂದರೇನು?


ii) ಜೀನ್ಸ ಎಂದರೇನು?

iii) ಮೊಟ್ಟ ಮೊದಲ ತದ್ರೂಪಿ ಜೀವಿ ಯಾವುದು?

iv) ಡಾ|| ಇಯಾನ ವಿಲ್ಮೆಟ್ ಅವರಿಗೆ ಏನೆಂದು ಕರೆಯುತ್ತಾರೆ?


**ಕೃತಿ:3 ತಳಿ ತಂತ್ರಜ್ಞಾನದಿಂದ ಆಗಿರುವ ಲಾಭಗಳನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.**

ಅ) ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.




**ಕೃತಿ:4**

ಅ)



ಬ) ಸೂಕ್ತ ಪದಗಳನ್ನು ಆರಿಸಿ ಬಿಟ್ಟ ಸ್ಥಳ ತುಂಬಿ ವಾಕ್ಯಗಳನ್ನ ಪುನಃ ಬರೆಯಿರಿ.

[ರೋಗ ನಿರೋಧಕ, ಬೆರಳಚ್ಚು, ಅಳಿವಿನ, ಜೀವಕೋಶ, ತಳಿ ತಂತ್ರಜ್ಞಾನ]

i) ಪ್ರತಿಯೊಂದು ಜೀವಿಯ ದೇಹವು --------ಗಳೆಂಬ ರಚನಾತ್ಮಕ ಮತ್ತು ನಿರ್ವಾಹಕ ಮೂಲ ಘಟಕಗಳಿಂದಾಗಿದೆ.

ii) ------ ಇದಕ್ಕೆ ಪುನರ್ ಸಂಯೋಜಿತ DNA ತಂತ್ರಜ್ಞಾನ ಎನ್ನುವರು.

iii) ------ ತಂತ್ರಜ್ಞಾನವು ಅಪರಾಧ ಶಾಸ್ತ್ರದಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿರುವ ಒಂದು ತಂತ್ರ.

iv) ಆಧುನಿಕ ತಂತ್ರಜ್ಞಾನದಿಂದ ------ ಮತ್ತು ಹೆಚ್ಚು ಇಳುವರಿ ನೀಡುವ ಸಸ್ಯಗಳನ್ನು ಪಡೆಯಬಹುದು.

v) ------ ಅಂಚಿನಲ್ಲಿರುವ ಸಸ್ಯ ಮತ್ತು ಪ್ರಾಣಿ ಪ್ರಭೇದಗಳನ್ನು ಉಳಿಸಬಹುದಾಗಿದೆ.

**ಕೃತಿ: 5 ಸರಿಯಾದ ಉತ್ತರವನ್ನು ಆರಿಸಿ ಚೌಕಟ್ಟಿನಲ್ಲಿ ಅದರ ಸಂಖ್ಯೆಯನ್ನು ತುಂಬಿರಿ.**

i) ಭಾರತದಲ್ಲಿ ಜೈವಿಕ ತಂತ್ರಜ್ಞಾನದ ಬೆಳವಣಿಗೆಗಾಗಿ ಸ್ಥಾಪನೆಗೊಂಡ ಸಂಸ್ಥೆ-

1) ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ.

2) ರಾಷ್ಟ್ರೀಯ ಜೈವಿಕ ತಂತ್ರಜ್ಞಾನ ಮಂಡಳಿ.

3) ರಾಷ್ಟ್ರೀಯ ಜೈವಿಕ ತಂತ್ರಜ್ಞಾನ ಅಭಿವೃದ್ಧಿ ಮಂಡಳಿ.

4) ಭಾರತೀಯ ಜೈವಿಕ ತಂತ್ರಜ್ಞಾನ ಅಭಿವೃದ್ಧಿ ಸಂಸ್ಥೆ.

ii) ಪುನರ್ ಸಂಯೋಜಿತ DNA ತಂತ್ರಜ್ಞಾನದಲ್ಲಿ ಜೀನ್‌ನ್ನು ಸಾಗಿಸಲು ಬಳಸುವ ಸಾಧನ

1) ಎಂಡೋನ್ಯೂಕ್ಲಿಯೆನಸ್ 2) DNA ಲಿಗೇಸ್

3) ಪ್ಲಾಸ್ಮಿಡ್‌ಗಳು 4) ರಿಸ್ಟ್ರಿಕ್ಷನ್ ಎಂಡೊನ್ಯೂಕ್ಲಿಯೆನಸ್

iii) ತದ್ರೂಪಿ ಸೃಷ್ಟಿಯ ಜನಕ

1) ಇಯಾನ ವಿಲ್ಮೆಟ್ 2) ಅಲೇಕ ಜೆಫರಿ

3) ಹೇಬರಲ್ಯಾಂಡ 4) ಜಾಯಹಾಕ್ಸ

iv) ಸಸ್ಯದ ಕತ್ತರಿಸಿದ ಅಂಗಾಂಶಗಳನ್ನು ಸೂಕ್ತ ಪೋಷಕ ಮಾಧ್ಯಮದಸಹಾಯದಿಂದ ನಿಯಂತ್ರಿತ ಸನ್ನಿವೇಶಗಳಲ್ಲಿ ಸಸ್ಯಗಳನ್ನು ಸೃಷ್ಟಿಸುವವಿಧಾನ.

1) ತಳಿ ತಂತ್ರಜ್ಞಾನ 2) DNA ತಂತ್ರಜ್ಞಾನ

3) ಅಂಗಾಂಶ ಕೃಷಿ 4) ತದ್ರೂಪಿ ಕೃಷಿ

**ಕೃತಿ: 6** ಪ್ರಗತಿಪರ ರೈತರ ತೋಟಕ್ಕೆ ಹೋಗಿ ಅಧಿಕ ಇಳುವರಿ ಕೊಡುವ ಬೆಳೆಗಳು ಮತ್ತು ಬೆಳೆಯುವ ವಿಧಾನಗಳನ್ನು ತಿಳಿದುಕೊಂಡು ಬರೆಯಿರಿ.

CA46C7

# 7. ಏಣಗಿ ಬಾಳಪ್ಪ

**– ಗಣೇಶ ಅಮೀನಗಡ**

**ಲೇಖಕರ ಪರಿಚಯ :** ಗಣೇಶ ಅಮೀನಗಡ ಅವರು ಮೈಸೂರಿನಲ್ಲಿ ಪ್ರಜಾವಾಣಿ ಪತ್ರಿಕೆಯ ಹಿರಿಯ ವರದಿಗಾರರಾಗಿರುವರು. ಪ್ರಯೋಗ ಪ್ರಸಂಗ, ಕೈದಿಗಳ ಕಥನ, ಮೈಸೂರು ಮದುಮಗಳು, ಬಣ್ಣದ ಬದುಕಿನ ಚಿನ್ನದ ದಿನಗಳು ಇವರ ಪ್ರಕಟಿತ ಕೃತಿಗಳು, ಅನೇಕ ಪ್ರಶಸ್ತಿ, ಪುರಸ್ಕಾರಗಳಿಗೆ ಬಾಜನರಾಗಿರುವ ಇವರು ಸಂವೇದನಾಶೀಲ ಲೇಖಕರಾಗಿದ್ದಾರೆ. ಭಾಷೆಯ ಅಚ್ಚುಕಟ್ಟುತನ ಹಾಗೂ ಶೈಲಿಯ ಪಳಗಿರುವಿಕೆ ಇವರ ಕೃತಿಗಳ ವೈಶಿಷ್ಟ್ಯವಾಗಿದೆ.

ಪ್ರಸ್ತುತ ಲೇಖನದಲ್ಲಿ ಕನ್ನಡ ರಂಗಭೂಮಿಯ ಹಿರಿಯ ಚೇತನವಾಗಿರುವ ಏಣಗಿ ಬಾಳಪ್ಪನವರ ಬದುಕು, ರಂಗಭೂಮಿಯ ಇತಿಹಾಸವನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ. ಬಾಳಪ್ಪನವರು ನಮ್ಮ ಕಾಲದ ವಿಶಿಷ್ಟ, ವಿಸ್ಮಯಕಾರಿ ವ್ಯಕ್ತಿ, ಕಲಾಜಗತ್ತಿನ ಶಕ್ತಿ, ಮುಪ್ಪಿನಲ್ಲೂ ಮುದುಡದ ಧೀಶಕ್ತಿ ಎಂಬುದನ್ನು ಸರಳವಾದ ಶೈಲಿಯಲ್ಲಿ ನಿರೂಪಿಸಿದ್ದಾರೆ.

ಬಿಳಿ ರುಮಾಲು, ಬಿಳಿ ಅಂಗಿ, ಬಿಳಿ ಧೋತರ, ಎಡ ಹೆಗಲಿಗೊಂದು ಹೆಚ್ಚಾಗಿ ಬಿಳಿ ಶಾಲು, ಬಿಳಿ ಹುಬ್ಬು... ಇಂಥ ಬೆಳ್ಳಿ ಬಾಳಪ್ಪನವರ ಬಣ್ಣದ ಬದುಕಿನ ದಿನಗಳೆಂದರೆ ಚಿನ್ನದಂಥವು.

ಕಳೆದ ಶತಮಾನದ ರಂಗಭೂಮಿಯ ಇತಿಹಾಸಕ್ಕೆ ಸಾಕ್ಷಿಯಾಗಿರುವ ನಾಟ್ಯಭೂಷಣ ಏಣಗಿ ಬಾಳಪ್ಪ ಎಂದರೆ ವೃತ್ತಿ ರಂಗಭೂಮಿಯ ನಡೆದಾಡುವ ವಿಶ್ವಕೋಶವಿದ್ದಂತೆ. ಅವರು ಬಾಲನಟಿಯಾಗಿ, ಸ್ತ್ರೀಪಾತ್ರಧಾರಿಯಾಗಿ, ನಟರಾಗಿ, ಗಾಯಕರಾಗಿ, ನಾಟಕ ಕಂಪನಿ ಮಾಲೀಕರಾಗಿ... ಹೀಗೆ ರಂಗಭೂಮಿಯನ್ನೇ ಉಸಿರಾಡಿ ಹೆಸರಾದರು. 102 ವರ್ಷದ ಅವರು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಏಣಗಿ ಗ್ರಾಮದಲ್ಲಿರುತ್ತಾರೆ. ಅವರು ಜನಿಸಿದ್ದು 1914ರಲ್ಲಿ ಏಣಗಿ ಗ್ರಾಮದಲ್ಲಿ. ಅವರ ಅವ್ವ ಬಾಳಮ್ಮ, ತಂದೆ ಕರಿಬಸಪ್ಪ.

ಬಾಳಪ್ಪ ಜನಿಸಿದ ಮೂರು ವರ್ಷಕ್ಕೇ ಅವರ ತಂದೆ ಕರಿಬಸಪ್ಪ ತೀರಿಕೊಂಡರು. 12-13 ವರ್ಷದವರಿದ್ದಾಗ ಅವರ ಅಕ್ಕ ಮತ್ತು ಅಣ್ಣನೂ ತೀರಿಕೊಂಡರು. ಬಾಗಾಯತ (ನೀರಾವರಿ) ಅಲ್ಲದ ಕಾರಣ ಬೆಳೆಯೂ ಅಷ್ಟಕಷ್ಟೆ. ಹೀಗಾಗಿ 14 ಎಕರೆ ಹೊಲವು ಒತ್ತೆ ಬಿತ್ತು. ಸ್ಥಿತಿವಂತರ ಮನೆತನದಿಂದ ಬಂದ ಅವರ ತಾಯಿಗೆ ಕೂಲಿ ಮಾಡುವ ಅಭ್ಯಾಸ ಇರಲಿಲ್ಲ. ಇದನ್ನು ಬಾಳಪ್ಪ ಹೀಗೆ ನೆನಪಿಸಿಕೊಳ್ಳುತ್ತಾರೆ-ನನ್ನ ಅವ್ವ ಬೇರೆಯವರ ಹೊಲದಲ್ಲಿ ಕೆಲಸಕ್ಕೆ ಹೋಗಲು ಮನಸ್ಸು ಗಟ್ಟಿ ಮಾಡಿದಳು. ದುಡೀಲಿಕ್ಕೂ ಹೋದಳು. ಆದರೆ ಬೇರೆ ಆಳುಗಳಂತೆ ಇವಳಿಂದ ಕೆಲಸವಾಗುವುದಿಲ್ಲವೆಂದು ಕಂಡ ಸಾಹುಕಾರರು ನಾಳೆಯಿಂದ ಕೆಲಸಕ್ಕೆ ಬರಬೇಡವೆಂದು ಹೇಳಿದರು. ಕಣ್ಣೀರು ಹಾಕ್ತಿದ್ದ ಅವ್ವಳಿಗೆ ಆಗನಾನು ನನ್ನ ಬಾಲ್ಯಬುದ್ಧಿಗೆ ತಕ್ಕಂತೆ ಹೇಳಿದೆ.

'ಅವ್ವಾ, ನಾನೂ ನಿನ್ನ ಕೂಡ ಕೆಲಸಕ್ಕ ಬರ್ತೀನಿ. ಇಬ್ರೂ ದುಡಿದ್ರ ಒಂದೇ ಆಳಿನ ಲೆಕ್ಕ ಸಾಹುಕಾರರು ಕೊಡ್ಲಿ' ಎಂದೆ. ಅವ್ವಳಿಗೆ ನನ್ನನ್ನು ದುಡಿಸಲು ಮನಸ್ಸಿರಲಿಲ್ಲ. ನನ್ನ ಒತ್ತಾಯಕ್ಕೆ ಒಪ್ಪಿದಳು. ಇಬ್ಬರೂ ದುಡಿಯಲು ಯತ್ನಿಸಿದೆವು. ಆದರೆ ದುಡಿದು ಗೊತ್ತೇ ಇಲ್ಲದ ನನ್ನ ಕೈ ತುಂಬ ಗುಳ್ಳೆಗಳೆದ್ದವು. ಮುಂದೆ ಅದೂ ಸಾಗಲಿಲ್ಲ. ಒಮ್ಮೆಯಂತೂ ಕಿತ್ತು ತಿನ್ನುವ ಬಡತನ ನಮ್ಮ ಮೇಲೆ ಎಂತಹ ಸ್ಥಿತಿ ತಂದಿತೆಂದರೆ, ಅದು ನೆನಪಾದರೆ ಈಗಲೂ ಕಣ್ಣಲ್ಲಿ ನೀರು ಬರುತ್ತದೆ. ಒಂದು ದಿನ ರಾತ್ರಿ ಅವ್ವ ನನಗೆ ಊಟ ಬಡಿಸಿದಳು. ನಾನು ಉಂಡೆ, ಕೂಡಲೇ ಆಕೆ ಮಲಗಲು ಹಾಸಿಗೆ ತಯಾರಿಸಿದಳು. ಆಗ ನಾನು 'ಅವ್ವಾ, ನೀ ಊಟ ಮಾಡುವಂಗಿಲ್ಲೇನು?' ಅಂತ ಕೇಳಿದೆ.

ಆದರೆ ಏನೇನೋ ಹಾರಿಕೆ ಉತ್ತರ ಕೊಟ್ಟಳು. ಅಂದು ಇಬ್ಬರಿಗೂ ಆಗುವಷ್ಟು ರೊಟ್ಟಿ ಮನೆಯಲ್ಲಿರಲಿಲ್ಲವೆಂಬ ಸತ್ಯಸಂಗತಿ ನನಗೆ ತಿಳಿಯಿತು.

'ಅವ್ವಾ, ನಾಳೆಯಿಂದ ನಾವಿಬ್ರೂ ಕೂಡಿಯೇ ಊಟ ಮಾಡೋಣ. ಒಂದೇ ರೊಟ್ಟಿ ಇದ್ರ ಅರ್ಧ ಅರ್ಧ ತಿನ್ನೋಣ' ಎಂದು ಹೇಳಿದೆ. ಆಗ ಆಕೆ ನನ್ನನ್ನು ತಬ್ಬಿಕೊಂಡು ಅತ್ತಾಗ ನಾನೂ ಅತ್ತುಬಿಟ್ಟೆ.

ಹೀಗೆ ಬಡತನದ ಬೇಗೆಯಲ್ಲಿ ಬಾಲ್ಯ ಕಳೆದ ಬಾಳಪ್ಪ ಅವರು ಓದಿದ್ದು ನಾಲ್ಕನೆಯ ಇಯತ್ತೆಯವರೆಗೆ ಮಾತ್ರ. ಅವರಿಗೆ ಇದ್ದುದು ಒಳ್ಳೆಯ ಕಂಠ. ಓದುವಾಗಲೇ ಕವಿತೆಗಳನ್ನು ಹಾಡುತ್ತಿದ್ದರು. ಅವರ ಊರಿನವರು ಬಯಲಾಟ ಮಾಡಿದರೆ ಬಾಲಪಾತ್ರ ಮಾಡುತ್ತಿದ್ದರು. ಹೀಗಿದ್ದಾಗ ಅವರ ಊರಿನವರು ಗರುಡ ಸದಾಶಿವರಾಯರು ಬರೆದ

‘ಪಾದುಕಾ ಪಟ್ಟಾಭಿಷೇಕ’ ನಾಟಕ ಆಡಲು ಶುರು ಮಾಡಿದರು. ಅದರಲ್ಲಿ ಬಾಳಪ್ಪ ಅವರು ಭರತನ ಪಾತ್ರ ಮಾಡಿದರು. ಮೆಚ್ಚುಗೆಯೂ ಸಿಕ್ಕಿತು. ಈ ಮೆಚ್ಚುಗೆಯು ಅವರನ್ನು ನಾಟಕ ಕಂಪನಿಗೆ ಕರೆದೊಯ್ಯಿತು. ಅವರು ಊರು ಹಿರಿಯರ ಜೊತೆಗೆ ಹೋಗಿ ಭರತನ ಪಾತ್ರ ಮಾಡಿದರು. ಆ ನಾಟಕದಲ್ಲಿ ದಶರಥನ ಪಾತ್ರ ವಹಿಸಿದವರು ಚಿಕ್ಕೋಡಿ ಶಿವಲಿಂಗ ಸ್ವಾಮಿಗಳು. ಅವರು ಬಾಳಪ್ಪನವರ ಪಾತ್ರ ನೋಡಿ ಬೆನ್ನು ಚಪ್ಪರಿಸಿದರು.

ಕೆಲವು ದಿನಗಳಾದ ನಂತರ ಧಾರವಾಡದಿಂದ ಚಿಕ್ಕೋಡಿ ಶಿವಲಿಂಗ ಸ್ವಾಮಿಗಳು ತಮ್ಮ ಲಿಂಗರಾಜ ನಾಟ್ಯ ಸಂಘಕ್ಕೆ ಕರೆಸಿಕೊಂಡರು. ಅದು 1928ನೇ ಇಸವಿ. ಅವರು ಕಲ್ಲಾಗಿದ್ದ ಬಾಳಪ್ಪ ಅವರನ್ನು ಕಟೆದು ಮೂರ್ತಿ ಮಾಡಿದರು. ಎಲ್ಲೋ ಬಿದ್ದು ಹೋಗಬಾರದೆಂದು ರಂಗಭೂಮಿ ಗುಡಿಯಲ್ಲಿ ನಿಲ್ಲಿಸಿದರು.

1940ರಲ್ಲಿ ಅವರು ಕಲಾವೈಭವ ನಾಟ್ಯ ಸಂಘ ಎಂಬ ಸ್ವಂತ ಕಂಪನಿಯನ್ನು ಕಟ್ಟಿಸಿದರು. ಇದರ ಮೂಲಕ ‘ಬಸವೇಶ್ವರ’ ನಾಟಕ ಜಯಭೇರಿ ಬಾರಿಸಿತು. ಮಹಾರಾಷ್ಟ್ರದ ಮುಂಬೈ, ಇಚಲಕರಂಜಿ, ಸಾಂಗಲಿ, ಮಿರಜ, ಸೊಲ್ಲಾಪುರ, ಕೊಲ್ಲಾಪುರ, ಗಡಹಿಂಗ್ಲಜ ಮೊದಲಾದ ಊರುಗಳಲ್ಲಿ ಅವರ ನಾಟಕ ಕಂಪನಿ ಮುಕ್ಕಾಂ ಮಾಡಿತು. ಮಹಾರಾಷ್ಟ್ರದ ಜನರು ಬಯಸುವ ಧರ್ಮಶ್ರದ್ಧೆ, ಸಾಮಾಜಿಕ ಪ್ರಜ್ಞೆಯ ಪ್ರಯೋಗಶೀಲ ನಾಟಕಗಳು ಅವರ ಬತ್ತಳಿಕೆಯಲ್ಲಿದ್ದವು. ಇಚಲಕರಂಜಿಯಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಕಂಪನಿ ಮುಕ್ಕಾಂ ಮಾಡಿತು.

‘ಬಸವೇಶ್ವರ’ ನಾಟಕಕ್ಕೆ ಮಂಗಲವಾಗುತ್ತಿದ್ದಂತೆಯೇ ಅವರು ಬಸವೇಶ್ವರ ವೇಷದಲ್ಲಿಯೇ ಜೋಳಿಗೆ ಹಿಡಿದು ಮುಖ್ಯದ್ವಾರದ ಬಳಿ ನಿಲ್ಲುತ್ತಿದ್ದರು. ಪ್ರೇಕ್ಷಕರು ಹೋಗುವಾಗ ಕಾಣಿಕೆ ಹಾಕುತ್ತಿದ್ದರು. ಹೀಗೆ ಜೋಳಿಗೆಯಲ್ಲಿ ಸಂಗ್ರಹಿಸಿದ ಎಂಟು ಸಾವಿರ ರೂಪಾಯಿಗಳನ್ನು ವಿಜಾಪುರ (ವಿಜಯಪುರ)ಜಿಲ್ಲೆಯ ಬಸವನಬಾಗೇವಾಡಿಯ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಲ್ಲಿಸಿದರು. ವಚನ ಪಿತಾಮಹ ಎಂದು ಪ್ರಸಿದ್ಧರಾದ ಫ.ಗು.ಹಳಕಟ್ಟಿ ಹಾಗೂ ಧಾರವಾಡದ ಉತ್ತಂಗಿ ಚೆನ್ನಪ್ಪ ಅವರು ಆರ್ಥಿಕವಾಗಿ ತೊಂದರೆಯಲ್ಲಿದ್ದಾಗ ನೆರವಾದರು.

ಹೀಗೆ ಜೋಳಿಗೆ ಹಿಡಿಯಲು ಕಾರಣವೆಂದರೆ, ಅವರು ಮುಂಬೈಗೆ ನಾಟಕದ ಸಾಮಾನುಗಳನ್ನು ಖರೀದಿಸಲು ಹೋದಾಗ ಪೃಥ್ವಿರಾಜ್ ಕಪೂರ್ ಅವರ ನಾಟಕ ನೋಡಲು ಹೋಗುತ್ತಿದ್ದರು. ನಾಟಕ ಮುಗಿನ ನಂತರ ಕಪೂರ ಅವರು ಜೋಳಿಗೆ ಹಿಡಿದು ನಿಲ್ಲುತ್ತಿದ್ದರು. ದೇಶದ ಯಾವುದಾದರೂ ಪರಿಹಾರಕ್ಕೆ ಅವರು ಜೋಳಿಗೆ ಹಿಡಿಯುತ್ತಾರೆಂದು ತಿಳಿಯಿತು. ಇದರಿಂದ ಪ್ರೇರಣೆಗೊಂಡ ಅವರು ಬಸವಣ್ಣನ ಪಾತ್ರಧಾರಿಯಾಗಿ ಜೋಳಿಗೆ ಹಿಡಿಯಲು ಆರಂಭಿಸಿದರು.

ಧಾರವಾಡ ಜಿಲ್ಲೆಯ ಗುಡ್ಡದಮುಲ್ಲಾಪುರ ಊರಲ್ಲಿ ಬಸವಣ್ಣ ಜಾತ್ರೆಯಿತ್ತು. ಅಲ್ಲಿ ಬಾಳಪ್ಪ ಅವರು ಕಂಪನಿ ಮುಕ್ಕಾ, ಮಾಡಿತ್ತು. ಧಾರವಾಡದ ಮುರುಘಾಮಠದ ಮೃತ್ಯುಂಜಯ ಸ್ವಾಮಿಗಳು ಜಾತ್ರೆಗೆ ಬಂದಿದ್ದರು. ‘ಬಸವೇಶ್ವರ’ ನಾಟಕ ನೋಡಲು ಬರ್ರಿ ಎಂದು ಕೇಳಿಕೊಂಡರು. ನಂತರ ಬಂದ ಸ್ವಾಮಿಗಳನ್ನು ರಂಗದ ಬದಿಗೆ ಕೂಡಿಸಲಾಗಿತ್ತು.

ಅನುಭವ ಮಂಟಪದ ಸನ್ನಿವೇಶ ನಡೆಯುತ್ತಿರುವಾಗಲೇ ಸ್ವಾಮಿಗಳು, ಬಸವೇಶ್ವರ ಪಾತ್ರ ಮಾಡಿದ ಬಾಳಪ್ಪ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಗಾಬರಿಯಾದರು ಬಾಳಪ್ಪ, ಪ್ರೇಕ್ಷಕರಿಗೆ ಆಶ್ಚರ್ಯ. ಕೂಡಲೇ ನಾಟಕ ನಿಲ್ಲಿಸಿದರು. ಅವರನ್ನು ಆಸನದ ಮೇಲೆ ಕೂಡಿಸಿ ‘ಇದು ನಾಟಕ್ರಿ, ಇದು ನಾಟಕ’ ಎಂದಾಗ ಹ್ಞಾಂ ಹ್ಞಾಂ ಅಂದರು. ಅಷ್ಟು ಭಾವಪರವಶರಾಗಿದ್ದರು. ಸ್ವಾಮಿಗಳು ಇದನ್ನು ಅವರು ಮೆಲುಕು ಹಾಕುವ ಉದ್ದೇಶ ಏನೆಂದರೆ, ಪ್ರೇಕ್ಷಕರು ತಲ್ಲೀನರಾಗಿ ನಾಟಕ ನೋಡುತ್ತಿದ್ದರು, ತಲ್ಲೀನರಾಗುವ ಹಾಗೆ ಕಲಾವಿದರು ಪಾತ್ರ ಮಾಡುತ್ತಿದ್ದರು. ಇಂಥ ಬಾಳಪ್ಪನವರು ನವಲಗುಂದ ಸ್ವಾಮಿಗಳು ನೀಡಿದ ನಾಟ್ಯಭೂಷಣ ಬಿರುದು, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ನಿಡುಮಾಮಿಡಿ ಮಠದಿಂದ ನಾಟಕ ಕಲಾ ನಿಪುಣ ಬಿರುದು, ಮುಂಬೈನಲ್ಲಿ ಮಹಾರಾಷ್ಟ್ರ ಪ್ರದೇಶ ಬಸವ ಸಮಿತಿ ವತಿಯಿಂದ ‘ಬಸವತತ್ವ ಭೂಷಣ’ ಪದವಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಗೌರವ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾಗಿದ್ದಾರೆ.

ಅವರಿಗೆ ಇಬ್ಬರು ಪತ್ನಿಯರು. ಮೊದಲನೆಯವರು ಸಾವಿತ್ರಮ್ಮ. ಅವರಿಗೆ ನಾಲ್ವರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ. ಇನ್ನೊಬ್ಬರು ರಂಗಕಲಾವಿದೆ ಲಕ್ಷ್ಮೀಬಾಯಿ. ಅವರಿಗೆ ಇಬ್ಬರು ಮಕ್ಕಳು. ನಟರಾಜ ಹಾಗೂ

ಕೊಲ್ಹಾಪುರದಲ್ಲಿ ವಾಸವಾಗಿರುವ ಭಾಗ್ಯಶ್ರೀ. ಲಕ್ಷ್ಮಿಬಾಯಿ ಅವರು ಧಾರವಾಡದಲ್ಲಿ ನೆಲೆ ನಿಂತಿದ್ದಾರೆ.

ಬಾಳಪ್ಪನವರು ಮಾತು ಮುಗಿಸುವ ಮೊದಲು ಜೋಳದರಾಶಿ ದೊಡ್ಡನಗೌಡರು ರಚಿಸಿದ ಹಾಡೊಂದನ್ನು ಹಾಡುತ್ತಾರೆ. ಅದು ಹೀಗಿದೆ;

ಹೋಗಿಬರ್ತೇನಯ್ಯ ನಮ್ಮೂರಿಗೆ
ಎಲ್ಲರಿಗೂ ಶರಣಾರ್ಥಿ ದಯ ತೋರಿ ಕಳುಹಿಸಿರಿ
ಏಸೋ ಕಾಲದಿಂದ ಊರೂರು ತಿರುಗುತ
ನಿಮ್ಮೂರಿಗೆ ಬಂದೆ ಕಲಾವಿದನಾಗಿ
ಹಿಂದಿಲ್ಲ ಮುಂದಿಲ್ಲ, ನಾ ತಂದದ್ದೇನಿಲ್ಲ
ಎಲ್ಲ ನೀವೆ ನೀಡಿ ನೆರವಾದಿರಿ ಎನಗೆ

ತಂದೆ ತಾಯಿ ಅಣ್ಣತಮ್ಮಂದಿರಾಗುತ
ತಂದೆ ತಾಯಿ ಅಕ್ಕತಂಗಿಯರಾಗುತ
ಹಾಲು ಸಕ್ಕರೆ ತುಪ್ಪ ಇಕ್ಕಿ ಸಲುಹಿದಿರಿ
ಹೆಂಡತಿ ಮಕ್ಕಳ ಸಂಸಾರ ಬೆಳೆಸಿದಿರಿ
ಮಮಕಾರವಿದ್ದರೇನು ಬಿಟ್ಟು ಹೋಗಲೇಬೇಕು

ನಾ ವಾಸವಾಗಿದ್ದ ಮನೆಯು ಹಳೆಯದಾಯಿತು
ಇದ್ದಷ್ಟು ಕಾಲ ಸಂಸಾರಕ್ಕೆ ನೆರವಾಯಿತು
ಬಿಟ್ಟು ಹೋಗುವುದೆಲ್ಲ, ನಾ ತಂದದ್ದೇನಲ್ಲ
ನೀವಿತ್ತುದನ್ನೆಲ್ಲ ನಿಮಗೊಪ್ಪಿಸುವೆನಯ್ಯ

ಬದುಕಿದ್ದ ಕಾಲದಲ್ಲಿ ಏನೇನೋ ಮಾಡಿದೆ
ತಪ್ಪೇನೋ ಒಪ್ಪೇನೋ ಒಪ್ಪಿಸಿಕೊಳ್ಳಿರಯ್ಯ
ಹೋಗೆಂದ ದೇವನು ಬಾ ಎಂದ ಕರೆವನು
ಎಲ್ಲರಿಗೂ ಶರಣಾರ್ಥಿ ಎಲ್ಲರಿಗೂ ಶರಣಾರ್ಥಿ
ಶರಣಾರ್ಥಿ...

---

**ಕೃತಿ:1 ಬಿಟ್ಟಸ್ಥಳಗಳಲ್ಲಿ ಯೋಗ್ಯ ಶಬ್ದ ತುಂಬಿ ವಾಕ್ಯಪೂರ್ಣ ಮಾಡಿರಿ.**

i) ಬಣ್ಣದ ಬದುಕಿನ ---------- ದಿನಗಳೆಂದರೆ ಚಿನ್ನದಂಥವು.

ii) ಬಾಳಪ್ಪನವರು ---------- ರಲ್ಲಿ ಜನಿಸಿದರು.

iii) ಗರುಡ ಸದಾಶಿವರಾಯರು ಬರೆದ -------- ನಾಟಕ ಆಡಲು ಶುರು ಮಾಡಿದರು.

iv) ----------- ಅವರ ನಾಟಕ ನೋಡಲು ಹೋಗುತ್ತಿದ್ದರು.

v) ----------- ಅವರು ಧಾರವಾಡದಲ್ಲಿ ನೆಲೆ ನಿಂತಿದ್ದಾರೆ.

**ಕೃತಿ:2 ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.**

i) ಏಣಗಿ ಬಾಳಪ್ಪನವರು ಮಾಡಿದ ರಂಗಭೂಮಿಯ ಪಾತ್ರಗಳು:

| |
|---|
| |
| |
| |
| |


ii) ಏಣಗಿ ಬಾಳಪ್ಪನವರಿಗೆ ದೊರೆತ ಪದವಿಗಳು:

| |
|---|
| |
| |

**ಕೃತಿ:3 ಹೊಂದಿಸಿ ಬರೆಯಿರಿ.**

| | |
|---|---|
| i) ಬಿ. ಪುಟ್ಟಸ್ವಾಮಯ್ಯ | ಅ) ಕಿತ್ತೂರು ರಾಣಿ ರುದ್ರಮ್ಮ |
| ii) ಎನ್ ರಾಯಚೂರು | ಆ) ಅಕ್ಕಮಹಾದೇವಿ |
| iii) ಜಿ.ಜಿ ಹೆಗಡೆ | ಇ) ಗೋರಾ ಕುಂಬಾರ |
| iv) ಶಿವಲಿಂಗ ಸ್ವಾಮಿಗಳು | ಈ) ಶಾಲಾಮಾಸ್ತರ |

**ಕೃತಿ: 4 ಏಣಗಿ ಬಾಳಪ್ಪನವರು ಮಹಾರಾಷ್ಟ್ರದಲ್ಲಿ ನಾಟಕ ಪ್ರದರ್ಶಿಸಿದ ವಿವಿಧ ಊರುಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ತುಂಬಿರಿ.**



**ಕೃತಿ: 5 ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

i) ಏಣಗಿ ಬಾಳಪ್ಪನವರ ತಂದೆ-ತಾಯಿಯರ ಹೆಸರೇನು?

ii) ಬಾಳಪ್ಪನವರು ಓದಿದ್ದು ಎಷ್ಟನೇ ಇಯತ್ತೆಯವರೆಗೆ?

iii) ಬಾಳಪ್ಪನವರು ಜೋಳಿಗೆ ಹಿಡಿದು ಎಷ್ಟು ರೂಪಾಯಿಗಳನ್ನು ಸಂಗ್ರಹಿಸಿದರ?

iv) ಬಾಳಪ್ಪನವರ ಕುರಿತು ಹಾಡು ರಚಿಸಿದವರಾರು?

**ಕೃತಿ:6 i) ಕೆಳಗಿನ ಸಮಾಸಪದಗಳನ್ನು ಬಿಡಿಸಿ ಹೆಸರಿಸಿರಿ.**

ತಂದೆ ತಾಯಿ, ಬಿಳಿಧೋತರ, ಅಣ್ಣತಂಗಿ.

**ii) ತತ್ಸಮ-ತದ್ಭವಗಳು**

| | | | | | |
|---|---|---|---|---|---|
| ಸಕ್ಕರೆ | ಮೂರ್ತಿ | ಆಶ್ಚರ್ಯ | ಜಾತ್ರೆ | ಭೂಮಿ | ಲಕುಮಿ |
| ಲಕ್ಷ್ಮಿ | ನೆನಪು | ಭೂಮಿ | ನೆನಹು | ಧಮ್ಮ | ಮೂರುತಿ |
| ಸಿಂಗಾರ | ಯಾತ್ರೆ | ಧರ್ಮ | ಅಚ್ಚರಿ | ಶೃಂಗಾರ | ಶರ್ಕರಾ |

**iii) ಕೆಳಗಿನ ವಾಕ್ಯದಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.**

ಪ್ರೇಕ್ಷಕರು ಹೋಗುವಾಗ ಕಾಣಿಕೆಯನ್ನು ಹಾಕುತ್ತಿದ್ದರು.

**ಕೃತಿ: 7** ಏಣಗಿ ಬಾಳಪ್ಪನವರ ಬಾಲ್ಯಜೀವನದಿಂದ ನೀವು ಕಲಿತುಕೊಳ್ಳುವ ಗುಣಗಳ್ಳು ಬರೆಯಿರಿ.

**ಕೃತಿ: 8** ನಿಮ್ಮ ಶಾಲೆಯ ವಾರ್ಷಿಕ ಸ್ನೇಹಸಮ್ಮೇಲನದ ಒಂದು ನಾಟಕದ ಪ್ರಸಂಗದುಗ್ಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ

CAD20U

# 8. ಒಂದು ಲೋಟ ಹಾಲಿನ ಋಣ

– ಎ. ಆರ್. ಮಣಿಕಾಂತ

**ಲೇಖಕರ ಪರಿಚಯ :** ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಆಯಿ ತನ ಹಳ್ಳಿಯವರು. ಓದಿದ್ದು ಮಂಡ್ಯದ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ. ಆಟೋಮೊಬೈಲ್ ಒಲಿದಿದ್ದು ಪತ್ರಿಕೋದ್ಯಮಕ್ಕೆಮೊದಲು 'ಹಾಯ್ ಬೆಂಗಳೂರ್' ನಂತರ ಸಂಯುಕ್ತ ಕರ್ನಾಟಕದಲ್ಲಿನೌಕರಿ. ಪ್ರಸ್ತುತ 'ವಿಜಯ ಕರ್ನಾಟಕ'ದಲ್ಲಿಮುಖ್ಯ ಉಪಸಂಪಾದಕರಾಗಿ ಕೆಲಸ ಮಾಡುತ್ತಿದ್ದಾರೆ. 'ಈ ಗುಲಾಬಿಯು ನಿನಗಾಗಿ' 'ಉಭಯ ಕುಶ ಲೋಪರಿ ಸಾಂಪ್ರಾತ' 'ಮರೆಯಲಿ ಹ್ಯಾಂಗ' ಮತ್ತು ಹಾಡುಹುಟ್ಟಿದ ಸಮಯ' ಎಂಬ ಅಂಕಣಗಳನ್ನು ಬರೆದಿದ್ದಾರೆ.

ಸಂಕಷ್ಟದಲ್ಲಿರುವ ಚಂದ್ರಶೇಖರನಿಗೆ ಜೀವನೋಪಾಯವನ್ನು ತಿಳಿಸಿದ ಮೇರಿ ಆ ಉಪಾಯಗಳನ್ನು ಆಧಾರವಾಗಿಟ್ಟಕೊಂಡು ಉನ್ನತ ಶಿಕ್ಷಣ ಪಡೆದು ಉಪಕಾರ ಮಾಡಿದವರಿಗೆ ಪ್ರತಿ ಉಪಕಾರ ಮಾಡಿದ ಬಗೆಯನ್ನು ಮನಮುಟ್ಟದಂತೆ ಈ ಗದ್ಯದಲ್ಲಿ ತಿಳಿಯಪಡಿಸಲಾಗಿದೆ.

ಚಂದ್ರಶೇಖರ ಕಡುಬಡವರ ಮನೆಯಹುಡುಗ. ಆತ, ಚಿತ್ರದುರ್ಗಕ್ಕೆ ಸಮೀಪದ ಹಳ್ಳಿಯವನು. ಇವನ ತಂದೆ ಕೂಲಿ ಕೆಲಸ ಮಾಡುತ್ತಿದ್ದ. ದುಡಿಮೆಯ ಆಯಾಸ ಮರೆಯಲೆಂದು ದುಶ್ಚಟಗಳಿಗೆ ಬಲಿಯಾಗಿದ್ದನು. ಈ ವಿಷಯವಾಗಿ ಹೆಂಡತಿ ಜಗಳ ಮಾಡಿದರೆ, 'ಅವನು, ನಾನು ಹೀಗೆ ಮಾಡದಿದ್ರೆ ಬೆಳಗ್ಗೆ ಎದ್ದು ಕೆಲಸಕ್ಕೆ ಹೋಗಲು ಆಗೋದಿಲ್ಲ. ನಾನಾದ್ರೂ ಏನು ಮಾಡಲಿ ಹೇಳು' ಎಂದು ಕಣ್ಣೀರು ಹಾಕುತ್ತಿದ್ದ. ಇಂಥ ಸಂದರ್ಭದಲ್ಲೆಲ್ಲಮಗನನ್ನು ಎದುರು ಕೂರಿಸಿಕೊಂಡು, ' ನಮಗೆ ಬಂದಂಥ ಸಂಕಟ ನಿನಗೆ ಬರಬಾರ್ದು ಮಗನೇ. ನೀನು ಚೆನ್ನಾಗಿ ಓದಿ ಒಂದು ಕೆಲಸಕ್ಕೆ ಸೇರ್ಕೋ. ನೆಮ್ಮದಿಯಾಗಿ ಬದುಕು' ಎಂದೆಲ್ಲಾ ಬುದ್ಧಿ ಹೇಳುತ್ತಿದ್ದ.

ಕಾಲ ಹೀಗೇ ಸರಿಯುತ್ತಿತ್ತು. ಅದೊಂದು ರಾತ್ರಿ ಚಂದ್ರಶೇಖರನ ತಂದೆ, ಉಳಿದೆಲ್ಲ ದಿನಗಳಂತೆಯೇ ಕೆಲಸ ಮುಗಿಸಿ, ಎಣ್ಣೆಯನ್ನು ಏರಿಸಿಕೊಂಡೇ ಬಂದ. ಹೆಂಡತಿ, ಮಗನನ್ನು ಪ್ರೀತಿಯಿಂದಲೇ ಮಾತಾಡಿಸಿದ. ಕೆಲಸ ಜಾಸ್ತಿ ಇದೆ. ಬೆಳಗ್ಗೆ ಬೇಗ ಹೋಗಬೇಕು ಎನ್ನುತ್ತಲೇ ನಿದ್ರೆಗೆ ಜಾರಿದ. ಬೆಳಗಾಯಿತು. ಆತ ಎದ್ದೇಳಲಿಲ್ಲ. ಸುದ್ದಿ ತಿಳಿದು ಕುತೂಹಲದಿಂದ ಬಂದ ನೆರೆಹೊರೆಯ ಜನ 'ಆಹಾ ! ಎಂಥ ಸುಖದ ಸಾವು; ಒಂದು ನೋವಿಲ್ಲ. ಒಂದು ಚೀರಾಟವಿಲ್ಲ. ಎಂದೆಲ್ಲಾ ಮಾತಾಡಿಕೊಂಡರು. ಇದಾಗಿನಾಲ್ಕು ವರ್ಷದ ನಂತರ ಚಂದ್ರಶೇಖರನ ತಾಯಿಯೂ ಯಾವುದೋ ಕಾಯಿಲೆಯ ನೆಪದಲ್ಲಿ ಶಿವನ ಪಾದ ಸೇರಿಕೊಂಡಳು. ಈ ಹೊತ್ತಿನಲ್ಲಿ ಚಂದ್ರಶೇಖರ ಏಳನೇ ತರಗತಿ ಮುಗಿಸಿದ್ದ. ಅಪ್ಪ-ಅಮ್ಮ ಇಲ್ಲದ ಮನೆ ಭೂತಬಂಗಲೆಯಂತೆ ಅವನಿಗೆ ಕಾಣಿಸಿತು. ಮುಂದೆ ಆಗಿದ್ದಾಗಲಿ ಎಂದು ನಿರ್ಧರಿಸಿ ಆತ ತುಮಕೂರಿಗೆ ಬಂದು ಬಿಟ್ಟ.

ಯಾರ್‍ಯಾರದೋ ಶಿಫಾರಸಿನಿಂದ ಚಂದ್ರಶೇಖರನಿಗೆ ಪೇಪರ್ ಹಾಕುವ ಕೆಲಸ ಸಿಕ್ಕಿತು. ಅದೇ ಕೆಲಸ ಮಾಡುವ ಒಬ್ಬ ಹುಡುಗನ ರೂಮಿನಲ್ಲಿ ಆಶ್ರಯವೂ ದೊರೆಯಿತು. ಬೆಳಗ್ಗ ಮನೆಮನೆಗೆ ಪೇಪರ್ ಹಾಕುವುದು, ಯಾವುದಾದರೂ ಒಂದು ಹೋಟೆಲಿನಲ್ಲಿ ತಿಂಡಿ ತಿಂದು ಸ್ಕೂಲಿಗೆ ಓಡುವುದು ಚಂದ್ರಶೇಖರನ ದಿನಚರಿಯಾಯಿತು. ಇವನೇನೋ ತುಂಬಾ ಚೆನ್ನಾಗಿ ಓದಬೇಕು ಎಂದು ಆಸೆಪಡುತ್ತಿದ್ದ. ಆದರೆ ಈತ ವಾಸವಿದ್ದ ರೂಂನಲ್ಲಿ ಅದಕ್ಕೆ ಪೂರಕ ವಾತಾವರಣವಿರಲಿಲ್ಲ.

ಅದೊಂದು ಭಯಂಕರ ಬೇಸಿಗೆಯ ಮಧ್ಯಾಹ್ನ. ಚಂದ್ರಶೇಖರ, ಬಿಲ್ ವಸೂಲಿ ಗೆಂದು ಹೊರಟಿದ್ದ. ಅವನ್ನು ಪೇಪರ್ ಹಾಕುತ್ತಿದ್ದ ಏರಿಯಾ ಎಸ್.ಎಸ್ ಪುರಂ. ಶ್ರೀಸೋಮೇಶ್ವರ ಪುರಂ ಎಂಬುದನ್ನು ಜನ ಶಾರ್ಟ್ ಅಂಡ್ ಸ್ವೀಟ್ ಆಗಿ ಎಸ್.ಎಸ್. ಪುರಂ ಅನ್ನುತ್ತಿದ್ದರು. ಬಿಲ್ ವಸೂಲಿಗೆ ಹೊರಟಿದ್ದನಲ್ಲ; ಆವತ್ತು ಚಂದ್ರಶೇಖರ ಬೆಳಗಿಂದ ಏನನ್ನೂ ತಿಂದಿರಲಿಲ್ಲ. ಈಗ ಸಂಗ್ರಹವಾಗುವ ಹಣದಲ್ಲಿಯೇ ಮಧ್ಯಾಹ್ನದಊಟ ಮುಗಿಸುವ ಯೋಚನೆ ಅವನದಿತ್ತು. ಎಸ್. ಎಸ್. ಪುರಂನ ಕನ್ನಿಕಾ ಪರಮೇಶ್ವರಿ ದೇವಸ್ಥಾನ, ಅದರ ಬಲ ಮಗ್ಗುಲಿಗೆ ಇರುವ ಆರ್.ಕೆ. ಟ್ಯುಟೋರಿಯಲ್ಸ್, ಅದೇ ರಸ್ತೆಯಲ್ಲಿಮುಂದೆ ಬಂದರೆ ಸಿಗುವ ಬಾಪೂಜಿ ನರ್ಸಿಂಗ್ ಹೋಂ ಏರಿಯಾದ ಮನೆಗಳಲ್ಲಿ ಬಿಲ್ ಸಂಗ್ರಹಿಸಿದ್ದಾಯಿತು. ಅಲ್ಲಿಂದ ಬಲಕ್ಕೆ ತಿರುಗಿದರೆ ಒಂದು ಬದಿಯಲ್ಲಿ ರೈಲ್ವೆ ಟ್ರ್ಯಾಕ್. ಇನ್ನೊಂದು ಬದಿಗೆ ಓಬಿರಾಯನ ಕಾಲದ್ದು ಎಂಬಂತೆ ಕಾಣುವ ರಾಜೀವ್ ಗಾಂಧಿ ಸರ್ಕಲ್. ಅಲ್ಲಿಂದ ನಾಲ್ಕು ನಿಮಿಷ ನಡೆದು ಹೋದರೆ ಸಿಗುತ್ತಿದ್ದುದು ಭಗವಾನ್ ಫೋಟೊ

ಸ್ಟುಡಿಯೋ. ಇಲ್ಲೆಲ್ಲ ಹಣ ವಸೂಲಿ ಮಾಡುವ ವೇಳೆಗೆ ಚಂದ್ರಶೇಖರನಿಗೆ ಗಂಟಲು ಒಣಗಿಹೋಗಿತ್ತು. ನೀರು ಕುಡಿದು ದಣಿವಾರಿಸಿಕೊಳ್ಳಲೆಂದು ಸುತ್ತಲೂ ನೋಡಿದ. ಒಂದು ನಲ್ಲಿಯೂ ಕಣ್ಣಿಗೆ ಬೀಳಲಿಲ್ಲ. ಒಂದುಕಡೆ ಬಿರುಬಿಸಿಲು, ಇನ್ನೊಂದು ಕಡೆ ನಡೆದುಬಂದ ಆಯಾಸ, ಇದರ ಮಧ್ಯೆ ಚುರುಗುಡುತ್ತಿದ್ದ ಹೊಟ್ಟೆ... ಚಂದ್ರಶೇಖರನಿಗೆ ತಲೆಸುತ್ತಿ ಬಂದಂತಾಯಿತು. ಉಹುಂ, ಇನ್ನು ತಡೆಯಲಾಗದು. ಅನ್ನಿಸಿದಾಗ – ಯಾವುದಾದರೂ ಮನೆಯ ಬಾಗಿಲು ಬಡಿದು, ಏನಾದ್ರೂ ತಿಂಡಿ ಇದ್ರೆ ಕೊಡಿ ತಾಯೀ ಅಂದುಬಿಡಲು ನಿರ್ಧರಿಸಿದ.

ಎಸ್.ಎಸ್. ಪುರಂನ ನಾಲ್ಕನೇ ಕ್ರಾಸಿನಲ್ಲಿ ಒಂದೊಂದೇ ಮನೆಯನ್ನು ದಾಟುತ್ತಿದ್ದಂತೆ ಚಂದ್ರಶೇಖರನ ಒಳಮನಸ್ಸು ಉಹುಂ, ಈ ಮನೇಲಿ ಕೇಳುವುದು ಬೇಡ ಎಂದು ಪಿಸುಗುಡುತ್ತಿತ್ತು. ಈತ ತಕ್ಷಣವೇ ಹೆಜ್ಜೆ ಮುಂದಿಡುತ್ತಿದ್ದ. ತಳಿರು ತೋರಣಗಳಿಂದ ಅಲಂಕೃತವಾಗಿದ್ದ ಹನ್ನೊಂದನೇ ಮನೆಯ ಮುಂದೆ ಬಂದಾಗ– ಬಹುಶಃ ಈ ಮನೇಲಿ ಮದುವೆಯಂಥ ಶುಭಕಾರ್ಯ ನಡೆದಿರಬಹುದು. ಅಂದಮೇಲೆ ಏನಾದರೂ ತಿಂಡಿ ಉಳಿದಿರುತ್ತದೆ. ರಾತ್ರಿಯ ತಂಗಳು ಏನಾದರೂ ಇದ್ರೆ ಕೊಡಿ ಎಂದು ಕೇಳಿಬಿಡೋಣ. ಸಿಕ್ಕಿದ್ದು ತಿಂದು ದಣಿವಾರಿಸಿಕೊಂಡರಾಯಿತು ಎಂಬ ನಿರ್ಧಾರದೊಂದಿಗೆ ಆ ಮನೆಯ ಬಾಗಿಲು ಬಡಿದ.

ಬಾಗಿಲು ತೆರೆದಾಗ ಈತ ನಿರೀಕ್ಷಿಸಿದ್ದು ಮಧ್ಯವಯಸ್ಕ ಹೆಂಗಸನ್ನು. ಆದರೆ, ಎದುರು ನಿಂತಿದ್ದವಳು ಅವನಿಗಿಂತ 10–12 ವರ್ಷ ದೊಡ್ಡವಳಿದ್ದ ಹುಡುಗಿ. ಅದುವರೆಗೂ– 'ಅಮ್ಮಾ, ಏನಾದ್ರೂ ತಂಗಳು ಇದ್ರೆ ಕೊಡಿ ಎಂದು ಕೇಳಲು ಸಿದ್ಧನಾಗಿದ್ದವನು, ಆಕೆಯನ್ನು ಹೀಗೆ ಕೇಳಲು ಸಂಕೋಚವೆನಿಸಿ– 'ತುಂಬಾ ಬಿಸಿಲು. ಅತಿಯಾದ ಬಾಯಾರಿಕೆ. ಒಂದು ಲೋಟ ನೀರು ಕೊಡ್ತೀರಾ ? ಎಂದು ಬಡಬಡಿಸಿದ. ಈ ಹುಡುಗನನ್ನೇ ಒಮ್ಮೆ ಅಪಾದ ಮಸ್ತಕ ನೋಡಿದ ಆಕೆ, ಆಯ್ತು ಎಂಬಂತೆ ಕತ್ತು ಕುಣಿಸಿ ಒಳಗೆ ಹೋದಳು. ಅಡುಗೆ ಮನೆಯಲ್ಲಿ ನೀರಿನ ಲೋಟ ಕೈ ಗೆತ್ತಿಕೊಂಡವಳು ಸ್ವಗತದಲ್ಲಿ ಅಂದುಕೊಂಡಳು: 'ಪಾಪ, ಆತ ತುಂಬಾ ಹಸಿದವನಂತೆ ಕಾಣುತ್ತಿದ್ದಾನೆ. ಹೇಳಿ ಕೇಳಿ ಇದು ಊಟದ ಹೊತ್ತು. ಈಗ ಬರೀ ನೀರಿಂದ ಹೊಟ್ಟೆ ತುಂಬುತ್ತಾ? ' ಹೀಗೆ ಯೋಚಿಸಿದ ಆಕೆ ಒಂದು ದೊಡ್ಡ ಲೋಟದೊಂದಿಗೆ ಹೊರಬಂದಳು. ಅದರ ತುಂಬಾ ಬಾದಾಮಿ ಹಾಲಿತ್ತು. ಹುಡುಗ ಅವಸರದಿಂದಲೇ ಅದನ್ನು ಪಡೆದ. ಒಂದು ತೆರನಾದ ಆಪ್ತತೆಯಿಂದ ಅವನನ್ನೇ ನೋಡುತ್ತ– 'ಸಂಕೋಚ ಬೇಡ, ಕುಡೀರಿ' ಅಂದಳು ಈಕೆ. ಒಂದೊಂದು ಗುಟುಕಿಗೂ ಎರಡೆರಡು ಬಾದಾಮಿಯೂ, ಮಧ್ಯೆ ಮಧ್ಯೆ ಗೋಡಂಬಿಯೂ ಸಿಗುತ್ತ ಹೋದಾಗ– 'ಇಷ್ಟೊಂದು ಒಳ್ಳೆಯ ಹಾಲು ಕೊಟ್ಟಿದಾರಲ್ಲ; ಕುಡಿದ ಮೇಲೆ ದುಡ್ಡು ತೆಗೀ ಅಂದ್ರೆ ಏನು ಮಾಡೋದು ಎಂದು ಯೋಚಿಸುತ್ತಲೇ ಈತ ಹಾಲು ಕುಡಿದು ಮುಗಿಸಿದ. ನಂತರ– 'ನಾ... ನಾ... ನಾನು, ಇದಕ್ಕೆ ಎಷ್ಟು ದುಡ್ಡು ಕೊಡಬೇಕು ? ಎಂದು ಕೇಳಿಬಿಟ್ಟ.

ಇವನ ಅವಸರದ ಮಾತು ಕೇಳಿ ಆಕೆ ಮೆಲುವಾಗಿ ನಕ್ಕಳು. ನಂತರ– 'ಓದ್ತಾ ಇದೀಯ ? ಎಷ್ಟನೇ ಕ್ಲಾಸು ? ಮನೆ ಎಲ್ಲಿ ? ಸ್ವಂತ ಊರು ಯಾವುದು ?' ಎಂದು ಪ್ರಶ್ನಿಸಿದಳು. ಮನೆಮನೆಯ ಜನರಿಂದ ಅದುವರೆಗೂ ಬರೀ ವ್ಯಾವಹಾರಿಕ ಮಾತುಗಳನ್ನಷ್ಟೇ ಕೇಳಿದ್ದ ಚಂದ್ರಶೇಖರ, ಆಕೆಯ ಮಾತುಗಳಲ್ಲಿದ್ದ ಕಾಳಜಿಗೆ ಕರಗಿದ. ಯಾವುದೋ ಮೋಡಿಗೆ ಒಳಗಾದವನಂತೆ ತನ್ನ ಬದುಕಿನ ಕಥೆ ಹೇಳಿಕೊಂಡ. ಇವನ ಮಾತು ಮುಗಿದಾಗ ಆಕೆ ನಿರ್ಧಾರದ ಧ್ವನಿಯಲ್ಲಿ ಹೇಳಿದಳು: 'ನೋಡಪ್ಪಾ , ಹೀಗೆ ಪೇಪರ್ ಹಾಕ್ಕೊಂಡೇ ಓದ್ತೀನಿ ಅನ್ನೋದಾದ್ರೆ ಮಹತ್ವದ ಸಾಧನೆ ತುಂಬಾ ಕಷ್ಟ. ಯಾವುದಾದ್ರೂ ಹಾಸ್ಟೆಲ್‌ಗೆ ಸೇರಿಕೋ. ಸ್ಕಾಲರಶಿಪ್‌ಗೆ ಟ್ರೈ ಮಾಡು. ಒಳ್ಳೆಯವರಿಗೆ ಯಾವತ್ತೂ ಕೆಟ್ಟದಾಗಲ್ಲ. ಶುಭವಾಗಲಿ. ಗಾಡ್ ಬ್ಲೆಸ್. ಬೈ...'

ಆ ಹುಡುಗಿಗೆ ತುಟಿಯ ಮೇಲೆ, ಎಡಭಾಗದಲ್ಲಿ ಒಂದು ಮಚ್ಚೆಯಿತ್ತು. ಬಲಗಿವಿಯಿಂದ ಸ್ವಲ್ಪ ಕೆಳಗೂ ಒಂದು ಮಚ್ಚೆಯಿತ್ತು. ಒಂದು ಆ್ಯಂಗಲ್‌ನಿಂದ ನೋಡಿದರೆ ಆಕೆ ಚಿತ್ರನಟಿಯ ಥರಾ ಕಾಣ್ತಿದ್ಲು ಎಂದುಕೊಂಡು ಚಂದ್ರಶೇಖರ ರೂಂ ತಲುಪಿಕೊಂಡ.

• • •

ಇಪ್ಪತ್ತು ವರ್ಷಗಳ ನಂತರ ಏನೇನೋ ಬದಲಾವಣೆ ಆಗಿಹೋಗಿತ್ತು. ದಾವಣಗೆರೆಯ ಹುಡುಗನೊಂದಿಗೆ ಈ ಹುಡುಗಿಗೆ ಮದುವೆಯಾಗಿತ್ತು. ನಾಲ್ಕು ವರ್ಷಗಳ ನಂತರ, ಆಕಸ್ಮಿಕವಾಗಿ ಆಕೆಯ ಗಂಡ ತೀರಿಕೊಂಡಿದ್ದ. ಈ ಹುಡುಗಿಗೆ ಕಷ್ಟ ಕಾಲ ಶುರುವಾಗಿದ್ದೇ ಆಗ. ಹುಡುಗಿಯ ಕಾಲ್ಗುಣ ಚೆನ್ನಾಗಿಲ್ಲ ಎಂದು ಅತ್ತೆ ಮನೆಯ ಜನ ದೂರಿದರು. ಇದೇ ನೆಪದಲ್ಲಿ ಆಸ್ತಿ ಪಾಲು ಮಾಡಿಕೊಂಡರು. ವಿನಾಕಾರಣ ಜಗಳ ತೆಗೆದು ಈಕೆಯನ್ನು ಮಾನಸಿಕವಾಗಿ ಹಿಂಸಿಸಿದರು. ಒಂದು ಕಾಲಕ್ಕೆ ಗೌರವಾನ್ವಿತ ಕುಟುಂಬವೊಂದರ ಮಗಳಾಗಿದ್ದ ಈಕೆ ದಿಢೀರ್ ಜೊತೆಯಾದ ಸಂಕಟಗಳಿಂದ ಕಂಗಾಲಾದಳು. ಪತಿಯ ಸಾವಿನ ನಂತರ, ಬಡತನವೆಂಬುದು ಅವಳನ್ನು ಬಾಚಿತಬ್ಬಿಕೊಂಡಿತ್ತು. ಗಂಡನ ಮನೆಯಲ್ಲಿದ್ದು ದಿನವೂ ಚುಚ್ಚುಮಾತು ಕೇಳುವ ಬದಲು ಎಲ್ಲಾದರೂ ಕೂಲಿ ಮಾಡಿ ಬದುಕುವುದೇ ಒಳಿತು ಎಂದು ಒಂದು ದಿನ ಎದ್ದು ಬಂದಳು. ಈ ವೇಳೆಗೆ ಆಕೆಯ ತವರುಮನೆಯಲ್ಲೂ ಒಂದೊಂದೇ ಕಷ್ಟಗಳು ಆರಂಭವಾಗಿದ್ದವು. ಊಹುಂ, ಅವರಿಗೆ ನನ್ನ ಕಷ್ಟ ಹೇಳಿಕೊಳ್ಳಲೇಬಾರದು ಎಂದು ಕೊಂಡವಳು, ಅದೊಂದು ದಿನ ಎದೆಯ ಭಾಗದಲ್ಲಿ ಸಣ್ಣದೊಂದು ಗಂಟು ಸಿಕ್ಕಿದಂತಾದಾಗ ಕಸಿವಿಸಿಗೊಂಡಳು.

ಹೇಳಿ ಕೇಳಿ ತಾನು ವಿಧವೆ. ಅಂಥವಳಿಗೆ ಇದೆಂಥ ತೊಂದರೆಯೋ ಭಗವಂತಾ ಎಂದುಕೊಂಡ ಆಕೆ ಮೊದಲು ನಿರ್ಲಕ್ಷಿಸಿದಳು. ಯಾರಿಗಾದರೂ ಹೇಳೋಣವೆಂದರೆ, ಸಂಕೋಚ, ನಾಚಿಕೆ. ಕೆಲ ದಿನಗಳ ನಂತರ ಎದೆಯ ಭಾಗದಲ್ಲಿ ನೋವು ಕಾಣಿಸಿಕೊಂಡಾಗ ನಾಟಿವೈದ್ಯಕ್ಕೆ ಶರಣಾದಳು, ವಾಸಿಯಾಗದೇ ಹೋದಾಗ ತುಂಬ ಗಾಬರಿಯಿಂದಲೇ ಆಸ್ಪತ್ರೆಗೆ ಹೋದಳು. ಅಲ್ಲಿ ಈಕೆಯನ್ನು ಐದೈದು ಬಾರಿ ಪರೀಕ್ಷಿಸಿದ ವೈದ್ಯರು– 'ಇದು ಬ್ರೆಸ್ಟ್‌ಕ್ಯಾನ್ಸರ್ ಕಣಮ್ಮಾ. ಇಲ್ಲಿ ಚಿಕಿತ್ಸೆ ಕಷ್ಟ. ಸೀದಾ ಬೆಂಗಳೂರಿಗೆ ಹೋಗು. ಇಲ್ಲಾಂದ್ರೆ ಚೆನ್ನೈಗೆ ಹೋಗು. ಅಲ್ಲಿ ಬೇಗ ಟ್ರೀಟ್‌ಮೆಂಟ್ ಕೊಡ್ತಾರೆ' ಅಂದರು. ಪರಿಚಯದವರ ಬಳಿ ಸಾಲ–ಸೋಲ ಮಾಡಿದ ಈಕೆ, ಅದು ಹೇಗೋ ಚೆನ್ನೈನ ಅಪೋಲೋ ಆಸ್ಪತ್ರೆ ಸೇರಿಕೊಂಡಳು.

• • •

ಎದುರಿಗಿದ್ದ ಆ ಕಿರಿಯ ವೈದ್ಯನಿಗೆ ಹಿರಿಯ ವೈದ್ಯರು ಹೇಳಿದರು: 'ಕರ್ನಾಟಕದಿಂದ ಒಬ್ರು ಪೇಷಂಟ್ ಬಂದಿದ್ದಾರೆ. ಆಕೆಗೆ ಕ್ಯಾನ್ಸರ್ ಇದೆ. ಆಗಲೇ ಸೆಕೆಂಡ್ ಸ್ಟೇಜ್‌ಗೆ ಬಂದು ಬಿಟ್ಟಿದೆ. ಸ್ವಲ್ಪ ರಿಸ್ಕ್ ತಗೊಂಡು ಈ ಕೇಸ್‌ನ ಹ್ಯಾಂಡಲ್ ಮಾಡಿ...'

ಕರ್ನಾಟಕದ ಪೇಷಂಟ್ ಎಂಬ ಮಾತು ಕೇಳಿದ ತಕ್ಷಣ ಆ ಯುವ ವೈದ್ಯನ ಕಣ್ಣಲ್ಲಿ ಸಾವಿರ ಮಿಂಚು. ಆಕೆ ಬೆಂಗಳೂರಿನವಳಾ ? ಆಕೆಗೆ ತುಮಕೂರು ಗೊತ್ತಿರಬಹುದಾ ? ಉತ್ತರಕರ್ನಾಟಕ ಸೀಮೆಯವಳಾಗಿದ್ದರೆ ಆಕೆ ಟೂರ್‌ನ ನೆಪದಲ್ಲಾದರೂ ಚಿತ್ರದುರ್ಗ ಹಾಗೂ ಸಿದ್ಧಗಂಗೆಗೆ ಹೋಗಿ ಬಂದಿರಬಹುದಾ ? ಟ್ರೀಟ್‌ಮೆಂಟ್ ಕೊಡುವಾಗ ಅದನ್ನೊಮ್ಮೆ ಕೇಳಿಬಿಡಬೇಕು ಅಂದುಕೊಂಡ. ತಕ್ಷಣ ಅವನಿಗೆ ತನ್ನ ಬಾಲ್ಯ, ಬಡತನ, ಒಂದು ಮಧ್ಯಾಹ್ನ ತಾನು ನೀರು ಕೇಳಿದಾಗ ಲೋಟದ ತುಂಬ ಹಾಲು ಕೊಟ್ಟ ಹುಡುಗಿ, ಅವಳ ಮಮತೆ... ಎಲ್ಲವೂ ನೆನಪಾಯಿತು. ಒಮ್ಮೆ ಥಟ್ಟನೆ ತಲೆ ಕೊಡವಿ, ಹಳೆಯ ನೆನಪುಗಳಿಂದ ಹೊರ ಬಂದವನೇ ರೋಗಿಯನ್ನು ನೋಡಲೆಂದು ವಾರ್ಡ್‌ಗೆ ಬಂದ. ಆಕೆಯ ತಲೆಯಲ್ಲಿ ಬೆಳ್ಳಿಕೂದಲುಗಳಿದ್ದವು. ಮಾಸಲು ಸೀರೆಯುಟ್ಟಿದ್ದ ಆಕೆ ಎಡಕ್ಕೆ ತಿರುಗಿ ಮಲಗಿದ್ದಳು. ಪಾಪ, ಪೂರ್ ಲೇಡಿ ಎಂದುಕೊಂಡೇ ಹತ್ತಿರ ಬಂದ ಡಾಕ್ಟರ್ ಚಂದ್ರಶೇಖರ ಒಂದು ಕ್ಷಣ ನಿಬ್ಬೆರಗಾಗಿ ನಿಂತುಬಿಟ್ಟ. ಕಾರಣ, ಆಕೆಯ ಬಲಗೆನ್ನೆಯ ಮೇಲೆ ಕಪ್ಪು ಮಚ್ಚೆ ಕಾಣಿಸಿತು ! ಉಸಿರು ಬಿಗಿಹಿಡಿದು ಆತ ನರ್ಸ್‌ಗಳನ್ನು ಕರೆದು, ಈ ಪೇಷಂಟ್‌ನ ಸ್ವಲ್ಪ ಈ ಕಡೆ ತಿರುಗಿಸಿ ಎಂದು ಮತ್ತೊಂದು ಗುರುತಿಗಾಗಿ ಹುಡುಕಾಡಿದ.

ಐದಾರು ದಿನಗಳ ನಂತರ ಚಿಕಿತ್ಸೆ ಆರಂಭವಾಯಿತು. ಮೊದಲು ಆಕೆಯನ್ನು ಎಮರ್ಜೆನ್ಸಿ ವಾರ್ಡ್‌ಗೆ ಸೇರಿಸಲಾಯಿತು. ವೈದ್ಯರು ಬಂದು ಹೋದ ಸಂದರ್ಭಗಳಲ್ಲಿ ಈಕೆ ನಿದ್ರೆಯಲ್ಲಿರುತ್ತಿದ್ದಳು. ಎಚ್ಚರವಿದ್ದ ಸಂದರ್ಭದಲ್ಲಿ ಯುವವೈದ್ಯನೊಬ್ಬ ಬಂದು– 'ಧೈರ್ಯಕಳ್ಕೋಬೇಡಿ. ಹುಶಾರಾಗುತ್ತೆ' ಎಂದು ಸಮಾಧಾನದ ಮಾತು ಹೇಳುತ್ತಿದ್ದ.

ಭಾಷೆಯೇ ಗೊತ್ತಿಲ್ಲದ ಊರಲ್ಲಿ ಈ ವೈದ್ಯನ ಅಚ್ಚಗನ್ನಡದ ಮಾತು ಕೇಳಿದಾಗೆಲ್ಲ ಸಮಾಧಾನವಾಗುತ್ತಿತ್ತು. ಆತ ಯಾರಿರಬಹುದು ಎಂದು ಈಕೆ ಮತ್ತೆ ಮತ್ತೆ ಪ್ರಶ್ನೆಹಾಕಿಕೊಂಡಳು. ಉತ್ತರ ಸಿಗಲಿಲ್ಲ. ಕಡೆಗೆ, ಯಾರೋ ಕರುಣಾಳು ಎಂದುಕೊಂಡು ಸುಮ್ಮನಾದಳು.

ಒಂದು ತಿಂಗಳ ನಂತರ ಈಕೆ ಜನರಲ್ ವಾರ್ಡ್‌ಗೆ ಶಿಫ್ಟ್ ಆದಳು. ಅಲ್ಲಿ ಮತ್ತೆ ನಲವತ್ತು ದಿನ ಕಳೆದವು. ಆಸ್ಪತ್ರೆಗೆ ಸೇರಿದ ದಿನದಿಂದ ಅಲ್ಲಿ ಈಕೆಗೆ ಊಟವನ್ನೂ ಒದಗಿಸಲಾಗುತ್ತಿತ್ತು. ಚಿಕಿತ್ಸೆ ಕೊಡಲು ಬರುತ್ತಿದ್ದಾತ ಅದೇ ಯುವವೈದ್ಯ. ಅವನನ್ನು ಕಂಡಾಗಲೆಲ್ಲ– 'ನಾನು ನಿರ್ಗತಿಕ ಹೆಂಗಸು. ಈ ಚಿಕಿತ್ಸೆಯ ಬಿಲ್ ಕೊಡುವ ಶಕ್ತಿ ನನಗಿಲ್ಲ' ಎಂದು ಹೇಳಿಬಿಡಲು ಈಕೆ ಹವಣಿಸುತ್ತಿದ್ದಳು. ಆದರೆ, ಸುತ್ತಲೂ ನರ್ಸ್‌ಗಳು ಇರುತ್ತಿದ್ದುದರಿಂದ ಅಂಥ ಏಕಾಂತದ ಮಾತಿಗೆ ಅವಕಾಶವೇ ಇರಲಿಲ್ಲ. ಹೀಗಿರುವಾಗಲೇ ಅದೊಂದು ಮಧ್ಯಾಹ್ನ ನರ್ಸ್ ಬಂದು ಹೇಳಿದಳು: 'ನಿಮ್ಮ ಟ್ರೀಟ್‌ಮೆಂಟ್ ಮುಗೀತು. ಪೂರ್ತಿ ಹುಶಾರಾಗಿದೀರ. ನಾಡಿದ್ದು ನಿಮ್ಮನ್ನು ಡಿಸ್‌ಚಾರ್ಜ್ ಮಾಡ್ತೇವೆ...'

'ಆ ದಿನ ಕಡೆಗೂ ಬಂದೇ ಬಂತು. ಒಂದು ತಿಂಗಳು ಐಸಿಯುನಲ್ಲಿ, ಉಳಿದ ನಲವತ್ತು ದಿನ ಜನರಲ್ ವಾರ್ಡ್‌ನಲ್ಲಿ ಇದ್ದುದು ಈಕೆಗೆ ನೆನಪಿತ್ತು. ಇದರ ವೆಚ್ಚ ಎಷ್ಟು ಲಕ್ಷವಾಗಬಹುದು ಎಂದು ಯೋಚಿಸಿಯೇ ಆಕೆ ಬೆಚ್ಚಿಬಿದ್ದಳು. ಆಕೆಯ ಬಳಿ ಚಿಕ್ಕಾಸೂ ಇರಲಿಲ್ಲ. ಹಣ ಕೊಡದಿದ್ದರೆ ಆಸ್ಪತ್ರೆಯವರು ಬಿಡುತ್ತಾರಾ ? ಕೇಸು ಹಾಕುತ್ತಾರೆ. ಅವಮಾನಿಸುತ್ತಾರೆ. ನಿಮ್ಮ ಬಂಧುಗಳಿಲ್ವಾ ? ಅವರಿಂದ ತರಿಸಿಕೊಡಿ ಎಂದು ರಂಪ ಮಾಡುತ್ತಾರೆ. ಅಥವಾ ಬಿಲ್ ಕೊಡಲಿಲ್ಲ ಎಂಬ ಕಾರಣಕ್ಕೆ ಜೈಲಿಗೆ ಕಳಿಸಿಬಿಟ್ಟರೆ ಗತಿ ಏನು ? ಇಂಥ ಅವಮಾನದ ಬದಲು ನಾನು ಸತ್ತುಹೋಗಿದ್ದರೇ ಒಳ್ಳೆಯದಿತ್ತು' ಅಂದುಕೊಳ್ಳುತ್ತಾ ಆಕೆ ವಾರ್ಡ್‌ನಲ್ಲಿ ಕೂತಿದ್ದಳು. ಅದೇ ವೇಳೆಗೆ ಬಿಲ್ ಬಂತು. ಸಿಬ್ಬಂದಿಯಿಂದ ಬಿಲ್ ಪಡೆದ ಯುವವೈದ್ಯ, ಅದರ ಮೇಲೆ ಒಂದು ಸಹಿ ಹಾಕಿ ಈಕೆಗೆ ಕಳುಹಿಸಿಕೊಟ್ಟ.

ನರ್ಸ್, ಬಿಲ್‌ನ ಕವರ್ ನೀಡಿದಾಗ ಈ ಹೆಂಗಸು ಮತ್ತೆ ಕಂಪಿಸಿದಳು. ನಡುಗುತ್ತಲೇ ಆ ಕವರ್ ಒಡೆದು ನೋಡಿದಳು. ಬಿಲ್‌ನ ಒಂದು ಬದಿಯಲ್ಲಿ– 'ಒಂದು ಗ್ಲಾಸ್ ಹಾಲಿನ ರೂಪದಲ್ಲಿ ಆಸ್ಪತ್ರೆಯ ಚಿಕಿತ್ಸಾ ವೆಚ್ಚ ಪಾವತಿಯಾಗಿದೆ' ಎಂದು ಹಸಿರು ಇಂಕ್‌ನಲ್ಲಿ ಬರೆದಿತ್ತು. ತಕ್ಷಣವೇ ಒಳಮನಸ್ಸಿಗೆ ಹಳೆಯದೇನೋ ನೆನಪಾಯಿತು. ಈಕೆ ಶಾಕ್‌ಗೆ ಒಳಗಾದವಳಂತೆ ಕಣ್ತುಂಬಿಕೊಂಡು ಎದ್ದುನಿಂತಳು. ಎದುರಿಗೆ ಅದೇ ಸ್ಥಿತಿಯಲ್ಲಿ ಡಾಕ್ಟರ್ ಚಂದ್ರಶೇಖರ್ ನಿಂತಿದ್ದ.

## ಶಬ್ದಗಳ ಅರ್ಥ :

**ಓಬಿರಾಯ** – ಹಳೆಯ ಕಾಲದ; **ಸಂಕೋಚ** – ಕುಗ್ಗುವುದು ; **ಕಂಗಾಲಾಗು** – ತಿಳಿಯದಂತಾಗು; **ಕಸಿವಿಸಿ** – ತಳಮಳ; **ನಾಟಿವೈದ್ಯ** –ದೇಶಿಯ ಚಿಕಿತ್ಸಕ ; **ಸ್ವಗತ** – ತಮ್ಮಷ್ಟಕ್ಕೆ ತಾವೆ ಹೇಳಿಕೊಳ್ಳುವುದು; **ಮಾಸಲು** – ಹಳೆಯದಾದ

### ಕೃತಿ - 1) ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದ ತುಂಬಿ ವಾಕ್ಯ ಪೂರ್ಣ ಬರೆಯಿರಿ.

i) ಚಂದ್ರಶೇಖರನು ಯಾರ್‍ಯಾರದೊ ಶಿಫಾರಸಿನಿಂದ____________________ ಕೆಲಸ ಪಡೆದುಕೊಂಡನು.


ii) ____________________ ವಾಸವಿದ್ದ ರೂಂನಲ್ಲಿ ಚೆನ್ನಾಗಿ ಓದಲು ಪೂರಕ ವಾತಾವರಣವಿರಲಿಲ್ಲ.

iii) ಎಸ್.ಎಸ್. ಪುರಂದ ಪೂರ್ಣರೂಪ ____________________


iv) ರಾಜೀವ್ ಗಾಂಧಿ ಸರ್ಕಲ್ ____________________ ಕಾಲದ್ದು ಎಂಬಂತೆ ಕಾಣುತ್ತಿತ್ತು.

v) ಚಂದ್ರಶೇಖರ ಕುಡಿಯುತ್ತಿದ ಹಾಲಿನ ಲೋಟದಿಂದ ____________________ ಹೊಟ್ಟೆಯನ್ನು ಸೇರಿದವು.

ಕೃತಿ - 2) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.




ಕೃತಿ - 3) 'ದಣಿವಾರಿಸಿಕೊಂಡರಾಯಿತು' ಈ ಶಬ್ದ ಸಮೂಹದ ಅಕ್ಷರಗಳನ್ನು ಬಳಸಿ ಹೊಸ ಶಬ್ದಗಳನ್ನು ತಯಾರಿಸಿರಿ.



ಕೃತಿ - 4) ಕರ್ನಾಟಕದ ಪೇಷಂಟ್ ಅಂದಾಕ್ಷಣ ಡಾ. ಚಂದ್ರಶೇಖರ್ ಅವರಿಗೆ ಹೊಳೆದ ನೆನಪುಗಳನ್ನು ಬರೆಯಿರಿ.

ಕೃತಿ - 5) ''ಒಂದು ಗ್ಲಾಸ್ ಹಾಲಿನ ರೂಪದಲ್ಲಿ ಆಸ್ಪತ್ರೆಯ ಚಿಕಿತ್ಸಾ ವೆಚ್ಚ ಪಾವತಿಯಾಗಿದೆ'' ಎಂಬ ಸಾಲುಗಳಲ್ಲಿ ಕಂಡುಬರುವ ಮಾನವೀಯತೆಯನ್ನು ನಿಮ್ಮ ಅಭಿಪ್ರಾಯಗಳೊಂದಿಗೆ 8-10 ಸಾಲುಗಳಲ್ಲಿ ಬರೆಯಿರಿ.

ಕೃತಿ - 6) ಚಂದ್ರಶೇಖರನ ಸದ್ಗುಣಗಳು ನಿಮಗೆ ಸಹಾಯವಾಗುವ ಬಗೆಗೆ 8-10 ವಾಕ್ಯಗಳಲ್ಲಿ ಬರೆಯಿರಿ.

ಕೃತಿ - 7) ಕೆಳಗಿನ ಸುಳಿವುಗಳನ್ನು ಬಳಸಿಕೊಂಡು ಮುಂದೆ ನೀಡಿದ ಚೌಕೋನಗಳಲ್ಲಿ ಯೋಗ್ಯ ಅಕ್ಷರ ತುಂಬಿ ಅರ್ಥಪೂರ್ಣ ಶಬ್ದ ತಯಾರಿಸಿರಿ.

i) ಚುರುಗುಡುತ್ತಿದ್ದ ಹೊಟ್ಟೆ

| | | |
|---|---|---|
| | ಸಿ | |

ii) ಚಂದ್ರಶೇಖರನಿಗೆ ಬಾಚಿ ತಬ್ಬಿಕೊಂಡಿತ್ತು

| | | | |
|---|---|---|---|
| | | | ನ |

iii) ಕರ್ನಾಟಕದ ಪೇಷಂಟ್ ಎಂದಾಗ ಯುವ ವೈದ್ಯನ ಕಣ್ಣಲ್ಲಿ ಮೂಡಿದ್ದು

| | | | | |
|---|---|---|---|---|
| | | ರ | | |

iv) ಹುಡುಗ ಬಡಬಡಿಸಿದ್ದನ್ನು ಹುಡುಗಿ ನೋಡಿದ ಬಗೆ

| | | | | | |
|---|---|---|---|---|---|
| | | | ಮ | | |

**ಕೃತಿ - 8) ಭಾಷಾಭ್ಯಾಸದ ಕೃತಿಗಳನ್ನು ಸೂಚನೆಗನುಸಾರವಾಗಿ ಬಿಡಿಸಿರಿ.**

ಅ) ಕೆಳಗಿನ ಶಬ್ದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.
ಸಾವಿರಮಿಂಚು, ಶರಣಾಗು

ಬ) ಕೆಳಗಿನ ಶಬ್ದಗಳನ್ನು ವಿಗ್ರಹಿಸಿ ಸಮಾಸದ ಹೆಸರು ಬರೆಯಿರಿ.
ಅಪ್ಪ ಅಮ್ಮ, ಬಿರು ಬಿಸಿಲು, ತಳಿರುತೋರಣ

ಕ) ಕೆಳಗಿನ ಶಬ್ದಗಳ ವಿಭಕ್ತಿ ಪ್ರತ್ಯಯ ಗುರುತಿಸಿ ಬರೆಯಿರಿ.
ವೈದ್ಯರು, ಸಿದ್ಧಗಂಗೆಗೆ, ಆ್ಯಂಗಲ್‌ನಿಂದ, ಊರಲ್ಲಿ

ಡ) ಕೆಳಗಿನ ವಾಕ್ಯದಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.
ಹುಡುಗಿಯು ಒಂದು ಲೋಟ ಹಾಲನ್ನು ತೆಗೆದುಕೊಂಡುಬಂದಳು.

ಗ) ಕೆಳಗಿನ ಆಡುಭಾಷೆಯ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.
ಇದ್ರೆ, ಕಳ್ಕೋಬೇಡಿ, ಹಾಕ್ಕೊಂಡೆ

9.

# ಹಚ್ಚೆ

– ಎಚ್.ಎಂ ಮಹೇಶ್ವರಯ್ಯ

**ಲೇಖಕರ ಪರಿಚಯ :** ಶಿವಮೊಗ್ಗ ಜಿಲ್ಲೆಯ ಶಿಖಾರಿಪುರ ತಾಲೂಕಿನ ಹಿತ್ತಲ ಗ್ರಾಮದವರು ಭಾಷಾ ವಿಜ್ಞಾನ ಹಾಗೂ ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ಈಗ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ ಕಲಬುರ್ಗಿ ಕುಲಪತಿಗಳೆಂದು ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಕೃತಿಗಳು. 'ಹಚ್ಚೆ ಜನಪದ ಕಲೆ', ಜನಪದ ಹೊಸದೃಷ್ಟಿ ಮುಂತಾದವು.

ಹಚ್ಚೆ ಇದೊಂದು ಜಾನಪದ ಕಲೆಯಾಗಿದೆ. ಹಚ್ಚೆಯ ಉಗಮ ಹಾಗೂ ಇದರ ವೈಜ್ಞಾನಿಕ ಅನುಕೂಲತೆಗಳ ಕುರಿತು ಪ್ರಸ್ತುತ ಪಾಠದಲ್ಲಿ ವಿಶ್ಲೇಕ್ಷಿಸಲಾಗಿದೆ. ಈ ಕಲೆ ಹಳೆಯಾದಾದರೂ ಹೊಸತನದ ಮಾದರಿಯಲ್ಲಿ ''ಟ್ಯಾಟು'' ಎಂಬ ಹೆಸರಿನಿಂದ ಉಳಿದುಕೊಂಡಿದೆ.

ಹಚ್ಚೆಯು ಒಂದು ಕಾಲದಲ್ಲಿ ಜಗತ್ತಿನಾದ್ಯಂತ ಅತ್ಯಂತ ವ್ಯಾಪಕ ಹಾಗೂ ಜನಪ್ರಿಯ ಕಲೆಯಾಗಿತ್ತು.ಇಂದಿಗೂ ಜನರ ಮಧ್ಯೆ ಜೀವಂತ ರೂಪದಲ್ಲಿ ಉಳಿದಿದೆ.

ಹಚ್ಚೆ ಇದನ್ನು ಅನೇಕ ಹೆಸರುಗಳಿಂದ ಕರೆಯುತ್ತಾರೆ. ಅಚ್ಚೆ , ಹಂಚೆ, ಅಣಬೆ, ಅಂಚಿ, ಅಣ್ಣ, ಎಂದು ಕರೆಯುವರು. ಇದು ಹಸಿರು ಗಿಡಮೂಲಿಕೆಗಳಿಂದ ತಯಾರಿಸಿದ ರಸ. ದೇಹದ ಮೇಲೆ ಹಳದಿ ಮಿಶ್ರಿತ ಹಸಿರು, ಕಲೆ ಶಾಶ್ವತವಾಗಿ ಉಳಿಯುತ್ತದೆ. ಅಣಬೆ ಎಂಬ ಪದದಲ್ಲಿ ಅಣ ಎಂದರೆ 'to decorate' ಎಂದರ್ಥ. ಹಚ್ಚೆ ಎಂಬ ಪದಕ್ಕೆ ಇಂಗ್ಲೀಷಿನಲ್ಲಿ 'tattoo' ಎಂದು ಕರೆಯುತ್ತಾರೆ. ಇದು ಮೂಲತಃ ಪಾಲಿನೆಕ್ಷಿಯನ್ ಭಾಷೆಯಿಂದ ಬಂದಿದೆ. 'ta' ಎಂದರೆ ಹೊಡೆ ''ತಟ್ಟು'' ಎಂಬರ್ಥವಿದೆ.

## ಹಚ್ಚೆಯ ಉಗಮ

ಆದಿ ಮಾನವ ತನ್ನ ಮೂಲ ಅವಶ್ಯಕತೆ ಪೂರೈಸಿಕೊಂಡ ಮೇಲೆ ಅವನ ಲಕ್ಷ್ಯವು ದೈಹಿಕ ಸುಖ ಸೌಂದರ್ಯದ ಕಡೆಗೆ ಹೊರಳಿ ಪ್ರಕೃತಿಯನ್ನು ಆಶ್ರಯಿಸಿದ ಮೊದಲು ಪ್ರಾಣಿ ಪಕ್ಷಿ ಪ್ರಪಂಚದಿಂದಲೇ ಅಲಂಕಾರ ಪ್ರಾರಂಭಿಸಿದನು. ಕೆಲವೇ ದಿನಗಳಲ್ಲಿ ಅಳಿಸಿ ಹೋಗುವ ಬಣ್ಣದಿಂದ ತೃಪ್ತನಾಗಲಾರದೆ ಶಾಶ್ವತ ಬಣ್ಣಕ್ಕಾಗಿ ಹುಡುಕಾಡಿದ. ಇನ್ನೊಂದು ಅಭಿಪ್ರಾಯದಂತೆ ಆಹಾರಕ್ಕಾಗಿ ಕಾಡಿನಲ್ಲಿ ಅಲೆದಾಡುವಾಗ ಪ್ರಾಣಿಗಳಿಂದ ರಕ್ಷಣೆ ಮಾಡಿಕೊಳ್ಳಲು ಬಣ್ಣ ಲೇಪನ ಮಾಡಿಕೊಂಡನು. ಅದಕ್ಕಾಗಿ ಹಚ್ಚೆ ಕಲೆಯನ್ನು ಕಲಿತನು. ಮತ್ತೊಂದು ಅಭಿಪ್ರಾಯದ ಪ್ರಕಾರ ಆಹಾರ ಬೇಯಿಸಿಕೊಳ್ಳುವಾಗ ಆಕಸ್ಮಿಕವಾಗಿ ಸುಟ್ಟುಕೊಂಡನು. ಆ ಕಲೆ ಶಾಶ್ವತ ಉಳಿದುಕೊಂಡಿತು. ಆ ಬಣ್ಣಕ್ಕೆ ಆಕರ್ಷಿತನಾಗಿ ಉದ್ದೇಶ ಪೂರ್ವಕವಾಗಿ ದೇಹದ ಮೇಲೆ ಸುಟ್ಟುಕೊಂಡು ಕಲೆ ಮಾಡಿಕೊಳ್ಳುವ ಸಂಪ್ರದಾಯ ಪ್ರಾರಂಭಿಸಿರಬಹುದು. ವಚನಗಳ ಆಧಾರಗಳಿಂದಲೂ ಕೂಡಾ 12ನೇ ಶತಮಾನದಲ್ಲಿ ಹಚ್ಚೆಯ ಕಲೆ ಇರುವದು ತಿಳಿದು ಬರುತ್ತದೆ.

**ಉದಾ: ''ಐದೆ ಅಣಬೆಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ''** ಎಂಬುದನ್ನು ಬಸವಣ್ಣನವರ ವಚನದಲ್ಲಿ ಕಾಣುತ್ತೇವೆ.

ಈ ಹಚ್ಚೆ ಕಲೆಯನ್ನು ಕರ್ನಾಟಕದ ಅನೇಕ ಜನಾಂಗದವರು ಉಪಕಸಬನ್ನಾಗಿ ಮಾಡಿಕೊಂಡಿದ್ದಾರೆ. ಇಂದು ಇಂಗ್ಲೆಂಡ್, ಅಮೇರಿಕಾದಲ್ಲಿ ಹಚ್ಚೆ ಹೊಯ್ಯುವ ಸಲೂನುಗಳು ಇವೆ. ಅಮೇರಿಕಾದಲ್ಲಿ ಹಚ್ಚೆ ಹಾಕಲು ಮೊದಲನೆ ವಿದ್ಯುತ್‌ಚಾಲಿತ ಯಂತ್ರವು 1891ರಲ್ಲಿ ಪ್ರಾರಂಭವಾಯಿತು.

ಹಚ್ಚೆ ಹಾಕುವ ಮಹಿಳೆಯರು ಸಾಮಾನ್ಯವಾಗಿ ಪಂಚಮಿ, ಕಾರ್ತಿಕ ತಿಂಗಳಲ್ಲಿ. ಊರೂರು ತಿರುಗುತ್ತಾ ಹಚ್ಚೆ ಹಾಕುವರು ಪುರುಷರು ಬೇಟೆಯಾಡುತ್ತಾ ಆಹಾರ ಸಂಗ್ರಹಣೆಯಲ್ಲಿ ತೊಡಗುತ್ತಾರೆ. ಹಚ್ಚೆ ಹಾಕುವ ಜೊತೆಗೆ ಉಪಕಸಬುಗಳಾಗಿ ಮಹಿಳೆಯರು ಕಂಬಳಿಗೆ ಮತ್ತು ಗುಡಾರಗಳಿಗೆ ಕರಿಕಟ್ಟುವ ಕೆಲಸ ಮಾಡುತ್ತಾರೆ. ಹಚ್ಚೆ ಹಾಕುವ ಸಾಮಗ್ರಿಗಳು ಅವರಿಗೆ ಪೂಜ್ಯನೀಯ ಹಬ್ಬ ಹರಿದಿನಗಳಲ್ಲಿ ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಪೂಜೆ ಮಾಡುತ್ತಾರೆ.

## ಹಚ್ಚೆ ಹಾಕುವ ಸಾಮಗ್ರಿಗಳು

ಹಚ್ಚೆ ಹಾಕುವ ಕಲಾವಿದರು ಬಳಸುವ ಉಪಕರಣಗಳೆಂದರೆ ಸಾಮಾನ್ಯವಾಗಿ ಬಟ್ಟೆ ಹೊಲೆಯಲು, ಕಸೂತಿ ಹಾಕಲು ಬಳಸುವ ಸೂಜಿಗಳು. ಸೂಜಿಗಳನ್ನು ಕೂಡಿಸಿ ಅವುಗಳನ್ನು ಜೋಡಿಸಿಕೊಂಡು ತೆಗೆದುಕೊಂಡ ಕಬ್ಬಿಣದ ಪಟ್ಟಿಗಳ ಮಧ್ಯೆ ಭದ್ರವಾಗಿ ಇರುವಂತೆ ಒತ್ತಿ ದಾರದಿಂದ ಕಟ್ಟುತ್ತಾರೆ. ಇದಕ್ಕೆ 'ಚಕ್ರ' ಎನ್ನುತ್ತಾರೆ. ಕೆಲವರು ಬಾಚಣಿಕೆಯ ಆಕಾರದಲ್ಲಿ ಜೋಡಿಸಿ ಗೆರೆಯಾಕಾರದ ಚಿತ್ರ ಬಿಡಿಸುವಾಗ ಬಳಸುತ್ತಾರೆ. ಕೆಲವರು ಚಿತ್ರ ಬಿಡಿಸಿ ಹಚ್ಚೆ ಹಾಕುವರು. ಕೆಲವರು ಕಲಾತ್ಮಕವಾಗಿ ಚಿತ್ರ ಬಿಡಿಸುತ್ತಾರೆ.

## ಹಚ್ಚೆಯ ಬಣ್ಣ

ಹಚ್ಚೆಯ ಬಣ್ಣ ತಯಾರಿಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಇದಕ್ಕೆ ಕಾರಣ ಆಯಾ ಪ್ರದೇಶದಲ್ಲಿ ದೊರೆಯುವ ಗಿಡಮೂಲಿಕೆಗಳು. ಇದರಲ್ಲಿ ಎರಡು ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳುವರು. ಮೊದಲನೆಯದು ಬಣ್ಣ ಶಾಶ್ವತವಾಗಿ ದೇಹದ ಮೇಲೆ ಉಳಿಯಬೇಕು ಎರಡನೆಯದು ಅದು ದೇಹಕ್ಕೆ ಬರುವ ನಂಜನ್ನು ನುಂಗುವ ಶಕ್ತಿ ಪಡೆದಿರಬೇಕು 1) ಬರೆಯುವ ಮಸಿ. ಅರಿಷಿಣ ಔಡಲೆಣ್ಣೆಗಳಿಂದ ತಯಾರಿಸಿದ ನೀಲಿ ಮಿಶ್ರಿತ ಕಪ್ಪು ಬಣ್ಣ 2) ಬಳ್ಳಿಕಾಂಬಿ ಎಲೆಯ ರಸ ಬೇರಿನ ರಸಗಳಿಂದ ತಯಾರಿಸಿದ ಹಸಿರು ಹಳದಿ ಬಣ್ಣ. ಆದರೆ ಇಂದು ಬೇರೆ ಬೇರೆ ಬಣ್ಣಗಳಿಂದ ಹಚ್ಚೆಯ ರೂಪದ 'tattoo' ಹಾಕಿಸಿಕೊಳ್ಳುತ್ತಾರೆ.

## ಹಚ್ಚೆ ಹಾಕುವ ವಿಧಾನ

ಹಚ್ಚೆ ಹಾಕುವವರು ಚಿತ್ರದ ಪುಸ್ತಕ ತೋರಿಸಿ ಹಚ್ಚೆ ಹಾಕಿಸಿಕೊಳ್ಳುವರು. ಚಿತ್ರಮೊದಲು ಬರೆದ ನಂತರ ಸೂಜಿಯಿಂದ ಚುಚ್ಚುತ್ತಾರೆ. ಇನ್ನು ಕೆಲವರು ನೇರವಾಗಿ ಸೂಜಿಯಿಂದ ಚುಚ್ಚಿ ಹಚ್ಚೆ ಹಾಕುವರು. ಹಚ್ಚೆ ಹಾಕಿಸಿಕೊಳ್ಳುವವರಿಗೆ ನೋವು ಗೊತ್ತಾಗಬಾರದೆಂದು ಹಚ್ಚೆ ಹಾಕುವವರು ಸುಶ್ರಾವ್ಯವಾಗಿ ಹಾಡುತ್ತಾರೆ. ಚಿಕ್ಕ ಮಕ್ಕಳಿದ್ದರೆ ನಗಿಸುವ ಹಾಡುಗಳನ್ನು ಹಾಡಿ ನಗಿಸುತ್ತಾರೆ. ಹಚ್ಚೆ ಹಾಕುವಾಗ ರಕ್ತ ಜಿನುಗಿದ ಚರ್ಮಕ್ಕೆ ತಣ್ಣೀರಿನಿಂದ ತೊಳೆದು ಮೊದಲೇ ತಯಾರಿಸಿ ಇಟ್ಟುಕೊಂಡಿರುವ ಔಷಧಿ ಹಚ್ಚುತ್ತಾರೆ. ಕೊಬ್ಬರಿ ಎಣ್ಣೆ ಹಚ್ಚುವರು. ಅರಿಷಿಣ ಕೊಂಬನ್ನು ತೊಯ್ದು ಅದರ ರಸವನ್ನು ಗಾಯದ ಮೇಲೆ ಸವರುತ್ತಾರೆ. ಇದರಿಂದ ಹಚ್ಚೆಯ ಬಣ್ಣ ಅರಿಷಿಣ ಮಿಶ್ರಿತ ಹಸಿರು ಬಣ್ಣಕ್ಕೆ ತಿರುಗುವದರ ಜೊತೆಗೆ ಗಾಯಕ್ಕೆ ನಂಜಾಗುವದಿಲ್ಲ.

ಹಚ್ಚೆ ಹಾಕಿಸಿಕೊಂಡವರು ಮುತ್ತೈದೆ ಆಗುತ್ತಾರೆ ಎಂದೂ ಸುರಲೋಕದ ಸುಂದರಿಯಂತೆ ಕಾಣುತ್ತೀಯಾ. ನಿನ್ನ ಗಂಡ ನಿನ್ನನ್ನು ಅರಗಿಣಿಯಂತೆ ಸಾಕುತ್ತಾನೆ ಎಂದು ಮೃದುವಾದ ಮಾತುಗಳಿಂದ ಆಕರ್ಷಿಸುತ್ತಾರೆ. ಹಚ್ಚೆ ಹಾಕುವವರಿಗೆ ಸಮಾಜದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ.

## ಹಚ್ಚೆ ಹಾಕುವ ದೇಹದ ಭಾಗಗಳು

ದೇಹದ ಪ್ರತಿ ಭಾಗದ ಮೇಲೆ ಹಚ್ಚೆಯನ್ನು ಹೊಯ್ಯಿಸಿಕೊಳ್ಳುತ್ತಾರೆ. ಕೆನ್ನೆ, ಗಲ್ಲ, ಹುಬ್ಬು, ಬೆನ್ನು, ಕಾಲು ಹೀಗೆ ಹಲವಾರು ಕಡೆ ಹಾಕಿಸಿಕೊಳ್ಳುವರು.

ಹಣೆಯ ಮೇಲೆ – ದೃಷ್ಟಿಬೊಟ್ಟು ಸೀತೆಯ ಸೆರಗು, ಮುತ್ತಿನಬಳ್ಳಿ ತೊಂಡೆ ಚಪ್ಪರ

ಮೊಣಕೈ – ಬಾಳೆಗಿಡ, ಮುತ್ತಿನ ಆರತಿ ತಾವರೆ ಹೂ, ಜೋಗಿಜಡೆ, ಕಮಲ

ಬಲ ಮುಂಗೈ – ಗಂಡ ಅಥವಾ ಹೆಂಡತಿಯ ಹೆಸರು. ಅಜ್ಜ, ಅಜ್ಜಿ, ಅಮ್ಮಾ ಮುಂತಾದವರ ಹೆಸರುಗಳು.

ಮೇಲೆ ತಿಳಿಸಿದ ಚಿತ್ರಗಳು ಸಾಮಾನ್ಯವಾಗಿ ಕಂಡು ಬರುತ್ತವೆ. ಮತ್ತೆ ಚಿತ್ರಗಳಲ್ಲಿ ಭಿನ್ನತೆ ಕಾಣಬಹುದು. ಮಹಿಳೆಯರು, ಬಲ ಮತ್ತು ಎಡ ತೋಳಿನ ಮೇಲೆ ಕುಬುಸದ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಬೇರೆ ಬೇರೆ ಧರ್ಮದವರು ಬೇರೆ ಬೇರೆ ಚಿತ್ರಗಳನ್ನು ಹಾಕಿಸಿಕೊಳ್ಳುವರು.

ಜಪಾನ, ನ್ಯೂಝಿಲ್ಯಾಂಡ್ ದೇಶಗಳಲ್ಲಿ ಹಚ್ಚೆಕಲೆ ಅತ್ಯಂತ ಕಲಾತ್ಮಕ ಬೆಳವಣಿಗೆ ಪಡೆದಿದೆ. ಕೋಚಿನ ಬೆಟ್ಟಗಳಲ್ಲಿ ಅನೇಕ ಬುಡಕಟ್ಟು ಜನಾಂಗಗಳಲ್ಲಿ ಇದನ್ನು ಬಳಸುತ್ತಿದ್ದರು. ಲಿಂಗ ಭೇದವಿಲ್ಲದೆ ಎಲ್ಲರು ಈ ಹಚ್ಚೆ ಕಲೆಯನ್ನು ಹಾಕಿಸಿಕೊಳ್ಳುತ್ತಾರೆ. ಇದಕ್ಕೆ ದೀರ್ಘವಾದ ಪೌರಾಣಿಕ ಹಿನ್ನೆಲೆಯಿದೆ.

## ಹಚ್ಚೆ ಬಗ್ಗೆ ಇರುವ ನಂಬಿಕೆಗಳು

ಪೂರ್ವದಲ್ಲಿ ತಲೆಶೂಲೆ, ವಾತರೋಗ ನಿವಾರಣೆಗಾಗಿ ಹಣೆ ಮತ್ತು ನರಗಳ ಮೇಲೆ ಹಾಗೂ ಕಾಲು ತೋಳಿನ ಸಂದುಗಳಿಗೆ ಹಚ್ಚೆ ಹಾಕಿಸಿಕೊಳ್ಳುತ್ತಿದ್ದರು. ಸರ್ಪಹುಣ್ಣ ತೊನ್ನುಗಳನ್ನು ಮುಚ್ಚುವದಕ್ಕಾಗಿ, ವಿಷಯುಕ್ತ ಪ್ರಾಣಿಗಳಿಂದ ನಂಜು ಏರದಂತೆ ತಡೆಯಲು, ಅಡಿಗೆ ಕೆಡದಿರಲು ಮತ್ತು ಕಣಜ ಮುಟ್ಟುವವರ ಕೈಯಲ್ಲಿ ಹಚ್ಚೆ ಇದ್ದರೆ ಧಾನ್ಯ ಸಮೃದ್ಧಿಯಾಗುವದು. ದೃಷ್ಟಿರೋಗ ನಿವಾರಣೆಗೆ ಉಪಯೋಗವಿದೆ. ಪ್ರಚಲಿತ ಕಾಲದಲ್ಲಿ ವ್ಯಕ್ತಿಗಳನ್ನು ಗುರುತಿಸಲು ಆಧಾರಕಾರ್ಡ ಆಧಾರವಾಗಿರುವಂತೆ ಪ್ರಾಚೀನ ಕಾಲದಲ್ಲಿ ವ್ಯಕ್ತಿಗಳನ್ನುಹಚ್ಚೆಗಳ ಮುಖಾಂತರ ಗುರುತಿಸಲಾಗುತ್ತಿತ್ತು. ಹಚ್ಚೆ ಹಾಕುವವರಿಗೆ ಪ್ರದೇಶದಿಂದ ಪ್ರದೇಶಕ್ಕೆ ಸಂಭಾವನೆ ಭಿನ್ನವಾಗಿದೆ. ಬಟ್ಟೆ, ದವಸ, ಧಾನ್ಯ ನಗನಾಣ್ಯ ಊಟ-ಉಪಚಾರ, ತಿಂಡಿ-ತಿನಸು ಹೀಗೆ ಬೇರೆ ಬೇರೆ ರೂಪದಲ್ಲಿ ಕೊಡುತ್ತಾರೆ.

ಹಾಗಲರಸ, ನೆಲ್ಲಿರಸ, ತುಂಬೆರಸ ಮತ್ತು ನೀಲಗಿರಿ ಎಲೆಯ ರಸಗಳಿಗೆ ಕೊಬ್ಬರಿ ಎಣ್ಣೆ, ಹರಳೆಣ್ಣೆ ಮತ್ತು ಎಳ್ಳೆಣ್ಣೆ ದೀಪಗಳ ಕಾಡಿಗೆಯನ್ನು ಬೆರೆಸಿ ಹಚ್ಚೆಹಾಕುವ ಬಣ್ಣವನ್ನು ತಯಾರಿಸುತ್ತಾರೆ. ಇದರಲ್ಲಿ ರಾಸಾಯನಿಕ ಮಿಶ್ರಣ ಇರುವುದಿಲ್ಲ. ಹಚ್ಚೆ ಹಾಕುವುದರಿಂದ ಈ ಔಷಧಿ ಗುಣಗಳುಳ್ಳ ಬಣ್ಣವು ಚರ್ಮದಲ್ಲಿ ಸೇರಿಕೊಳ್ಳುತ್ತದೆ. ಇದರಿಂದ ಚರ್ಮರೋಗಗಳು, ನರರೋಗಗಳು ಬರುವ ಸಾಧ್ಯತೆ ಕಡಿಮೆ. ಹಾವುಗಳ ವಿಷದ ನಂಜೇರದಂತೆ ರಕ್ಷಣೆ ಮಾಡುತ್ತದೆ. ತೊನ್ನರೋಗ, ಸ್ಕರ್ವಿರೋಗದಿಂದ ಶರೀರದ ಮೇಲಾದ ಗಾಯಗಳನ್ನು ಮುಚ್ಚಿಹಾಕಲು ಹಚ್ಚೆಕಲೆಯ ಸಹಕಾರಿಯಾಗಿದೆ ಹಚ್ಚೆಕಲೆಯು ಆ್ಯಕ್ಯುಪಂಕ್ಚರ ಚಿಕಿತ್ಸಾವಿಧಾನವನ್ನು ಹೋಲುತ್ತದೆ.

ಹೀಗೆ ವಿವಿಧ ನಂಬಿಕೆಗಳ ಆಧಾರದ ಮೇಲೆ ಹಚ್ಚೆಕಲೆ ನಮ್ಮ ಜನಪದರ ದೇಹದ ಮೇಲೆ ಈ ಕಲೆ ಮೂಡಿ ಬಂದಿದೆ.

ನರರೋಗಗಳಿಂದ ರಕ್ಷಣೆ ದೊರಕುತ್ತದೆ ಎಂಬ ನಂಬಿಕೆ ಇದೆ. ಔಡಲ ಎಣ್ಣೆ ಹಾಗೂ ಸೊಪ್ಪಿನ ರಸ, ನೀಲಗಿರಿ ರಸ ಇದರ ಜೊತೆಗೆ ಅರಿಷಿಣ ಕೊಬ್ಬರಿಎಣ್ಣೆ ಸೇರಿಸಿ ಔಷಧಿ ತಯಾರಿಸಿರುವವರಿಂದ ರೋಗ ಬರುವದಿಲ್ಲ ಎಂಬ ನಂಬಿಕೆ ಇದೆ.

## ಶಬ್ದಗಳ ಅರ್ಥ

**ಜನಪ್ರಿಯ** – ಪ್ರಸಿದ್ಧ; **ಉಗಮ** – ಹುಟ್ಟು; **ಕಸೂತಿ** – ಹೆಣಿಕೆ ಕಲೆ; **ಮುತ್ತೈದೆ** – ಸುಮಂಗಲಿ; **ಕೊಂಬು** – ಬೇರು, **ನಗ** – ಆಭರಣ

### ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.


i) ಹಚ್ಚೆಯನ್ನು ಯಾವ ಯಾವ ಹೆಸರುಗಳಿಂದ ಕರೆಯುತ್ತಾರೆ ?

ii) 'Tattoo' ಈ ಶಬ್ದ ಮೂಲತಃ ಯಾವ ಭಾಷೆಯಿಂದ ಬಂದಿದೆ ?


iii) ಹಚ್ಚೆ ಹಾಕುವ ಮಹಿಳೆಯರು ಮಾಡುವ ಇತರ ಕೆಲಸಗಳು ಯಾವವು ?

iv) ಹಚ್ಚೆ ಹಾಕುವ ಕಲಾವಿದರು ಬಳಸುವ ಉಪಕರಣಗಳು ಯಾವುವು ?

ಕೃತಿ 2 )  i) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.




ii) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.




**iii)** ಹಚ್ಚೆ ಹಾಕುವ ಕುಟುಂಬವು ಮಾಡುವ ಬೇರೆ ಬೇರೆ ಉದ್ಯೋಗಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ




**iv)** ಹಚ್ಚೆಯ ಬಣ್ಣ ತಯಾರಿಕೆಯಲ್ಲಿ ಗಮನದಲ್ಲಿಡುವ ಎರಡು ಅಂಶಗಳು.

v) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ




ಕೃತಿ 3) ಪದಬಂಧವನ್ನು ನಿರೀಕ್ಷಿಸಿ ಕೆಳಗಿನ ಕೃತಿ ಮಾಡಿರಿ.

| | | | | | | | | |
|---|---|---|---|---|---|---|---|---|
| ಪ್ರಾ | ಘು | ವ | ಥ | ಔ | ಷ | ಧಿ | ವ | ತ್ರಿ |
| ಚೀ | ಗು | ಸ | ಚ | ಶ | ಕೇ | ನ | ಪ | ವ |
| ನ | ದ | ನ | ಗ | ಷ | ಮಾ | ತಿ | ಠ | ಲ |
| ಕಾ | ಘು | ಮ | ಸ | ದಿ | ಪ | ಣ | ಇ | ಸೆ |
| ಲ | ಕ | ತ | ಆ | ಚೂ | ಕೈ | ಗು | ಕಾ | ಬ |
| ರ | ಮಾ | ಮು | ತ್ರೈ | ದಿ | ಮೀ | ಯ | ಡ್ಡ | ಝೂ |
| ವ | ಗುಂ | ಚೇ | ಜ | ಕ್ಷ | ತೇ | ಕಾ | ರ್ತಿ | ಕ |

**ಕೆಳಗಿನ ಪ್ರತಿಯೊಂದು ಪದದ ಅರ್ಥ ಕೊಡುವ ಒಂದು ಶಬ್ದವನ್ನು ಪದಬಂಧದಿಂದ ಹುಡುಕಿ ಬರೆಯಿರಿ.**

1) ರೋಗಿಗೆ ವೈದ್ಯರು ಕೊಡುವದು

2) ಪ್ರದೇಶದಿಂದ ಪ್ರದೇಶಕ್ಕೆ ಹೋಗುವದು

3) ಪೂರ್ವದ ಮನುಷ್ಯ

4) ಸುಮಂಗಲಿ

5) ಪತಿ – ಪತ್ನಿ

6) ಓಬೀರಾಯನಕಾಲ

7) ಗಿರಿ

8) ಅಶ್ವೀನ ನಂತರ ಬರುವ ತಿಂಗಳು

**ಕೃತಿ 4 ಅ) ವಾಕ್ಯದ ಪ್ರಕಾರವನ್ನು ಗುರುತಿಸಿ ಬರೆಯಿರಿ.**

i) ಹಚ್ಚೆ ಹಾಕುವ ಸಾಮಗ್ರಿಗಳು ಅವರಿಗೆ ಪೂಜ್ಯನೀಯ.

ii) ಮಹಿಳೆಯರು ಹಚ್ಚೆ ಹಾಕುತ್ತಾರೆ ಜ್ಯೋತಿಗೆ ಕಂಬಳಿಗೆ ಕರಿಕಟ್ಟುವ ಕೆಲಸ ಮಾಡುತ್ತಾರೆ.

**ಬ) ವಾಕ್ಯದ ಪ್ರಯೋಗ ಬದಲಿಸಿರಿ.**

ಹುಡುಗರೆಲ್ಲ ಸೇರಿ ಜಾನಪದ ಹಾಡುಗಳನ್ನು ಹಾಡಿದರು.

**ಕ) ಪಡೆನುಡಿಯ ಅರ್ಥ ಹೇಳಿ ವಾಕ್ಯದಲ್ಲಿ ಉಪಯೋಗಿಸಿರಿ.**

ಕೈಹಿಡಿ, ಟೊಪ್ಪಿಗೆ ಹಾಕು

**ಡ) ಕೆಳಗಿನ ವಾಕ್ಯದ ಕರ್ತೃ ಕರ್ಮ ಕ್ರಿಯಾಪದ ಬರೆಯಿರಿ.**

ವಾಕ್ಯ – ಪುರುಷರು ಬೇಟೆಯಾಡುವ ಕೆಲಸವನ್ನು ಮಾಡುವರು.

| ಕರ್ತೃ | ಕರ್ಮ | ಕ್ರಿಯಾಪದ |
|---|---|---|
| | | |

# 10. ನೀವಾವ್ರೋದುಗಳಂ ಬಲ್ಲಿರಿ

– ಶಿವಕೋಟ್ಯಾಚಾರ್ಯ

**ಲೇಖಕರ ಪರಿಚಯ :** ಶಿವಕೋಟ್ಯಾಚಾರ್ಯ (ಕ್ರಿ.ಶ.ಸು.920)ನು ಬರೆದ ವಡ್ಡಾರಾಧನೆಯು ಕನ್ನಡದ ಮೊಟ್ಟಮೊದಲ ಉಪಲಬ್ಧ ಗದ್ಯಗ್ರಂಥ. ಇದು ಜೈನಧರ್ಮದ ಉಪಸರ್ಗ ಕೇವಲಿಗಳಿಗೆ ಸಂಬಂಧಿಸಿದ ಹತ್ತೊಂಬತ್ತು ಕಥೆಗಳನ್ನು ಒಳಗೊಂಡಿದೆ. ಇದರ ಶೈಲಿ, ಭಾಷೆ ವೈಶಿಷ್ಟ್ಯ ಪೂರ್ಣವಾಗಿದ್ದು ಪೂರ್ವದ ಹಳಗನ್ನಡದ ಭಾಷಾಸ್ವರೂಪವನ್ನು ಪರಿಚಯ ಮಾಡಿಕೊಳ್ಳುತ್ತದೆ. ಸನ್ನಿವೇಶನಿರೂಪಣೆ, ಪಾತ್ರಚಿತ್ರಣ, ಸಂವಾದಕಲೆ, ದೇಸಿಯ ಬಳಕೆಯಿಂದ ಈ ಕೃತಿ ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವಗ್ರಂಥವೆನಿಸಿದೆ.

ಅಗ್ನಿಭೂತಿ–ವಾಯುಭೂತಿ ಎಂಬ ಅಣ್ಣ–ತಮ್ಮಂದಿರು ವಿದ್ಯಾಭ್ಯಾಸ ಮಾಡದೆ ತಂದೆಯ ಮಂತ್ರಿಪದವಿ ಇತ್ಯಾದಿಗಳನ್ನು ಕಳೆದುಕೊಂಡು ತಾಯಿಯ ಅಪ್ಪಣೆಯಂತೆ ಸೋದರಮಾವನಾದ ಸೂರ್ಯಮಿತ್ರನ ಬಳಿ ವಿದ್ಯಾಭ್ಯಾಸ ಮಾಡಲು ಹೋಗುವರು. ಸೂರ್ಯಮಿತ್ರನು ತಾನು ಅವರ ಸೋದರಮಾವನಲ್ಲನೆಂದು ಹೇಳಿ ಕಷ್ಟ ಕಾರ್ಪಣ್ಯಗಳಿಂದ ವಿದ್ಯಾಭ್ಯಾಸ ಮಾಡಿಸಿ, ತದನಂತರದಲ್ಲಿ ನಿಜಸಂಗತಿಯನ್ನು ಹೇಳಿದಾಗ ಅದನ್ನು ಕೇಳಿ ಅಗ್ನಿಭೂತಿಗೆ ಸಂತೋಷವಾದರೆ, ವಾಯುಭೂತಿ ಕಷ್ಟಕೊಟ್ಟದ್ದಕ್ಕೆ ಸಿಟ್ಟಾದನು. ಅಣ್ಣ–ತಮ್ಮಂದಿರು ಮರಳಿ ಊರಿಗೆ ಬಂದು ಮತ್ತೆ ಮಂತ್ರಿಪದವಿ ಇತ್ಯಾದಿಗಳನ್ನು ಮರಳಿ ಪಡೆದ ಕಥೆ ಇಲ್ಲಿದೆ. ಈ ಕಥಾಭಾಗವನ್ನು ಸುಕುಮಾರಸ್ವಾಮಿಯ ಕಥೆಯಿಂದ ಆಯ್ದು ಸಂಪಾದಿಸಲಾಗಿದೆ.

**ಆಶಯ :– ಶಿಕ್ಷಣದ ಮಹತ್ವ ಹಾಗೂ ಮನ್ನಣೆಯನ್ನು ಈ ಕಥೆ ಬಿಂಬಿಸುತ್ತದೆ.**

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಸಂಬಿಯೆಂಬುದು ಪೊಱಲದನಾಳ್ವೊನತಿ ಬಳನೆಂಬರಸನಾತನ ಮಹಾದೇವಿ ಮನೋಹರಿಯೆಂಬೊಳ್ ಪೆಸರ್ಗೆ ತಕ್ಕಂತೆ ನೋಡಿದರೆಲ್ಲರ್ಗಳ ಕಣ್ಣಾಲಿಗೆ ಸೊಗಯಿಸುವಳ್ ಸತ್ಯಶೌಚಾಚಾರಂಗಳಿಂ ಕೂಡಿದೊಳ್ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ ವಿಲಾಸ ವಿಭ್ರಮಂಗಳನೊಡೆಯಳಂತವರ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಅರಸನ ಮಂತ್ರಿ ಸೋಮಶರ್ಮನೆಂಬೊನಾತನ ಭಾರ್ಯೆ ಕಾಶ್ಯಪಿಯೆಂಬೊಳ್ ಇರ್ವರ್ಗ್ಗಂ ಮಕ್ಕಳಗ್ನಿಭೂತಿ – ವಾಯುಭೂತಿಯೆಂಬವರ್ಗಳ್ ತಾಯಿತಂದೆವಿರಕೇಳ್ಪಿಯಂ ಗೆಯ್ಯದಾ ವೇದಂ ಮೊದಲಾಗೊಡೆಯ ಶಾಸ್ತ್ರಂಗಳನೋದದೆ ತಂದೆ ಪಡೆದ ಕಸವರಮಂ ಬಿಯಂಗೆಯ್ಯುತ್ತುಂ ಸಪ್ತವ್ಯಸನಾಭಿಭೂತರಾಗಿ ನೆಗೞುತ್ತಿರೆಯಿರೆ ಪಲಕಾಲದಿಂ ತಂದೆ ಕೞಿದೊಡೆ ಸೋಮಶರ್ಮಂಗೆ ಮಕ್ಕಳೊಳರಿಲ್ಲೆಂದರಸಂ ಬೆಸಗೊಂಡೊಡೊಳರೆಂದುಪೇೞ್ದೊಡ ವರ್ಗ್ಗೆ ಬೞಿಯಟ್ಟವರಿಸಿ ಮಜ್ಜನದೊಳ್ ಮಿಸಿಸಿ ಉಡಿಸಿ ತುಡಿಸಿ ಯೂಡಿಲಾಂ ಬುಲಂಗೊಟ್ಟುಬೞ್ಗೆಂಬಡದಿರಿಮೆಂದು ನುಡಿದವರ್ಗ್ಗಳ ದುಃಖಮನಾರಿಸಿ ಬೀಡಿಂಗೆ ಪೋಗಲ್ವೇೞ್ದು ಕೆಲವು ದಿವಸದಿಂ ಬೞಿಯಟ್ಟವರಿಸಿ ನೀವಾವ್ರೋದುಗಳಂ ಬಲ್ಲಿರೆಂದಿರ್ವರುಮಂ ಬೆಸಗೊಂಡೆಡವರ್ಗ್ಗಳ್ ತಲೆಯಂ ಬಾಗಿ ಮರು ಮಾತುಗುಡದೆ ಕಣ್ಣನೀರಂ ತೀವಿ ನೆಲನಂ ಬರೆಯುತ್ತಿರೆ ಸಭೆಯೊಳಿರ್ದವರ್ಗ್ಗಳೆಲ್ಲಂ – ಇವರ್ ಮೂರ್ಖರೇನುಮೋದಂಗಳನರಿಯರ್ ಸಪ್ತವ್ಯಸನಾಭಿಭೂತರೆಂದರಸಂಗೆ ಪೇೞ್ದೊಡರಸನ ವರ್ಗಳನಟ್ಟಿ ಕಳೆದವರ ದಾಯಿಗಂಶಾಸ್ತ್ರಗಳಂ ಬಲ್ಲೊಂಗಂ ಮಂತ್ರಿ ಪದವಿಯಂ ಬಾೞುಮಂ ಪ್ರತಿಪತ್ತಿಯುಮಂ ಕೊಟ್ಟುದಂ ಕೇಳ್ದಿರ್ವರುಮುಬ್ಬೆಗಂಬಟ್ಟು ವೈರಾಗ್ಯ ಪರಾಯಣರಾಗಿ ಕಪ್ಪಡಮುಟ್ಟು ಬೈಕಂದಿರಿನ್ನಪ್ಪೊಡಮೋದುವಮೆಂದು ತಾಯ್ಗೆ ನುಡಿದೊಡಂತಪ್ಪೊಡೆ ಮಕ್ಕಳಿರಾ ಮಗಧೆಯೆಂಬುದು ನಾಡಲ್ಲಿ ರಾಜಗೃಹಮೆಂಬುದು ಪೊಱಲದನಾಳ್ವೊಂ ಸುಬಲನೆಂಬರಸನಾತನ ಮಹಾದೇವಿ ಸುಪ್ರಭೆಯೆಂಬೊಳವರ್ಗೆ ಮಂತ್ರಿಯಮ್ಮಣ್ಣಂ ಸೂರ್ಯಮಿತ್ರನೆಂಬೊಂ ಎಲ್ಲಾ ಓದುಗಳುಮಂ ಬಲ್ಲೊನಾತಂ ನಿಮ್ಮನೋದಿಸಿ ಯೋಗ್ಯರಂ ಮಾಡುವಂತಿರೆ ನಿರೂಪಿಸಿ ಕಲ್ಪಿಸಿಯೋಲೆಯಂ ಬರೆಯಿಸಿ ನಿಮ್ಮ ಕಯ್ಯೊಳಟ್ಟಿದಪೆಂ ನೀಮುಂ ಪೋಗಿ ನಿಮ್ಮ ಮಾವನ ಪಕ್ಕದೊಳೋದಿಮೆಂದೋಲೆಯಂ ಬರೆಯಿಸಿ ಕೊಟ್ಟೊಡವರ್ಗ್ಗಳುಂ ತಾಯಂ

ಬಿಟ್ಕೊಂಡು ಕತಿಪಯ ದಿವಸಂಗಳಿಂ ರಾಜಗೃಹಮನೆಯ್ದಿ ಸೂರ್ಯಮಿತ್ರನ ಮನೆಯಂ ಬೆಸಗೊಂಡು ಪೋಗಿ ಕಂಡೋಲೆಯನಿಕ್ಕಿದೊಡೆ ಸೂರ್ಯಮಿತ್ರನೆಲ್ಲಿಂ ಬಂದಿರಾರೋಲೆಯೆಂದು ಬೆಸಗೊಂಡೊಡೆ ಕೌಸಂಬಿಯಿಂ ಬಂದೆವು ನಿಮ್ಮ ತಂಗೆಯಪ್ಪ ಕಾಶ್ಯಪಿಯಟ್ಟಿದೋಲೆಯೆಂದೊಡೋಲೆಯಂ ಬಾಜಿಸಿ ನೋಡಿ ಸೋಮಶರ್ಮಂ ಕಟೆದುದುಮಂ ಮಂತ್ರಿಪದವಿ ಪೆರರ್ಗಾದುದಮಂ ಮಕ್ಕಳ್ ಸಪ್ತವ್ಯಸನಾಭಿಭೂತರಾಗಿ ಬಾೞುಂ ಕೆಟ್ಟುದುಮಂ ಶಾಸ್ತ್ರಜ್ಞರುಂ ಬುದ್ಧಿಯೊಡೆಯರುಂ ಯೋಗ್ಯರುಮಪ್ಪಂತು ಮಾಡಿಮೆಂದು ಮಕ್ಕಳಂತನಗಿನಿತೊಪ್ಪಿಸಿಯಟ್ಟಿದುದುಮನಿಂತಿವೆಲ್ಲಮಂ ಬಾಜಿಸಿ ನೋಡಿ – ಇವಂದಿರ್ಗೆ ಪೆಸರಂಗೊಟ್ಟೆನಪ್ಪೊಡೆ ಮುನ್ನಿನಂತುರ್ಕಿ ಕಿಡುವರೆಂದು ಮನದೆ ಬಗೆದಗ್ನಿಭೂತಿ ವಾಯುಭೂತಿಗಳ್ಗಿಂತೆಂದಂ – ಕಾಶ್ಯಪಿಯೆಂಬೊಳೆನಗೆ ತಂಗೆಯಿಲ್ಲ ಸೋಮಶರ್ಮನೆಂಬೊಂಮಯ್ದುನನು ಮಿಲ್ಲ ಸೂರ್ಯಮಿತ್ರನೆಂಬ ಪೆಸರೆನಗುಂಟು ನಿಮ್ಮ ಮಾವನಪ್ಪ ಸೂರ್ಯಮಿತ್ರನಲ್ಲೆನೆಂದವರ್ಗೆ ನುಡಿದುಂ ಮತ್ತಮಿಂತೆಂದಂ ನೀಮಾರ್ಗಾರಾದೊಡಮೇಂ ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಟ್ಟಿಯೊಳ್ ಬಂದಿರಪ್ಪೊಡೆ ಬೈಕಂದಿರಿದು ಕಪ್ಪಡಮುಟ್ಟಿರುಳಂ ಪಗಲುಮಲಸದೆ ನಿರ್ಬಂಧದಿಂದೋದಲಾರ್ಪೊಡೆ ನಿಮ್ಮ ನೋದಿಸಲಕ್ಕು ಮೆಂದೊಡವರ್ಗಳುಮಿಂ ದಯೆಗೆಯ್ಯಿಂ ಮಹಾಪ್ರಸಾದಮೆಂದು ಪೊಡೆಮಟ್ಟು ಹರ್ಷಚಿತ್ತರಾಗಿ ಒಳ್ಳಿತಪ್ಪ ದಿವಸ ವಾರ ವಿದ್ಯಾ ನಕ್ಷತ್ರದಂದು ತಮ್ಮನುಕೂಲ ದೊಳೋಜರ್ಗೆರಗಿ ಪೊಡೆಮಟ್ಟು ವಿದ್ಯಾಪ್ರಾರಂಭಂಗೆಯ್ದರ್ ಸೂರ್ಯಮಿತ್ರನು ಮವರನಿರುಳುಂ ಪಗಲುಂ ನಿರಂತರಂ ನಿರ್ಬಂಧದಿಂದೋದಿಸಿ ಏಟೆಂಟು ವರುಷದಿಂದೊಳಗೆ ನಾಲ್ಕುವೇದಮುಮಾರಂಗಮುಂ ಪದಿನೆಂಟು ಧರ್ಮಶಾಸ್ತ್ರಂಗಳುಂ ಮೀಮಾಂಸಾ ನ್ಯಾಯ ವಿಸ್ತಾರಂ ವ್ಯಾಕರಣಂ ಪ್ರಮಾಣಂ. ಛಂದಮಲಂಕಾರಂ ನಿಘಂಟು ಕಾವ್ಯ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲಮಂ ನೆರೆಯೆ ಕಲ್ಪಿಸಿ ಯೋಗ್ಯರಂ ಮಾಡಿದೊಡವರ್ – ನಿಮ್ಮ ಪ್ರಸಾದದಿಂದೆಲ್ಲಾ ಶಾಸ್ತ್ರಮಂ ಕಲ್ತು ಪಂಡಿತರೆಮಾದೆಮೆಂದಾದಮಾನುಮೊಸೆದುಮಿ ನ್ನೆಮ್ಮನಾಡ್ಗೆ ಪೋದಪೆಮೆಂದೋಜರ್ಗೆಱಗಿ ಪೊಡೆವಟ್ಟು ಬೀಳ್ಕೊಂಡಾಗಳೋಜರೆಂದರ್ ನೀಮೆಮ್ಮ ತಂಗೆಯ ಮಕ್ಕಳಿರ್ ಸೋದರಳಿಯಂದಿರಪ್ಪಿರ್ ನಿಮಗಾಂ ಪೆಸರಂಗೊಟ್ಟೆನಿಲ್ಲೇಕೆಂದೊಡೆ ಮುನ್ನಿನಂತೆ ತಂದೆಯಲ್ಲಿಯುರ್ಕ್ಕಿ ಕೆಟ್ಟಂತಿಲ್ಲಿಯು ಮೆತ್ತಾನುಮುರ್ಕಿ ಕಿಡುವಿರೆಂದಾಂ ನಿಮ್ಮಂ ಯೋಗ್ಯರಂ ಮಾಡುವ ಕಾರಣಮಾಗಿ ನಿಮಗೆ ಪೆಸರಂಗೊಟ್ಟೆನಿಲ್ಲಿದರ್ಕೆ ಮುಳಿಯದಿರಿಂ ಕ್ಷಮಿಯಿಸಿಮೆಂದುಡಲುಂ ತುಡಲುಂಮುಮಂ ಕೊಟ್ಟು ಕಟಿಸಿದಾಗಳ್ ಪಿರಿಯಾತನಗ್ನಿ ಭೂತಿಯೆಂಬೊಂ ಮಾವಂ ನಮಗೆ ಪೆಸರಂಗುಡದಿರ್ವರುಮಂ ಯೋಗ್ಯರಂ ಮಾಡಿದರೆಂದುಪಕಾರಮಂ ಮನದೆ ಬಗೆದಾದಮಾನು ಸಂತೋಷಂ ಬಟ್ಟಂ ಕಿರಿಯಾತಂ ವಾಯುಭೂತಿ ಸೂರ್ಯಮಿತ್ರಂಗೆಯ್ದುದೆಲ್ಲಮಪ ಕಾರಮೆಂದು ಬಗೆದೆಂದಪ್ಪೊಡಮೆಮ್ಮ ಮಾವಂ ಬೈಕಂದಿರಿದು ತಂದ ಕೂಟ್ಗೆ ನೆರಮೆಣ್ಣೆಯನಕ್ಕುಪ್ಪನಕ್ಕೆ ಕಟ್ಗೆಯನ ಕ್ಕೆಂದಪ್ಪೊಡಮಿಕ್ಕಿಯುಮೆರಿಯಿಸಿಯು ಮರಿಯಂ ಕೆರಿಗೆವೋಗಿ ಮೀವಾಗಳ್ ತಲೆಯಂ ಪೂಸಲೆಣ್ಣೆಯನಪ್ಪೊಡಮೆ ರಿಯಿಸಿಅರಿಯಂ ತಾಂ ದಿವ್ಯಮಪ್ಪಾಹಾರಂಗಳಂ ದೆವಸದೆವಸಕ್ಕಂ ಪಲಂಬರ್ ನಂಟರ್ಕಳುಂ ಆಳ್ಗಳುಂ ಬೆರಸುಣ್ಗಂ ಪರ್ವದಿವಸದೊಳಪ್ಪೊಡ ಮೆಂದಾನು ಮಿರ್ವರ್ಗುಣಲಿಕ್ಕಿಮೆಂದರಿಯಂ ಪಂಚಮಹಾಪಾತಕನೆಮ್ಮ ನೇಟೆಂಟು ವರುಷಂಬರಂ ಪಗೆವರಂ ಬಗೆವಂತೆ ದಂಡಿಸಿದನೆಂದು ಮನದೊಳ್ ಮುಳಿಸಂ ಭಾವಿಸಿ ಪೊರಮಟ್ಟು ಪೋದನ್.

ಅಂತಿರ್ವರುಂ ಪೋಗಿ ಕತಿಪಯ ದಿವಸಂಗಳಿಂ ಕೌಸಂಬಿಯೆನೆಯ್ದಿ ತಮ್ಮ ಮನೆಯಂ ಪೊಕ್ಕು ತಾಯಂ ಕಂಡು ತುಟಿಲ್ಗೆಯ್ದು ಪಂಡಿತರಾಗಿ ಬಂದುದಂ ಪೇಟ್ದು ಮಿಂದುಂಡು ಮಿಶ್ರಮಿಸಿಯೊಳ್ಳಿತಪ್ಪ ದಿವಸವಾರ ನಕ್ಷತ್ರಮುಹೂರ್ತದೊಳತಿಬಲಮಹಾರಾಜನಂ ಕಂಡಿರ್ವರುಂ ಬೇರಿಬೇರುಪಶ್ಲೋಕಿಸಿ ಕ್ರಿಯಾಕಾರಕಸಂಬಂಧದಿಂದಂ ವಖ್ಖಾಣಿಸಿ ತಮ್ಮ ಪಂಡಿತಿಕ್ಕೆಯನರಿಪಿದೊಡೆ ಸಭೆಯೊಳಿದ್ದ ಪಂಡಿತ ಜನಮೆಲ್ಲಂ ಮೆಚ್ಚಿ ಬಿಚ್ಚಳಿಸಿ ಪೊಗಳ್ದೊಡರಸಂ ಸಂತುಷ್ಟಚಿತ್ತನಾಗಿ ಒಸೆದು ನಿಮ್ಮ ತಂದೆಯ ಮಂತ್ರಿಪದಮಂ ಬಾಳುಮಂ ಕೈಕೊಳ್ಳಿಮೆಂದು ಕೊಟ್ಟೊಡೆ ಬಾಳು ಮಹಾಪ್ರಸಾದಮೆಂದರಗಿ ಪೊಡೆವಟ್ಟು ಕೈಕೊಂಡು ಸುಖದೊಳ್ ಬಾಟುತ್ತುಂ ಪಲಂಬರ್ ಪಂಡಿತರ್ಕಳ್ಗೋದುಗಳಂ ವಖ್ಖಾಣಿಸುತ್ತಂ ಲೋಕದೊಳರಮನೆಯೊಳಂ ಪೂಜ್ಯರಾಗಿ ಸುಖಸಕಂಥಾವಿನೋದದಿಂ ಕಾಲಂ ಸಲೆ.....

### ವಿಶೇಷ ವಿಚಾರ :-

i) **ಸಪ್ತ ವ್ಯಸನ :-** ದ್ಯೂತ, ವ್ಯಭಿಚಾರ, ಪರಸ್ತ್ರೀಗಮನ, ಕಳ್ಳತನ, ಮಾಂಸ-ಭಕ್ಷಣ, ಮದ್ಯಪಾನ ಮತ್ತು ಬೇಟೆ

ii) **ನಾಲ್ಕು ವೇದಗಳು :-** ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ

iii) **ಆರು ಅಂಗಗಳು :-** ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯ

iv) **ಪಂಚ ಮಹಾಪಾತಕಗಳು :-** ಬಾಲವಧೆ, ಸ್ತ್ರೀವಧೆ, ಗೋವಧೆ, ಋಷಿವಧೆ, ಬ್ರಾಹ್ಮಣವಧೆ.


### ಶಬ್ದಗಳ ಅರ್ಥ :

**ಪೊಳಲು** - ಪಟ್ಟಣ; **ಭಾರ್ಯೆ**- ಹೆಂಡತಿ ; **ಕಸವರ** - ಸಂಪತ್ತು ; **ಬಿಯ** - ವ್ಯಯ (ಖರ್ಚು);
**ಕಟಿ** - ಸಾಯು ; **ಬೈಕಂದಿರಿದು** - ಭಿಕ್ಷೆ ಬೇಡಿ; **ಪೊಡೆಮೊಟ್ಟು** - ನಮಸ್ಕರಿಸಿ

### ಕೃತಿ - 1) ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ಅಗ್ನಿಭೂತಿ - ವಾಯುಭೂತಿಯರ ತಂದೆ-ತಾಯಿಯರ ಹೆಸರೇನು ?
2. ಅಗ್ನಿಭೂತಿ ವಾಯುಭೂತಿಯರಿಗೆ ರಾಜನು ಏನೆಂದು ಪ್ರಶ್ನಿಸಿದನು ?
3. ಸೂರ್ಯಮಿತ್ರ ಯಾರು ?

### ಕೃತಿ - 2) ವೇದಗಳ ಹೆಸರುಗಳನ್ನು ಚೌಕಟ್ಟಿನಲ್ಲಿ ಬರೆಯಿರಿ.




### ಕೃತಿ - 3) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಉದಾ. ಕಂಡಿರ್ವರುಂ = ಕಂಡು + ಇರ್ವರು

ಅತಿಬಳನೆಂಬರಸ = ________________

ಅಂತಿರ್ವರುಂ = ________________

ಪಂಡಿತರಾಗಿ = ________________

ಸಭೆಯೊಳಿರ್ದ್ದ = ________________

### ಕೃತಿ - 4) ಕೆಳಗಿನ ಕೊಟ್ಟ ಅಂಶಗಳ ಆಧಾರದಿಂದ ಪರಿಚ್ಛೇದವನ್ನು ತಯಾರಿಸಿ ಶೀರ್ಷಿಕೆ ಕೊಡಿರಿ.

● ಆರೋಗ್ಯದ ಮಹತ್ವ ● ವ್ಯಾಯಾಮ ● ಯೋಗ ● ಮನಸ್ಸಿನ ಏಕಾಗ್ರತೆ ● ಕ್ರೀಡೆಗಳಲ್ಲಿ ನೈಪುಣ್ಯ
● ನವಚೈತನ್ಯ ● ಜನರ ಪ್ರಶಂಸೆ

# ಸ್ಥೂಲ ಅಭ್ಯಾಸ

# 1. ವಿಮೋಚನೆ

– ಎಫ್.ಪಿ. ಲಕ್ಷ್ಮೇಶ್ವರ ಮಠ

**ಲೇಖಕರ ಪರಿಚಯ :** ಎಫ್.ಪಿ. ಲಕ್ಷ್ಮೇಶ್ವರ ಮಠ ಇವರೊಬ್ಬ ಆಧುನಿಕ ಸಾಹಿತಿಗಳಲ್ಲಿ ಒಬ್ಬರು ಕಥೆ, ಕಾದಂಬರಿ, ಕವನ ಸಂಕಲನಗಳನ್ನು ಬರೆದಿರುವರು. ರಶಿಯಾದ ಪ್ರಸಿದ್ಧ ಜಾನಪದ ಕಥೆಯನ್ನು ಕನ್ನಡಕ್ಕೆ ಅನುವಾದಮಾಡಿದ್ದಾರೆ.

ಇದೊಂದು ರಶಿಯಾ ಭಾಷೆಯ ಜಾನಪದ ಕಥೆ, ಒಂದೇ ರಕ್ತ ಹಂಚಿಕೊಂಡು ಹುಟ್ಟಿದ ಸಹೋದರರಿದ್ದರೂ. ತಮ್ಮನ ದುಃಖದಲ್ಲಿ ಬಾಗಿಯಾಗಲಾರದೆ. ಹಾಸ್ಯ ಮಾಡುತ್ತಾ ಮತ್ಸರದ ಭಾವನೆಯನ್ನು ವ್ಯಕ್ತಗೊಳಿಸಿರುವರು. ಇಲ್ಲಿ ಕಂಡುಬಂದಿದೆ. ಕೊನೆಗೆ ಸುಖಾಂತದ ರೂಪದಲ್ಲಿ 'ವಿಮೋಚನೆ' ಕಥೆ ಮುಕ್ತಾಯವಾಗಿದೆ.

ರಶಿಯಾದ ಚಕ್ರವರ್ತಿಯೊಬ್ಬ ಒಂದು ಗ್ರಾಮದಲ್ಲಿದ್ದ. ಅವನಿಗೆ ಮೂವರು ಗಂಡು ಮಕ್ಕಳಿದ್ದರು. ಅವನು ತನ್ನ ಮಕ್ಕಳಿಗೆ ಅತೀ ಸುಂದರವಾದ ಅನುರೂಪದ ಹಾಗೂ ಸಭ್ಯತೆ ಸಜ್ಜನಿಕೆಗೂಡಿಸಿಕೊಂಡ ವಧುಗಳೊಂದಿಗೆ ಲಗ್ನ ಮಾಡಲು ಬಯಸಿದ್ದ. ಆದರೆ ಇಂಥ ಹುಡುಗಿಯರನ್ನು ಹುಡುಕುವದೇ ಕಷ್ಟವಾಗಿತ್ತು.

ಒಂದು ದಿನ ಅರಸು ಅವನ ಮಕ್ಕಳನ್ನು ಕರೆದು, ನಿಮಗೆ ಎಂಥ ಕನ್ಯೆಬೇಕು ? ಎಂದು ಪ್ರಶ್ನಿಸಿದ.

ಇದಕ್ಕೆ ಉತ್ತರವಾಗಿ ಮಕ್ಕಳು ವಿಧೇಯವಾಗಿಯೇ, 'ನಮಗೆ ಎಂಥ ಪ್ರಕಾರದ ಹುಡುಗಿಯಾದರೂ ಸರಿಯೇ ಆದೀತು. ಮುಖ್ಯ ಅವರು ನಿಮಗೆ ಒಪ್ಪಿಗೆಯಾಗಿ, ನೀವು ಆಯ್ಕೆಗೊಳಿಸಿದಂತೆ ಇರಬೇಕು' ಎಂದರು.

ಮಕ್ಕಳ ಉತ್ತರ ಕೇಳಿ ತಂದೆಗೆ ಹರ್ಷವಾಯಿತು. ಆಗ ಅವನು ತನ್ನ ಮನದಲ್ಲಿಯೇ ಒಂದು ಉಪಾಯ ಯೋಚಿಸಿ ಹೇಳಿದ, 'ನಾನು ಪ್ರತಿಯೊಬ್ಬರಿಗೂ ಒಂದೊಂದು ಬಾಣ ನೀಡುವೆ. ನೀವು ಅಲ್ಲಿ ಕಾಣಿಸುತ್ತಿರುವ ಬಯಲಿಗೆ ಹೋಗಿರಿ. ಬೇರೆ-ಬೇರೆ ದಿಕ್ಕುಗಳಲ್ಲಿ ಈ ಬಾಣಗಳನ್ನು ಪ್ರಯೋಗಿಸಿರಿ. ನಿಮ್ಮ ಬಾಣಗಳು ಯಾರ ಮನೆಯನ್ನು ತಲುಪುತ್ತವೋ ಆ ಕುಟುಂಬದ ವಧುವನ್ನು ನೀವು ಮದುವೆಯಾಗುವಿರಿ'.

ಇದಕ್ಕೆ ಮೂವರೂ ಪುತ್ರರು ಒಪ್ಪಿಕೊಂಡರು. ಅವರು ತಮ್ಮಲ್ಲಿಯ ಬಾಣಗಳನ್ನು ವಿವಿಧ ದಿಕ್ಕುಗಳಲ್ಲಿ ಪ್ರಯೋಗಿಸಿದರು. ಹಿರಿಯ ಮಗನ ಬಾಣವು ಒಬ್ಬವರ್ತಕನ ಮನೆಯ ಅಂಗಳಕ್ಕೆ ತಲುಪಿತು. ಅಲ್ಲಿಗೆ ಅರಸು ಮತ್ತು ಅವನ ಪುತ್ರ ಆ ಮನೆಯ ಅಂಗಳವನ್ನು ತಲುಪುತ್ತಿದ್ದಂತೆಯೇ ಅಲ್ಲಿ ವರ್ತಕನ ಮಗಳು ತನ್ನ ಕೈಯಲ್ಲಿ ಬಾಣವನ್ನು ಹಿಡಿದುಕೊಂಡು ನಿಂತಿದ್ದಳು. ಆ ಹುಡುಗಿಯೊಂದಿಗೆ ಜೇಷ್ಠ ಪುತ್ರನ ಮದುವೆಯಾಯಿತು.

ಎರಡನೇ ಮಗನ ಬಾಣವು ಒಬ್ಬ ಮೀನುಗಾರನ ಮನೆಗೆ ತಲುಪಿತು. ಹೀಗಾಗಿ ಅವನು ಆ ಹುಡುಗಿಯೊಂದಿಗೆ ಮದುವೆಯಾದನು.

ಇನ್ನು ಕಿರಿಯಪುತ್ರ ಆ್ಯಂಡ್ರಿಯ ಬಾಣ ಒಂದು ಅಡವಿಯಲ್ಲಿ ಬಿತ್ತು. ತಂದೆ ಮತ್ತು ಮಗ ಬಾಣ ಬಿದ್ದ ಅರಣ್ಯದತ್ತ ಹೊರಟರು. ಅಲ್ಲಿ ಒಂದು ಸ್ಥಳದಲ್ಲಿ ಒಂದು ಕೊಳದ ದಂಡೆಯ ಮೇಲೆ ಕಪ್ಪೆಯೊಂದು ತನ್ನ ಬಾಯಲ್ಲಿ ಬಾಣವನ್ನಿಟ್ಟುಕೊಂಡು ಅದರಿಂದ ಅದನ್ನು ಹಿಂದೆ ಮುಂದೆ ಮಾಡುತ್ತಿತ್ತು. ಈಗ ಆ್ಯಂಡ್ರಿಯ ಮುಂದೆ ಯಾರನ್ನು ಮದುವೆಯಾಗಬೇಕೆನ್ನುವದು ಪ್ರಶ್ನೆಯಾಗಿತ್ತು.

ಈಗ ಆ್ಯಂಡ್ರಿ ಕಪ್ಪೆಯ ಬಾಯಿಯಿಂದ ಬಾಣವನ್ನು ತೆಗೆದುಕೊಂಡು, ತಂದೆ-ಮಕ್ಕಳಿಬ್ಬರೂ ಅಲ್ಲಿಂದ ಹೊರಡಲು ಸಿದ್ಧರಾದರು. ಆಗ ಒಮ್ಮೆಲೇ ಆ ಕಪ್ಪೆಯು ಹುಡುಗಿಯ ಧ್ವನಿಯಲ್ಲಿ, 'ನನ್ನನ್ನು ಮದುವೆ ಆಗಲಾರೆಯಾ ?' ಎಂದಿತು.

ಹುಡುಗಿಯ ಧ್ವನಿ ಕೇಳಿ ಅರಸನಿಗೆ ಆಶ್ಚರ್ಯವಾಯಿತು. ಆ್ಯಂಡ್ರಿಯು ಈ ಕಪ್ಪೆ ಹುಡುಗಿಯನ್ನೆ ಮದುವೆಯಾಗಬೇಕೆಂದು ತಂದೆ ನಿರ್ಧರಿಸಿದ. ಅದರಂತೆ ಅವರಿಬ್ಬರೂ ಲಗ್ನವಾದರು. ಇವನ ಅಣ್ಣಂದಿರಿಬ್ಬರೂ ತಮ್ಮ ಪತ್ನಿಯರೊಂದಿಗೆ ಸುಖೀ ಜೀವನ ಸಾಗಿಸಿದ್ದರು. ಆದರೆ ಆ್ಯಂಡ್ರಿ ಮಾತ್ರ ರೂಂನಲ್ಲಿ ಮೌನವಾಗಿ ಕುಳಿತಿರುತ್ತಿದ್ದ. ಇದಕ್ಕೆ ಕಪ್ಪೆಯು, 'ನೀನು ಖಿನ್ನನಾಗಿ ಚಿಂತಿಸುತ್ತ ಕೂಡ್ರಬೇಡ. ನನ್ನನ್ನು ಮದುವೆಯಾಗಬೇಕೆಂದು ನಿನ್ನ ಹಣೆಯಲ್ಲಿ ಬರೆದಿತ್ತು. ಅದರಂತೆ ಆಯಿತು ಅಷ್ಟೆ'.

ಆ್ಯಂಡ್ರಿ ದೀರ್ಘವಾದ ನಿಟ್ಟುಸಿರು ಬಿಟ್ಟು ಮಲಗಲು ಹೋದ. ಹೀಗೆ ಕಾಲ ಸರಿಯಿತು. ಒಂದು ದಿನ ಅರಸು ತನ್ನ ಮಕ್ಕಳಿಗೆ, 'ನಾನು ನನ್ನ ಸೊಸೆಯಂದಿರನ್ನು ಪರೀಕ್ಷಿಸಬೇಕಿದೆ ಎಂದ. ಪ್ರತಿಯೊಬ್ಬರೂ ನನಗಾಗಿ ಒಂದು ಶರ್ಟನ್ನು ಸಿದ್ಧಪಡಿಸಬೇಕು. ಮತ್ತು ಆ ಶರ್ಟ ನಾಳೆ ಬೆಳಿಗ್ಗೆನ್ನುವಷ್ಟರಲ್ಲಿ ಸಿದ್ಧವಾಗಿರಬೇಕು' ಎಂದ.

ಇಬ್ಬರು ಅಣ್ಣಂದಿರು ತಮ್ಮನನ್ನು ನೋಡಿ ಹಾಸ್ಯ ಮಾಡಿದರು. ಎಲ್ಲರೂ ತಮ್ಮ-ತಮ್ಮ ಶಯನ ಗೃಹಗಳಿಗೆ ತೆರಳಿದರು. ಇಬ್ಬರೂ ಅಣ್ಣಂದಿರು ತಮ್ಮ ಪತ್ನಿಯರ ಹೊಲಿಗೆ ಕೆಲಸದಲ್ಲಿ ಸಹಾಯಕ್ಕಾಗಿ ನಿಂತರು. ಆದರೆ ಆ್ಯಂಡ್ರಿ ಮಾತ್ರ ಖಿನ್ನನಾಗಿ ರೂಂನ ಮೂಲೆಯೊಂದರಲ್ಲಿ ಕುಳಿತ. ಇವನನ್ನು ನೋಡಿ ಕಪ್ಪೆಯು, 'ಯಾಕೆ ಚಿಂತಿಸುವಿ ? ಹೋಗಿ ಮಲಗಿಕೋ' ಎಂದಿತು.

ಆ್ಯಂಡ್ರಿ ತನ್ನ ರೂಂಗೆ ಹೋಗಿ ಮಲಗಿದ. ನಂತರ ಕಪ್ಪೆಯು ತನ್ನ ಚರ್ಮವನ್ನು ತೆಗೆಯಿತು. ನಂತರ ಅದನ್ನು ಒಂದು ಸುಂದರ ಯುವರಾಣಿ ತಾನ್ಯಳನ್ನಾಗಿ ಸೃಷ್ಟಿಸಿತು. ಅವಳು ತನ್ನ ನೌಕರರನ್ನು ಕರೆಯಿಸಿ ಒಂದು ಸುಂದರವಾದ ಶರ್ಟನ್ನು ಸಿದ್ಧಪಡಿಸಿದಳು. ನಂತರ ಮತ್ತೆ ತನ್ನ ಹಳೆರೂಪ ಧರಿಸಿ, ಕಪ್ಪೆಯಾಗಿ ಮಲಗಲು ಹೋಯಿತು.

ಮುಂಜಾನೆ ಆ್ಯಂಡ್ರಿ ಎದ್ದು ನೋಡುವಷ್ಟರಲ್ಲಿ ಅವನ ಹಾಸಿಗೆ ಪಕ್ಕದಲ್ಲಿ ಒಂದು ಸುಂದರವಾದ ಶರ್ಟ ಸಿದ್ಧವಾಗಿ ಅಲ್ಲಿತ್ತು. ಅದು ರೇಶ್ಮೆ ಶರ್ಟಾಗಿತ್ತು. ಅಲ್ಲದೇ ಸುಂದರವಾಗಿ ಕುಸುರಿ ಕೆಲಸದಿಂದ ಮಾಡಲಾಗಿತ್ತು. ಅದನ್ನು ಮಡಚಿಕೊಂಡು ತನ್ನ ತಂದೆಯ ಬಳಿಗೆ ಹೋದಾಗ, ಅಲ್ಲಿ ಅದಾಗಲೇ ಅವನ ಅಣ್ಣಂದಿರು ಅಲ್ಲಿದ್ದರು.

ಅರಸು ಎಲ್ಲ ಶರ್ಟುಗಳನ್ನು ಪರೀಕ್ಷಿಸಿ, 'ಹಿರಿಯ ಸೊಸೆ ಸಿದ್ಧಪಡಿಸಿ ತಂದ ಶರ್ಟ ನೌಕರರು ತೊಡಲು ಯೋಗ್ಯವಾಗಿದೆ. ಎರಡನೇ ಸೊಸೆ ಸಿದ್ಧಪಡಿಸಿದ ಶರ್ಟ ರಾತ್ರಿ ವೇಳೆ ಉಪಯೋಗಿಸಲು ಅರ್ಹವಾಗಿದೆ. ಆದರೆ ಆ್ಯಂಡ್ರಿ ತಂದಂರ್ಥ ಶರ್ಟ ನಿಜಕ್ಕೂ ಅದ್ಭುತವಾಗಿದೆ. ಆ್ಯಂಡ್ರಿ ಈಗ ನೀನು ಹೇಳು, 'ಈ ಶರ್ಟನ್ನು ಯಾರು ಹೊಲಿದರು ?'

ಆ್ಯಂಡ್ರಿ ಸತ್ಯ ಘಟನೆ ನಡೆದದ್ದನ್ನು ವಿವರಿಸಿದ. ಆದರೆ ಯಾರೂ ನಂಬಲಿಲ್ಲ. ಅವನು ಸುಳ್ಳು ಹೇಳುತ್ತಿರುವನೆಂದೇ ಎಲ್ಲರೂ ಭಾವಿಸಿದರು. ತನ್ನ ಹೆಂಡತಿಗೆ ಅವಮಾನವಾಗಬಾರದೆಂದು ಬಹುಶಃ ಅವನು ಮಾರ್ಕೆಟ್‌ನಿಂದ ತಂದಿರಬಹುದೆಂದು ಅಂದುಕೊಂಡರು. ಅಥವಾ ಆ ಕಪ್ಪೆಯು ಯಕ್ಷಿಣಿಯಾಗಿರಬಹುದೆಂದು ಅಂದುಕೊಂಡರು.

ಕೆಲ ದಿನಗಳ ನಂತರ ಅರಸು ಪುನಃ ಸೊಸೆಯಂದಿರನ್ನು ಪರೀಕ್ಷೆ ಮಾಡಬಯಸಿದ. ತಾನು ನಾಳೆಯ ದಿನ ಸೊಸೆಯಂದಿರು ಮಾಡಿದ ಅಡುಗೆಯ ಊಟ ಮಾಡುವುದಾಗಿ ತಿಳಿಸಿದ. ಮೊದಲ ಸೊಸೆ ಮಾಡಿದ ಊಟವನ್ನು ಮುಂಜಾನೆ ಮಾಡಬಯಸಿದ. ಎರಡನೇಯ ಸೊಸೆ ಮಾಡಿದ್ದನ್ನು ಮಧ್ಯಾನ್ಹ ಹಾಗೂ ಕಿರಿಯ ಸೊಸೆ ಊಟವನ್ನು ರಾತ್ರಿ ಮಾಡಬಯಸಿದ.

ಎಲ್ಲರೂ ತಮ್ಮ-ತಮ್ಮ ರೂಂಗಳಿಗೆ ತೆರಳಿದರು. ಆದರೆ ಆ್ಯಂಡ್ರಿ ಖಿನ್ನನಾಗಿಯೇ ತೆರಳಿದ. ಇಬ್ಬರೂ ಸೊಸೆಯಂದಿರು ತಾವು ಅಡಿಗೆ ಮಾಡುತ್ತಲೇ ಕಿರಿಯ ಸೊಸೆ ಅದು ಹೇಗೆ ಮಾಡುತ್ತಾಳೆಂದು ಕಣ್ಣಿಟ್ಟರು.

ಈ ವಿಷಯ ಕಪ್ಪೆಗೆ ತಿಳಿದಿತ್ತು. ಇದಕ್ಕಾಗಿ ಅವಳು ತನ್ನ ಗಂಡನಿಗೆ ಮಲಗಲು ಹೇಳಿದಳು. ನಂತರ ಅಡುಗೆಗಾಗಿ ಎಲ್ಲವನ್ನು ಸಿದ್ಧಪಡಿಸಿ, ಮೆಲ್ಲಗೆ ಸ್ಟೋ ಹಚ್ಚಿ ಮಲಗಲು ಹೋದಳು. ಹಿರಿಯ ಸೊಸೆಯಂದಿರೂ ಹೀಗೆ ಮಾಡಿದರು.

ಇದಾದ ಸ್ವಲ್ಪ ಸಮಯದ ನಂತರ ಕಪ್ಪೆಯು ತಾನ್ಯಾಳಾಗಿ, ತನ್ನ ನೌಕರರ ಸಹಾಯದೊಂದಿಗೆ ಮರುದಿನದ ಊಟದ ಸಿದ್ಧತೆ ಎಲ್ಲವನ್ನೂ ಮುಗಿಸಿದಳು. ನಂತರ ಕಪ್ಪೆ ರೂಪ ಧರಿಸಿ ಮಲಗಲು ಹೋದಳು.

ಅರಸು ಹಿರಿಯ ಸೊಸೆ ಮಾಡಿದ ಅಡುಗೆಯನ್ನು ಮುಂಜಾನೆ ಸೇವಿಸಿದಾಗ ಅದು ಅತ್ಯಂತ ಕಠಿಣವಾಗಿತ್ತು. ಹೀಗಾಗಿ ಅದನ್ನು ತಿನ್ನದೇ ಹಾಗೇ ಬಿಟ್ಟ.

ಇದೇ ರೀತಿ ಮಧ್ಯಾನ್ಹದ ಊಟವೂ ಸರಿ ಆಗಲಿಲ್ಲ. ಅದು ಪ್ರಾಣಿಗಳು ಸಹ ತಿನ್ನವಂತಿರಲಿಲ್ಲ.

ಸಾಯಂಕಾಲ ಕಳೆದು ರಾತ್ರಿಯಾಯಿತು. ಹಸಿದ ಅರಸು ಊಟಕ್ಕೆ ಸಿದ್ಧನಾಗಿ ಬಂದ. ಆ್ಯಂಡ್ರಿ ಟೇಬಲ್

ಸಿದ್ಧವಾಗಿರುವದನ್ನು ಗಮನಿಸಿದ. ಊಟದ ತಿಂಡಿಗಳಿಂದ ಘಮ-ಘಮ ವಾಸನೆ ಬರುತ್ತಿತ್ತು. ಆ್ಯಂಡ್ರಿ ತಂದೆಗೆ ತಾನೇ ಬಡಿಸಿದ. ಊಟ ಅತ್ಯಂತ ರುಚಿಕಟ್ಟಾಗಿತ್ತು. ಊಟ ಹೇಗೆ ತಯಾರಿ ಆಯಿತೆನ್ನುವುದೇ ಯಾರಿಗೂ ತಿಳಿಯಲಿಲ್ಲ. ಆದರೂ ಎಲ್ಲರೂ ಬಾಯಿ ಚಪ್ಪರಿಸುತ್ತ ರುಚಿಯನ್ನು ಸವಿದರು.

ಅರಸುವಿನ ಜನ್ಮದಿನ ಮುಂದಿನ ವಾರವೇ ಇತ್ತು. ಇಡೀ ಊರಿಗೆ ಆಮಂತ್ರಣವನ್ನು ನೀಡಲಾಗಿತ್ತು. ಈ ಸಂದರ್ಭದಂದು ತನ್ನ ಸೊಸೆಯಂದಿರನ್ನು ಜನರಿಗೆ ಪರಿಚಯಿಸುವವನಿದ್ದ. ದೊಡ್ಡ ಪ್ರಮಾಣಲ್ಲಿಯೇ ಸಮಾರಂಭ ಏರ್ಪಡಿಸಲಾಗಿತ್ತು.

ಅತಿಥಿಗಳು ಸರಿಯಾದ ಸಮಯಕ್ಕೆ ಬಂದರು. ಇಬ್ಬರೂ ಅಣ್ಣಂದಿರೂ ತಮ್ಮ ತಮ್ಮ ಪತ್ನಿಯರೊಂದಿಗೆ ಅಲ್ಲಿ ಹಾಜರಾದರು.

ಆ್ಯಂಡ್ರಿ ಮಾತ್ರ ಖಿನ್ನವಾಗಿ ತನ್ನ ರೂಂನಲ್ಲಿ ಕುಳಿತಿದ್ದ. ಅವನು ಕಪ್ಪೆಗೆ, 'ಅದು ಹೇಗೆ ನಾನು ಜನರಿಗೆ ನಿನ್ನನ್ನು ಪರಿಚಯಿಸಲಿ ಎನ್ನುವುದೇ ನನಗೆ ತಿಳಿಯುತ್ತಿಲ್ಲ, ಎಂದ.

ಆಗ ಆ ಕಪ್ಪೆಯು, 'ಈಗ ನೀನು ಹೋಗು. ನಾನು ಸ್ವಲ್ಪ ಸಮಯದಲ್ಲಿಯೇ ಸಿದ್ಧಳಾಗಿ ಬರುವೆ - ನೀನು ನನ್ನನ್ನು ಗುರುತು ಸಹ ಹಿಡಿಯಲಾರೆ' ಎಂದಿತು.

ಆ್ಯಂಡ್ರಿ ಆಶ್ಚರ್ಯದಿಂದ 'ಹಾಗಾದರೆ ನಾನು ಅದು ಹೇಗೆ ನಿನ್ನನ್ನು ಗುರುತಿಸಲಿ?' ಎಂದ. ನಾನು ಬಂದು ನಿನ್ನ ಕೈಯನ್ನು ಹಿಡಿಯುವೆ ಎಂದಿತು ?

ಆ್ಯಂಡ್ರಿ ಸ್ವಲ್ಪ ಗಲಿಬಿಲಿಗೊಂಡು ಊಟದ ಹಾಲ್‌ನತ್ತ ಬಂದ. ಇದೇ ಸಮಯದಲ್ಲಿ ಅರಸು, 'ಗೆಳೆಯರೇ, ಇಂದು ನಾನು ನನ್ನ ಮೂವರು ಸೊಸೆಯಂದಿರನ್ನು ನಿಮಗೆ ಪರಿಚಯಿಸುವೆ' ಎಂದ.

ಮೊದಲಿಗೆ ಇಬ್ಬರೂ ಪುತ್ರರು ಹಾಗೂ ಅವರ ಪತ್ನಿಯರು ಬಂದಾಗ ಅವರನ್ನು ಸಭೆಗೆ ಪರಿಚಯಿಸಲಾಯಿತು. ಈಗ ಆ್ಯಂಡ್ರಿಗೆ ಕುತೂಹಲ ಹೆಚ್ಚಾಯಿತು. ಅದೇ ಸಮಯದಲ್ಲಿ ಅಲ್ಲಿಗೆ ಕುದುರೆ ಸಾರೋಟ ಬಂದಿತು. ಅದಕ್ಕೆ ಬೆಳ್ಳಿ ರೆಕ್ಕೆಗಳು ಇದ್ದವು. ರತ್ನಗಳಿಂದ ಖಚಿತವಾಗಿತ್ತು. ಆರು ಕುದುರೆಗಳು ಅದನ್ನು ಎಳೆದು ತಂದಿದ್ದವು. ಆಗ ಅಲ್ಲಿಂದ ಎಲ್ಲರ ಕಣ್ಣುಗಳನ್ನು ಕುಕ್ಕಿಸುವಂತೆ ಅದರಿಂದ ತಾನ್ಯಾ ಇಳಿದಳು.

ತಾನ್ಯಾ ನೇರವಾಗಿ ಬಂದವಳೇ ಆ್ಯಂಡ್ರಿಯ ಕೈಯನ್ನು ಹಿಡಿದಳು. ಆಗ ಅಲ್ಲಿದ್ದವರೆಲ್ಲ ಜೋರಾಗಿ ಕರತಾಡನ ಗೈದರು. ಈಗ ಅರಸು ತಾನ್ಯಾಳನ್ನು ತನ್ನ ಮೂರನೇಯ ಸೊಸೆಯೆಂದು ಪರಿಚಯಿಸಿದ.

ಈಗ ಆ್ಯಂಡ್ರಿಯ ಸುಖ-ಸಂತೋಷಕ್ಕೆ ಪಾರವೇ ಇರಲಿಲ್ಲ. ಅಲ್ಲಿಂದ ಅವನು ಕೂಡಲೇ ತೆರಳಿ ತನ್ನ ರೂಂಗೆ ಹೋಗಿ ಕಪ್ಪೆಯ ಚರ್ಮವನ್ನು ಸುಟ್ಟ ಬಿಟ್ಟ. ತಾನು ಆರಾಮವಾಗಿ ಸಭೆಗೆ ಆಗಮಿಸಿದ.

ಊಟದ ನಂತರ ಬಂದ ಅತಿಥಿಗಳು ತೆರಳಿದರು. ಅರಸನ ಮಕ್ಕಳು ತಮ್ಮ ರೂಂನತ್ತ ತೆರಳಬೇಕೆನ್ನುವಷ್ಟರಲ್ಲಿ ಅರಸು ತಾನ್ಯಾಳತ್ತ ಪ್ರಶ್ನಾರ್ಥಕವಾಗಿ ದಿಟ್ಟಿಸಿ ನೋಡಿದ.

ಆಗ ತಾನ್ಯಾ ಮಾವನವರೇ, 'ಒಂದು ಶಾಪದಿಂದಾಗಿ ನಾನು ಕಪ್ಪೆಯ ರೂಪ ಧರಿಸಿದ್ದೆ. ಯಾರಾದರೂ ನನ್ನ ಕಪ್ಪೆ ಚರ್ಮವನ್ನು ಸುಟ್ಟರೆ ನಾನು ಮೊದಲಿನ ರೂಪಕ್ಕೆ ಬರುವೆ ಎಂದು, ಶಾಪ ವಿಮೋಚನೆ' ಯಾಗುವದೆಂದೂ ಹೇಳಿದ್ದರು. ನಿಮ್ಮ ಜಾಣ ಪುತ್ರನಿಗೆ ಅದನ್ನು ನಾನು ಹೇಳದಿದ್ದರೂ ಅವನು ಈಗ ತಾನಾಗಿಯೇ ಮಾಡಿದ್ದಾನೆ. ನಾನು ಇಂಥ ಪತಿಯ ಕೈ ಹಿಡಿದಿದ್ದಕ್ಕೆ ನಿಜಕ್ಕೂ ಧನ್ಯನಾಗಿದ್ದೇನೆ. ಎಂದಳು.

ಇದಾದ ನಂತರ ಅರಸನ ಸಮಸ್ತ ಕುಟುಂಬ ಸುಖಿಯಾಗಿ ಜೀವಿಸಿತು.

**ಕೃತಿ - 1) ಕೆಳಗಿನ ಜಾಲಾಕೃತಿಯಲ್ಲಿ ಉದಾಹರಣೆಯಲ್ಲಿ ತೋರಿಸಿದಂತೆ ಯೋಗ್ಯ ಶಬ್ದಗಳನ್ನು ತುಂಬಿರಿ.**




**ಕೃತಿ - 2) ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದ ತುಂಬಿ ವಾಕ್ಯ ಪೂರ್ಣ ಮಾಡಿರಿ.**

i) ನಾನು ಪ್ರತಿಯೊಬ್ಬರಿಗೂ________________ ನೀಡುವೆ.

ii) ಅವನ ಹಾಸಿಗೆ ಪಕ್ಕದಲ್ಲಿ ಒಂದು________________ ಸಿದ್ಧವಾಗಿ ಅಲ್ಲಿತ್ತು.

iii) ಹಿರಿಯ ಪುತ್ರಿ ಸಿದ್ಧಪಡಿಸಿ ತಂದ ಶರ್ಟ________________ ಯೋಗ್ಯವಾಗಿದೆ.

iv) ಒಂದು ಶಾಪದಿಂದಾಗಿ ನಾನು ________________ ಧರಿಸಿದ್ದೆ.

v) ಅರಸನ ಸಮಸ್ತ ________________ ಜೀವಿಸಿತು.

**ಕೃತಿ - 3) ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

i) ಅರಸನಿಗೆ ಎಷ್ಟು ಜನ ಮಕ್ಕಳಿದ್ದರು ?

ii) ಚಕ್ರವರ್ತಿಯ ಕಿರಿಯಪುತ್ರನ ಹೆಸರೇನು ?

iii) ಯಾರ ಧ್ವನಿ ಕೇಳಿ ಅರಸನಿಗೆ ಆಶ್ಚರ್ಯವಾಯಿತು ?

**ಕೃತಿ - 4) ಕೆಳಗಿನ ಕೃತಿಗಳನ್ನು ಸೂಚನೆಯಂತೆ ಬಿಡಿಸಿರಿ.**

i) ತತ್ಸಮ – ತದ್ಭವ ಬರೆಯಿರಿ.

ರೂಹ, ಹರ್ಷ, ಧ್ವನಿ, ಜನ್ನ, ಅಚ್ಚರಿ, ಸಂತಸ, ಅಡವಿ.

ii) ಕೆಳಗಿನ ಶಬ್ದಗಳ ವಿಭಕ್ತಿ ಪ್ರತ್ಯಯಗಳನ್ನುಗುರುತಿಸಿ ಬರೆಯಿರಿ.

| ಶಬ್ದ | ವಿಭಕ್ತಿ | ಪ್ರತ್ಯಯ |
|---|---|---|
| ಸಿದ್ಧಪಡಿಸಿದ | | |
| ನೌಕರರು | | |
| ಎಲ್ಲವನ್ನು | | |
| ಧ್ವನಿಯಲ್ಲಿ | | |

iii) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.

i) ಸರಿ X ____________________ iii) ಅಪಹಾಸ್ಯ X ____________________

ii) ಸಭ್ಯತೆ X ____________________ iv) ಸಂಜೆ X ____________________

**ಕೃತಿ - 5) ರಶಿಯಾದ ಅರಸನು ತನ್ನ ಮನದಲ್ಲಿ ಯೋಚಿಸಿ ಮಕ್ಕಳಿಗೆ ಹೇಳುವ ಉಪಾಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

# 2. ಗಂಗಜ್ಜಿ

– ಎಂ. ಕೆ. ಇಂದಿರಾ

**ಲೇಖಕರ ಪರಿಚಯ :** ಎಂ.ಕೆ. ಇಂದಿರಾ (ಜ. 1917) ಪ್ರಸಿದ್ಧ ಲೇಖಕಿ. ಕೌಟುಂಬಿಕ ವಸ್ತುವಿನ ಆಯ್ಕೆಯಲ್ಲಿ ಸಮಾಜ ದರ್ಶನ ನೀಡುವ ಅವರ ಕತೆ ಕಾದಂಬರಿಗಳು ಗಟ್ಟಿತನದಿಂದ ಓದುಗರನ್ನು ಆಕರ್ಷಿಸುತ್ತವೆ. ಅವರ ಕೃತಿಗಳು ಶಬ್ದಾಡಂಬರವಿಲ್ಲದ ಸುಲಲಿತ ಶೈಲಿಯಿಂದ ಜನ ಮೆಚ್ಚುಗೆಯನ್ನು ಪಡೆದಿವೆ. ಅವರ ಕೃತಿಗಳಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಸದಾನಂದ, ಫಣಿಯಮ್ಮ, ಗೆಜ್ಜೆಪೂಜೆ ಕಾದಂಬರಿಗಳು ಚಲನಚಿತ್ರಗಳಾಗಿ ಜನಪ್ರಿಯವಾಗಿವೆ.

ಗಂಗಜ್ಜಿ – ಊರಿಗೆ ಉಪಕಾರಿಯಾದವಳು. ಊರಲ್ಲಿ ಪ್ಲೇಗು ಕಾಣಿಸಿಕೊಂಡಾಗ ಎಲ್ಲರೂ ಊರನ್ನು ತ್ಯಜಿಸಿದ್ದರೂ ಗಂಗಜ್ಜಿ ಒಬ್ಬಳೇ ಧೈರ್ಯದಿಂದ ಉಳಿದು ಕೊಳ್ಳುತ್ತಾಳೆ. ಊರನ್ನು ಸ್ವಚ್ಛಗೊಳಿಸುತ್ತಾ ಹಪ್ಪಳ ಸಂಡಿಗೆ ತಯಾರಿಸಿ ಡಬ್ಬದಲ್ಲಿ ತುಂಬಿಟ್ಟು ಮರಳಿ ಊರು ಸೇರಿದವರಿಗೆ ನೀಡುತ್ತಾಳೆ. ಹೆಣ್ಣು ಮಕ್ಕಳಿಗೆ ಹಾಡು ಹಸೆ, ರಂಗೋಲಿ ಹೇಳಿಕೊಡುವುದಲ್ಲದೆ ಅವರ ಜೊತೆಯಲ್ಲಿ ಕುಂಟಿಪಿಲ್ಲೆ ಚದುರಂಗ, ಗಜ್ಜುಗದಾಟಗಳನ್ನೂ ಆಡುವ ಗಂಗಜ್ಜಿ, ಒಮ್ಮೆ ಹೀಗೆ ಆಡುತ್ತಿರುವಾಗಲೇ ಉರುಳಿ ಬಿದ್ದು ಕೈಲಾಸ ಸೇರಿದ್ದು ಕೂಡ ಒಂದು ವಿಲಕ್ಷಣ ಸಂಗತಿ.

ಈ ಕಥೆಯನ್ನು 'ಕಥಾ ಸೌರಭ'–ಗ್ರಂಥದಿಂದ ಆಯ್ದಿದೆ.

ಹಳೆಯ ಈಶ್ವರ ದೇವಸ್ಥಾನದ ಒಳ ಆವರಣದೊಳಗೆ ಆರ್ಚಕರ ಮನೆ. ಅಲ್ಲಿ ಎರಡು ಮೂರು ಮನೆಗಳು. ಹಳೆಯಕಾಲದ ನಾಡು ಹಂಚಿನ ಮನೆಗಳು. ವಿಸ್ತಾರವಾದ ಚೌಕಿ. ಅಂಗಳದಲ್ಲಿ ಪ್ರತಿದಿನದ ಪೂಜೆಗೆ ಬೇಕಾಗುವ ಹೂವಿನ ಗಿಡಗಳು. ಪೂಜೆಗೆ ಬೇಕಾಗುವ ಬಿಲ್ವ ಪತ್ರೆ ಮರ, ದೇವಕಣಗಲೆ, ಬೆಟ್ಟದಾವರೆ, ದಾಸವಾಳ, ಮಲ್ಲಿಗೆ ಬಳ್ಳಿಗಳು ಇತ್ಯಾದಿ. ಅಭಿಷೇಕಕ್ಕಾಗಿ ನೂರು ವರ್ಷಗಳಿಂದ ಬಿಟ್ಟ ದನದ ತಳಿಗಳು. ಸದಾಕಾಲ ಅವುಗಳ ಯೋಗಕ್ಷೇಮವನ್ನು ಆರ್ಚಕರ ಮನೆಯವರೇ ನೋಡಿಕೊಳ್ಳಬೇಕು. ಸದಾ ಎರಡು ಮೂರು ದನಗಳಂತೂ ಕರೆಯುತ್ತಿದ್ದವು. ಅಂಗಳದಲ್ಲೇ ಬಾವಿ.

ಸುಮಾರು ಅರವತ್ತು ಎಪ್ಪತ್ತು ವರ್ಷಗಳಿಂದ ಇವೆಲ್ಲದರ ಉಸ್ತುವಾರಿ ನೋಡಿಕೊಳ್ಳುವುದು ಗಂಗಜ್ಜಿಯೇ. ಗಂಗಜ್ಜಿಯ ನಾದನಿಯ ಗಂಡ ಅರ್ಚಕರಾದರೂ ದನಗಳನ್ನು ನೋಡಿಕೊಳ್ಳುವುದು, ಅದರ ಹಾಲು ಕರೆದು ನಾದಿನಿ ಮನೆಗೆ ಇಟ್ಟು ಬರುವುದು. ಹೂ ಪತ್ರೆ ಕೊಯ್ದು ಮಾಲೆ ಕಟ್ಟಿ ದೇವಸ್ಥಾನದೊಳಗಿಟ್ಟು, ದೇವಸ್ಥಾನ, ಅಂಗಳ, ಬಾಗಿಲು ಪೂರಾ ಗುಡಿಸಿ ಸಾರಿಸಿ ರಂಗವಲ್ಲಿ ಇಡುವುದು ಇವೆಲ್ಲ ಗಂಗಜ್ಜಿ ಮೊದಲಿನಿಂದಲೂ ವಹಿಸಿಕೊಂಡ ಕೆಲಸ.

ಮೊದಲು ದೇವಸ್ಥಾನದ ಅರ್ಚಕರಾಗಿದ್ದುದು ಗಂಗಜ್ಜಿಯ ಗಂಡನಂತೆ. ಮುಜರಾಯಿ ಇಲಾಖೆಯಿಂದ ಅರ್ಚಕರ ವಾಸಕ್ಕೊಂದು ಮನೆ, ದಿನಾ ನೈವೇದ್ಯಕ್ಕೆ ಮತ್ತು ಅರ್ಚಕರಿಗೆಂದು ಒಂದಿಷ್ಟು ಉಂಬಳಿ ಜಮೀನು ಇವರ ಪಾಲಿಗೆ ಬಂದಿತ್ತು. ಗಂಗಜ್ಜಿಗೆ ಮದುವೆಯಾಗಿ ಎಂಟು ವರ್ಷದ ಮೇಲೆ ಎರಡು ಮಕ್ಕಳಾಗಿ ಸತ್ತುಹೋದವಂತೆ. ಮತ್ತೆ ನಾಲ್ಕು ವರ್ಷದಲ್ಲೇ ಅಂದರೆ ಗಂಗಜ್ಜಿಯ ತಾರುಣ್ಯದಲ್ಲೇ ಆಕೆಯ ಪತಿ ಕಾಶಿಭಟ್ಟರೂ ತೀರಿಕೊಂಡರು. ನಂತರ ಅರ್ಚಕ ಹುದ್ದೆ ಕಾಶಿಭಟ್ಟರ ತಂಗಿಯ ಗಂಡನ ಪಾಲಿನದಾಯಿತು. ಮನೆ–ಭತ್ತ, ದನ ಕರುಗಳೂ ಅವರ ಪಾಲಿಗೆ ಹೋದವು. ಗಂಗಜ್ಜಿ ತನ್ನ ಪಾಲಿಗೆ ಚೌಕಿಯ ಮೂಲೆಯಲ್ಲಿದ್ದ ಒಂದು ಸಣ್ಣ ಅಡಿಗೆ ಮನೆಯನ್ನು ಮಾತ್ರ ಇಟ್ಟುಕೊಂಡು ಬಾಕಿ ಮನೆ ಪೂರಾ ನಾದಿನಿಗೆ ಬಿಟ್ಟುಕೊಟ್ಟಿತು. ಮಧ್ಯಾಹ್ನದ ಒಪ್ಪತ್ತಿಗೆ ಒಂದಿಷ್ಟು ಅನ್ನ ಕುಚ್ಚಿಕೊಂಡು ಗೊಜ್ಜೊ, ಗೊಡ್ಡುಸಾರೋ ಮಾಡಿ ತಿಂದು ಪಾತ್ರೆ ತೊಳೆದಿಟ್ಟರೆ ಅದರ ಹೊಟ್ಟೆಪಾಡು ಮುಗಿಯಿತು. ದೇವಸ್ಥಾನದ ಆವರಣದೊಳಗಿನ ಬಾಳೆಗೊನೆಯ ಒಂದು ಹಣ್ಣನ್ನು ಬಾಯಿಗೆ ಹಾಕಿದ್ದಿಲ್ಲ. ಮುದುಕಿ!

ನಾವು ನೋಡುವಾಗಲೇ ಗಂಗಜ್ಜಿಯ ನಾದಿನಿ ಹಣ್ಣು ಮುದುಕಿ, ಆಕೆಯ ಗಂಡನಿಗೆ ಕಣ್ಣೇ ಕಾಣುತ್ತಿರಲಿಲ್ಲ. ಈಗ ನಾದಿನಿಯ ಮಕ್ಕಳು ಯಾರಾದರೂ ಈಶ್ವರ ಲಿಂಗದ ಮೇಲೆ ಒಂದು ತಂಬಿಗೆ ನೀರು ಹೊಯ್ದು ನಾಲ್ಕು ಬಿಲ್ವಪತ್ರ ಎಸೆಯುತ್ತಿದ್ದರು, ಸದಾಶಿವ ಭಟ್ಟರಾದರೂ ಅಷ್ಟೇ ಅಂತೆ.

ಒದ್ದೆ ಪಾಣಿ ಪಂಚೆ ಉಟ್ಟು ಬಂದು ಅಗ್ರಹಾರಕ್ಕೆಲ್ಲ ಕೇಳುವಂತೆ ಒಡಕು ಗಂಟಲಿನಲ್ಲಿ ಜೋರಾಗಿ ಮಂತ್ರ ಒದರಿ ಗಂಗಜ್ಜಿ ಸಿದ್ಧ ಮಾಡಿಟ್ಟ ನೀರು, ಹಾಲು, ಲಿಂಗದ ಮೇಲೆ ಸುರಿದು ಜೋರಾಗಿ ಗಂಟೆ ಬಾರಿಸಿ ಗಂಗಜ್ಜಿ ಕಟ್ಟಿಟ್ಟ ಹೂಮಾಲೆ, ಬಿಲ್ವ ಪತ್ರೆ ಆ ಕಲ್ಲಿನ ತಲೆಗೇರಿಸಿ ಒಂದು ಮಂಗಳಾರತಿ ಸುತ್ತಿ ಧನ್ಯರಾಗುತ್ತಿದ್ದರಂತೆ. ಇದು ಊರವರಿಗೆಲ್ಲ ಗೊತ್ತಿದ್ದ ಸಂಗತಿ.

ಆದರೆ ಗಂಗಜ್ಜಿ ಯಾವುದರ ಬಗೆಗೂ ಚಕಾರವೆತ್ತುವ ಸ್ವಭಾವದ್ದಲ್ಲ. ತನ್ನ ಕರ್ತವ್ಯ ತಾನು ಮಾಡುತ್ತಿತ್ತು. ಹಾಳು ಹರಟೆ ಅದಕ್ಕಾಗದು. ಅರೆಗಳಿಗೆ ಸುಮ್ಮನೆ ಕೂರುವ ಜೀವವಲ್ಲ. ದೇವಸ್ಥಾನದ ಶುಭ್ರತೆ, ನಾದಿನಿಯ ಬಾಣಂತನಗಳು, ಊರವರೆಲ್ಲರ ಕಾಯಿಲೆ ಕಸಾಲೆಗಳಿಗೆ ಔಷಧಿ, ಅವರ ಯೋಗಕ್ಷೇಮ ಊರ ಹೆಂಗಳೆಯರೆಲ್ಲರ ಹೆರಿಗೆ, ಖಾರ, ಮೆಣಸು, ಬಯಕೆ-ಬಾಣಂತನಗಳು, ಮದುವೆ-ಮುಂಜಿಗಳ ಉಂಡೆ, ಚಕ್ಕುಲಿ, ಹಪ್ಪಳ, ಸಂಡಿಗೆಗಳೂ ಎಲ್ಲವೂ ಗಂಗಜ್ಜಿಯದೇ, ಸತ್ತಗಂಡನ ಬಗ್ಗೆ ಗೋಳಾಡುತ್ತಿರಲಿಲ್ಲ. ಚರಾನ್ನ ತಿನ್ನುತ್ತಿರಲಿಲ್ಲ. ತಣ್ಣೀರು ಸ್ನಾನ, ಒಪ್ಪತ್ತೂಟ, ವಾಲೆಗರಿ ಶಯನದ ಛತ್ರಹಿಡಿದು ಅದೆಷ್ಟು ವರ್ಷವಾಗಿತ್ತೋ ಯಾರಿಗೆ ಗೊತ್ತು?

ಮದುವೆ ಮನೆಗಳಲ್ಲಿ ಐನೂರು, ಆರುನೂರು ಜನರ ಅಡಿಗೆಯನ್ನು ಗಂಗಜ್ಜಿಯೊಬ್ಬರೇ ಮಾಡುತ್ತಿದ್ದರು. ಯಾರ ನೆರವೂ ಬೇಕಿಲ್ಲ, ಅವರ ಕೈಯಡಿಗೆ ಅಮೃತ. ಆದರೆ ಒಲೆಯಿಂದ ಅನ್ನ ಸಾರಿನ ಪಾತ್ರೆ ಇಳಿಸುವುದಕ್ಕೆ ಮಾತ್ರ ಗಂಡಸರು ಬರುತ್ತಿದ್ದರು. ಯಥಾ ಪ್ರಕಾರ ಗಂಗಜ್ಜಿಗೆ ತನ್ನ ಮನೆಯಊಟವೇ, ಯಾರ ಉಪಚಾರಕ್ಕೂ ಬಗ್ಗದ ಜೀವ. ಉಪಚಾರ, ಹೊಗಳಿಕೆಗಳಲ್ಲಿ ಆಕೆಗೆ ಯಾವ ಮಹತ್ವವೂ ಇಲ್ಲ.

ಯಾರಾದರೂ 'ಗಂಗಜ್ಜಿ ಈಗ ನಿಮಗೆ ಎಷ್ಟು ವರ್ಷ?' ಎಂದು ಕೇಳಿದರೆ ಸೈ, ನಾಯಿಗೆ ವಯಸ್ಸಾದ್ರೆ ಅಜ್ಜಾ ಅನ್ನಸ್ಕಂಡಿತಾ? ವಯಸ್ಸಿನ ಲೆಕ್ಕ ಇಡೊದೆಂತದು, ನಮ್ಮಂತ ಮುಂಡು ಮೋಚಿ ಕೊಂಡೋರಿಗೆ ಯಾತಕ್ಕೆ ಲೆಕ್ಕ. ಗಂಡಸ್ರು ಮುತ್ತೈದೇರು ಇಟ್ಕೊಳ್ಳಿ ಲೆಕ್ಕಾನಾ. ಮುಮ್ಮಡಿ ಮಹಾರಾಜ್ರಿದ್ದಾಗ ನಂಗೆ ಲಗ್ನಾಗಿತ್ತು. ಆ ಲೆಕ್ಕ ಯಾರಿಗೊತ್ತು? ಅನ್ನುತ್ತಿದ್ದರು. ನಿಜಕ್ಕೂ ಈ ಲೆಕ್ಕ ಮಾಡುವುದು ಕಷ್ಟದ ಕೆಲಸವೇ. ಮುಮ್ಮಡಿ ಕೃಷ್ಣರಾಜರು ರಾಜ್ಯವಾಳುತ್ತಿದ್ದಾಗ ಗಂಗಜ್ಜಿಗೆ ಲಗ್ನವಾಗಿತ್ತು. ಎಂದರೆ ಆ ಬ್ರಹ್ಮನಿಗೂ ಅಂದಾಜು ತಿಳಿಯಲಾರದು. ಅನೇಕ ಮುದುಕಿಯರಂತೆ ಕಳೆದ ಹಳೆಯ ವಿಷಯ ಒಂದನ್ನೂ ಹೇಳುತ್ತಿರಲಿಲ್ಲ ಗಂಗಜ್ಜಿ, ಆದರೆ ಒಗಟು, ಗಾದೆ, ಕಥೆಗಳ ಬೃಹತ್ ಭಂಡಾರ ಗಂಗಜ್ಜಿ. ಮಧ್ಯಾಹ್ನ ಮೂರು ಗಂಟೆಯಾಯಿತೆಂದರೆ ಗಂಗಜ್ಜಿಯ ಚೌಕಿ ಭರ್ತಿ. ಹಪ್ಪಳ ಒತ್ತುವವರು, ಶ್ಯಾವಿಗೆ ತೆಗೆಯುವರು, ಬತ್ತಿಮಾಡುವವರು. ಗಂಗಜ್ಜಿಯಿಂದ ಹಾಡು ಕಲಿಯುವವರು ಕಸೂತಿ, ರಂಗವಲ್ಲಿ ಹೇಳಿಸಿಕೊಳ್ಳುವವರು-ಹೀಗೆ ಅಗ್ರಹಾರದ ಹೆಂಗಸರು, ಮುದುಕಿಯರು ಹುಡುಗಿಯರು ಎಲ್ಲಾ ಬಂದು ದೇವಸ್ಥಾನದ ಪೌಳಿಯೊಳಗೆ ತುಂಬಿಕೊಳ್ಳುವರು. ಅಜ್ಜಿಗೆ ಬರದ ಕೆಲಸವೇ ಇಲ್ಲ. ಸಾವಿರ ಸಾವಿರ ನುಡಿಯ ಯಕ್ಷಗಾನದ ಸೀತಾಕಲ್ಯಾಣ, ಜಲಕ್ರೀಡೆ, ರಾಸಕ್ರೀಡೆ, ನಳಚರಿತ್ರೆ, ಏಕಾದಶೀ ಹಾಡು, ಶನಿ ಮಹಾತ್ಮೆ-ಹೀಗೆ ನೂರಾರು ಹಾಡುಗಳು ಅಜ್ಜಿಯ ನಾಲಿಗೆಯಲ್ಲಿ. ಮುಂದಿನ ಹಲ್ಲುಗಳು ಬಿದ್ದು ಹೋಗಿದ್ದರೂ ಕಂಚಿನ ಕಂಠದಲ್ಲಿ ಹಾಡು ಹೇಳುತ್ತಿತ್ತು. ಮುದುಕಿ ಕಾಗದ, ಲೇಖನಿ ಮುಟ್ಟಿದ್ದೂ ಅಲ್ಲ, ನೋಡಿದ್ದೂ ಅಲ್ಲ. ಎಲ್ಲಾ ಬಾಯಗತ. ಗಂಗಮ್ಮ ತಾರುಣ್ಯದಲ್ಲಿ ಹೇಗಿತ್ತೋ ಯಾರಿಗೂ ತಿಳಿಯದು. ಈಗಂತೂ ಚೆಲುವಿನ ಕುರುಹೂ ಇರಲಿಲ್ಲ. ಹಳೆಯ ಬಟ್ಟೆಯಂತೆ ಸುಕ್ಕುಗಟ್ಟಿದ ಚರ್ಮ, ಕಡ್ಡಿ ಕೈಕಾಲುಗಳು ಸ್ವಲ್ಪ ಬಾಗಿದ ಬೆನ್ನು ಕಣ್ಣು ಗುಡ್ಡೆಗಳು ಬೆಳ್ಳಗಾಗಿದ್ದರೂ ಸಣ್ಣ ಸೂಜಿಗೆದಾರ ಪೋಣಿಸುವಂತ ಚುರುಕು ದೃಷ್ಟಿ. ಕಿವಿ ಚೆನ್ನಾಗಿ ಕೇಳಿಸುತ್ತಿತ್ತು.

ವಿಚಿತ್ರ ಸ್ವಭಾವ ಗಂಗಜ್ಜಿಯದು. ಸಿಹಿ ತಿನ್ನುತ್ತಿರಲಿಲ್ಲ, ಹಾಲು, ಕಾಫಿ, ಬಾಯಿಗೆ ಹಾಕಿದ್ದೇ ಅಲ್ಲ. ಊಟಕ್ಕೆ ಕಡೆದ ಮಜ್ಜಿಗೆ, ರಾತ್ರಿ ಫಲಹಾರವಿಲ್ಲ. ಏಕಾದಶಿಯಂದು ಏನೂ ಇಲ್ಲ. ದೇವಸ್ಥಾನದಲ್ಲಿ ನಡೆಯುವ ಹರಿಕಥೆ, ಪುರಾಣ ಕೇಳುತ್ತಿದ್ದರು. ಅದೂ ಕೈಯಲ್ಲಿ ಹೂ ಬತ್ತಿಯೋ, ಶಾವಿಗೆಯೋ ಏನಾದರೂ ಒಂದು ಕೆಲಸವಿರಬೇಕು, ಹಿಂದಿನದನ್ನು ಹೇಳುವುದಿಲ್ಲ, ಮುಂದಿನದನ್ನು ಯೋಚಿಸುವುದಿಲ್ಲ. ಈಗಿನವರ ಬಗ್ಗೆ ಆಕ್ಷೇಪವಿಲ್ಲ, ಯಾರು ಹೇಗಾದರೆ

ಇರಲಿ. ತನ್ನ ಪಾಡಿಗೆ ತಾನು. ದೇವರು-ದಿಂಡರ ಬಗೆಗೆ ಏನೂ ಹೇಳುತ್ತಿರಲಿಲ್ಲ. ಭಕ್ತಿ-ಭುಕ್ತಿ ಎಂಬ ಹಾರಾಟವಿಲ್ಲ. ಮಡಿ-ಹುಡಿಯೆಂಬ ಗುಡುಗಾಟವೂ ಇಲ್ಲ. ಊರಲ್ಲಿ ಹೆಂಗಸರು ಮಕ್ಕಳಿಗೆ ಕಾಹಿಲೆಯಾದರೆ ಯಾರಾದರೂ ಕರೆಯಲು ಬಂದರೆ. 'ಇಕಾ, ಬಂದೆ ನಡೀರಿ' - ಎಂದವರೇ ಕೂಡಲೇ ಹೊರಡುವವದೇ. ತಿಳಿದ ಔಷಧಿ ಮಾಡುವುದು, ಆಕೆಯ ಹಸ್ತಗುಣವೋ ಮನೋಗುಣವೋ ಕಾಹಿಲೆ ಇಳಿಮುಖವಾಗುವುದು. ಮರುದಿನ ಮತ್ತೆ ಹೋಗಿ ವಿಚಾರಿಸಿ ಬರುವುದು.

ಗಂಗಜ್ಜಿ ಗಂಡನ ಮನೆಗೆ ಬಂದ ಮೇಲೆ ಅಗ್ರಹಾರ ಬಿಟ್ಟು ಬೇರೆ ಊರಿಗೆ ಹೆಚ್ಚಾಗಿ ಹೋಗಲೇ ಇಲ್ಲವಂತೆ. ಎಲ್ಲಿಗೆ ಹೋದರೂ ಕಾಲು ನಡಿಗೆಯೇ, ಗಾಡಿ ಬಸ್ಸು ಹತ್ತಿದವರೇ ಅಲ್ಲ. ಜಾತ್ರೆ-ಉತ್ಸವಗಳೆಂದು ಬೇರೆ ಊರಿಗೆ ಹೋದವರು ಅಲ್ಲ, ಹೋಗಬೇಕೆಂಬ ಆಸೆಯಿಲ್ಲ. ಹೋಗಲಿಲ್ಲವೆಂಬ ಕೊರಗಿಲ್ಲ. ಒಂದು ಬಾರಿ ಪಂಚಲಿಂಗ ದರ್ಶನಕ್ಕೆಂದು ಇಡೀ ಅಗ್ರಹಾರವೇ ಹೊರಟಿತಂತೆ. ಹೆಚ್ಚುಕಡಿಮೆ ಮುದುಕರೆಲ್ಲ ಅನ್ನಬಹುದು. ಆಗಲೇ ಮುಪ್ಪಿನವರಾದ ಗಂಗಜ್ಜಿಯ ನಾದಿನಿ ಆಕೆಯ ಗಂಡನೂ ಹೊರಟರು.

'ಬನ್ನಿ ಅತ್ಗೆಮ್ಮ, ಪಂಚಲಿಂಗ ದರ್ಶನ ಸಿಕ್ಕೂದು ಅಪ್ರೂಪ. ಈ ಮನೆಗೆಲಸ ಇದ್ದದ್ದೇ'' ಅಂದರಂತೆ ನಾದಿನಿ, ಗಂಗಮ್ಮನಿಂದ ಯಾವ ವಿರೋಧವೂ ಇಲ್ಲ.

'ನೀವು ಗಂಡ ಹೆಂಡ್ತಿ ಹೋಗಿ ಬನ್ನಿ, ಮನೇಲಿ ಹದ್ನೈದ್ದಿನದ ಬಾಣಂತಿ, ದನ-ಕರುಯೆಲ್ಲ ಅದಾವಲ್ಲ. ಬಾಣಂತಿಗೊಂದು ಮೆಣಸಿನ ಸಾರು-ಅನ್ನಮಾಡಿ ಹಾಕ್ತೀನಿ, ದನ-ಕರು ಕಟ್ಟಿ ಬಿಚ್ಚಿ ಹಾಲು ಕರೆದು ಮಾಡ್ಬೆಕಲ್ಲ. ಇನ್ಯಾವಾಗಾರ ಹೋಗ್ತಿನಿ''

ಹಾಗೆ ಹೇಳುತ್ತಾ ಮತ್ತೊಂದು ಮಾತಿಗೆ ಅವಕಾಶ ಕೊಡದೆ ಹಾಲು ಕರೆಯುವ ತಂಬಿಗೆ ಹಿಡಿದು ಕೊಟ್ಟಿಗೆಗೆ ಹೋದರಂತೆ ಯಾರ ಪಾಪವೋ, ಏನು ಕರ್ಮವೊ ಎಂಬಂತೆ ಒಂದ್ಸಲ ಊರಲ್ಲಿ ಪ್ಲೇಗ ಹಬ್ಬಿತು. ಇಂದು ಶರೀರದ ಮೇಲೆ ಗಡ್ಡೆ ಎದ್ದರೆ ನಾಳೆ ಗಡ್ಡೆ ಒಡೆದು ಸಾಯುವನು. ಊರಲ್ಲಿ ಸಾವಿನ ಸಂಖ್ಯೆ ಹೆಚ್ಚಾಗ ತೊಡಗಿತು. ಗಂಗಜ್ಜಿ ತನ್ನ ನಾಟಿ ವೈದ್ಯ ಪದ್ಧತಿಯಂತೆ ಉಪಚಾರ ಮಾಡತೊಡಗಿದಳು. ಯಾವ ಪ್ರಯೋಜನವೂ ಆಗಲಿಲ್ಲ. ಜನರು ಜೀವ ಭಯದಿಂದ ಊರು ತೊರೆಯಲು ನಿರ್ಧರಿಸಿದರು ಆದರೆ ಗಂಗಜ್ಜಿ ಮಾತ್ರ ಅಗ್ರಹಾರ ಬಿಟ್ಟು ಕದಲಲು ಸಿದ್ಧಳಲ್ಲ.

'' ನೀವೂ ಬನ್ನಿ ಗಂಗಜ್ಜಿ ಅಗ್ರಹಾರದಾಗೆ ಒಬ್ರು ಇಲ್ಲ. ಮನೆಗೆ ಬೀಗ ಹಾಕಿ ಹೊರಡಿ'' ಅಂದರು ಊರಿನ ಹಿರಿಯನಾದ ಚನ್ನಗಿರಿ ರಾಯರು. ವಯಸ್ಸಿನಲ್ಲಿ ಗಂಗಜ್ಜಿಗಿಂತ ಕಿರಿಯದಾದರೂ ಅಗ್ರಹಾರದ ಮಟ್ಟಿಗೆ ಅವರು ಬಹಳ ಶ್ರೀಮಂತರು. ಗಂಗಜ್ಜಿ ಬದಲು ಹೇಳಲಿಲ್ಲ.

''ನೀವೆಲ್ಲ ನಡೀರಿ ಮುಂದೆ, ಮನೆ ಸಾಮಾನೆಲ್ಲ ಒಳಗಿಟ್ಟು ಬಾಗಲ್ಲಿ ಬೆಳಕಂಡಿಯಲ್ಲಿ ಭಿಮ್ಮಗೆ ಹಾಕಿಲ್ಲಾ ಕಡೆಗೂ ಬೀಗ ಹಾಕ್ಕಂಡು ಬರ್ತಿನಿ'' ಅಂದಳು.

ಗಂಗಜ್ಜಿಯಿಂದ ಅಗ್ರಹಾರದ ಮನೆ ಮನೆಗೂ ನೆರವಿತ್ತು. ಸಹಾಯವಿತ್ತು. ಎಲ್ಲರಿಗೂ ಗಂಗಜ್ಜಿ ಬೇಕು ನಿಜ. ಅವರೇ ಈಗ ತಮ್ಮ ಜೀವ ತಾವು ಕಾಪಾಡಿಕೊಳ್ಳಬೇಕಲ್ಲ.

ಊರೆಲ್ಲ ಖಾಲಿಯಾಯಿತು. ಅವರವರ ಮನೆ ಅವರು ಭದ್ರಮಾಡಿಕೊಂಡು ದನಕರುಗಳನ್ನು ಅಟ್ಟಿಕೊಂಡು ಊರಾಚೆ ಒಂದು ಮೈಲಿ ದೂರದ ಕೆರೆದಂಡೆಯಲ್ಲಿ ಎಲ್ಲರೂ ಗಚ್ಚುಹಾಕಿ ನೆಲೆಸಿದರು. ಹಿಡಿದರು.

ಚೆನ್ನ ಗಿರಿಯರಾಯರು ಹೇಳಿದ ಮಾತು ಗಂಗಜ್ಜಿಯ ಕಿವಿಯ ಮೇಲೆ ಬಿದ್ದಿತ್ತು. ಆ ವೇಳೆಗೆ ನಾದಿನಿ, ಆಕೆಯ ಗಂಡ ಇಬ್ಬರೂ ತೀರಿಹೋಗಿದ್ದರು. ಇಬ್ಬರು ಗಂಡು ಮಕ್ಕಳು, ಸೊಸೆಯರು ಪ್ಲೇಗಿನ ಹೆದರಿಕೆಯಿಂದ ಬಿಟ್ಟದ್ದು ಬಿಟ್ಟ ಹಾಗೇ ಊರ ಹೊರಗೆ ಓಡಿದರು. ಹೇಗೊ ಗಂಗಜ್ಜಿ ಮನೆಯನ್ನು ಜೋಪಾನ ಮಾಡುತ್ತದೆಂಬ ಧೈರ್ಯದಿಂದ.

ಗಂಗಜ್ಜಿ ಒಂದು ಕಡೆಯಿಂದ ಮನೆಯ ಸಾಮಾನೆಲ್ಲ ಭದ್ರಪಡಿಸಿ ಬಾಗಿಲುಗಳಿಗೆ ಬೀಗಹಾಕಿ, ದೇವಸ್ಥಾನದ

ಗರ್ಭಗುಡಿಗೂ ಬೀಗ ಹಾಕಿ ಅಗ್ರಹಾರದ ಬೀದಿಯಲ್ಲಿ ಹೊರಟರು. ಹತ್ತಾರು ಓಣಿಗಳನ್ನು ಸುತ್ತಿಬಂದರು. ಹಾಲು ಮೊಸರಿಗೆ ಬೇಕಾದ್ದರಿಂದ ಎಲ್ಲರೂ ತಮ್ಮ ಮನೆಯ ದನಕರುಗಳನ್ನು ಜೊತೆಯಲ್ಲೇ ಕರೆದೊಯ್ದಿದ್ದರು. ಊರೆಲ್ಲ, ಭಣ ಭಣ,. ಸ್ಮಶಾನ ಮೌನ. ಎಲ್ಲ ಮನೆಯ ಬಾಗಿಲುಗಳಿಗೆ ಬೀಗ. ಹಕ್ಕಿ ಪಕ್ಕಿಗಳೂ ಮೌನ ತಳೆದಿದ್ದವು. ಬೇಸಿಗೆಯ ಮಧ್ಯಾಹ್ನ! ರಣಗುಡುವ ಬಿಸಿಲು. ಒಂದು ಸಣ್ಣ ಮನೆಯ ಮುಂದೆ ಹತ್ತಾರು ಕಾಗೆಗಳು ಗದ್ದಲ ಮಾಡುತ್ತಿದ್ದವು. ಗಂಗಜ್ಜಿ ಅತ್ತ ತಿರುಗಿ ನೋಡಿದರು. ಚಿಕ್ಕಣ್ಣನ ಹತ್ತು ವರ್ಷದ ಮಗ ಹೊನ್ನ ವಿಕಾರವಾಗಿ ಜಗುಲಿಯ ಮೇಲೆ ಬಿದ್ದಿದ್ದಾನೆ. ಕಾಗೆಗಳನ್ನು ಅಟ್ಟುತ್ತಾ ಗಂಗಜ್ಜಿ ಹತ್ತಿರ ಹೋಗಿ ನೋಡಿದರು. ತೊಡೆಯ ಸಂದಿಯಲ್ಲಿ ಬಾಳೇಕಾಯಿ ಗಾತ್ರದ ಪ್ಲೇಗು ಗಡ್ಡೆ ಒಡೆದು ಕೀವು ರಕ್ತ ಸುರಿದು ಹುಡುಗ ಹರಹರಾ ಅಂದಿದ್ದ. ಚಿಕ್ಕಣ್ಣನ ಹಿರಿಯ ಹೆಂಡತಿ ಈಗ ಇರುವವಳು. ಎರಡನೇ ಹೆಂಡತಿ ಮಲತಾಯಿಯ ಕಾಟದಲ್ಲಿ ಒಣಗಿ ಹೋದ ತಬ್ಬಲಿ ಹುಡುಗ, ಎರಡನೇ ಹೆಂಡತಿ ಮೋಹದಲ್ಲಿ ಅಪ್ಪನೂ ತಪಲಾಸು ಕೊಡುವವನೇ, ಹುಡುಗನಿಗೆ ಜ್ವರ, ಗಡ್ಡೆ ಬಂದದ್ದು ಯಾರಿಗೂ ತಿಳಿಯದು. ಹಿಂದಿನ ದಿನವೇ ಹುಡುಗನನ್ನು ಜಗುಲಿಗೆ ಹಾಕಿ ಗಂಡ, ಹೆಂಡತಿ ಒಂದು ಹೆಣ್ಣು ಮಗು ಮಾವನ ಮನೆಗೆ ಓಡಿಯಾಗಿತ್ತು.

ಈಗ ಹುಡುಗ ಸತ್ತದ್ದು ತಿಳಿದದ್ದು ಗಂಗಜ್ಜಿಗೆ. ಏನು ಮಾಡಬೇಕೆಂದು ಯೋಚಿಸುತ್ತ ಕೂಡಲಿಲ್ಲ, ಗಂಗಜ್ಜಿ ಕೂಡಲೇ ಮನೆಗೆ ಬಂದು ಒಂದು ಗುದ್ದಲಿ ಒಂದು ಹಳೆಯ ಕಂಬಳಿ ಒಯ್ದು ಹೆಣವನ್ನು ಕಂಬಳಿಯಲ್ಲಿ ಸುತ್ತಿ ಬೆನ್ನ ಮೇಲೆ ಹೊತ್ತು ಗುದ್ದಲಿಯೊಂದಿಗೆ ಶೀಗೆ ಹಳ್ಳದ ಹತ್ತಿರ ಹೆಣ ಇಳಿಸಿ ದೊಡ್ಡ ಗುಂಡಿ ತೋಡಿ ಕಂಬಳಿ ಸಮೇತ ಹುಡುಗನ ಹೆಣ ಇಳಿಸಿ ಮಣ್ಣು ಮುಚ್ಚಿ, ಚೆನ್ನಾಗಿ ತುಳಿದು ನಾಲ್ಕಾರು ಕಲ್ಲು ಹೇರಿ ಶೀಗೆ ಹಳ್ಳದಲ್ಲೇ ಸಚೇಲ ಸ್ನಾನ ಮಾಡಿ ಗುದ್ದಲಿಗೂ ಸ್ನಾನಮಾಡಿಸಿ ಮನೆಗೆ ಬಂದು ಬೇರೆ ಬಟ್ಟೆಯುಟ್ಟು ಹೊರ ಬರುವುದರಲ್ಲಿ ಸೂರ್ಯ ಮುಳುಗಿಯಾಗಿತ್ತು.

ಇನ್ನು ಹೋಗುವುದೆಲ್ಲಿ? ಮತ್ತೆ ಗರ್ಭಗುಡಿ ಬಾಗಿಲು ತೆಗೆದು ನಂದಾದೀಪಕ್ಕೆ ಎಣ್ಣೆ ಹಾಕಿ ಒಂದು ನಮಸ್ಕಾರ ಹೊಡೆದು ಒಂದು ಲೋಟ ಮಜ್ಜಿಗೆ ಕುಡಿದು ಗರ್ಭಗುಡಿ ಕಂಬಕ್ಕೆ ಒರಗಿ ಜಪಸರ ತಿರುಗಿಸುವುದು.

ಪ್ಲೇಗಿನ ಮಾರಿ ಊರು ಬಿಟ್ಟು ಹೊರಟು ಹೋಗಲು ಹದಿನೈದು ದಿನ ಹಿಡಿಯಿತು. ಗಂಗಜ್ಜಿ ದನ-ಕರು, ದೇವಸ್ಥಾನ ನೋಡಿಕೊಂಡು ಇಡೀ ಊರಲ್ಲಿ ಒಂದೇ ಇತ್ತಂತೆ. ಹದಿನೈದು ದಿನ ಮುದುಕಿ ಒಂದೇ ಏನು ಮಾಡುತ್ತಿತ್ತೆಂದು ಯಾರಿಗೂ ತಿಳಿಯದು. ಜಡ್ಡುಗಳಲ್ಲಿ ಒಬ್ಬಬ್ಬರು ಮುದುಕರು ಸತ್ತರಂತೆ, ಮತ್ತೆಲ್ಲ ಹಿಂದಿರುಗಿದರು.

''ಒಬ್ಬರೇ ಹೇಗಿದ್ದರೆಂದು'' ಕೇಳಿದವರಿಗೆ

''ಹ್ಯಾಗಿರೊದೂಂದ್ರೆ ಯಂತ್ರದೆ? ಯಾವಾಗ್ಲೂ ಇರೋ ಹಂಗೆ ಇದ್ದೆ'' ಎಂದು ಮೊಟಕು ಉತ್ತರ ಬಂತಂತೆ. ಚಿಕ್ಕಾಚಾರಿಯ ಮಗ ಏನಾದ ಎಂಬುದು ಯಾರಿಗೂ ತಿಳಿಯದು, ಒಂದು ದಿನ ಗುಟ್ಟಾಗಿ ಚಿಕ್ಕಣ್ಣ ಗಂಗಜ್ಜಿಯನ್ನು ಕೇಳಿದಾಗ.

''ಹುಡುಗ ಹೆಣಾನ ಜಗ್ಲಿ ಮ್ಯಾಲೆ ಬಿಟ್ಟು ಹೋಗಿದ್ಯಲ್ಲೋ. ಕಾಗೆ ಹದ್ದು ಮುತ್ಕಂಡಿದ್ದು, ಅದಕ್ಕೆ ನಾನೇ ಹೊತ್ತು ಶೀಗೆ ಹಳ್ಳದ ಬದೀಲಿ ಹೂತು ಬಂದೆ. ಇನ್ನಾರೆದರ್ರೂ ಬಗಳಬ್ಯಾಡ, ತೆಪ್ಗಿರು ನೀನು'' ಅಂದರಂತೆ.

ಗಂಗಜ್ಜಿ ಹದಿನೈದು ದಿನ ಒಬ್ರೇ ಏನು ಮಾಡುತ್ತಿದ್ದರು ಎಂಬುವುದು ತಿಳಿದದ್ದು ಎರಡು ವರ್ಷದ ಮೇಲೆ.

''ಬ್ಯಾಸಗೆ ಸುಮ್ಮಗೆ ಕೂತು ಯಂತದ ಮಾಡ್ಲಿ. ಒಂದ್ನಾವ್ರ ಹುರುಳಿ ಹಪ್ಪ, ಅರಳ ಸಂಡಿಗೆ, ಬಾಳಕ, ಬಾಳೆಕಾಯಿ, ಹಲಸಿನಕಾಯಿ ಹಪ್ಪ ಮಾಡಿ ಅಟ್ಟದ ಮ್ಯಾಲೆ ಡಬ್ಬದಾಗ ತುಂಬಿಟ್ಟಿದ್ದೆ. ಅವೇಯಲ್ಲಾ ತಿಂದ್ಕಂಡ್ವು. ಹೇಳಿದರೆ ಹೆದರ್ಕಂಡಾವೂಂತ ಸುಮ್ನಿದ್ದೆ ಸೈ'' ಅಂದಿದ್ದರಂತೆ.

ಹೀಗೆ ಗಂಗಜ್ಜಿ ಹಿಗ್ಗದೆ, ಕುಗ್ಗದೆ, ಬಗ್ಗದೆ, ಜಗ್ಗದೆ, ಹೆದರದೆ, ಸೋಲದೆ ವಿಚಿತ್ರ ರೀತಿಯಲ್ಲಿ ಭಾಳಿದ ಜೀವ.

ನಾವು ಸ್ಕೂಲಿಗೆ ಹೋಗುವಾಗ ಗಜ್ಜುಗಕ್ಕಾಗಿ ಗಂಗಜ್ಜಿ ಮನೆಗೆ ಹೋಗುತ್ತಿದ್ದೆವು. ಅವರ ಮನೆಯ ಹಿಂದೆ ಗಜ್ಜುಗದ ಮರವಿತ್ತು. ಹೆಣ್ಣು ಮಕ್ಕಳಿಗಾಗಿ ಗಜ್ಜುಗದ ಕಾಯಿ ಒಣಗಿಸಿ ಒಡೆದು ಚಟ್ಟೆ, ಗುಂಡು ಗಜ್ಜುಗ ಬೇರೆ ಮಾಡಿ ಇಡುತ್ತಿತ್ತು ಮುದುಕಿ. ಒಂದು ರೀತಿಯಲ್ಲಿ ಗಂಗಜ್ಜಿ ರಸಿಕ ಮುದುಕಿ. ಆಗಿನ ಕಾಲದ ಗಜ್ಜುಗ, ಕವಡೆ, ಚೌಕಾಭಾರ, ಚನ್ನಮಣೆ, ಪಗಡೆ, ಚದುರಂಗ, ಎಲ್ಲಾ ಆಟಗಳೂ ಬರುತ್ತಿತ್ತು ಗಂಗಜ್ಜಿಗೆ. ಯಾರಾದರೂ ಬಲವಂತ ಮಾಡಿದರೆ ಕೂತೇ ಬಿಡುತ್ತಿದ್ದರು ಆಟಕ್ಕೆ. ಆದರೆ ಗೆಲ್ಲುವು ಅವರಿಗೇ.

ನಾದಿನಿಯ ಮೊಮ್ಮಕ್ಕಳು ಕುಂಟಪಿಲ್ಲೆ ಆಟಕ್ಕೆ ಕರೆದರೆಂದು ಗಂಗಜ್ಜಿ ಸೆರಗು–ನೆರಿ ಸಿಕ್ಕಿಸಿ ಮಕ್ಕಳ ಸಮಕ್ಕೂ ಕುಂಟಪಿಲ್ಲೆ ಆಡಿ ಗೆದ್ದು ನಕ್ಕು ನಕ್ಕು ದೇವಸ್ಥಾನದ ಮೆಟ್ಟಲ ಹತ್ತಿರ ಉರುಳಿ ಬಿದ್ದು ಹಸಿದ ಬಾಯಿ ಬಿಟ್ಟ ಕಣ್ಣು ಎಷ್ಟು ಹೊತ್ತಾದರೂ ಮುಚ್ಚದಿದ್ದಾಗ ಗಂಗಜ್ಜಿಯ ಕೈಲಾಸ ಯಾತ್ರೆ ತಿಳಿದದ್ದು. ಅಚ್ಚರಿಯ ಮರಣನೋಡಲು ಊರೇ ನೆರದಿತ್ತಂತೆ.

---

**ಶಬ್ದಗಳ ಅರ್ಥ :**

**ನಾದಿನಿ** – ಗಂಡನ ಅಥವಾ ಹೆಂಡತಿಯ ತಂಗಿ, ತಮ್ಮನ ಹೆಂಡತಿ; **ಬೃಹತ್** – ದೊಡ್ಡ; **ಬೀಗ**– ಕೀಲಿ;
**ನಂದಾದೀಪ** – ಸದಾ ಉರಿಯುತ್ತಿರುವ ದೀಪ; **ಜಡ್ಡು** – ಕಾಯಿಲೆ

**ಕೃತಿ - 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

i) ಈಶ್ವರ ದೇವಸ್ಥಾನದ ಒಳ ಆವರಣದಲ್ಲಿ ಯಾವ ಹೂವಿನ ಗಿಡಗಳಿವೆ?

ii) ಗಂಗಜ್ಜಿ ಎಷ್ಟು ವರ್ಷಗಳಿಂದ ಈಶ್ವರ ದೇವಸ್ಥಾನದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು?

iii) ಪ್ಲೇಗಿನ ಮಾರಿ ಊರು ಬಿಟ್ಟು ಹೋಗಲು ಎಷ್ಟು ದಿನ ಹಿಡಿಯಿತು?

**ಕೃತಿ - 2) ಯೋಗ್ಯ ಪರ್ಯಾಯವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.**


| ಹೊರಗೆ, ಕಾಶಿಭಟ್ಟರು, ಪೌಳಿಯೊಳಗೆ, ಗಂಗಜ್ಜಿ, ಪಂಚಲಿಂಗ |
|---|

i) ಮುದುಕಿಯರು ಹುಡುಗಿಯರು ಎಲ್ಲರೂ ಬಂದು ದೇವಸ್ಥಾನದ ------------ ತುಂಬಿಕೊಳ್ಳುವರು.


ii) ಒಂದು ಬಾರಿ --------- ದರ್ಶನಕ್ಕೆಂದು ಇಡೀ ಅಗ್ರಹಾರವೇ ಹೊರಟಿತಂತೆ.

iii) ----------- ಇವರಿಂದ ಅಗ್ರಹಾರದ ಮನೆ ಮನೆಗೂ ನೆರವಿತ್ತು.


**ಕೃತಿ - 3) ಗಂಗಜ್ಜಿ ತಯಾರಿಸುವ ಆಹಾರ ಪದಾರ್ಥಗಳನ್ನು ಚೌಕಟ್ಟುಗಳಲ್ಲಿ ಬರೆಯಿರಿ.**



ಕೃತಿ - 4) ಕೆಳಗಿನ ಜಾಲಾಕೃತಿ ಪೂರ್ಣ ಮಾಡಿರಿ.




ಕೃತಿ - 5) ಮದುವೆ-ಮುಂಜಿ ಇಂತಹ ಜೋಡು ಶಬ್ದಗಳನ್ನು ಬರೆಯಿರಿ.





ಕೃತಿ - 6) ಗ್ರಾಮ್ಯರೂಪದ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

ಉದಾ : ಒಬ್ರು → ಒಬ್ಬರು

| ಗಂಡಸ್ರು | ನಂಗೆ | ನಡೇರಿ | ಹಾಕ್ತೇನಿ | ಹಾಕ್ಕಂಡು |
|---|---|---|---|---|
| | | | | |

ಕೃತಿ - 7) ಕೆಳಗಿನ ಜಾಲಾಕೃತಿ ಪೂರ್ಣ ಮಾಡಿರಿ.



# 3. ಅಂತಃಕರಣ ಮಿಡಿದಾಗ....

- ಶಾಂತಾದೇವಿ ಮಾಳವಾಡ

**ಲೇಖಕರ ಪರಿಚಯ :** ಶ್ರೀಮತಿ ಶಾಂತಾದೇವಿ ಮಾಳವಾಡ ಇವರು ಬೆಳಗಾಂವಿಯಲ್ಲಿ 10 ಡಿಸೆಂಬರ 1922ರಲ್ಲಿ ಜನಿಸಿದರು. ಇವರು ಕಾದಂಬರಿ ಪ್ರಪಂಚದ ಸೃಜನಶೀಲತೆಗಿಂತ ಸಂಸಾರದ ಚೊಕ್ಕತನ, ಸಮಾಧಾನ, ಚೆಲವುಗಳನ್ನು ಹೆಚ್ಚಿಸುವ ವಾಙ್ಮಯ ಪ್ರತಿಭೆ ಶಾಂತಾದೇವಿಯವರ ಕೃತಿಗಳಲ್ಲಿ ಹಾಸುಕೊಕ್ಕಾಗಿದೆ. ಕನ್ನಡನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಉಜ್ವಲಗೊಳಿಸುವ ಕ್ರಿಯಾಶೀಲತೆಯ ಹರವೂ ಇವರ ಗ್ರಂಥ, ಲೇಖನಗಳಲ್ಲಿ ಮೈವೆತ್ತಿದೆ. ಕೃತಿಗಳು, ಮನೆ, ಮೊಗ್ಗೆಯ ಮಾಲೆ, ಮಹಿಳೆಯರ ಆತ್ಮಶ್ರೀ ಬಸವ ಪ್ರಕಾಶ ಕುಂಕುಮ ಬಲ ಕನ್ನಡತಾಂಬಿ ಮುಂತಾದವು.

ವಾಮನಭಟ್ಟರಿಗೂ ಶಂಕರಭಟ್ಟರಿಗೂ ಹೊಲಗದ್ದೆಗಳಿಂದ ಉಂಟಾದ ದ್ವೇಷಭಾವನೆಯಿದ್ದರೂ ಅಪಘಾತದ ಸಮಯದಲ್ಲಿ ರಾಕ್ಷಸ ಪ್ರವೃತ್ತಿಯು ಹೊರಟುಹೋಗಿ ಮನುಷ್ಯತ್ವದ ಕರ್ತವ್ಯ ಪ್ರಜ್ಞೆ. ಮರುಕಳಿಸಿದೆ. ಮಾನವೀಯತೆಯನ್ನು ಉಳಿಸಿಕೊಂಡು ಹೋಗುವ ಪ್ರಯತ್ನ ನಡೆಸಿರುವದನ್ನು ಕಾಣಬಹುದು.

ಶಂಕರಭಟ್ಟರು ಪ್ರಭುಗಳ ಅಂಗಡಿಯಿಂದ ನೀರುಳ್ಳಿ, ಚಹಾಪುಡಿ, ಕಾಫಿಪುಡಿ, ಲಕ್ಸ್ , ಬಟ್ಟೆ ಸಾಬೂನು - ಇತ್ಯಾದಿಗಳನ್ನು ಖರೀದಿ ಮಾಡಿ ತಮ್ಮ ಚೀಲದಲ್ಲಿ ತುಂಬಿಸಿಕೊಂಡು ಎಡಗೈಯಲ್ಲಿ ಚೀಲವನ್ನೂ , ಬಲಗೈಯಲ್ಲಿ ಟಾರ್ಚನ್ನೂ ಹಿಡಿದುಕೊಂಡು ಪೇಟೆಯಿಂದ ಹೊರಟಾಗ ಕತ್ತಲಾಗಿತ್ತು. ಮಾರ್ಗವೂ ಸರಿಯಾಗಿ ಕಾಣಿಸುತ್ತಿರಲಿಲ್ಲ.

ಸಾಮಾನ್ಯ ಪ್ರತಿದಿನವೆಂಬಂತೆ ಭಟ್ಟರು ಸಂಜೆಯ ಹೊತ್ತು ಪೇಟೆಗೆ ಬಂದು ಹೋಗುತ್ತಿದ್ದರು. ಬೆಳಗ್ಗೆ ಎದ್ದೊಡನೆ ಒಂದು ಗ್ಲಾಸು ಚಹಾ ಕುಡಿದು ಎಲೆಯಡಿಕೆ ಜಗಿಯುತ್ತಾ ತೋಟಕ್ಕೆ ಹೋಗುತ್ತಿದ್ದರು. ಇಡೀ ತೋಟವನ್ನೊಮ್ಮೆ, ಸುತ್ತಿ ಕೆಳಗೆ ಬಿದ್ದಿದ್ದ ಅಡಿಕೆಯನ್ನು ಹೆಕ್ಕಿ ಬುಟ್ಟಿಗೆ ತುಂಬಿಕೊಂಡು ಸೋಗೆಯೋ ಮಡಲೋ ಬಿದ್ದಿದ್ದರೆ ಅವುಗಳನ್ನು ಎಳೆದು ತಂದು ಅಂಗಳದ ಮೂಲೆಯಲ್ಲಿ ರಾಶಿ ಹಾಕುತ್ತಿದ್ದರು. ಇಷ್ಟಾದ ಬಳಿಕ ಆಳುಗಳು ಕೆಲಸಕ್ಕೆ ಬಂದಿದ್ದರೆ ಗಟ್ಟಿಯಾದ ಧ್ವನಿಯಲ್ಲಿ ಅವರಿಗೆ ಕೆಲಸ ಹೇಳಿ ಬಚ್ಚಲು ಮನೆಗೆ ನುಗ್ಗುತ್ತಿದ್ದರು. ''ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ...'' ಎನ್ನುತ್ತ ಸ್ನಾನಮುಗಿಸಿಕೊಂಡು ಒದ್ದೆ ಬಟ್ಟೆಯಲ್ಲೇ ಗಂಧ ತೇದಿ ಗಟ್ಟಿಯಾಗಿ ಮಂತ್ರೋಚ್ಚಾರಣೆ ಮಾಡುತ್ತಾ ಪೂಜೆ ಮುಗಿಸುತ್ತಿದ್ದರು. ಅನಂತರ ಗಂಜಿ ಊಟ ಮಾಡಿ ಚಾವಡಿಗೆ ಬರುವಾಗ ಗಂಟೆ ಒಂಭತ್ತು ಒಂಭತ್ತೂವರೆ ಆಗುತ್ತಿತ್ತು. ಮತ್ತೆ ಎಲೆಯಡಿಕೆ ಜಗಿಯುತ್ತ ಆಳುಗಳು ಕೆಲಸಕ್ಕೆ ಬಂದಿದ್ದರೆ ಒಂದು ರೌಂಡು ನೋಡಿಕೊಂಡು ಬರುತ್ತಿದ್ದರು. ಸುಮಾರು ಹನ್ನೊಂದು ಗಂಟೆಗೆ ಒಂದು ಗ್ಲಾಸು ಚಹಾವನ್ನು ಕುಡಿದು ಊರಲ್ಲಿ ತಾವು ಹೋಗಬೇಕಾದ ಮದುವೆಯೋ ಮುಂಜಿಯೋ ಇದ್ದರೆ ಅಲ್ಲಿಗೆ ಹೋಗುತ್ತಿದ್ದರು. ಇಲ್ಲದೆ ಇದ್ದರೆ ಕೆಲಸದ ಸ್ಥಳಕ್ಕೆ ಹೋಗುತ್ತಿದ್ದರು. ಊಟದ ಬಳಿಕ ಒಂದಿಷ್ಟು ವಿಶ್ರಾಂತಿ, ಅನಂತರ ಹಿಂದಿನ ದಿನದ ಪೇಪರನ್ನು ಒಮ್ಮೆ ಮಗುಚಿಹಾಕಿ ಪೇಟೆ ಧಾರಣೆ, ಅಡಿಕೆ ಕ್ರಯ, ಕಳ್ಳತನ, ಕೊಲೆ, ಆತ್ಮಹತ್ಯೆ- ಇತ್ಯಾದಿ ಕೆಲವು ವಿಷಯಗಳನ್ನು ಅವರು ತುಂಬ ಆಸಕ್ತಿಯಿಂದ ಓದಿ ಕಾಲ ಕೆಟ್ಟೋಯ್ತು ಎಂದು ಪೇಪರನ್ನು ಮುಚ್ಚಿಡುತ್ತಿದ್ದರು. ಸಂಜೆ ಆಳುಗಳು ಕೆಲಸ ಮುಗಿಸಿ ಹೋದಮೇಲೆ ಒಂದು ಗ್ಲಾಸು ಚಹಾ ಹೊಟ್ಟೆಗೆ ಹಾಕಿ ''ಏನಾದ್ರೂ ಸಾಮಾನು ಬೇಕೇನೆ ? ನಾನು ಪೇಟೆಗೆ ಹೋಗ್ತೇನೆ'' ಎಂದು ಒಂದು ಅಂಗಿ ಸಿಕ್ಕಿಸಿಕೊಳ್ಳುತ್ತಿದ್ದರು. ಹೆಂಡತಿ ಮೂರೋ ನಾಲ್ಕೋ ಸಾಮಾನುಗಳನ್ನು ಹೇಳುತ್ತಿದ್ದಳು. ''ಹಾಗಿದ್ರೆ ಆ ಚೀಲ ಕೊಡು'' ಎಂದು ಅವಳಿತ್ತ ಚೀಲವನ್ನು ಮತ್ತು ಟಾರ್ಚನ್ನು ಕೈಯಲ್ಲಿ ಹಿಡಿದುಕೊಂಡು ಬಾಯಲ್ಲಿಯ ಎಲೆಯಡಿಕೆಯನ್ನು 'ಥೂ ಥೂ' ಎಂದು ಉಗುಳುತ್ತ ಹೊರಟರೆಂದರೆ ಮನೆಗೆ ಹಿಂತಿರುವಾಗ ಪೂರ್ತಿ ಕತ್ತಲೆ. ಕೆಲವೊಮ್ಮೆ ಪೇಟೆಯಲ್ಲಿ ಕಮ್ತಿಯವರೋ ಪ್ರಭುಗಳೋ ಮಾತಿಗೆ ಸಿಕ್ಕಿದರೆಂದರೆ ಸ್ವಲ್ಪ ರಾತ್ರಿಯಾದದ್ದೂ ಉಂಟು.

ಬೇಸಿಗೆಯಲ್ಲಿ ಕೆಲವೊಮ್ಮೆ ಭಟ್ಟರಿಗೆ ಮಂಡೆ ಬಿಸಿಯಾಗುವುದೂ ಉಂಟು. ಅವರಿಗೂ ವಾಮನ ಭಟ್ಟರಿಗೂ ಒಂದೇ ಕೆರೆಯ ನೀರು. ಕೆರೆ ಇರುವುದು ವಾಮನ ಭಟ್ಟರ ಆಸ್ತಿಯಲ್ಲಿಯೇ. ಅಲ್ಲಿ ಮೊದಲು ಶಂಕರ ಭಟ್ಟರ ಅಣ್ಣ ಗೋವಿಂದ ಭಟ್ಟರಿದ್ದರು. ಅವರು ಸ್ವಲ್ಪ ಖಯಾಲಿ ಮನುಷ್ಯ. ಆದಾಯಕ್ಕಿಂತ ಖರ್ಚು-ವೆಚ್ಚವೇ ಜಾಸ್ತಿಯಾಗಿ ಸಾಕಷ್ಟು ಸಾಲ ಸೋಲವಾಗಿ ಕೊನೆಗೆ ಅನ್ಯಮಾರ್ಗವಿಲ್ಲದೆ ಆಸ್ತಿಯನ್ನು ವಾಮನ ಭಟ್ಟರಿಗೆ ಕ್ರೈಚೀಟು ಬರೆದು ಕುಟುಂಬ ಸಮೇತ ಊರು ಬಿಟ್ಟು ಎಲ್ಲಿಗೋ ಹೊರಟುಹೋದರು. ಎಲ್ಲಿಗೆ ಹೋಗುತ್ತಾರೆ ಎಂಬುದನ್ನು ಅವರು ಶಂಕರ ಭಟ್ಟರಿಗಾಗಲಿ ಊರವರಿಗಾಗಲಿ ತಿಳಿಸಿರಲಿಲ್ಲ. ಈಗ ಇದೆಲ್ಲಾ ಏಳೆಂಟು ವರ್ಷಗಳ ಹಿಂದಿನ ಇತಿಹಾಸ.

ಆಗ ಶಂಕರ ಭಟ್ಟರ ಅಡಿಕೆ ತೋಟಕ್ಕೆ ನೀರಿನ ವಿಶೇಷ ತೊಂದರೆ ಇರಲಿಲ್ಲ. ವಾಮನ ಭಟ್ಟರು ಬಂದ ಮೇಲೂ ಒಂದೆರಡು ವರ್ಷಗಳು ವಿಶೇಷ ಘರ್ಷಣೆಯಿಲ್ಲದೆಯೇ ಕಳೆದವು. ಅನಂತರ ಅವರು ತಮ್ಮ ಜಾಗದಲ್ಲಿ ಒಂದಿಷ್ಟು ತಟ್ಟು ಮಾಡಿಸಿ ಹೊಸ ಅಡಿಕೆ ಸಸಿ ಹಾಕಿಸಿದರು. ಅಲ್ಲಿಂದೀಚೆಗೆ ನೀರಿನ ತಾಪತ್ರಯ ಆರಂಭವಾಯಿತು. ಸಸಿ ಹಾಕುವಾಗಲೇ ನೀರಿನ ತೊಂದರೆಯಾದೀತೆಂಬ ಸಂಗತಿಯನ್ನು ಶಂಕರ ಭಟ್ಟರು ವಾಮನ ಭಟ್ಟರಿಗೆ ತಿಳಿಸಿದ್ದರು. ಆಗ ಅವರು ''ಮೂರು ದಿವಸಕ್ಕೆ ಒಮ್ಮೆ ನಿಮ್ಗೆ, ಮೂರು ದಿವ್ಸಕ್ಕೊಮ್ಮೆ ನಮ್ಗೆ ನೀರಲ್ಲವೋ. ನಮ್ಗೆ ಅಷ್ಟೇ ಸಾಕು. ಮತ್ತೆ ನೀವ್ಯಾಕೆ ಮಂಡೆ ಬಿಸಿ ಮಾಡ್ಕೊಳ್ಬೇಕು?'' ಎಂದು ಶಂಕರ ಭಟ್ಟರನ್ನು ನಿರುತ್ತರರನ್ನಾಗಿಸಿದ್ದರು.

ಶಂಕರ ಭಟ್ಟರಿಗೆ ಒಂದೂ ಮುಕ್ಕಾಲು ದಿನದ ನೀರು ಸಿಗುತ್ತಿತ್ತು. ಹೀಗೆ ಪ್ರತಿ ಕುದಿಗೂ ವಾಮನ ಭಟ್ಟರಿಗೆ ಅರ್ಧ ದಿನದ ನೀರು ಹೆಚ್ಚು ಸಿಗುತ್ತಿತ್ತು. ಈ ಕುರಿತಾಗಿ ಆಗಾಗ ವಾದ-ವಿವಾದ, ಜಗಳ, ಬೈಯ್ಗಳು-ಇತ್ಯಾದಿ ನಡೆಯುತ್ತಲೇ ಇತ್ತು.

ಶಂಕರ ಭಟ್ಟರು ಮೃದು ಸ್ವಭಾವದವರು. ಜಗಳ, ತಂಟೆ-ತಕರಾರುಗಳಿಗೆ ಹೋಗದ ಸಾತ್ವಿಕ ಮನುಷ್ಯ ಅವರ ಮಗನೂ ತಂದೆಯಂತೆ ಸಾಧು ಸ್ವಭಾವದವನೇ, ವಾಮನ ಭಟ್ಟರ ಇಬ್ಬರು ಹುಡುಗರೂ ತಂದೆಯಂತೆ ಸ್ವಲ್ಪ ಘಾಟಿ. ಯಾವುದಕ್ಕೂ ಹಿಂಜರಿಯುವವರಲ್ಲ. ಹೀಗಾಗಿ ಶಂಕರ ಭಟ್ಟರು ಊರ ಹಿರಿಯರಲ್ಲಿ ತಮ್ಮ ಗೋಳು ತೋಡಿಕೊಂಡರು. ಯಾವ ಪ್ರಯೋಜನವೂ ಆಗಲಿಲ್ಲ. ಒಂದು ವರ್ಷ ಕಳೆಯಿತು. ಆ ವರ್ಷ ಮಳೆಯೂ ತಡವಾಗಿ ಬಂದು ಅಡಿಕೆ ಮರಗಳ 'ಕುಬೆ'ಗಳು (ತುದಿಗಳು) ನೀರಿಲ್ಲದೆ ಕೆಂಪಾದವು. ಒಂದು ವರ್ಷ ಈ ರೀತಿ ನೀರು ಸಾಕಾಗದೆ ಅಡಿಕೆ ಮರಗಳು ಒಣಗಿದವೆಂದರೆ ಮತ್ತೆರಡು ವರ್ಷಗಳಿಗೆ ಬೆಳೆ ಕಡಿಮೆಯೆಂದೇ ಲೆಕ್ಕ. ಭಟ್ಟರ ಮಂಡೆ ಬಿಸಿಯಾಯಿತು. ಒಂದೆರಡು ಬಾರಿ ವಾಮನ ಭಟ್ಟರಲ್ಲಿ ಹೇಳಿದ್ದೂ ಆಯಿತು. ಜಗಳಾಡಿದ್ದೂ ಆಯಿತು. ಆ ಹಟಮಾರಿ ಜಗ್ಗಲಿಲ್ಲ. ಬೇರೆ ದಾರಿಯಿಲ್ಲದೆ ಕೊನೆಗೆ ಶಂಕರ ಭಟ್ಟರು ಕೋರ್ಟಿಗೆ ಹೋದರು. ಆದರೇನು ಪ್ರಯೋಜನ? ವರ್ಷಗಳು ಎರಡು ಕಳೆದರೂ ಎರಡುಮೂರು 'ಹಿಯರಿಂಗು'ಗಳು ಆದುದನ್ನು ಬಿಟ್ಟರೆ ಮತ್ತೇನೂ ಪ್ರಯೋಜನವಾಗಲಿಲ್ಲ. ಆದರೆ ಇದರಿಂದಾಗಿ ಶಂಕರ ಭಟ್ಟರ ಮೇಲಿದ್ದ ವಾಮನ ಭಟ್ಟರ ದ್ವೇಷ ಮಾತ್ರ ಇಮ್ಮಡಿಸಿತು. ಶಂಕರ ಭಟ್ಟರು ಸಹ ಆಸ್ತಿ ಮಾರಾಟ ಮಾಡಿ ಹೋಗುವುದಾದರೆ ಹೋಗಲಿ ನೀರಿಗೆ ಅಭಾವವಿದೆಯೆಂಬ ಸುದ್ದಿ ಊರಲ್ಲೆಲ್ಲಾ ಹಬ್ಬಿರುವಾಗ ಬೇರೆ ಯಾರೂ ಅದನ್ನು ಖರೀದಿಸಲು ಮುಂದೆ ಬರಲಾರರು. ಅಂತಹ ಸಂದರ್ಭದಲ್ಲಿ ತಾನೇ ಸ್ವಲ್ಪ ಕಡಿಮೆ ಕ್ರಯಕ್ಕೆ ಅದನ್ನು ಒಳಗೆ ಹಾಕಿಕೊಳ್ಳಬಹುದು ಎಂಬ ಯೋಚನೆ ವಾಮನ ಭಟ್ಟರಲ್ಲಿದೆಯೆಂದು ಗೊತ್ತಾದ ಮೇಲೆ ''ಇಲ್ಲೇ ನೀರಿಲ್ಲದೆ ಪ್ರಾಣ ಹೋದ್ರೂ ಹೋಗ್ಲಿ. ಆಸ್ತಿಯನ್ನು ಅವ್ನಿಗೆ ಖಂಡಿತ ಕೊಡುವುದಿಲ್ಲ'' ಎಂಬ ಭೀಷ್ಮ ಪ್ರತಿಜ್ಞೆಯನ್ನೇ ಮಾಡಿದ್ದರು ಶಂಕರ ಭಟ್ಟರು. ಇದಾದ ಬಳಿಕ ಜಗಳ, ಪರಸ್ಪರ ಬೈಯ್ಗಳು ಎಲ್ಲ ಇನ್ನಷ್ಟು ಹೆಚ್ಚಾಗತೊಡಗಿತು. ಒಂದೆರಡು ಬಾರಿ ಹೊಯ್ ಕೈ ತನಕವೂ ಬಂದಿತ್ತು. ಅದೇ ಸಮಯಕ್ಕೆ ಸರಿಯಾಗಿ ಕಾಕತಾಳೀಯವಾಗಿ ವಾಮನ ಭಟ್ಟರಲ್ಲಿಗೆ ಯಾರೋ ಬಂದು ಅವರನ್ನು ಕರೆದುದರಿಂದ ಸಂಭವಿಸಬಹುದಾಗಿದ್ದ ಅನರ್ಥವೂ ತಪ್ಪಿ ಹೋಗಿತ್ತು.

ಪೇಟೆಯಿಂದ ಹೊರಟ ಶಂಕರ ಭಟ್ಟರ ತಲೆಯಲ್ಲಿ ಇವೆಲ್ಲಾ ವಿಚಾರಗಳು ಮರುಕಳಿಸುತ್ತಾ ಹೋದವು. ಪೇಟೆಯಿಂದ ಮನೆ ಸುಮಾರು ಒಂದು ಒಂದೂವರೆ ಮೈಲು ದೂರ, ಡಾಮರು ರಸ್ತೆಯಾದರೂ ಚಡವು ಮತ್ತು ತಿರ್ಗಾಸುಗಳಿಂದ ಕೂಡಿದ್ದು, ಗುಡ್ಡ ಹತ್ತಿ ಆಚೆ ಬದಿಗೆ ಇಳಿದರೆ ಶಂಕರ ಭಟ್ಟರ ಮನೆ.

ಭಟ್ಟರು ಟಾರ್ಚು ಹಾಕಿಕೊಂಡು ನಿಧಾನವಾಗಿ ಚಡವು ಹತ್ತುತ್ತಿದ್ದರು. ತಲೆಯಲ್ಲಿ ಮೊನ್ನೆಯ ಘಟನೆ ಮರುಕಳಿಸಿ ಮಂಡೆ ಸ್ವಲ್ಪ ಬಿಸಿಯಾಯಿತು. ಏಪ್ರಿಲ್ ತಿಂಗಳ ಕೊನೆಯಾದುದರಿಂದ ಶಂಕರ ಭಟ್ಟರಿಗೆ ನೀರು ಏನೇನೂ ಸಾಕಾಗುತ್ತಿರಲಿಲ್ಲ. ಅಡಿಕೆ ಮರದ ತುದಿಗಳು ಕೆಂಪಾಗಲಾರಂಭಿಸಿದ್ದವು. ತಾನು ಕುದಿಯ ದಿನ ಬೆಳಿಗ್ಗೆ ನೀರು ಬಿಡಬೇಕು ಎಂದಾದರೆ ವಾಮನ ಭಟ್ಟರು ಸಹಾ ತಮ್ಮ ಕುದಿಯ ದಿನ ಬೆಳಗ್ಗೇನೆ ನೀರು ಬಿಡಬೇಕೆಂದೂ

ಅದೇ ಲಾಗಾಯ್ತಿನಿಂದಲೂ ನಡೆದು ಬಂದ ಪದ್ಧತಿ ಎಂದೂ ಹೇಳಿದರು. ಅವರು ನೂರು ಬಾರಿ ಹೇಳಿಯಾದುದನ್ನೇ ನೂರ ಒಂದನೇ ಬಾರಿಯೂ ಹೇಳಿದರು. ಆದರೆ ಸ್ವಲ್ಪ ಕಡಕ್ ಆಗಿ ಹೇಳಿದರು. ವಾಮನ ಭಟ್ಟರು ಎಂದಿನಂತೆ ಯದ್ವಾತದ್ವಾ ಮಾತನಾಡಲಾರಂಭಿಸಿದಾಗ ಶಂಕರ ಭಟ್ಟರಿಗೂ ತಡೆಯಲಾಗಲಿಲ್ಲ. ಅವರು ಸಹ ತಮ್ಮ ಬಾಯಿಗೆ ಬಂದಂತೆ ಬಯ್ಯತೊಡಗಿದರು. ವಾಮನ ಭಟ್ಟರು ಕಾದ ಕೆಂಡವಾದರು. ಶಂಕರ ಭಟ್ಟರಿಂದ ಅವರು ಆ ರೀತಿಯ ವರ್ತನೆ ನಿರೀಕ್ಷಿಸಿರಲಿಲ್ಲ. ಅವರು ತೋಟದಿಂದಲೇ ಗಟ್ಟಿಯಾಗಿ ''ಏ ಸೂರ್ಯ, ಬಾರೋ ಇಲ್ಲಿಗೆ, ಬೇಗ ಬಾ!'' ಎಂದ ಕೂಗು ಕೇಳಿ ಮನೆಯಲ್ಲಿದ್ದ ಸೂರ್ಯ, ಏನೋ ಅನಾಹುತವಾಗಿದೆಯೋ ಅಥವಾ ಆಗುವುದಿದೆಯೋ ಎಂದು ಭಾವಿಸಿ ಕೈಯಲ್ಲಿ ಕತ್ತಿ ಹಿಡಿದುಕೊಂಡೇ ಓಡಿ ಬಂದ. ಇಬ್ಬರ ಸಿಟ್ಟು ಮತ್ತು ಅವೇಶ ಭರಿತ ರೂಪಗಳನ್ನು ನೋಡಿ ಇಬ್ಬರೊಳಗೆ ಏನೋ ನಡೆದಿದೆಯೆಂಬ ತೀರ್ಮಾನಕ್ಕೆ ಬಂದು ''ಶಂಕರ ಭಟ್ಟಾ! ಬಂದೆ!'' ಎಂದು ಆರ್ಭಟಿಸುತ್ತ ತಮ್ಮ ತೋಟದ ಕೆಳಗಿದ್ದ ಶಂಕರ ಭಟ್ಟರ ತೋಟಕ್ಕೆ ಹಾರಿದ. ''ಆಗುವುದೆಲ್ಲ ಇಂದು ಆಗಿಹೋಗ್ಲಿ'' ಎಂದು ಶಂಕರ ಭಟ್ಟರು ನಿಂತಲ್ಲಿಂದ ಕದಲಲಿಲ್ಲ. ಸೂರ್ಯ ಕತ್ತಿಯನ್ನು ಮೇಲಕ್ಕೆತ್ತಿಕೊಂಡು ಅವರತ್ತ ಹೆಜ್ಜೆ ಹಾಕಿದ. ಮುಂದೇನಾಗುತ್ತಿತ್ತೋ ದೇವರೆ ಬಲ್ಲ! ಅಷ್ಟರಲ್ಲಿ ಶಂಕರ ಭಟ್ಟರ ಮನೆಗೆ ಬಂದಿದ್ದ ಗುರಿಕಾರರು ತೋಟದಲ್ಲಿ ನಡೆಯುತ್ತಿದ್ದ ಗುಲ್ಲು ಗದ್ದಲ ಕೇಳಿ ಅಲ್ಲಿಗೆ ಧಾವಿಸಿ ಬಂದರು. ಶಂಕರ ಭಟ್ಟರು ಸಿಟ್ಟಿನಿಂದ ನಡುಗುತ್ತಿದ್ದಾರೆ. ಸೂರ್ಯ ಕತ್ತಿಯನ್ನೆತ್ತಿ ಅವರತ್ತ ನಿಧಾನವಾಗಿ ಸಾಗುತ್ತಿದ್ದಾನೆ. ಸನ್ನಿವೇಶವು ಕೈಮೀರಿ ಹೋಗುತ್ತಿದೆಯೆಂದು ತಿಳಿದಾಕ್ಷಣ ಅವರು ಸೂರ್ಯನ ಬಳಿ ಧಾವಿಸಿ ''ಸೂರ್ಯ ಏನೋ ಇದೆಲ್ಲ? ಭಟ್ರ ತೋಟಕ್ಕೆ ನೀನ್ಯಾಕೆ ಬಂದೆ? ಅದೂ ಕೈಯಲ್ಲಿ ಕತ್ತಿ ಹಿಡ್ಕೊಂಡು? ಹೋಗಾಚೆ. ತಲೆಯಲ್ಲಿ ಸಾಮಾನಿದೆಯೋ ಇಲ್ವೋ?'' ಎಂದು ಅವನನ್ನು ಹಿಡಿದು ದೂರಕ್ಕೆ ತಳ್ಳಿದರು. ಅವರು ಬರುತ್ತಿದ್ದುದನ್ನು ದೂರದಿಂದಲೇ ನೋಡಿದ್ದ ವಾಮನ ಭಟ್ಟರು ಅಲ್ಲಿರಲ್ಲೇ ಇಲ್ಲ! ಗುರಿಕಾರರಿಂದಾಗಿ ಅಂದು ಪ್ರಾಣ ಉಳಿಯಿತು. ಇಲ್ಲದಿದ್ದರೆ ಏನಾಗುತ್ತಿತ್ತೋ ಏನೊ! ಇದೆಲ್ಲ ಮೆಲುಕು ಹಾಕುತ್ತಿದ್ದಂತೆ ಮನಸ್ಸನ್ನು ಒಂದು ಥರದ ಭೀತಿ ಅವರಿಸಿಕೊಂಡಿತು. ಪಕ್ಕನೆ ಹಿಂದಿನಿಂದ ಯಾರೋ ಬಂದಂತಾಗಿ ಹಿಂದಕ್ಕೆ ತಿರುಗಿ ಟಾರ್ಚು ಹಾಕಿ ನೋಡಿದರು. ಅಲ್ಲಿ ಯಾರೂ ಇರಲಿಲ್ಲ. ಬಿಗಿ ಹಿಡಿದಿದ್ದ ಉಸಿರನ್ನು ದೀರ್ಘವಾಗಿ ಬಿಡುತ್ತಾ, ''ದೇವರೇ ಕಾಪಾಡು'' ಎಂದು ಹೇಳುತ್ತ ಮುಂದೆ ಸಾಗಿದರು. ಚಡವಿನ ತುದಿಗೆ ಒಂದು ತಿರ್ಗಾಸು, ಅನಂತರ ಮತ್ತೆ ಇಳಿಜಾರು ರಸ್ತೆ.

ಚಡವು ಏರುತ್ತ ತಿರ್ಗಾಸಿಗೆ ತಲುಪಿದಾಗ ರಸ್ತೆ ಬದಿಯಲ್ಲಿ ಸ್ವಲ್ಪ ಕೆಳಗೆ ಏನೋ ಬಿದ್ದಿರುವಂತೆ ತೋರಿತು. ಟಾರ್ಚು ಹಾಕಿ ನೋಡಿದಾಗ ಅವರು ಕಂಡದ್ದು ಮಗುಚಿ ಬಿದ್ದಿದ್ದ ಸ್ಕೂಟರ್! ಇದು ಯಾರದಿರಬಹುದು? ಎಂದು ನೋಡಲು ರಸ್ತೆ ಬಿಟ್ಟು ಸ್ವಲ್ಪ ಕೆಳಗಿಳಿದರು. ಸ್ಕೂಟರಿನ ಬಾಡಿ ಸ್ವಲ್ಪ ನುಜ್ಜುಗುಜ್ಜಾಗಿತ್ತು. ಟಾರ್ಚು ಹಾಕಿ ಸುತ್ತು ಮುತ್ತು ನೋಡಿದಾಗ ಸುಮಾರು ನಾಲ್ಕೈದು ಮಾರು ಕೆಳಗೆ ಪೊದರಿಗೆ ತಾಗಿ ವ್ಯಕ್ತಿಯೊಬ್ಬ ಬಿದ್ದಿರುವುದನ್ನು ಕಂಡರು. ವ್ಯಕ್ತಿಯನ್ನು ನೋಡಿದೊಡನೆ ಅವರ ಗಮನವೆಲ್ಲ ಅತ್ತ ಹೋಯಿತು. ಮತ್ತೂ ಸ್ವಲ್ಪ ಹತ್ತಿರ ಹೋಗಿ ನೋಡುತ್ತಾರೆ-ವಾಮನ ಭಟ್ಟರು ಪ್ರಜ್ಞಾಹೀನರಾಗಿ ಬಿದ್ದಿದ್ದಾರೆ! ಒಂದು ಕೈ, ಒಂದು ಕಾಲು ಮತ್ತು ತಲೆಯಿಂದ ರಕ್ತ ಒಸರುತ್ತಿದೆ! ಶಂಕರ ಭಟ್ಟರ ಮೈ 'ಜುಂ' ಅಂದಿತು.

ಆಗ ಒಂದು ಕ್ಷಣದ ಭೀತಿಯ ಬಳಿಕ ಶಂಕರ ಭಟ್ಟರಿಗೆ ಮನಸ್ಸಲ್ಲೇ ಒಂದು ಥರದ ಸಂತೋಷವಾಯಿತು. ಬಿದ್ದವರನ್ನು ಎತ್ತಿ ಸ್ವಲ್ಪ ಸರಿಯಾಗಿ ಮಲಗಿಸಲೆ? ಎಂಬ ವಿಚಾರವು ಸಹ ಒಂದು ಕ್ಷಣ ಮನಸ್ಸಿನಲ್ಲಿಯೇ ಮಿಂಚಿ ಮಾಯವಾಯಿತು. ''ಅನ್ಯಾಯಿಗೆ ದೇವರು ತಕ್ಕ ಶಿಕ್ಷೆ ಕೊಟ್ಟಿದ್ದಾನೆ. ಮೊನ್ನೆ ನನ್ನನ್ನು ಕೊಲ್ಲಬೇಕೆಂದಿದ್ದೆಯಲ್ಲ? ಇಂದು ದೇವರೇ ನಿನಗೆ ಸರಿಯಾಗಿ ಶಾಸ್ತಿ ಮಾಡಿದ್ದಾನೆ? ಸತ್ಯಕ್ಕೆಜಯ ಎಂಬುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇಕೇ? ಮಾಡಿದ್ದುಣ್ಣೋ ಮಹಾರಾಯ?'' ಎಂದು ಯೋಚಿಸುತ್ತಿರುವಂತೆ ಮುಖದಲ್ಲಿ ಸಂತೋಷದ ಕಿರುನಗೆಯೊಂದು ಮೂಡಿತು.

ಒಂದು ಕ್ಷಣ ಅಲ್ಲಿ ನಿಂತು ಸುತ್ತಲೂ ದೃಷ್ಟಿ ಹಾಯಿಸಿದರು. ಎಲ್ಲಲ್ಲೂ ಗಾಢಾಂಧಕಾರ, ರಸ್ತೆಯಲ್ಲಿ ದೂರ ದೂರದ ತನಕ ದೃಷ್ಟಿ ಹಾಯಿಸಿದರೂ ಬರುವವರ-ಹೋಗುವವರ ಸುಳಿವಿಲ್ಲ. ಸಾಮಾನ್ಯವಾಗಿ ಕತ್ತಲಾದ ಮೇಲೆ

ಊರಿಂದ ಪೇಟೆಗೆ ಹೋಗುವವರಾಗಲಿ ಪೇಟೆಯಿಂದ ಊರಿಗೆ ಬರುವವರಾಗಲಿ ಯಾರೂ ಇರುವುದಿಲ್ಲ. ಒಂದು ಕ್ಷಣ ಅವರಲ್ಲಿ ರಾಕ್ಷಸೀ ಪ್ರವೃತ್ತಿಯು ಜಾಗೃತವಾಗಿಯಿತು! ತನಗೀತ ಕಂಟಕಪ್ರಾಯನಾಗಿರುವುದರಿಂದ ತಾನೇಕೆ ಇವನನ್ನು ಬದುಕಲು ಬಿಡ್ಬೇಕು? ಪೊದರಿಗೆ ತಾಗಿ ನಿಂತಿರುವ ಶರೀರನ್ನು ತುಸು ಎಳೆದು ಕೆಳಗೆ ಉರುಳಿಸಿದರೆ ಅದು ಕೆಳಗಿರುವ ಆಳವಾದ ಗುಂಡಿಗೆ ಬೀಳುತ್ತದೆ! ಯಾರಿಗೂ ಗೊತ್ತಾಗಲಾರದು! ಅಲ್ಲಿ ಬಿದ್ದರೆ ಬದುಕಿ ಉಳಿಯುವುದು ಅಸಾಧ್ಯ! ಮತ್ತೆ ತಾನು ನಿಶ್ಚಿಂತನಾಗಬಹುದು! ದೇವರೇ ಒದಗಿಸಿಕೊಟ್ಟಿರುವ ಈ ಸುವರ್ಣಾವಕಾಶವನ್ನು ತಾನೇಕೆ ಬಿಡಬೇಕು? ಮತ್ತೆ ರಸ್ತೆಬಿಟ್ಟು ಕೆಳಗಿಳಿಯಲು ನಿಶ್ಚಯಿಸಿ ಒಂದು ಹೆಜ್ಜೆ ಮುಂದಿಟ್ಟರು. ಥಟ್ಟನೆ ತಲೆಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಹೆಜ್ಜೆಗಳು ಸ್ಥಗಿತಗೊಂಡವು. ಫಕ್ಕನೆ ಅವರಿಗೆ ಅಪಘಾತಕ್ಕೀಡಾಗಿ ಸತ್ತ ತಮ್ಮ ಮಗಳು ಗೀತಾಳ ನೆನಪಾಯಿತು! ಬಿ.ಎ. ಓದಿದ್ದ ನೋಡಲು ಸುಂದರಿ ಆಗಿದ್ದ ಅವಳ ಮದುವೆಯು ಉಡುಪಿಯಲ್ಲಿರುವ ಕಾಲೇಜು ಉಪನ್ಯಾಸಕನೊಂದಿಗೆ ನಿಶ್ಚಯವಾಗಿತ್ತು. ಮದುವೆಯ ಬಟ್ಟೆಬರೆ ಖರೀದಿಗಾಗಿ ಅಣ್ಣನೊಂದಿಗೆ ಮಂಗಳೂರಿಗೆ ಹೋಗಿದ್ದ ಆಕೆ ಬಟ್ಟೆ-ಬರೆಯನ್ನ ಖರೀದಿಸಿ ಹಿಂದಿರುಗುವಾಗ ಅವರಿದ್ದ ಕಾರಿಗೆ ಲಾರಿಯೊಂದು ಡಿಕ್ಕಿ ಹೊಡೆದು ಅಕೆಯ ತಲೆಗೆ ಪೆಟ್ಟಾಗಿ ಆಸ್ಪತ್ರೆ ತಲುಪುವಷ್ಟರಲ್ಲಿಯೇ ಮೃತಳಾಗಿದ್ದಳು! ಅಣ್ಣ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದ. ಡ್ರೈವರನ ಕಾಲು ಮುರಿದಿತ್ತು.

ಗೀತಾಳ ಪ್ರಾಯದವಳೇ ಆಗಿದ್ದಳು ವಾಮನ ಭಟ್ಟರ ಮಗಳು ಶಾಂತಿ. ಅವಳಿಗೆ ಮದುವೆ ನಿಶ್ಚಯವಾಗಿತ್ತು. ಮದುವೆಗೆ ಇನ್ನು ಕೇವಲ ಇಪ್ಪತ್ತು ದಿನಗಳಿವೆ. ವಾಮನ ಭಟ್ಟರು ಸತ್ತರೆ ಅಥವಾ ಅವರನ್ನು ಮುಗಿಸಿಬಿಟ್ಟರೆ ಪಾಪ ಆ ಹುಡುಗಿಯ ಗತಿಯೇನು? ನಿಶ್ಚಯವಾದ ಮದುವೆ ನಿಂತರೆ ಮತ್ತೆ ಕಡಿದು ಹೋಗಲೂಬಹುದು. ನಿಶ್ಚಿತಾರ್ಥ ಆದ ಮೇಲೆ ಅವರನ್ನು ಕೊಂದರೆ ಅಥವಾ ಅವರು ಸತ್ತರೆ ಅಶುಭ ಸೂಚಕವೆಂದು ವರನ ಕಡೆಯವರು ಆಕೆಯನ್ನು ತಿರಸ್ಕರಿಸದಿರಲಾರದು ಪಾಪ! ಆಗ ಅವಳ ಗತಿ? ಶಾಂತಿಯ ಬಾಳನ್ನು ಹಾಳು ಮಾಡಿದ ಪಾಪ ನನಗೆ ತಟ್ಟದಿರಲಾರದು! ತಂದೆಯ ತಪ್ಪಿಗೆ ಮಗಳಿಗೇಕೆ ಶಿಕ್ಷೆ? ಯೋಚಿಸುತ್ತ ಅವರ ಮನಸ್ಸಿನ ಮುಂದೆ ಗೀತಾಳ ಸ್ಥಾನದಲ್ಲಿ ಶಾಂತಿಯೇ ಬಂದು ನಿಂತುಕೊಂಡಳು! ''ಛೇ! ನಾನೆಂತಹ ರಾಕ್ಷಸ! ವಾಮನ ಭಟ್ಟ ಎಂಥವನೇ ಇರ್ಲಿ ನಾನಂತೂ ಮನುಷ್ಯತ್ವ ಕಳೆದುಕೊಳ್ಬಾರ್ದು'' ಎಂದು ನಿರ್ಧರಿಸಿ ಅವರು ಬೇಗ ಬೇಗನೆ ಹೆಜ್ಜೆ ಹಾಕುತ್ತ ಸುಮಾರು ಮೂರು ಫರ್ಲಾಂಗು ದೂರದಲ್ಲಿದ್ದ ವೆಂಕಟಪ್ಪ ಶೆಟ್ರ ಮನೆಗೆ ಹೋದರು. ಅವರಿಗೆ ವಿಷಯ ತಿಳಿಸಿ ಅಲ್ಲಿಂದಲೇ ಪೇಟೆಗೆ-ಪ್ರಭುಗಳಿಗೆ ಫೋನು ಮಾಡಿ ಅರ್ಜಂಟಾಗಿ ಒಂದು ಜೀಪು ಕಳಿಸಿಕೊಡಲು ಹೇಳಿದರು. ಶೆಟ್ರ ಮಗನನ್ನು ವಾಮನ ಭಟ್ರಲ್ಲಿಗೆ ವಿಷಯ ತಿಳಿಸಲು ಕಳಿಸಿಕೊಟ್ಟರು. ಜತೆಗೆ ಗಾಬರಿಯೇನಿಲ್ಲವೆಂದು ಹೇಳಬೇಕೆಂದೂ ತಿಳಿಸಿದರು. ಮುಂದೇನು ಮಾಡುವುದೆಂದು ಅವರಿಬ್ಬರೂ ವಿಚಾರ-ವಿನಿಮಯ ಮಾಡುತ್ತಿರುವಾಗ ಜೀಪು ಶೆಟ್ರಲ್ಲಿಗೆಬಂದು ತಲಪಿತು. ಭಟ್ಟರು ಶೆಟ್ಟರೊಂದಿಗೆ ಜೀಪಲ್ಲಿ ಅಪಘಾತದ ಸ್ಥಳಕ್ಕೆ ಬಂದರು. ಡ್ರೈವರನನ್ನೂಕರೆದುಕೊಂಡು ಇಬ್ಬರೂ ಡಾಮರು ರಸ್ತೆಯಿಂದ ಕೆಳಗಿಳಿದು ವಾಮನ ಭಟ್ಟರು ಬಿದ್ದ ಸ್ಥಳಕ್ಕೆ ತಲುಪಿದರು. ಅಷ್ಟರಲ್ಲಿ ಶೆಟ್ರ ಮಗ ಓಡೋಡಿ ಬಂದು ವಾಮನ ಭಟ್ಟರ ಮಕ್ಕಳಿಬ್ಬರೂ ಮನೆಯಲ್ಲಿ ಇಲ್ಲವೆಂದು ತಿಳಿಸಿದ. ಶಂಕರ ಭಟ್ಟರು, ಶೆಟ್ರು, ಅವರ ಮಗ ಮತ್ತು ಡ್ರೈವರ್ ಎಲ್ಲರೂ ಸೇರಿ ಪ್ರಜ್ಞಾಹೀನರಾಗಿದ್ದ ವಾಮನ ಭಟ್ಟರನ್ನು ಜೀಪಿಗೆ ಸಾಗಿಸಿದರು.

ಜೀಪು ಮಂಗಳೂರಿಗೆ ತಲುಪಿದಾಗ ಸುಮಾರು ಹನ್ನೊಂದು ಗಂಟೆ. ಡ್ಯೂಟಿ ಡಾಕ್ಟರನ್ನು ಕಂಡು 'ಎಮರ್ಜೆನ್ಸಿ' ವಾರ್ಡಿಗೆ ಸೇರಿಸಲಾಯಿತು . ಅವರು ಪರೀಕ್ಷಿಸಿ ''ತಲೆಗೆ ಪೆಟ್ಟಾಗಿದೆ. ಕಾಲು ಪ್ರ್ಯಾಕ್ಚರ್ ಆಗಿದೆ. ತಲೆಗೆ ಆಪರೇಷನ್ ಆಗ್ಬೇಕು. ದೊಡ್ಡ ಡಾಕ್ಟರ್ ಬರ್ಬೇಕು'' ಅಂದರು. ಅನಂತರ ಅವರು ಒಳಗೆ ಹೋಗಿ ಡಾಕ್ಟರರಿಗೆ ಫೋನ್ ಮಾಡಿ ಒಂದು ಫಾರ್ಮು ತೆಗೆದುಕೊಂಡು ಬಂದು ಮನೆಯವರ ಸಹಿ ಬೇಕೆಂದರು. ಶಂಕರ ಭಟ್ಟರು ಥಟ್ಟನೆ ಸಹಿ ಹಾಕಿದರು.

ಹತ್ತು ನಿಮಿಷಗಳಲ್ಲಿಯೇ ಡಾಕ್ಟರ್ ಬಂದರು. ರೋಗಿಯನ್ನು ಓ.ಟಿ.ಗೆ ಕೊಂಡೊಯ್ಯಲಾಯಿತು. ಆಗ ಮಧ್ಯರಾತ್ರಿಯಾಗಿತ್ತು.

ಭಟ್ಟರು ಮತ್ತು ಶೆಟ್ಟರು ಉದ್ವಿಗ್ನತೆಯಿಂದ 'ಅಪರೇಷನ್' ಶಬ್ದದಿಂದ ತುಸು ಗಾಬರಿಗೊಂಡವರಾಗಿ ಬೆಂಚಿನ ಮೇಲೆ ಕೂತಲ್ಲೇ ಕುಳಿತುಕೊಂಡರು.

ಓ.ಟಿ.ಯಲ್ಲಿ ಅಪರೇಷನ್ ಮುಗಿಸಿ ಕಾಲಿಗೆ ಪ್ಲಾಸ್ಟರ್ ಹಾಕಿ ರೋಗಿಯನ್ನು ಮತ್ತೆ ವಾರ್ಡಿಗೆ ತಂದು ಐದತ್ತು ನಿಮಿಷಗಳಲ್ಲಿ ಡಾಕ್ಟರ್ ಹೊರಗೆ ಬಂದು ''ತಲೆಗೆ ದೊಡ್ಡ ಪೆಟ್ಟಾಗಿಲ್ಲ, ಅಪರೇಷನ್ ಮಾಡಿದ್ದೇನೆ. ಪ್ರಾಣಕ್ಕೆ ಅಪಾಯವಿಲ್ಲ ಕಾಲಿಗೆ ಪ್ಲಾಸ್ಟರ್ ಹಾಕಿದ್ದೇವೆ. ಒಂದೆರಡು ಗಂಟೆಗಳಲ್ಲಿ ಪ್ರಜ್ಞೆ ಬಂದೀತು'' ಎಂದು ಹೇಳಿ ಹೊರಟು ಹೋದರು.

ಭಟ್ಟರು ವಾಚು ನೋಡಿದರು. ಆಗ ಗಂಟೆ ನಾಲ್ಕೂವರೆಯಾಗಿತ್ತು. ಶಂಕರ ಭಟ್ಟರಿಗಾಗಿ ಆತ್ಮ ಸಂತೋಷ ಅಷ್ಟಿಷ್ಟಲ್ಲ! ''ಹೇ ಭಗವಂತಾ, ಇದೆಲ್ಲ ನಿನ್ನ ಅನುಗ್ರಹ ಫಲ! ನಿನ್ನ ಉಪಕಾರವನ್ನು ನಾನೆಂದೂ ಮರೆಯಲಾರೆ!'' ಎಂದು ಮನಸ್ಸಿನಲ್ಲಿ ಅನ್ನುತ್ತಿರುವಾಗಲೇ ವಾಮನ ಭಟ್ಟರ ಮಗ ಸೂರ್ಯ ಬಂದು ತಲುಪಿದ.


''ನಿನ್ನಪ್ಪನ ಜೀವಕ್ಕೆ ಅಪಾಯವಿಲ್ಲ. ಒಂದೆರಡು ಗಂಟೆಗಳಲ್ಲಿ ಪ್ರಜ್ಞೆ ಬಂದೀತು ಎಂದು ಡಾಕ್ಟರ್ ಹೇಳಿದ್ದಾರೆ. ಇನ್ನು ನೀನು ಇದ್ದೀಯಲ್ಲ, ನಾನು ಹೋಗ್ತೇನೆ'' ಎಂದು ಶಂಕರ ಭಟ್ಟರು ಥಟ್ಟನೆ ಎದ್ದು ಏನೋ ಹೇಳಬೇಕೆಂದಿದ್ದ ಸೂರ್ಯನ ಕಡೆಗೂ ಲಕ್ಷ್ಯ ಕೊಡದೆ ತನ್ನ ಕರ್ತವ್ಯವನ್ನು ನಿಭಾಯಿಸಿದ ಸಂತೃಪ್ತಿಯಿಂದಲೇ ಹೊರಗೆ ನಡೆದರು.

---

**ಶಬ್ದಗಳ ಅರ್ಥ:**

**ನೀರುಳ್ಳಿ**-ಉಳ್ಳಾಗಡ್ಡೆ; **ಸೋಗೆ**-ತಪ್ಪಲು; **ಜಗಿಯುತ್ತ**-ಮೆಲಕುಹಾಕುತ್ತ; **ಮುಗುಚಿಹಾಕು**-ತಿರುವಿಹಾಕು; ಮಂಡೆ -ತಲೆ; **ತಟ್ಟು** -ಸಮತಲ; **ಘಾಟಿ**-ಗಟ್ಟಿಗ; **ಕ್ರಯ**- ಬೆಲೆ; **ಕಾಕತಾಳೀಯ**-ಅಕಸ್ಮಾತಾಗಿ ನಡೆದ; **ಗುರಿಕಾರ**-ಊರಿನ ಹಿರಿಯರು; **ಚಡವು**-ದಿನ್ನೆ; **ಪ್ರಜ್ಞಾಹೀನ**-ಎಚ್ಚರ-ತಪ್ಪಿದ; **ಕಂಟಕಪ್ರಾಯ**-ದುಷ್ಟ;

**ಕೃತಿ:1 ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**




CBXCNQ

**ಕೃತಿ: 2 ತೋಟದಲ್ಲಿ ನಡೆದ ಶಂಕರಭಟ್ಟ ಹಾಗೂ ವಾಮನ ಭಟ್ಟರ ಜಗಳ ಪ್ರಸಂಗವನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.**

**ಕೃತಿ: 3 ಪ್ರಜ್ಞೆಬಂದ ಮೇಲೆ ವಾಮನ ಭಟ್ಟರಿಗೆ ತನ್ನ ಪ್ರಾಣವನ್ನು ಉಳಿಸಿದ ವ್ಯಕ್ತಿ ಶಂಕರ ಭಟ್ಟರೇ ಎಂದು ತಿಳಿದಾಗ ಅವರ ಮನದಲ್ಲಿ ಬಂದ ವಿಚಾರಗಳನ್ನು ಕಲ್ಪಿಸಿ ಬರೆಯಿರಿ.**

# ಬರವಣಿಗೆಯ ಕೌಶಲ್ಯಗಳು ಹಾಗೂ ಮೌಖಿಕಕಲೆ

1) ಪತ್ರಲೇಖನ

2) ಆಮಂತ್ರಣ ಪತ್ರಿಕೆ

3) ಪತ್ರಿಕಾ ವರದಿಯ ಮಾದರಿ

4) ಭಾಷಣದ ಮಾದರಿ

5) ನಿಬಂಧ ಬರಹ

6) ಕಥಾ ಲೇಖನ

7) ಗಾದೆ ಮಾತಿನ ವಿಸ್ತರಣೆ

8) ಅಪರಿಮಿತ ಗದ್ಯಖಂಡದ ಮೇಲೆ ಪ್ರಶ್ನೆಗಳನ್ನು ತಯಾರಿಸುವ ಕೃತಿ

9) ಸಂಭಾಷಣ ಕೌಶಲ

10) ಜಾಹೀರಾತಿನ ಮಾದರಿ

# ಪತ್ರಲೇಖನ

ಪ್ರಮುಖವಾಗಿ ಪತ್ರಲೇಖನದಲ್ಲಿಎರಡು ವಿಧಗಳು. ಔಪಚಾರಿಕ ಮತ್ತು ಅನೌಪಚಾರಿಕ ಪತ್ರ. ಸಾಮಾನ್ಯವಾಗಿ ನಮ್ಮ ಕುಟುಂಬ, ಸ್ನೇಹಿತರು, ಸಂಬಂಧಿಕರು ಮುಂತಾದವರಿಗೆ ಬರೆಯುವ ಪತ್ರ ಅನೌಪಚಾರಿಕ ಪತ್ರ. ಮುಖ್ಯಾಧ್ಯಾಪಕರು, ವಿವಿಧ ಅಧಿಕಾರಿಗಳು, ಕಚೇರಿಗಳು, ಅಂಗಡಿಗಳು ಮುಂತಾದ ದೈನಂದಿನ ವ್ಯವಹಾರಕ್ಕಾಗಿ ಬರೆಯುವ ಪತ್ರಗಳಿಗೆ ಔಪಚಾರಿಕ ಪತ್ರಗಳೆನ್ನುವರು.

## ಔಪಚಾರಿಕ ಪತ್ರದ ಮಾದರಿ

ಇಂದ –ಶಂಕರಾನಂದ ಬಿರಾದಾರ
ಸ. ನಂ. 80, ಮನೆ ನಂ. 18,
ಡಾ. ಅಂಬೇಡಕರ ನಗರ,
ನವಲಗುಂದ – 587125
ದಿನಾಂಕ 1-1-2017

ಇವರಿಗೆ,
ಮುಖ್ಯಾಧ್ಯಾಪಕರು,
ಜೀವನಜ್ಯೋತಿ ಪ್ರೌಢಶಾಲೆ,
ಹುಬ್ಬಳ್ಳಿ.

**ವಿಷಯ :** ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಕುರಿತು ಪ್ರಮಾಣ ಪತ್ರ ನೀಡುವ ಕುರಿತು...

ಮಾನ್ಯರೆ,

ನಾನು, ತಮ್ಮ ಶಾಲೆಯ ಹಳೆಯ ವಿದ್ಯಾರ್ಥಿಯಾಗಿದ್ದು, ನಾನು 10ನೇ ತರಗತಿಯ ಪರೀಕ್ಷೆಯನ್ನು 2010-2011ರಲ್ಲಿ ಪೂರ್ಣಗೊಳಿಸಿದ್ದೇನೆ, ನಾನೀಗ ಬಿ. ಕಾಂ. ಪದವಿಯನ್ನು ಪೂರ್ಣಗೊಳಿಸಿ. ಕರ್ನಾಟಕ ಸರಕಾರ ಕರೆದಿರುವ ವಾಚನಾಲಯ ನಿರೀಕ್ಷಕ ಹುದ್ದೆಗೆ ಅರ್ಜಿ ಹಾಕುತ್ತಿದ್ದೇನೆ. ನಾನು ತಮ್ಮ ಶಾಲೆಯಲ್ಲಿ 8ನೇ ಇಯತ್ತೆಯಿಂದ 10ನೇ ಇಯತ್ತೆಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಪೂರ್ಣಗೊಳಿಸಿರುತ್ತೇನೆ. ದಯಮಾಡಿ ಈ ವಿನಂತಿ ಅರ್ಜಿಯೊಂದಿಗೆ ಲಗತ್ತಿಸಿರುವ ವ್ಯಾಸಂಗ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿವರಗಳನ್ನು ತುಂಬಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಧನ್ಯವಾದಗಳು,

ತಮ್ಮ ವಿಧೇಯ ವಿದ್ಯಾರ್ಥಿ,
(ಶಂಕರಾನಂದ ಬಿರಾದಾರ)

---

ಇವರಿಗೆ,
ಮುಖ್ಯಾಧ್ಯಾಪಕರು
ಜೀವನಜ್ಯೋತಿ ಪ್ರೌಢಶಾಲೆ
ಉಣಕಲ್ ಕೆರೆರಸ್ತೆ
ಹುಬ್ಬಳ್ಳಿ-580025

ಇವರಿಂದ
ಶಂಕರಾನಂದ ಬಿರಾದಾರ
ಡಾ. ಅಂಬೇಡಕರ ನಗರ
ನವಲಗುಂದ – 587125

CC780D

# ಅನೌಪಚಾರಿಕ ಪತ್ರದ ಮಾದರಿ

ಇಂದ, ಮಾನಸಿ
ಸ. ನಂ. 92, ಕಲ್ಪವೃಕ್ಷ,
ಹಾಸ್ಟೆಲ್, ಕಾಳಮ್ಮನ ಬೀದಿ,
ಬೆಂಗಳೂರು – 580001.
2–2–2017

ತೀರ್ಥರೂಪ ತಂದೆಯವರಿಗೆ,

ಮಾನಸಿ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯದಿಂದ ಇದ್ದೇನೆ. ನಿಮ್ಮ ಮತ್ತು ತಾಯಿಯವರ ಕ್ಷೇಮದ ಬಗ್ಗೆ ಪತ್ರ ಬರೆಯಿರಿ. ನೀವು ಸೌಖ್ಯವಾಗಿದ್ದೀರೆಂದು ಭಾವಿಸುತ್ತೇನೆ.

ಮುಂದಿನ ತಿಂಗಳು ಮೊದಲ ವಾರದಲ್ಲಿ ಪರೀಕ್ಷೆಗಳು ಪ್ರಾರಂಭವಾಗುತ್ತವೆ. ಎಲ್ಲ ವಿಷಯಗಳ ಉಜಳಣಿ (ರಿವಿಜನ್) ಭರದಿಂದ ಸಾಗಿದೆ. ಅದಕ್ಕೆ ತಕ್ಕಂತೆ ನಾನೂ ದಿನನಿತ್ಯ ಯೋಗ್ಯ ತಯಾರಿ ಮಾಡುತ್ತಿದ್ದೇನೆ. ಲಕ್ಷ್ಯಪೂರ್ವಕವಾಗಿ ಓದುವುದು, ಮನನ ಮಾಡುವುದು, ನೋಡದೆ ಬರೆಯುವ ರೂಢಿಯೂ ನಿಯಮಿತವಾಗಿ ಸಾಗಿದೆ. ಹಾಸ್ಟೆಲಿನಲ್ಲಿ ವೇಳಾಪತ್ರಿಕೆ ತಯಾರಿಸಿಕೊಂಡು ಉತ್ತಮ ರೀತಿಯಲ್ಲಿ ಅಭ್ಯಾಸ ಮಾಡುತ್ತಿದ್ದೇನೆ.

ಮುಖ್ಯವಾಗಿ ಶಾಲೆಯ ಎರಡನೆಯ ಟರ್ಮಿನ ಶುಲ್ಕ ಮತ್ತು ಹಾಸ್ಟೆಲಿನ ಎರಡು ತಿಂಗಳಿನ ಊಟದ ಬಿಲ್ ಕಟ್ಟುವ ಸಲುವಾಗಿ ಐದು ಸಾವಿರ ರೂಪಾಯಿಗಳನ್ನು ನನ್ನ ಬ್ಯಾಂಕ್ ಖಾತೆಗೆ ತುಂಬಿರಿ. ನಾನು ATM ಮುಖಾಂತರ ತೆಗೆದುಕೊಳ್ಳುತ್ತೇನೆ. ಮನೆಯಲ್ಲಿ ತಂಗಿ ಹೇಗಿದ್ದಾಳೆ. ಅವಳ ವಿದ್ಯಾಭ್ಯಾಸದ ಕಡೆಗೆ ಲಕ್ಷ್ಯವಹಿಸಿರಿ.

ಧನ್ಯವಾದಗಳು,

ತಮ್ಮ ಪ್ರೀತಿಯ ಪುತ್ರಿ,

ಮಾ. ಕ. ತ.

ಇವರಿಂದ,
ಮಾನಸಿ. ಕ ತಳವಾರ,
ಕಲ್ಪವೃಕ್ಷ ಹಾಸ್ಟೆಲ್,
ಬೆಂಗಳೂರು – 580001.

ಇವರಿಗೆ
ಶ್ರೀ ಕರಬಸಪ್ಪ ಗಂ. ತಳವಾರ,
ಮಾರಮ್ಮನ ಗುಡಿಯ ಹಿಂಬದಿ,
ಮುಖ್ಯರಸ್ತೆ, ಮ.ನಂ. 55,
ರಾಣೆಬೆನ್ನೂರು – 580041,
ಜಿಲ್ಲೆ : ಹಾವೇರಿ.

# ಆಮಂತ್ರಣ ಪತ್ರಿಕೆ

ಆಮಂತ್ರಣ ಪತ್ರಿಕೆಗಳಲ್ಲಿ ಹಲವು ವಿಧ. ಅವನ್ನು ಮುಖ್ಯವಾಗಿ ಮೂರು ಭಾಗಗಳಲ್ಲಿ ವಿಂಗಡಿಸಬಹುದು. ಅವು ವೈಯಕ್ತಿಕ, ಸಾಮಾಜಿಕ ಮತ್ತು ವ್ಯಾವಹಾರಿಕ ವೈಯಕ್ತಿಕ ಆಮಂತ್ರಣ ಪತ್ರಿಕೆಗಳು ಆಯಾವ್ಯಕ್ತಿಗಳ ಸಂಬಂಧ. ಅವರು ನಡೆಸುವ ಕೌಟುಂಬಿಕ ಸಮಾರಂಭ ಇತ್ಯಾದಿಗಳು. ಉದಾ : ವಿವಾಹ ಸಮಾರಂಭ, ಗೃಹಪ್ರವೇಶ, ಉಪನಯನ ಇತ್ಯಾದಿ. ವ್ಯಾವಹಾರಿಕ ಆಮಂತ್ರಣ ಪತ್ರಿಕೆಗಳು ಅವನ್ನು ನಡೆಸುವವರನ್ನು ಅವಲಂಬಿಸಿ ಆಯಾ ಸನ್ನಿವೇಶಗಳಿಗೆ ಅನ್ವಯಿಸುತ್ತವೆ. ಉದಾಹರಣೆಗೆ ಒಂದು ಮಾದರಿ ಕೊಡಲಾಗಿದೆ.

# ಆಮಂತ್ರಣ ಪತ್ರಿಕೆಯ ಮಾದರಿ

## ಆಮಂತ್ರಣ ಪತ್ರಿಕೆ

ಸ್ವಾಮಿ ವಿವೇಕಾನಂದ ಪ್ರೌಢ ಶಾಲೆ, ಬೆಂಗಳೂರು.

**''ವಾರ್ಷಿಕ ಪಾರಿತೋಷಕ ವಿತರಣಾ ಸಮಾರಂಭ''**

**ಗೌರವ ಅತಿಥಿಗಳು :-** ಶ್ರೀ ವ್ಹಿ. ಆರ್. ಜೈನ್(ಹಾಸ್ಯಕಲಾವಿದರು)

**ಮುಖ್ಯ ಅತಿಥಿಗಳು : -** ಶ್ರೀ ಮುಕುಂದರಾಜ (ಪತ್ರಕರ್ತರು)

**ಅದ್ಯಕ್ಷರು :-** ಸೌ. ಸುಮತಿ ನಾಯಕ (ಖ್ಯಾತ ಸಾಹಿತಿಗಳು)

ಈ ಸನ್ಮಾನ್ಯರಪ್ರಮುಖಉಪಸ್ಥಿತಿಯಲ್ಲಿನಮ್ಮಶಾಲೆಯ ಸಮಾರಂಭ ದಿನಾಂಕ 1-2-2017ರಂದು ಬೆಳಿಗ್ಗೆ 10 ಗಂಟೆಗೆ ಶಾಲೆಯ ಸಭಾಗೃಹದಲ್ಲಿ ನಡೆಯಲಿದೆ. ಎಲ್ಲರಿಗೂ ಆದರದ ಸ್ವಾಗತ

ಅರುಣಕುಮಾರ
ವಿದ್ಯಾರ್ಥಿ ಪ್ರತಿನಿಧಿ,
ಕೆ.ಸ್ಮಿತಾ
ವಿದ್ಯಾರ್ಥಿನಿ ಪ್ರತಿನಿಧಿ

ಮುಖ್ಯಾಧ್ಯಾಪಕರು ಮತ್ತು ಶಿಕ್ಷಕವೃಂದ
ಶ್ರೀ ಸ್ವಾಮಿವಿವೇಕಾನಂದ ಪ್ರೌಢಶಾಲೆ ಬೆಂಗಳೂರು

CCG4S1

CCPZTN

# ಪತ್ರಿಕಾ ವರದಿಯ ಮಾದರಿ

ಪತ್ರಿಕೆಗಳಲ್ಲಿ ನೀವು ಅನೇಕ ವರದಿಗಳನ್ನು ಓದಿದ್ದೀರಿ. ಇಂದು ಸಮಾಜದಲ್ಲಿ ವರದಿಗಳಿಗೆ ಮಹತ್ವದ ಸ್ಥಾನವಿದೆ. ನಮ್ಮ ಶಾಲೆಯಲ್ಲಿ ನಡೆದ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ನೀಡಿ ಬರೆಯುವ ವಿವರಣೆಗೆ ಪತ್ರಿಕಾ ವರದಿ ಎಂದು ಕರೆಯಬಹುದು. ವರದಿಯಲ್ಲಿ ಆಡಳಿತಾತ್ಮಕ ವರದಿ, ವರ್ಣನಾತ್ಮಕ ವರದಿ, ಕಥನಾತ್ಮಕ ವರದಿ, ಕಾಲ್ಪನಿಕ ವರದಿ, ವೈಚಾರಿಕ ವರದಿ, ಶೋಧನಾತ್ಮಕ ವರದಿ ಇತ್ಯಾದಿ ಪ್ರಕಾರಗಳಿವೆ.

ಉದಾ : ಶಾಲೆಯ ವಾರ್ಷಿಕ ಪಾರಿತೋಷಕ ವಿತರಣಾ ಸಮಾರಂಭದ ವರದಿ.

ಸುರಪುರ ದಿನಾಂಕ 01-01-2017 ರಂದು ಸ್ಥಳೀಯ ಶಾರದಾ ಪ್ರೌಢ ಶಾಲೆಯಲ್ಲಿ ವಾರ್ಷಿಕ ಪಾರಿತೋಷಕ ವಿತರಣಾ ಸಮಾರಂಭವನ್ನು ಅತೀ ವಿಜೃಂಭಣೆಯಿಂದ ಆಚರಿಸಲಾಯಿತು. ಗೌರವ ಸಮಾರಂಭಕ್ಕೆ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಕಾದಂಬರಿಕಾರರಾದ ಶ್ರೀ ಮೋಹನ ಕರ್ವೆ ವಿದ್ಯಾರ್ಥಿಗಳಿಗೆ ತಾವು ಹೇಗೆ ಗುರಿಮಟ್ಟಬೇಕೆಂಬುದನ್ನು ಮನಮುಟ್ಟುವಂತೆ ತಿಳಿಸಿದರು.

ಅಂದಿನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಕವಿಗಳಾದ ಸೌ. ಅರುಣಾ ಮಾಳವಾಡ ಅವರು ಶ್ರೇಷ್ಠ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ನೀಡಿ ಪ್ರೋತ್ಸಾಹಿಸಿದರು.

ಪ್ರಸ್ತುತ ಸಮಾರಂಭದ ಅಧ್ಯಕ್ಷಸ್ಥಾನವನ್ನು ಖ್ಯಾತ ವಕೀಲರಾದ ಶ್ರೀ ಪ್ರವೀಣ ಪಾರೆಕರ ವಹಿಸಿದ್ದರು. ಅವರು ವಿದ್ಯಾರ್ಥಿಯ ಜೀವನದ ಕುರಿತು ಮಾರ್ಗದರ್ಶನ ಮಾಡಿದರು. ಈ ಕಾರ್ಯಕ್ರಮಕ್ಕೆ ಊರಿನ ಗಣ್ಯರು ವಿದ್ಯಾರ್ಥಿವೃಂದ, ಶಿಕ್ಷಕ-ಶಿಕ್ಷಕೇತರ ಬಂಧುಗಳು, ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಭಾಷಣ ಕೌಶಲ

ಭಾಷಣ ಎಂದರೆ ಪ್ರಭಾವಶಾಲಿಯಾಗಿ ಮಾತನಾಡುವುದು. ನಾಲ್ಕಾರು ಜನರಿಂದ ಹಿಡಿದು ನೂರಾರು ಸಾವಿರಾರು ಜನರ ಮುಂದೆ ಮಾತನಾಡುವುದು ಭಾಷಣ ಎನಿಸುತ್ತದೆ. ಅದರಿಂದ ಸಾವಿರಾರು ಜನರ ಮನಸ್ಸನ್ನು ಒಂದೇ ಸಲಕ್ಕೆ ಗೆದ್ದುಕೊಳ್ಳಬಹುದು. ಅದಕ್ಕಾಗಿ ಭಾಷಣ ಕಲೆ ಬೇಕು.

**ಭಾಷಣದಲ್ಲಿ ಎರಡು ಪ್ರಕಾರಗಳು :**

1) ಆಶು ಭಾಷಣ

2) ಸಿದ್ಧ ಭಾಷಣ

**1) ಆಶು ಭಾಷಣ -** ಎಂದರೆ, ಯಾವುದೇ ಸಿದ್ಧತೆ ಇಲ್ಲದೆ ತಕ್ಷಣದಲ್ಲಿ ಒಂದು ವಿಷಯವನ್ನು ಕುರಿತು ಮಾತನಾಡುವುದು.

**2) ಸಿದ್ಧ ಭಾಷಣ -** ಎಂದರೆ, ಸಿದ್ಧಪಡಿಸಿಕೊಂಡ ಭಾಷಣ ಈ ಭಾಷಣಕ್ಕೆ ಪೂರ್ವಸಿದ್ಧತೆ ಬೇಕು. ಹಲವಾರು ಗ್ರಂಥಗಳನ್ನು ಓದಿ, ಟಿಪ್ಪಣಿ ಮಾಡಿಕೊಂಡು, ಬುದ್ಧಿವಂತಿಕೆಯಿಂದ - ಮಾತನಾಡುವುದಕ್ಕೆ ಸಿದ್ಧ ಭಾಷಣ ಎನ್ನುತ್ತೇವೆ.

CCYVVB

## ಶಾಲೆಯಲ್ಲಿ 'ವಾಚನ ಪ್ರೇರಣೆ ದಿನ' ಆಚರಣೆ ಕುರಿತು

ಇಂದಿನ ಕಾರ್ಯಕ್ರಮದ ಅಧ್ಯಕ್ಷರೆ, ಮುಖ್ಯ ಅತಿಥಿಗಳೇ, ನಮ್ಮ ಶಾಲೆಯ ಮುಖ್ಯಾಧ್ಯಾಪಕರೆ, ಶಿಕ್ಷಕವೃಂದ ಹಾಗೂ ನನ್ನ ಅಕ್ಕ ತಂಗಿಯರೆ ಮತ್ತು ಅಣ್ಣ ತಮ್ಮಂದಿರೆ,

ಇಂದು ಅಕ್ಟೋಬರ 15 ವಾಚನ ಪ್ರೇರಣೆ ದಿನಾಚರಣೆಯನ್ನು ನಾವು ಆಚರಿಸುತ್ತಿದ್ದೇವೆ. ಇಂದು ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಮರ ಜನ್ಮದಿನ. ಅವರು ಭಾರತದ ಪ್ರಖ್ಯಾತವೈಜ್ಞಾನಿಕರು. ಭಾರತದ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದರು.

ಡಾ. ಅಬ್ದುಲ್ ಕಲಾಮರ ವ್ಯಕ್ತಿತ್ವ ಅಸಾಮಾನ್ಯವಾದದ್ದು. ದೇಶದಲ್ಲಿಯ ಪ್ರತಿಯೊಬ್ಬ ವ್ಯಕ್ತಿ ಸಕಾರಾತ್ಮಕ ವಿಚಾರ ಮಾಡಿ, ಸ್ವಂತ ಸಮೃದ್ಧಗೊಳ್ಳಬೇಕು ಮತ್ತು ದೇಶ ಬಲಶಾಲಿಯಾಗಬೇಕೆಂದು ಅವರು ಯಾವಾಗಲೂ ಯೋಚಿಸುತ್ತಿದ್ದರು. ಶಿಕ್ಷಣದ ಮಾಧ್ಯಮದಿಂದ ಮಕ್ಕಳಲ್ಲಿ ಸಕಾರಾತ್ಮಕ ವಿಚಾರ ಮೂಡಬೇಕು ಎಂದು ಅವರಿಗೆ ಅನಿಸುತ್ತಿತ್ತು. ಶಿಕ್ಷಕರಿಗಾಗಿ ಮತ್ತು ಮಕ್ಕಳಿಗಾಗಿ ಅವರು ಅನೇಕ ಪುಸ್ತಕಗಳನ್ನು ಬರೆದರು. ಡಾ. ಎ.ಪಿ.ಜೆ. ಅಬ್ದುಲ್ ಕಲಾಮರು ಪ್ರಗತ ಭಾರತದ ಕನಸನ್ನು ಕಂಡರು. ಭಾರತೀಯರ ಮುಂದೆ ಪ್ರಗತ ಭಾರತದ ಸ್ವರೂಪ ಹೇಗಿರುವುದು ಎಂಬುದನ್ನು ಹೇಳಿಕೊಟ್ಟರು. ಅವರ ಕನಸು ನನಸಾಗಬೇಕಾದರೆ ಶಿಕ್ಷಣ ಪಡೆದವರೆಲ್ಲರೂ ಸುಸಂಸ್ಕೃತರಾಗುವುದು ಅವಶ್ಯಕವಾಗಿದೆ. ಮಕ್ಕಳಲ್ಲಿ ವಾಚನ ಪ್ರಕ್ರಿಯೆಯಬಗ್ಗೆ ಅಭಿರುಚಿ ಬೆಳೆಸಬೇಕಾಗಿದೆ. ಅವರನ್ನು ಓದಲು ಪ್ರವೃತ್ತರನ್ನಾಗಿ ಮಾಡಬೇಕಾಗಿದೆ. ಅದಕ್ಕಾಗಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಮರ ಜನ್ಮದಿನ 'ವಾಚನ ಪ್ರೇರಣೆ ದಿನ' ಆಚರಿಸುವರು. ಶಾಲೆ-ಶಾಲೆಗಳಲ್ಲಿ ವಾಚನದ ಮಹತ್ವವನ್ನು ತಿಳಿಸುವುದಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವರು.

ಡಾ. ಕಲಾಮರಿಗೆ ಬಾಲ್ಯದಿಂದಲೇ ವಾಚನದ ಅಭಿರುಚಿಯಿತ್ತು. ಅವರು ಅನೇಕ ಲೇಖಕರ ಬಹಳಷ್ಟು ಪುಸ್ತಕಗಳನ್ನು ಓದಿದರು. ಇಂಥ ಪುಸ್ತಕಗಳ ವಾಚನವೆ ಅವರನ್ನು ಒಂದು ದಿನ ದೇಶದ ಘಟನಾತ್ಮಕ ಹುದ್ದೆಯವರೆಗೆ ತಲುಪಿಸಿತು, ಅವರು ರಾಷ್ಟ್ರಪತಿಯಾದರು. ಪ್ರತಿಯೊಬ್ಬ ಭಾರತೀಯರ ಹೃದಯದಲ್ಲಿ ಅವರ ಬಗ್ಗೆ ಅಪಾರ ಪ್ರೀತಿ, ಆದರ ಭಾವನೆ ಉಂಟುಮಾಡಿತು.

ನಾವೆಲ್ಲರು, ಡಾ. ಕಲಾಮರಿಂದ ಪ್ರೇರಣೆಯನ್ನು ಪಡೆದು ಜೀವನದಲ್ಲಿ ಮುಂದೆ ಸಾಗಬೇಕು. ಅವರು ಕಂಡ ಪ್ರಗತ ಭಾರತದ ಕನಸು ನನಸಾಗಿ ಮಾಡಬೇಕು ಎಂದು ಹೇಳಿ ನನ್ನ ಭಾಷಣಕ್ಕೆ ವಿರಾಮ ಕೊಡುತ್ತೇನೆ. ಎಲ್ಲರಿಗೂ ನಮಸ್ಕಾರ.

ನಿದ್ದೆಯಲ್ಲಿ ಕಾಣುವಂತದ್ದು ಕನಸಲ್ಲ,
ನಿದ್ದೆಗೆಡುವಂತೆ ಮಾಡುವುದಿದೆಯಲ್ಲ
ಅದೇ ನಿಜವಾದ ಕನಸು

– ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್

# ನಿಬಂಧ ಬರಹ

ಓದುವುದು ಒಂದು ಕಲೆಯಾಗಿರುವಂತೆ, ಬರೆಯುವುದೂ ಒಂದು ಕಲೆಯಾಗಿದೆ. ಬರವಣಿಗೆಯಿಂದ ವಿದ್ಯಾರ್ಥಿಯ ಅರ್ಹತೆಯನ್ನು ಅಳೆಯಲಾಗುತ್ತದೆ. ಅದಕ್ಕಾಗಿ ವಿದ್ಯಾರ್ಥಿಗಳು ಹಲವಾರು ಪುಸ್ತಕಗಳನ್ನು ಓದಬೇಕು.

**ನಿಂಬಧದಲ್ಲಿ ನಾಲ್ಕು ಪ್ರಕಾರಗಳಿವೆ.**

1) ನಿರೂಪಣಾತ್ಮಕ

2) ವರ್ಣನಾತ್ಮಕ

3) ಕಥನಾತ್ಮಕ

4) ವೈಚಾರಿಕ

ಇಲ್ಲಿ ಉದಾಹರಣೆಗಾಗಿ ಒಂದು ನಿಬಂಧವನ್ನು ಮಾದರಿಯಾಗಿ ಕೊಡಲಾಗಿದೆ.

**ಮುತ್ತಿಗಿಂತ ಹೊತ್ತು ಉತ್ತಮ**

ಮುತ್ತು ಅತ್ಯಂತ ಬೆಲೆಯುಳ್ಳದ್ದು, ಆದರೆ ಮುತ್ತು ಕಳೆದರೆ ಮತ್ತೊಂದು ಮುತ್ತನ್ನ ತರಬಹುದು. ಆದರೆ ಹೋದ ವೇಳೆಯನ್ನು ತಿರುಗಿ ತರಲಾದೀತೇ ? ನಮ್ಮ ಆಯುಷ್ಯವು ಒಂದೇ ಸವನೆ ಸವೆಯುತ್ತಿರುವದು. ಅದು ಯಾರ ಯಾರ ಸಲುವಾಗಿಯೂ ನಿಲ್ಲುವದಿಲ್ಲ. ಬಾಲ್ಯದಕಾಲವು ಆಟ ಪಾಠಗಳಲ್ಲಿ ಕಳೆದು ಹೋಗುವುದು. ನಿದ್ದೆ, ಊಟ ವಿವಿಧ ಪ್ರಕಾರದ ಮನೋರಂಜನೆಯಲ್ಲಿ ಕಾಲವನ್ನು ಕಳೆಯುವವರೇ ಬಹಳ ಜನರು. ನಮ್ಮ ಸಭೆ-ಸಮಾರಂಭಗಳು ಸರಿಯಾದ ವೇಳೆಗೆ ಪ್ರಾರಂಭವಾಗುವದಿಲ್ಲ. ನಾವು ವೇಳೆಯ ಮಹತ್ವವನ್ನೇ ಅರಿಯೆವು. ಹಳ್ಳಿಗಳಲ್ಲಿ ಜನರು ಕಟ್ಟೆಯ ಮೇಲೆ ಕುಳಿತುಕೊಂಡು ಹರಟೆ ಹೊಡೆಯುತ್ತ ಕಾಲವನ್ನು ಕಳೆಯುವರು. ಆದರೆ ಪರದೇಶಗಳಲ್ಲಿ ವೇಳೆಗೆ ಬಹಳ ಮಹತ್ವವಿರುವದು. ಅವರು ಎಲ್ಲ ಕಾರ್ಯಗಳನ್ನು ಸರಿಯಾದ ಸಮಯದಲ್ಲಿ ಮಾಡುವರು.

ನಾವು ವೇಳೆಯ ಮಹತ್ವವನ್ನು ಅರಿತುಕೊಂಡು ಎಲ್ಲ ಕೆಲಸಗಳಿಗೆ ಇಂತಿಷ್ಟು ಸಮಯವೆಂದು ನಿರ್ಧರಿಸಿ ಆ ನಿಟ್ಟಿನಲ್ಲಿ ಸಾಗಬೇಕು. ಸ್ವಾತಂತ್ರ್ಯ ದೊರೆತು ಇಷ್ಟು ದಿನಗಳಾದರೂ ನಾವು ವೇಳೆಯ ಮಹತ್ವವನ್ನು ಅರಿಯಲಿಲ್ಲ. ಆದ್ದರಿಂದ ನಾವು ವೇಳೆಯ ಮಹತ್ವ ತಿಳಿದುಕೊಂಡು ನಮ್ಮ ಜೀವನ ಸಾರ್ಥಕಪಡಿಸಿಕೊಳ್ಳಬೇಕು.

ವಿದ್ಯಾರ್ಥಿಗಳಾದ ನಾವು ಸಮಯ ಪರಿಪಾಲನೆ ಮಾಡಿದಾಗ ಶಿಸ್ತಿನ ಸಿಪಾಯಿಗಳಾಗಬಹುದು. ಪ್ರತಿದಿನ ಬೆಳೆಗ್ಗೆ ಎದ್ದಾಗಿನಿಂದ ಮಲಗುವವರೆಗೆ ವೇಳೆಯನ್ನು ಸದುಪಯೋಗಪಡಿಸಿಕೊಂಡರೆ ಬದುಕು ಬಂಗಾರವಾಗುವುದು. ಸ್ವಾಸ್ಥ್ಯ, ವಿದ್ಯಾಭ್ಯಾಸ, ಆಹಾರ ಸೇವನೆ, ಮನೆಗೆಲಸ, ವ್ಯಾಯಾಮ ಮುಂತಾದ ಮಹತ್ವದ ಸಂಗತಿಗಳಿಗೆ ಯೋಗ್ಯ ರೀತಿಯಲ್ಲಿ ಸಮಯದ ವಿಂಗಡಣೆ ಮಾಡಬೇಕು. 'ಮಹಾತ್ಮಾ ಗಾಂಧೀಜಿಯವರು' ಬೆಳಿಗ್ಗೆ ಬೇಗನೆ ಎದ್ದು ಪ್ರಾತಃರ್ವಿಧಿಗಳನ್ನು ಮುಗಿಸಿ, ಯೋಗ ಪ್ರಾಣಾಯಾಮ ಮಾಡುವ ಉತ್ತಮ ಹವ್ಯಾಸ ಹೊಂದಿದ್ದರು.

ಮುತ್ತು ಬೆಲೆಬಾಳುವ ವಸ್ತು ನಿಜ, ಅದು ಕಳೆದು ಹೋದರೆ ಶ್ರಮವಹಿಸಿ ದುಡಿದು ಗಳಿಸಬಹುದು. ಆದರೆ ಸಮಯ ವ್ಯರ್ಥಮಾಡದೇ ಬದುಕಿನ ಪ್ರತಿಯೊಂದು ಹಂತದಲ್ಲಿ ಸಮಯದ ನಿರ್ವಹಣೆ (Manage) ಮಾಡಿದರೆ ಯಶಸ್ಸು ಖಂಡಿತಾ ದೊರೆಯುವದು. ಆದರೆ ವೇಳೆಯನ್ನು (ಹೊತ್ತು) ಅಪವ್ಯಯ ಮಾಡಿದರೆ ಸೋಲು, ದುಃಖ, ನಿರಾಸೆ ಕಟ್ಟಿಟ್ಟ ಬುತ್ತಿ. ಆದ್ದರಿಂದ 'ಸಮಯವೆಂದರೆ ಹಣ' (Time is money) ಎಂಬ ಆಂಗ್ಲ ಗಾದೆಮಾತನ್ನು ಚಾಚೂ ತಪ್ಪದೇ ನಮ್ಮ ಜೀವನವನ್ನು ಉತ್ತಮವಾಗಿಸಿಕೊಳ್ಳೋಣ.

## ಕಥಾ ಲೇಖನ

ಕೆಳಗಿನ ಅಂಶಗಳನ್ನು ಓದಿಕೊಂಡು ಅವುಗಳ ಆಧಾರದಿಂದ ಒಂದು ಕಥೆಯನ್ನು ಬರೆದು ಯೋಗ್ಯವಾದ ಶೀರ್ಷಿಕೆ ಬರೆಯಿರಿ.

ಕುರಿಗಳನ್ನು ಕಾಯಲು ಹುಡುಗನನ್ನು ಇಟ್ಟದ್ದು – ತೋಳವು ಬಂದರೆ ಕೂಗಲು ಹೇಳಿದ್ದು – ಕೆಲವುದಿನ ಕುರಿಕಾದ ಮೇಲೆ ಹುಡುಗನಿಗೆ ಬೇಜಾರು ಬಂದದ್ದು – ತಮಾಷೆಗಾಗಿ 'ತೋಳ ಬಂತು,' ತೋಳ ಬಂತು' – ಎಂದು ಅರಚುವುದು – ಊರಿನ ಜನ ಓಡಿ ಬರುವುದು – ಅವರನ್ನು ಕಂಡು ಆ ಹುಡುಗನು ನಗತೊಡಗುವುದು – ಹಳ್ಳಿಯವರ ಕೋಪ – ಮತ್ತೆ ಹಾಗೆ ಮಾಡಕೂಡದೆಂದು ಎಚ್ಚರಿಕೆ – ಇನ್ನಷ್ಟು ದಿನ ಕಳೆದ ಮೇಲೆ ಹುಡುಗ ಅದೇ ರೀತಿ ಅರಚುವುದು – ಹಳ್ಳಿಯ ಜನರಲ್ಲಿ ಕೆಲವರು ಉಪೇಕ್ಷಿಸಿದರೂ ಮತ್ತೆ ಕೆಲವರು ಓಡಿ ಬರುವುದು – ಈಗಲೂ ತೋಳ ಬಂದಿಲ್ಲ – ಜನರು ಸಿಟ್ಟಿನಿಂದ ಹುಡುಗನನ್ನು ಹೊಡೆದು, ಬೇಸರದಿಂದ ಹಿಂತಿರುಗಿದ್ದು – ಕಡೆಗೊಂದು ದಿನ ನಿಜವಾಗಿ ತೋಳ ಬರುವುದು – ಹುಡುಗ ಅರಚುವುದು – ಹಳ್ಳಿಯ ಜನರ್‍ಯಾರೂ ಬರುವುದಿಲ್ಲ – ತೋಳವು ಕೆಲವು ಕುರಿಗಳನ್ನು ಎತ್ತಿಕೊಂಡು ಹೋಗುವುದು...

CDHHYL

## ಗಾದೆ ಮಾತಿನ ವಿಸ್ತರಣೆ

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?

ನಗರದ ಉದ್ಯಾನವನಗಳಲ್ಲಿ ಗಿಡಗಳನ್ನು ಪಕ್ಷಿ ಪ್ರಾಣಿಗಳ ಅಥವಾ ವಿವಿಧ ವಸ್ತುಗಳ ಆಕಾರದಲ್ಲಿ ಬೆಳೆಸಿರುವುದನ್ನು ನೋಡಿರಬಹುದು. ಇದು ಸಾಧ್ಯವಾಗಿರುವುದು ಅವು ಇನ್ನೂ ಎಳೆಯವಾಗಿರುವಾಗಲೆ ಅವುಗಳನ್ನು ಬೇಕಾದ ಆಕಾರಕ್ಕೆ ಬಗ್ಗಿಸಿ ಬೆಳೆಸಿದ್ದರಿಂದ ಗಿಡಗಳು ಬಲಿತ ಮೇಲೆ ಹೀಗೆ ಬಗ್ಗಿಸುವುದು ಸಾಧ್ಯವಿಲ್ಲ. ಹೆಚ್ಚು ಬಲ ಪ್ರಯೋಗದಿಂದ ಬಗ್ಗಿಸಲು ಪ್ರಯತ್ನಿಸಿದರೆ ಕೊಂಬೆಗಳು ಮುರಿದೇ ಹೋಗುತ್ತವೆ. ಈ ಸಂಗತಿಯನ್ನು ಮನುಷ್ಯ ಪ್ರಪಂಚಕ್ಕೂ ಅನ್ವಯಿಸಿ ನೋಡಿದ್ದರಿಂದ ಮೇಲಿನ ಗಾದೆ ಹುಟ್ಟಿಕೊಂಡಿದೆ.

ಮಕ್ಕಳ ಮನಸ್ಸು ಎಳೆಯ ಗಿಡದಂತೆ ಮೃದುವಾಗಿರುತ್ತದೆ. ಆಗ ಉಚಿತ ಬೋಧನೆ, ಅಗತ್ಯ ಬಿದ್ದರೆ ಸ್ವಲ್ಪ ದಂಡನೆ, ಉತ್ತಮ ಆದರ್ಶಗಳ ಮೂಲಕ ಒಳ್ಳೆಯ ಗುಣಗಳು ಮೈಗೂಡುವಂತೆ ಮಾಡುವುದು ಸಾಧ್ಯ. ಅನುಕೂಲ ವಾತಾವರಣ, ಆದರ್ಶ ಶಿಕ್ಷಣ ದೊರೆತ ಮಕ್ಕಳು ಉತ್ತಮವೂ ದೃಢವೂ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ. ದೇಶದ ಗೌರವಸ್ಥ ಪ್ರಜೆಗಳೂ, ಸಮಾಜದ ಸಭ್ಯ ಸದಸ್ಯರೂ ಆಗಿದ್ದು ಜೀವನವನ್ನು ಸಾರ್ಥಕಪಡಿಸಿಕೊಳ್ಳುತ್ತಾರೆ.

ಅಡ್ಡಾದಿಡ್ಡಿಯಾಗಿ ಬೆಳೆದ ಗಿಡಮರಗಳಿಂದ ಉದ್ಯಾನವನಕ್ಕೆ ಶೋಭೆಯಿಲ್ಲ. ಸನ್ನಡತೆಯನ್ನು ಕಲಿಯದೆ ಬೆಳೆದ ಮಕ್ಕಳಿಂದ ಸಮಾಜಕ್ಕೆ ಹಿತವಿಲ್ಲ. ಆದ್ದರಿಂದ ಇನ್ನಾದರೂ ಎಳೆಯರಿಗೆ ದೊರೆಯಬೇಕಾದ 'ಮೌಲ್ಯಾಧಾರಿತ ಶಿಕ್ಷಣ'ದ ಕಡೆಗೆ ಗಮನ ಹರಿಸುವುದು ಅತ್ಯಗತ್ಯ.

CDRJ19

## ಅಪರಿಮಿತ ಗದ್ಯಖಂಡ

ಕೆಳಗಿನ ಪರಿಚ್ಛೇದವನ್ನು ಓದಿ ಒಂದು ವಾಕ್ಯದಲ್ಲಿ ಉತ್ತರ ಬರುವಂತೆ ಐದು ಪ್ರಶ್ನೆಗಳನ್ನು ತಯಾರಿಸಿರಿ.

ನಿಧಾನಗತಿಯಲ್ಲಿ ಕಾರ್ಯವನ್ನು ಮಾಡುವದು ಅಥವಾ ಅನಂತರ ಮಾಡಿದರಾಯಿತು, ನಾಳೆ ಮಾಡೋಣ, ಈಗ ಮಾಡಬೇಕಾದಂತಹ ಕೆಲಸವನ್ನು ಮಾಡದೇ ಇರುವದು ಆಲಸ್ಯದ ಲಕ್ಷಣವಾಗಿದೆ. ಆಲಸ್ಯ ಮಾನವರ ಸಹಜ ಸ್ವಭಾವವೆನ್ನಬಹುದು. ಪ್ರಾಣಿಗಳು, ಪಶುಪಕ್ಷಿಗಳು ಬೆಳಗಾದ ಕೂಡಲೇ ತಮ್ಮ ಚಟುವಟಿಕೆಗಳನ್ನು ಆರಂಭಿಸುತ್ತವೆ. ಮುಂಜಾವಿನಲ್ಲಿ ಹಕ್ಕಿಗಳ ಚಿಲಿಪಿಲಿ ಗಾನ ಕೇಳಿದಾಗ ಮಾನವರು ಸಹ ತಮ್ಮ ಕಾರ್ಯ ಆರಂಭಿಸಬೇಕೆಂದು ತಿಳಿಯುವದು. ಆದರೆ ಎಲ್ಲ ಕಾರ್ಯಗಳಿಗೆ ನಿಶ್ಚಿತ ಸಮಯ, ಸ್ಥಳ, ರೀತಿಗಳನ್ನು ಅನುಸರಿಸುವ ಮಾನವ ಆಲಸ್ಯದಿಂದಾಗಿ ಎಲ್ಲ ಕ್ಷೇತ್ರಗಳಲ್ಲಿ ಅಸಫಲನಾಗುತ್ತಾನೆ.

ಸಂಸ್ಕೃತದ ಒಂದು ಸುಭಾಷಿತದಲ್ಲಿ ಈ ರೀತಿ ಹೇಳಿದ್ದಾರೆ. ನಿಧಾನವಾಗಿ ಚಲಿಸುವ ಆಮೆಯು ತನ್ನ ಉದ್ದೇಶನ್ನು ಈಡೇರಿಸಿಕೊಳ್ಳುತ್ತದೆ. ಹೋಗಬೇಕಾದ ಸ್ಥಳ ತಲುಪುತ್ತದೆ. ಆದರೆ ಶೀಘ್ರವಾಗಿ ಹಾರಬಲ್ಲ ಗರುಡ ಪಕ್ಷಿ ಚಲಿಸದೇ ಇದ್ದರೆ ಇದ್ದಲ್ಲಿಯೇ ಇರುವದು. ''ಆಲಸ್ಯಂ ಹಿ ಮನು ಷ್ಯಾಣಾಂ ಶರೀರಸ್ಥೆ ಮಹಾನ್ ರಿಪು:'' ಎಂದು ಆಲಸ್ಯವನ್ನು ಶರೀರದಲ್ಲಿ ಮನೆ ಮಾಡಿರುವ ದೊಡ್ಡ ವೈರಿ ಎಂದಿದ್ದಾರೆ.

CE1F2H

## ಸಂಭಾಷಣ ಕೌಶಲ

ಶಿಕ್ಷಕರಿಗೆ ಸೂಚನೆ : ತರಗತಿಯಲ್ಲಿನ ವಿದ್ಯಾರ್ಥಿಗಳನ್ನು ನಾಲ್ಕಾರು ಗುಂಪುಗಳನ್ನಾಗಿ ವಿಂಗಡಿಸಿ ಅವರಿಗೆ ವಿವಿಧ ವಿಷಯಗಳನ್ನು ಕುರಿತು ಚರ್ಚಿಸಲು ಅವಕಾಶಗಳನ್ನು ಕಲ್ಪಿಸಬೇಕು. ಮಾದರಿಗಾಗಿ ಶಿಕ್ಷಕ ದಿನಾಚರಣೆ ಕುರಿತು ಸಂವಾದವನ್ನು ಕೊಡಲಾಗಿದೆ.

ರಾಮು : ನಾವು ಈ ಸಲ ತರಗತಿಯಲ್ಲಿ ಶಿಕ್ಷಕ ದಿನಾಚರಣೆಯನ್ನು ಏಕೆ ಆಚರಿಸಬಾರದು ?

ರಹೀಮ್ : ಶಿಕ್ಷಕ ದಿನಾಚರಣೆಯನ್ನು ನಾವು ಯಾವಾಗ ಆಚರಿಸಬೇಕು.

ರಮಾ : ಶಿಕ್ಷಕ ದಿನಾಚರಣೆಯನ್ನು ಇದೇ ಸಪ್ಟೆಂಬರ್ 5 ರಂದು ಆಚರಿಸಬೇಕು.

ರಾಮು : ದಿವಂಗತ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಹೆಸರಿನಲ್ಲಿ ಶಿಕ್ಷಕ ದಿನಾಚರಣೆ ಮಾಡುತ್ತಾರೆ.

ಆ್ಯಂಟನಿ : ರಾಷ್ಟ್ರಪತಿಗಳಾಗಿದ್ದ ಅವರ ಹೆಸರಿನಲ್ಲಿ ಏಕೆ ಶಿಕ್ಷ ದಿನಾಚರಣೆಯನ್ನು ಆಚರಿಸಲಾಗುತ್ತದೆ ?

ರಹೀಮ್ : ರಾಧಾಕೃಷ್ಣನ್‌ರು ರಾಷ್ಟ್ರಪತಿಗಳಾಗುವ ಮುನ್ನ ಶಿಕ್ಷಕರಾಗಿದ್ದರು. ಅವರಿಗೆ ಶಿಕ್ಷಕ ವೃತ್ತಿ ಅತ್ಯಂತ ಪ್ರಿಯವಾಗಿತ್ತು. ಏಕೆಂದರೆ ಎಲ್ಲ ಗಣ್ಯರನ್ನು ರೂಪಿಸುವವರು ಶಿಕ್ಷಕರೇ. ಆದ್ದರಿಂದ ಅವರ ಜನ್ಮದಿನಾಚರಣೆಯನ್ನು ಅವರ ಅಪೇಕ್ಷೆಯಂತೆ 'ಶಿಕ್ಷಕದಿನ'ವನ್ನಾಗಿ ಆಚರಿಸಲಾಗುತ್ತದೆ.

ರಮಾ : ವಿದ್ಯಾರ್ಥಿಗಳಾದ ನಾವು ಶಿಕ್ಷಕರ ದಿನಾಚರಣೆಯನ್ನು ಏಕೆ ಆಚರಿಸಬೇಕು ?

ರಾಮು : ಶಿಕ್ಷಕರಿಂದಲೇ ಅಲ್ಲವೇ ನಾವೆಲ್ಲ ವಿದ್ಯೆ ಕಲಿತು ಒಳ್ಳೆಯ ಪ್ರಜೆಗಳಾಗಿ ದೇಶದ ಅಭಿವೃದ್ಧಿ ಸಾಧ್ಯವಾಗುವುದು.

ಎಲ್ಲರೂ : ಹೌದು, ಹೌದು, ನಾವೆಲ್ಲ ನಮ್ಮ ಕೃತಜ್ಞತೆಗಳನ್ನು ಶಿಕ್ಷಕರಿಗೆ ಸಲ್ಲಿಸಲು ಶಿಕ್ಷಕ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸೋಣ.

CEAB4J

## 'ಜಾಹೀರಾತಿನ ಮಾದರಿ'

ಬನ್ನಿ! ಇಂದೇ ಬನ್ನಿ!! ಪ್ರವೇಶ ಪಡೆದುಕೊಳ್ಳಿ!!!

# ಕಲಾವಿಕಾಸವರ್ಗ

## - 'ಬೇಸಿಗೆ ರಜೆಯಲ್ಲಿ' -

ಚಿತ್ರಕಲೆ, ಹಸ್ತಕಲೆ, ಪೇಂಟಿಂಗ, ಪ್ಲಾಸ್ಟಿಕ-ಹೂವು ಮತ್ತು ತೋರಣ ತಯಾರಿಕೆ, ಮೇಣಬತ್ತಿ ತಯಾರಿಕೆ - ಇಂತಹ ಬೇರೆ ಬೇರೆ ಕಲೆಗಳನ್ನು ಕಲಿಯುವ ಸುವರ್ಣಾವಕಾಶ

**ಸ್ಥಳ :** ''ರವಿವರ್ಮ ಕಲಾನಿಕೇತನ'' ಎಂ. ಜಿ. ರಸ್ತೆ

ಬನಶಂಕರಿ ದೇವಾಲಯ ಹತ್ತಿರ, ಬಳಗಾನೂರು.

**ಕಾಲಾವಧಿ :** ದಿನಾಂಕ 11 ಮೇ ದಿಂದ 21 ಮೇ ವರೆಗೆ

**ವೇಳೆ :** ಪ್ರತಿದಿನ ಸಾಯಂಕಾಲ 6ರಿಂದ 8 ಗಂಟೆಯವರೆಗೆ

**ಪ್ರವೇಶ ಫೀ :** ಪ್ರತಿಯೊಂದು ಕಲೆಗೆ 300 ರೂಪಾಯಿ ಮಾತ್ರ.

### ನಮ್ಮ ವೈಶಿಷ್ಟ್ಯಗಳು

★ ತಜ್ಞ ಮಾರ್ಗದರ್ಶಕ ವೃಂದ.

★ ಪ್ರತಿಯೊಂದು ಕಲಾವಿಭಾಗಕ್ಕೂ ಪ್ರತ್ಯೇಕ ಮಾರ್ಗದರ್ಶನ.

★ ಹೆಣ್ಣು ಮಕ್ಕಳಿಗಾಗಿ ಪ್ರವೇಶ ಫೀಯಲ್ಲಿ ಶೇಕಡಾ 10ರಷ್ಟು ರಿಯಾಯಿತಿ.

★ ಒಬ್ಬರು ಎರಡು ಕಲೆಗಳನ್ನು ಆಯ್ಕೆ ಮಾಡಿದರೆ 25% ರಿಯಾಯಿತಿ.

**ಸೂಚನೆ :** ಒಂದು ಕಲಾವಿಭಾಗದಲ್ಲಿ ಕೇವಲ 25 ಜನರಿಗೆ ಮಾತ್ರ ಪ್ರವೇಶ ಲಭ್ಯ.

★ ಇಂದೇ ಬಂದು ನಿಮ್ಮ ಪ್ರವೇಶವನ್ನು ನಿಶ್ಚಿತಗೊಳಿಸಿರಿ★

**ಕಲೆ ಜೀವನದ ನೆಲೆ**

**- ಸಂಪರ್ಕವಿಳಾಸ :** ಭುವನೇಶ್ವರಿ ಬಣ್ಣದ ಸಂಯೋಜಕರು,

ಚ 'ರವಿವರ್ಮಕಲಾನಿಕೇತನ'

ಎಂ. ಜಿ. ರಸ್ತೆ. ಬಳಗಾನೂರು. ದೂರಧ್ವನಿ ಕ್ರ. 9766XXXXXX

ಮೇಲಿನ ಜಾಹೀರಾತನ್ನು ಓದಿ ಕೆಳಗೆ ಕೊಟ್ಟ ಕೃತಿಗಳನ್ನು ಪೂರ್ಣಮಾಡಿರಿ.

i) ಚೌಕಟನ್ನು ಪೂರ್ಣಮಾಡಿರಿ.

1) ವರ್ಗದ ಹೆಸರು ______ 2) ಪ್ರವೇಶ ಫೀ ______

ii) ಕಲಿಸಲಾಗುವ ಯಾವುದೇ ನಾಲ್ಕು ಕಲೆಗಳು

______ ______ ______ ______

iii) ಜಾಹೀರಾತಿನಲ್ಲಿಯ ವಿಶೇಷ ಸೂಚನೆ ಯಾವುದು ?

______

iv) ಕಲಾವಿಕಾಸ ವರ್ಗದ ಕಾಲಾವಧಿ

______

v) ವರ್ಗ ನಡೆಯುವ ಸ್ಥಳ

______

CEJ767

# ವ್ಯಾಕರಣ ವಿಭಾಗ

## I) ವ್ಯಾಕರಣ :

1. ಸಂಧಿಗಳು
2. ಸಮಾಸಗಳು
3. ವಾಕ್ಯ ಸಂಯೋಜನೆ
   ಅ) ಕ್ರಿಯಾಪದ ಮತ್ತು ಕಾಲಗಳು
   ಬ) ವಾಕ್ಯ ಪ್ರಕಾರಗಳು
4. ವಾಕ್ಯದ ಪ್ರಯೋಗಗಳು.
5. ಪಡೆನುಡಿಗಳು

## II) ಅಲಂಕಾರಗಳು :

1. ಉತ್ಪ್ರೇಕ್ಷಾಲಂಕಾರ
2. ದೃಷ್ಟಾಂತಾಲಂಕಾರ
3. ಸ್ವಭಾವೋಕ್ತಿ ಅಲಂಕಾರ

## III) ಛಂದಸ್ಸು ಶಾಸ್ತ್ರ :

1. ಮಾತ್ರಾಗಣ ಛಂದಸ್ಸು
   ಅ) ಭೋಗಷಟ್ಪದಿ
   ಬ) ಭಾಮಿನಿ ಷಟ್ಪದಿ


2. ಅಕ್ಷರಗಣ ಛಂದಸ್ಸು
   ಅ) ಉತ್ಪಲಮಾಲಾ ವೃತ್ತ
   ಬ) ಚಂಪಕ ಮಾಲಾ ವೃತ್ತ
   ಕ) ಶಾರ್ದೂಲ ವಿಕ್ರೀಡಿತ ವೃತ್ತ

# I ವ್ಯಾಕರಣ

## ಸಂಧಿಗಳು :

ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ, ಅರ್ಥಕೆಡದಂತೆ ಪರಸ್ಪರ ಕೂಡಿಕೊಳ್ಳುವುದಕ್ಕೆ ಸಂಧಿ ಎನ್ನುವರು. ಸಂಧಿಗಳನ್ನು ಸಂಧಿ ಮತ್ತು ಸಂಸ್ಕೃತ ಸಂಧಿ ಎಂದು ಎರಡು ಪ್ರಕಾರಗಳಲ್ಲಿ ವಿಂಗಡಿಸುವರು.

**ಕನ್ನಡ ಸಂಧಿಗಳು :**




### ಅ. ಸ್ವರಸಂಧಿಗಳು :

ಸ್ವರದ ಮುಂದೆ ಸ್ವರ ಬಂದಾಗ ಸ್ವರ ಸಂಧಿಯಾಗುವವು. ಇದರಲ್ಲಿ ಲೊಪ ಮತ್ತು ಆಗಮ ಸಂದಿಗಳೆಂಬ ಎರಡು ವಿಧ.

#### 1. ಲೋಪ ಸಂಧಿ :

ಸ್ವರದ ಮುಂದೆ ಸ್ವರ ಬಂದಾಗ ಪೂರ್ವಪದದ ಕೊನೆಯ ಸ್ವರ ಲೋಪವಾಗುವುದು. ಇದಕ್ಕೆ ಸ್ವರಲೋಪ ಸಂಧಿ ಎನ್ನುವರು.

ಉದಾ.: ಪೂರ್ವಪದ + ಉತ್ತರ ಪದ = ಸಂಧಿ

ಬೇರೆ + ಒಂದು = ಬೇರೊಂದು

ಕಲ್ಲು + ಅನ್ನು = ಕಲ್ಲನ್ನು

#### 2. ಆಗಮ ಸಂಧಿ :

ಸ್ವರದ ಮುಂದೆ ಸ್ವರ ಬಂದು ಸಂಧಿಯಾಗುವಾಗ ಅರ್ಥ ಕೆಡುವಂತಿದ್ದರೆ ಪದ ಮಧ್ಯದಲ್ಲಿಯ ವ ಕಾರವನ್ನು ಹೊಸದಾಗಿ ಸೇರಿಸಿಕೊಳ್ಳುವದು. ಯಕಾರವನ್ನು ಸೇರಿಸಿದರೆ ಯಕಾರಾಗಮ ಸಂಧಿ, ವಕಾರವನ್ನು ಸೇರಿಸಿದರೆ ವಕಾರಾಗಮ ಸಂಧಿ ಎಂದು ಕರೆಯುವರು.

ಉದಾ. : ಗಿರಿ + ಅನ್ನು = ಗಿರಿಯನ್ನು

ಗುರು + ಅನ್ನು = ಗುರುವನ್ನು

**ಯಕಾರಾಗಮ ಸಂದಿ :** ಅ, ಇ, ಈ, ಎ, ಏ, ಐ, ಓ ಸ್ವರಗಳ ಮುಂದೆ ಸ್ವರ ಬಂದಾಗ ಯಕಾರಾಗಮವಾಗುವುದು.

ಉದಾ. : ಬಿಳಿ + ಆನೆ = ಬಿಳಿಯಾನೆ

ಕರೆ + ಓಲೆ = ಕರೆಯೋಲೆ

**ವಕಾರಾಗಮ ಸಂಧಿ :** ಉ, ಊ, ಋ, ಓ, ಔ ಸ್ವರಗಳ ಮುಂದೆ ಸ್ವರ ಬಂದರೆ ವಕಾರಾಗಮವಾಗುವುದು.

ಉದಾ.: ಹಸು + ಅನ್ನು = ಹಸುವನ್ನು

ಹೂ + ಇಂದ = ಹೂವಿಂದ

## ವ್ಯಂಜನ ಸಂಧಿಗಳು :

ವ್ಯಂಜನದ ಮುಂದೆ ವ್ಯಂಜನ, ವ್ಯಂಜನದ ಮುಂದೆ ಸ್ವರ ಇಲ್ಲವೆ ಸ್ವರ ಮುಂದೆ ವ್ಯಂಜನ ಬಂದರೆ ವ್ಯಂಜನ ಸಂಧಿಯಾಗುವುದು. ವ್ಯಂಜನ ಸಂಧಿಗಳಲ್ಲಿ ಒಂದು ವ್ಯಂಜನದ ಸ್ಥಾನದಲ್ಲಿ ಇನ್ನೊಂದು ವ್ಯಂಜನ ಬರುವುದು. ಇದಕ್ಕೆ ಆದೇಶ ಸಂಧಿ ಎಂದು ಕರೆಯುವರು.

**ಉದಾ:-** ಮಳೆ + ಕಾಲ = ಮಳೆಗಾಲ

ತಲೆ + ತೂಗು = ತಲೆದೂಗು

ಕಣ್ + ಪನಿ = ಕಂಬನಿ.

ವ್ಯಂಜನ ಸಂಧಿಗಳಲ್ಲಿ ಗದಬ ಸಂಧಿ, ವಕಾರಾದೇಶ ಸಂಧಿ, ಜಚಛಕಾರದೇಶ ಸಂಧಿಗಳೆಂದು ಮೂರು ಪ್ರಕಾರಗಳಿವೆ.

### ಸಂಸ್ಕೃತ ಸಂಧಿಗಳು :

### ಅ. ಸವರ್ಣದೀರ್ಘ ಸಂಧಿ :

ಸವರ್ಣ ಸ್ವರಗಳು ಒಂದರ ಮುಂದೆ ಒಂದು ಬಂದು ಸಂಧಿಯಾಗುವಾಗ ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘಸ್ವರವು ಆದೇಶವಾಗಿ ಬರುವುದು. ಇದಕ್ಕೆ ಸವರ್ಣದೀರ್ಘ ಸಂಧಿ ಎನ್ನುವರು.

**ಉದಾ:-** ದೇವ + ಆಲಯ = ದೇವಾಲಯ

ಗಿರಿ + ಈಶ = ಗಿರೀಶ

ಗುರು + ಉಪದೇಶ = ಗುರೂಪದೇಶ

### ಬ. ಗುಣಸಂಧಿ :

ಅ, ಆ ಕಾರಗಳ ಮುಂದೆ ಇ, ಈ ಕಾರಗಳು ಬಂದಾಗ 'ಏ' ಕಾರವು, ಉ, ಊ ಕಾರಗಳು ಬಂದರೆ 'ಓ' ಕಾರವು, ಋ ಕಾರ ಬಂದರೆ 'ಅರ್' ಆದೇಶವಾಗಿ ಬರುತ್ತದೆ. ಇದಕ್ಕೆ ಗುಣಸಂಧಿ ಎಂದು ಹೆಸರು.

**ಉದಾ:-** ಸುರ + ಇಂದ್ರ = ಸುರೇಂದ್ರ

ಚಂದ್ರ + ಉದಯ = ಚಂದ್ರೋದಯ

ದೇವ + ಋಷಿ =ದೇವರ್ಷಿ

## 2. ಸಮಾಸಗಳು

ಎರಡು, ಅಥವಾ ಎರಡಕ್ಕಿಂತ ಹೆಚ್ಚು ಪದಗಳು (ಅರ್ಥಕೆಡದಂತೆ) ಸೇರಿ ಒಂದು ಪದವಾಗುವುದೇ ಸಮಾಸ.

**ಸಮಾಸಗಳು :**

1. ತತ್ಪುರುಷ ಸಮಾಸ
2. ಕರ್ಮಧಾರಯ ಸಮಾಸ
3. ದ್ವಿಗು ಸಮಾಸ
4. ದ್ವಂದ್ವ ಸಮಾಸ
6. ಬಹುವ್ರಿಹಿ ಸಮಾಸ
7. ಕ್ರಿಯಾ ಸಮಾಸ
8. ಗಮಕ ಸಮಾಸ

### 1. ತತ್ಪುರುಷ ಸಮಾಸ :

ಎರಡು ನಾಮಪದಗಳು ಸೇರಿ ಸಮಾಸವಾಗುವಾಗ ಉತ್ತರ ಪದದ ಅರ್ಥ ಪ್ರಧಾನವಾಗಿದ್ದರೆ ತತ್ಪುರುಷ ಸಮಾಸ.

**ಉದಾ:-** ಅರಸನ + ಮನೆ = ಅರಮನೆ

ಭುವನಕ್ಕೆ + ಗುರು = ಭುವನಗುರು

### 2. ದ್ವಿಗು ಸಮಾಸ :

ಉತ್ತರ ಪದದ ಅರ್ಥ ಪ್ರಧಾನವಾಗಿದ್ದು, ಪೂರ್ವಪದ ಸಂಖ್ಯಾವಾಚಕಾಗಿದ್ದರೆ ಅದು ದ್ವಿಗು ಸಮಾಸ.

**ಉದಾ:-** ಮೂರು + ಲೋಕ = ಮೂಲೋಕ

ನಾಲ್ಕು + ಮಡಿ = ನಾಲ್ವಡಿ

### 3. ದ್ವಂದ್ವ ಸಮಾಸ :

ಎರಡು ಅಥವಾ ಅನೇಕ ಪದಗಳು ಸೇರುತ್ತಿದ್ದು, ಎಲ್ಲ ಪದಗಳ ಅರ್ಥ ಪ್ರಧಾನವಾಗಿದ್ದರೆ ದ್ವಂದ್ವ ಸಮಾಸ.

**ಉದಾ:-** ರಾಮನೂ + ಲಕ್ಷ್ಮಣನೂ = ರಾಮಲಕ್ಷ್ಮಣ

ಗಜಗಳೂ + ಅಶ್ವಗಳೂ + ರಥಗಳೂ = ಗಜಾಶ್ವರಥಗಳು.

## 3. ವಾಕ್ಯ ಸಂಯೋಜನೆ

ವಾಕ್ಯ ಎಂದರೆ ಅರ್ಥವತ್ತಾದ ಪದಸಮೂಹ. ಮುಖ್ಯವಾಗಿ ಕರ್ತೃ-ಕರ್ಮ ಕ್ರಿಯಾಪದಗಳು ಒಂದು ಕ್ರಮದಲ್ಲಿರುತ್ತವೆ. ಜೊತೆಗೆ ನಾಮ ಮತ್ತು ಕ್ರಿಯಾಪದಗಳಿಗೆ ಪೂರಕವಾಗಿ ವಿಶೇಷಣಗಳು ಸೇರುವುದುಂಟು. ಇವುಗಳು ಪರಸ್ಪರ ಸಂಬಂಧವನ್ನು ಗಮನದಲ್ಲಿಟ್ಟುಕೊಂಡು ಕ್ರಮಬದ್ಧವಾಗಿ ಪದಗಳನ್ನು ಜೋಡಿಸುವುದೇ ವಾಕ್ಯ ರಚನೆ.

| | ಕರ್ತೃ | ಕರ್ಮ | ಕ್ರಿಯಾಪದ | |
|---|---|---|---|---|
| | ರಾಮನು | ಶಾಲೆಗೆ | ಹೋಗುತ್ತಾನೆ | |
| ಉದಾ. : 1. | ರಾಮ | ಶಾಲೆ | ಹೋಗು | |
| | ನಾಮಪ್ರಕೃತಿ | | ಧಾತು | |
| ಉದಾ. : 2. | ಶೂರನಾದ | ರಾಮನು | ರಾವಣನನ್ನು | ಕೊಂದನು |
| | ನಾಮ ವಿಶೇಷಣ | ಕರ್ತೃ | ಕರ್ಮಪದ | ಕ್ರಿಯಾಪದ |

## 3. ಅ) ಕ್ರಿಯಾಪದ ಮತ್ತು ಕಾಲಗಳು

### ಅ) ಕ್ರಿಯಾಪದ :

ಪ್ರತಿಯೊಂದು ವಾಕ್ಯದಲ್ಲಿಯೂ ಸಾಮಾನ್ಯವಾಗಿ ಕ್ರಿಯಾಪದ ಇದ್ದೇ ಇರುತ್ತದೆ. ಕರ್ತೃವಿನ ಕ್ರಿಯೆಯನ್ನು ತಿಳಿಸುವ ಪದವು ಕ್ರಿಯಾಪದವಾಗಿದೆ. ಕ್ರಿಯಾಪದದ ಮೂಲ ರೂಪವು ಕ್ರಿಯಾಪ್ರಕೃತಿಯಾಗಿದೆ. ಕ್ರಿಯಾಪ್ರಕೃತಿಗಳಿಗೆ 'ಧಾತು'ಗಳು ಎನ್ನುತ್ತಾರೆ.

ಉದಾ.: 1) ತಾಯಿಯು ಮಗುವಿಗೆ ಹಾಲನ್ನು ಕುಡಿಸುತ್ತಾಳೆ.

'ಕುಡಿಸುತ್ತಾಳೆ' ಇದು ಮೇಲಿನ ವಾಕ್ಯದಲ್ಲಿ ಬಂದಿರುವ ಕ್ರಿಯಾಪದ, ಇದರ ಮೂಲ ರೂಪ 'ಕುಡಿ' ಇದು ಕ್ರಿಯಾಪ್ರಕೃತಿ.

| ಕ್ರಿಯಾಪದ | ಕ್ರಿಯಾಪ್ರಕೃತಿ |
|---|---|
| ತಿನ್ನುತ್ತಾನೆ | ತಿನ್ನು |
| ಬರೆಯುತ್ತಾನೆ | ಬರೆ |
| ಮೇಯುತ್ತದೆ | ಮೇಯು |

### ಆ) ಕಾಲಗಳು :

'ಕ್ರಿಯೆ' ನಡೆಯುವ ಸಮಯವನ್ನು 'ಕಾಲ' ಎನ್ನುತ್ತಾರೆ. ಕಾಲಗಳಲ್ಲಿ ವರ್ತಮಾನ, ಭೂತ ಹಾಗೂ ಭವಿಷತ್ಕಾಲ ಎಂದು ಮೂರು ಪ್ರಕಾರಗಳಿವೆ. ಅವುಗಳನ್ನು ಸೂಚಿಸಲು ಕ್ರಿಯಾಪದದಲ್ಲಿ ಸೇರುವ ಪ್ರತ್ಯಯಗಳಿಗೆ ಕಾಲವಾಚಕ ಪ್ರತ್ಯಯಗಳೆಂದು ಕರೆಯುವರು.

ವರ್ತಮಾನ : ಕ್ರಿಯೆ ನಡೆಯುವ ಕಾಲ (ಉತ್)

ಉದಾ. ಸೀತೆಯು ಹೂವುಗಳನ್ನು ಮುಡಿಯುತ್ತಾಳೆ.

ಶಾಮನು ಕವಿತೆಯನ್ನು ಬರೆಯುತ್ತಾನೆ.

ಮುಡಿಯುತ್ತಾಳೆ, ಬರೆಯುತ್ತಾನೆ – ಕ್ರಿಯೆ ನಡೆಯುವ ಕಾಲವನ್ನು ಸೂಚಿಸುತ್ತವೆ.

ಭೂತ : ಕ್ರಿಯೆ ನಡೆದುಹೋದ ಕಾಲ (ದ)

ಉದಾ. : ನಾವು ಕ್ರಿಕೆಟ್ ಆಟವನ್ನು ಆಡಿದೆವು.

ದುಂಬಿಗಳು ಹೂಬನದಲ್ಲಿ ಹಾರಾಡಿದವು.

ಆಡಿದೆವು. ಹಾರಾಡಿದವು – ಕ್ರಿಯೆ ನಡೆದು ಹೋದ ಕಾಲವನ್ನು ಸೂಚಿಸುತ್ತದೆ.

ಭವಿಷತ್ – ಕ್ರಿಯೆ ನಡೆಯಬೇಕಾದ ಕಾಲ (ವ)

ಉದಾ.: ಅರವಿಂದನು ಶಾಲೆಗೆ ಹೋಗುವನು.

ಸುಜಾತಾ ----- ಹಾಡುವಳು.

ಹೋಗುವನು, ಹಾಡುವಳು – ಕ್ರಿಯೆ ನಡೆಯಬೇಕಾದ ಕಾಲವನ್ನು ಸೂಚಿಸುತ್ತವೆ.

ಉತ್, ದ, ವ ಕಾರಗಳು ಕ್ರಮವಾಗಿ ವರ್ತಮಾನ, ಭೂತ ಮತ್ತು ಭವಿಷತ್ ಕಾಲವಾಚಕ ಪ್ರತ್ಯಯಗಳು/

ಉದಾ.: ಬರೆಯುತ್ತಾನೆ < ಬರೆ + ಉತ್ + ಆನೆ = ವರ್ತಮಾನ ಕಾಲ

ಬರೆದನು < ಬರೆ + ದ + ಅನು = ಭೂತಕಾಲ

ಬರೆವನು < ಬರೆ + ವ + ಅನು = ಭವಿಷತ್ ಕಾಲ

## 3. ಬ) ವಾಕ್ಯ ಪ್ರಕಾರಗಳು

**ವಾಕ್ಯರಚನಾ ವಿವರ :** ಕ್ರಮವತ್ತಾದ ಪದಗಳ ಮತ್ತು ಪೂರ್ಣ ಅರ್ಥಕೊಡುವ ಸಂಯೋಜಿತ ರಚನೆಯೇ ವಾಕ್ಯ. ನಿಖರ, ಸ್ಪಷ್ಟ ಹಾಗೂ ಪೂರ್ಣ ಅರ್ಥಕೊಡುವ ವ್ಯಾಕರಣದ ರಚನೆಯಿದು.

ಉದಾ.: 1. ರಮೇಶ ಬಾಳೆಹಣ್ಣನ್ನು ತಿಂದನು.
2. ರಮಾ ತರಗತಿಯಲ್ಲಿ ಚೆನ್ನಾಗಿ ಓದುತ್ತಾಳೆ.

### ವಾಕ್ಯ ಪ್ರಕಾರಗಳು :

ವಾಕ್ಯಗಳನ್ನು ಸರಳ ವಾಕ್ಯ, ಸಂಯುಕ್ತ ವಾಕ್ಯ ಹಾಗೂ ಸಂಕೀರ್ಣ (ಮಿಶ್ರ) ವಾಕ್ಯ ಎಂದು ವಿಂಗಡಿಸಲಾಗಿದೆ.

**ಸರಳ ವಾಕ್ಯ:** ಒಂದು ಕ್ರಿಯಾಪದದೊಡನೆಸ್ವತಂತ್ರವಾದ,ಖಚಿತವಾದ ಅರ್ಥಕೊಡುವ ವಾಕ್ಯರಚನೆಗೆಸರಳ ವಾಕ್ಯವೆನ್ನುವರು.

ಉದಾ. : ಗಿಳಿ ಹಣ್ಣನ್ನು ತಿನ್ನುತ್ತದೆ.
2. ಶಿವಮ್ಮ ಹೆಣ್ಣು ಮಗುವಿಗೆ ಜನ್ಮ ನೀಡಿದಳು.

**ಸಂಯುಕ್ತ ವಾಕ್ಯ :** ಎರಡು ಅಥವಾ ಅನೇಕ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣ ಅರ್ಥವನ್ನು ನೀಡುವುದಕ್ಕೆ ಸಂಯುಕ್ತ ವಾಕ್ಯವೆನ್ನುತ್ತಾರೆ. ಇದರಲ್ಲಿ ಎರಡು ಪೂರ್ಣ ಕ್ರಿಯಾಪದಗಳಿರುತ್ತವೆ

ಉದಾ.: 1. ಮಕ್ಕಳು ಹಣ್ಣನ್ನು ತಿನ್ನುತ್ತಾರೆ, ಆದರೆ ಅವರಿಗೆ ಕೊಡಲುಸಾಕಷ್ಟು ಹಣ್ಣುಗಳಿಲ್ಲ.

2. ನಾನು ಸಣ್ಣವನಿರುವಾಗಲೇ ಹಕ್ಕಿಗೂಡನ್ನು ನೋಡಿದ್ದೇನೆ, ಆದರೆ ಅದನ್ನು ಸವಿವವರವಾಗಿ ತಿಳಿದುಕೊಂಡದ್ದು ದೊಡ್ಡ ವನಾದ ಮೇಲೆ.

**ಸಂಕೀರ್ಣ (ಮಿಶ್ರ) ವಾಕ್ಯ :** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಆಧೀನವಾಗಿರುವುದಕ್ಕೆ ಸಂಕೀರ್ಣವಾಕ್ಯವೆನ್ನುತ್ತಾರೆ. ಇದರಲ್ಲಿ ಒಂದು ಅಥವಾ ಒಂದಕ್ಕಿಂತಹೆಚ್ಚು ಅಪೂರ್ಣ ಕ್ರಿಯಾಪದಗಳಿರುತ್ತವೆ.

ಉದಾ : 1. ತಮ್ಮ ಊರಿಗೆ ರೈಲು ಬರುವುದನ್ನು ತಿಳಿದು ಮಕ್ಕಳು ಹಿಗ್ಗಿಕುಣಿದಾಡಿದರು.

2. ಮಕ್ಕಳಿಗೆ ಮದುವೆಯಾಗಲು ಇನ್ನೂ ಕಾಲವಿದೆಯೆಂದು ಗಾಂಧೀಜಿ ತಮ್ಮ ಪತ್ನಿಗೆ ತಿಳಿಸಿದರು.

## 4. ಕರ್ತರಿ-ಕರ್ಮಣಿ ಪ್ರಯೋಗ (ವಾಕ್ಯದ ಪ್ರಯೋಗಗಳು)

**ಕರ್ತರಿ ಪ್ರಯೋಗ :** ಕ್ರಿಯಾಪದವು ಕರ್ತೃಪದದ ಲಿಂಗ, ವಚನಗಳನ್ನು ಅನುಸರಿಸಿ ಪ್ರಯೋಗಗೊಂಡಿದ್ದರೆ ಅದನ್ನು ಕರ್ತರಿ ಪ್ರಯೋಗ ಎನ್ನುತ್ತಾರೆ.

ಉದಾ. : 1. ಹುಡುಗಿ ಪುಸ್ತಕವನ್ನು ಓದಿದಳು.
2. ಕುಶಾಲ ಆಟವನ್ನು ಆಡಿದನು.
3. ಗಿಳಿಗಳು ಹಣ್ಣನ್ನು ತಿಂದವು.

**ಕರ್ಮಣಿ ಪ್ರಯೋಗ :** ಕನ್ನಡದಲ್ಲಿಸಹಜವಾಗಿ ಕರ್ಮಣಿ ಪ್ರಯೋಗವಿಲ್ಲ. ಅಲ್ ಪ್ರತ್ಯಯಸೇರಿದ ಭಾವಾರ್ಥಕ್ರಿಯೆಗೆ ಪಡು ಪ್ರತ್ಯಯ ಸೇರಿಸಿ ಈ ಪ್ರಯೋಗವನ್ನು ಕನ್ನಡದಲ್ಲಿ ತರಲು ಪ್ರಯತ್ನಿಸಲಾಗಿದೆ.

ಕರ್ಮಣಿ ಪ್ರಯೋಗದಲ್ಲಿ ಕರ್ಮಪದವು ಪ್ರಧಾನವಾಗಿರುತ್ತದೆ. ಕರ್ಮಪದವು ಪ್ರಥಮಾ ವಿಭಕ್ತಿ ಪ್ರತ್ಯಯದಲ್ಲಿಯೂ, ಕರ್ತೃಪದವು ತೃತೀಯಾ ವಿಭಕ್ತಿ ಪ್ರತ್ಯಯದಲ್ಲಿರುತ್ತದೆ. ಕ್ರಿಯಾಪದವು ಕರ್ಮಪದದ ಲಿಂಗ, ವಚನಗಳನ್ನು ಅನುಸರಿಸಿ ಬಳಕೆಯಾಗುತ್ತದೆ.

ಉದಾ : 1. ಹುಡುಗಿಯಿಂದ ಪುಸ್ತಕವು ಓದಲ್ಪಡುತ್ತದೆ.
2. ಕುಶಾಲನಿಂದ ಆಟವು ಆಡಲ್ಪಡುತ್ತದೆ.
3. ಗಿಳಿಗಳಿಂದ ಹಣ್ಣು ತಿನ್ನಲ್ಪಟ್ಟಿತು.

## 5. ಪಡೆನುಡಿಗಳು

ಹಲವು ವಾಕ್ಯಾಂಶಗಳು ತಮ್ಮ ಸಾಮಾನ್ಯ ಅರ್ಥವನ್ನು ಬಿಟ್ಟು ವಿಶೇಷ ಅರ್ಥವನ್ನು ಪ್ರಕಟಿಸುತ್ತವೆ. ಇಂತಹ ವಾಕ್ಯಾಂಶಗಳನ್ನು 'ಪಡೆನುಡಿ' ಎನ್ನುವರು. ಪಡೆನುಡಿಗಳು ಭಾಷೆಗೆ ಪ್ರೌಢತೆಯನ್ನು ಕೊಡುತ್ತವೆ. ಪಡೆನುಡಿಗಳನ್ನು ಬಳಸುವುದರಿಂದ ಭಾಷಾಜ್ಞಾನ, ಶಬ್ದಸಂಪತ್ತು ಹೆಚ್ಚುವುದಲ್ಲದೆ ರಂಜಕತೆಯೂ ಕೂಡ ವೃದ್ಧಿಸುತ್ತದೆ.

ಪಡೆನುಡಿಗಳು, ಅವುಗಳ ಅರ್ಥ ಹಾಗೂ ವಾಕ್ಯಗಳಲ್ಲಿ ಅವುಗಳ ಪ್ರಯೋಗ.

1. ಕಾಲಿಗೆ ಬುದ್ಧಿ ಹೇಳು = ಓಡಿ ಹೋಗು.
   ಪೋಲೀಸರನ್ನು ಕಂಡ ಕೂಡಲೇ ಕಳ್ಳರು ಕಾಲಿಗೆ ಬುದ್ಧಿ ಹೇಳುವರು.
2. ಕೈಕಟ್ಟಿ ಕೂಡು = ಚಿಂತಿಸು, ವ್ಯರ್ಥ ಕೂಡು
   ಪರೀಕ್ಷೆಯಲ್ಲಿ ಫೇಲಾದ ಬಸವನು ಕೈಕಟ್ಟಿ ಕುಳಿತುಕೊಂಡಿದ್ದನು.
3. ಬೆಕ್ಕಸಬೆರಗಾಗು = ಗಾಬರಿಯಾಗು, ಆಶ್ಚರ್ಯಚಕಿತನಾಗು.
   ಸಿಡಿಮದ್ದಿನ ಭೀಕರ ಸದ್ದು ಕೇಳಿ ಗೌರಿಯು ಬೆಕ್ಕಸಬೆರಗಾದಳು.
4. ಟೊಪ್ಪಿಗೆ ಹಾಕು = ಮೋಸ ಮಾಡು
   ಇಂದಿನ ಸಮಾಜದಲ್ಲಿ ಟೊಪ್ಪಿಗೆ ಹಾಕುವವರು ಹೆಚ್ಚುತ್ತಿದ್ದಾರೆ.
5. ಹುಬ್ಬುಗಂಟಿಕ್ಕು = ಸಿಟ್ಟಿಗೆ ಬರು
   ಮನೆಗೆಲಸವನ್ನು ಮಾಡಿಕೊಂಡು ಬರದಿದ್ದರೆ ಶಿಕ್ಷಕರು ಹುಬ್ಬುಗಂಟಿಕ್ಕುತ್ತಾರೆ.

## II ಅಲಂಕಾರ

### 1) ಉತ್ಪ್ರೇಕ್ಷಾಲಂಕಾರ

ಒಂದು ವಸ್ತುವನ್ನು ಅಥವಾ ಸನ್ನಿವೇಶವನ್ನುಮತ್ತೊಂದು ವಸ್ತು ಅಥವಾ ಸನ್ನಿವೇಶವಾಗಿಸಂಭಾವಿಸುವುದನ್ನು ಉತ್ಪ್ರೇಕ್ಷಾಲಂಕಾರ ಎನ್ನುವರು.

ಪ್ರೇಕ್ಷೆ ಎಂದರೆ ಕಾಣುವಿಕೆ ಎಂದು ಅರ್ಥ ಉತ್ ಪ್ರೇಕ್ಷೆ ಎಂದರೆ ಅಧಿಕ ಗುಣಗಳನ್ನು ಆರೋಪಿಸಿ ನೋಡುವಿಕೆ ಎಂದರ್ಥ. ಅಂದರೆ ಸಹಜಕ್ಕೆ ಮೀರಿದ ಹೋಲಿಕೆ ಎಂದು ಅರ್ಥ.

ಉದಾ – ತ್ರೈಲೋಕ್ಯಸುಂದರಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಅಚ್ಛೋದ ಸರೋವರವು ಕಂಗೊಳಿಸುತ್ತಿತ್ತು.

ಮೇಲಿನ ವಾಕ್ಯದಲ್ಲಿ ಅಚ್ಛೋದ ಸರೋವರ – ಉಪಮೇಯ

ರನ್ನಗನ್ನಡಿ – ಉಪಮಾನ

ಇಲ್ಲಿ ಉಪಮೇಯವಾದ 'ಅಚ್ಛೋದ ಸರೋವರ'ವನ್ನು ಉಪಮಾನದ 'ರನ್ನದ ಕನ್ನಡಿ' ಎಂದು ಸಂಭಾವಿಸಲಾಗಿದೆ. ಆದ್ದರಿಂದ ಇದು ಉತ್ಪ್ರೇಕ್ಷಾಲಂಕಾರ.

ಉದಾ – ಪಾಲ್ದುಂಬಿದ ಸಾಲ್ದೆನೆಗಳ ।

ನೆಟ್ಟಿರುಗಲನೊಟ್ಟಿ ಸೀಳೆ ಗಿಳಿಭಯ ಭರದಿಂ ।

ಜೋಲ್ದಿಳೆ ಗಿಳಿ ವಂತಿರೆ ಬಂ ।

ಬಲ್ ಧರೆಯೊಳ್ ಪೊಳೆದು ಮಡಿಯ ನೀರೊಳ್ ತೋರ್ಕುಂ ॥

ಇಲ್ಲಿಸಹಜವಾಗಿ ನೀರಿನಲ್ಲಿಪ್ರತಿಫಲಿಸಿ ಕಾಣುವ ಭತ್ತದ ತೆನೆಗಳ ಆ ಸನ್ನಿವೇಶವನ್ನುಕವಿಯು ಬೇರೊಂದು ಕಾರಣ ಕೊಟ್ಟುಕಲ್ಪಿಸಿ ಗಿಳಿಗಳ ಭಯದಿಂದ ಅವು ಭೂಮಿಗೆ ಇಳಿದು ಹೋಗಿವೆ ಎಂದು ಸಂಭಾವನೆ ಮಾಡಿ ಹೇಳುವ ಇದು ಉತ್ಪ್ರೇಕ್ಷಾಲಂಕಾರ ಎನಿಸುವುದು.

### 2) ದೃಷ್ಟಾಂತಾಲಂಕಾರ

ಎರಡು ಬೇರೆ ಬೇರೆ ವಾಕ್ಯಗಳು ಪರಸ್ಪರ ಅರ್ಥ ಸಾದೃಶ್ಯದಿಂದ ಒಂದರ ಪ್ರತಿಬಿಂಬ ಮತ್ತೊಂದು ಎಂದು ತೋರುವಂತಿದ್ದರೆ. ಅದಕ್ಕೆ ದೃಷ್ಟಾಂತ ಅಲಂಕಾರ ಎನ್ನುವರು.

ಉದಾ – ಅಟ್ಟ ಮೇಲೆ ಒಲೆ ಉರಿಯಿತು. ಕೆಬ್ಬ ಮೇಲೆ ಬುದ್ಧಿ ಬಂತು

ಊರು ಉಪಕಾರ ಅರಿಯದು, ಹೆಣ ಶೃಂಗಾರ ಅರಿಯದು.

★ ನಿಂದಿಸುವರ್ ದುರ್ಜನರು ಎಂ

ಬೊಂದು ಭಯಂ ಬೆತ್ತು ಸುಕವಿ ರಚಿಸನೆ ಕೃತಿಯಂ ?

ಮಂದೇಹರ ಭಯದಿಂದರ

ವಿಂದ ಸಖಂ ನಿಜಮಯೂಖನಂ ಪ್ರಸರಿಸನೇ ?

ಇಲ್ಲಿಉಪಮಾನವಾದ ಸೂರ್ಯನು ಕತ್ತಲೆಗೆಹೆದರದೆ ತನ್ನಕಿರಣಗಳನ್ನುಪಸರಿಸಿಯೇ ಪಸರಿಸುತ್ತಾನೆಂದೂ ಉಪಮೇಯವಾದ ಸತ್ಕವಿಯಾದವನು ದುರ್ಜನರ ನಿಂದೆಗೆ ಅಳುಕದೆ ಕಾವ್ಯವನ್ನು ರಚಿಸಿಯೇ ರಚಿಸುತ್ತಾನೆಂದು ಹೇಳಲಾಗಿದೆ. ಉಪಮೇಯ ಉಪಮಾನಗಳಲ್ಲಿ ಬಿಂಬ ಪ್ರತಿಬಿಂಬ ಭಾವ ಇರುವುದರಿಂದ ಇದನ್ನು ದೃಷ್ಟಾಂತಾಲಂಕಾರ ಎನ್ನುವರು.

**ಕ) ಸ್ವಭಾವೋಕ್ತಿ ಅಲಂಕಾರ :** ವಸ್ತು, ವ್ಯಕ್ತಿ, ಪ್ರಸಂಗ, ಸನ್ನಿವೇಶಗಳ ಜಾತಿ, ಗುಣ, ಕ್ರಿಯೆ, ಸ್ವಭಾವ ಮುಂತಾದವುಗಳನ್ನು ಯಥಾವತ್ತಾಗಿ (ಇದ್ದುದನ್ನು ಇದ್ದ ಹಾಗೆಯೇ) ವರ್ಣಿಸುವುದೆ ಸ್ವಭಾವೋಕ್ತಿ ಅಲಂಕಾರವಾಗಿದೆ.

ಉದಾ : ಮಾನ, ಮರ್ಯಾದೆ ಎಂಬ ಕಲ್ಪನೆಯನ್ನು ಗಂಟು ಮೂಟೆಕಟ್ಟಿ ಗುಟಕ್ಕೆ ತೂಗು ಹಾಕಿದೆ.

# III ಛಂದಸ್ಸು

ಕಾವ್ಯದಲ್ಲಿಲಯದ ಅಭ್ಯಾಸವೇ ಛಂದಸ್ಸು. ಇದು ಲಯವಿನ್ಯಾಸಗಳನ್ನುರೂಪಿಸುತ್ತದೆ. ಈ ಲಯ ನಿವ್ಯಾಸಗಳನ್ನುರಚಿಸುವ ಮೂಲಮಾನಗಳೇ ಗಣಗಳು. ಗಣಗಳಲ್ಲಿ ಮೂರು ವಿಧಗಳು 1. ಅಕ್ಷರಗಣ, 2. ಮಾತ್ರಾ ಗಣ 3. ಅಂಶಗಣ.

!) ಷಟ್ಪದಿಗಳು : (ಹಿಂದಿನ ತರಗತಿಯಿಂದ ಮುಂದುವರಿದಿದೆ) 'ಷಟ್ಪದಿ' ಎಂದರೆ ಆರು ಪಾದಗಳ ಪದ್ಯ. ಇದು ಮಾತ್ರಾಗಣಾನ್ವಿತ ಛಂದೋಬಂಧ.

**1) ಭೋಗ ಷಟ್ಪದಿ :** ಇದು ಆರು ಸಾಲುಗಳಿಂದ ಕೂಡಿದ ಪದ್ಯವಾಗಿದ್ದು, 1, 2, 4 ಹಾಗೂ, 5ನೇ, ಸಾಲುಗಳು ಕಿರಿಯ ಚರಣಗಳಾಗಿದ್ದು ಪ್ರತಿ ಸಾಲಿನಲ್ಲಿ ಮೂರು ಮಾತ್ರೆಯ ನಾಲ್ಕು ಗಣಗಳು ಬರುತ್ತವೆ. ಮೂರು ಹಾಗೂ ಆರನೆಯ ಸಾಲುಗಳು ಹಿರಿಯ ಚರಣಗಳಾಗಿದ್ದು ಪ್ರತಿ ಸಾಲಿನಲ್ಲಿ ಮೂರು ಮಾತ್ರೆಯ ಆರು ಗಣಗಳು ಹಾಗೂ ಮೇಲೊಂದು ಗುರುವಿನಿಂದ ಕೂಡಿ ಕೊಂಡಿರುತ್ತವೆ. ಆದಿಪ್ರಾಸ ಕಂಡು ಬರುತ್ತದೆ.

**ಉದಾ -**

| | | | | | | |
|---|---|---|---|---|---|---|
| 3<br>U U U<br>ತಿರುಕ | 3<br>— U<br>ನೋರ್ವ | 3<br>— U<br>ನೂರ | 3<br>— U<br>ಮುಂದೆ | | | |
| 3<br>U U U<br>ಮುರುಕು | 3<br>— U<br>ಧರ್ಮ | 3<br>— U<br>ಶಾಲೆ | 3<br>— U<br>ಯಲ್ಲಿ | | | |
| 3<br>U U U<br>ಒರಗಿ | 3<br>— U<br>ರುತ್ತ | 3<br>— U<br>ಲೊಂದು | 3<br>U U U<br>ಕ ನಸು | — U<br>ಕಂಡ | — U<br>ನೆಂತೆ | —<br>ನೆ |
| U U U<br>ಪುರದ | — U<br>ರಾಜ | — U<br>ಸತ್ತ | U U U<br>ನವಗೆ | | | |
| U U U<br>ವರಕು | — U<br>ಮಾರ | — U<br>ರಿಲ್ಲ | U U U<br>ದಿರಲು | | | |
| U U U<br>ಕರಿಯ | — U<br>ಕೈಗೆ | U U U<br>ಕುಸುಮ | — U<br>ಮಾಲೆ | — U<br>ಯಿತ್ತು | U U U<br>ಪುರದೊ | —<br>ಳು |

## ಭಾಮಿನಿ ಷಟ್ಪದಿ

ಇದು 6 ಸಾಲುಗಳಿಂದ ಕೂಡಿದ ಪದ್ಯವಾಗಿದ್ದು 1, 2, 4, 5ನೆಯ ಸಾಲುಗಳು ಕಿರಿಯ ಚರಣಗಳಾಗಿದ್ದು ಸಮನಾಗಿ 3 ಮಾತ್ರೆಯ 1 ಗಣ ಹಾಗೂ 4 ಮಾತ್ರೆಯ 1 ಗಣ ಈ ಕ್ರಮದಲ್ಲಿ ಒಟ್ಟು ನಾಲ್ಕು ಗಣಗಳು ಬರುವವು. (3 / 4/ 2 / 4) 3 ಹಾಗೂ 6ನೆಯ ಸಾಲುಗಳು ಹಿರಿಯ ಚರಣಗಳಾಗಿದ್ದು ಸಮನಾಗಿ 3 ಮಾತ್ರೆಯ 1 ಗಣ ಹಾಗೂ 4 ಮಾತ್ರೆಯ 1 ಗಣ ಈ ಕ್ರಮದಲ್ಲಿ ಒಟ್ಟು 6 ಗಣಗಳನ್ನು ಹೊಂದಿರುತ್ತವೆ. ಮೇಲೊಂದು ಗುರು ಬರುತ್ತದೆ. ಆದಿ ಪ್ರಾಸ ಕಂಡು ಬರುತ್ತದೆ.

ಉದಾ -

| | | | | | | |
|---|---|---|---|---|---|---|
| 3 | 4 | 3 | 4 | | | |
| U U U | — U U | U U U | — U U | | | |
| ಮರುಳು | ಮಾಧವ | ಮಹಿಯ | ರಾಜ್ಯದ | | | |
| 3 | 4 | 3 | 4 | | | |
| U U U | — U U | — U | — — | | | |
| ಸಿರಿಗೆ | ಸೋಲುವ | ನಲ್ಲ | ಕೌಂತೇ | | | |
| 3 | 4 | 3 | 4 | 3 | 4 | |
| U U U | — U U | U U U | U U — | — U | U U — | — |
| ಯರುಸು | ಯೋಧನ | ರೆನಗೆ | ಬೆಸಕೈ | ವಲ್ಲಿ | ಮನವಿ | ಲ್ಲ |
| U U U | — — | — U | U U U U | | | |
| ಹೊರೆದ | ದಾತಾ | ರಂಗೆ | ಹಗೆವರ | | | |
| U U U | U U — | U U U | — — | | | |
| ಶಿರವ | ನರಿದೊ | ಪ್ಪಿಸುವೆ | ನೆಂಬೀ | | | |
| U U U | — U U | — U | — U U | — U | — — | — |
| ಭರದೊ | ಳಿರ್ದನು | ಕೌರ | ವೇಂದ್ರನ | ಕೊಂದೆ | ನೀನೆಂ | ದ |

## ಅಕ್ಷರಗಣ

ಮೂರು ಅಕ್ಷರಗಳ ಗುಂಪುಗಳನ್ನು ಒಂದೊಂದು ಗಣವೆಂದು ತಿಳಿಯುವುದೇ ಅಕ್ಷರಗಣ. ಇಲ್ಲಿ ಗುರು ಲಘು ಭೇದವಿಲ್ಲದೇ ಮೂರು ಅಕ್ಷರಗಳಂತೆ ಲೆಕ್ಕಮಾಡಿ ಗಣಗಳನ್ನು ವಿಂಗಡಿಸಲಾಗುವುದು. ಈ ಮೂರು ಅಕ್ಷರಗಳ ಗುಂಪಿನಲ್ಲಿ ಮೂರು, ನಾಲ್ಕು, ಐದು, ಆರು ಮಾತ್ರೆಗಳಿರಬಹುದು. ಅದು ಮುಖ್ಯವಲ್ಲ. ಅಲ್ಲಿ ಮೂರು ಅಕ್ಷರಗಳೇ ಮುಖ್ಯ. ಅಕ್ಷರಗಣಗಳಲ್ಲಿ ಒಟ್ಟು ಎಂಟು ವಿಧ ಈ ಸೂತ್ರ ನೋಡಿರಿ.

''ಯಮಾತಾರಾಜಭಾನಸಲಗಂ'' ಇದರಲ್ಲಿ ಕ್ರಮವಾಗಿ ಮೂರು ಅಕ್ಷರಗಳನ್ನು ತೆಗೆದುಕೊಂಡರೆ ಮೊದಲನೆಯ ಅಕ್ಷರವು ಗುಣದ ಹೆಸರನ್ನು ಸೂಚಿಸುತ್ತದೆ. ಅಕ್ಷರಗಣ ಆಧಾರಿತ ಲಯ ವಿನ್ಯಾಸಗಳೇ ಅಕ್ಷರವೃತ್ತಗಳು. ಈ ವೃತ್ತಗಳಲ್ಲಿ ಹಲವಾರು ವೃತ್ತಗಳುಂಟು. ಅವುಗಳಲ್ಲಿ ಆರು ಪ್ರಮುಖವಾಗಿದ್ದು ಅವುಗಳನ್ನು ಖ್ಯಾತ ಕರ್ನಾಟಕ ವೃತ್ತಗಳೆಂದು ಕರೆಯುವರು.

1) ಉತ್ಪಲಮಾಲಾ ವೃತ್ತ

2) ಚಂಪಕಮಾಲಾ ವೃತ್ತ

3) ಶಾರ್ದೂಲ ವಿಕ್ರೀಡಿತ ವೃತ್ತ

4) ಮತ್ತೇಭ ವಿಕ್ರೀಡಿತ ವೃತ್ತ

5) ಸ್ರಗ್ಧರಾ ವೃತ್ತ

6) ಮಹಾಸ್ರಗ್ಧರಾ ವೃತ್ತ

## i) ಉತ್ಪಲ ಮಾಲಾ ವೃತ್ತ :-

ಈ ಪದ್ಯವು ಸಮಾನವಾದ ಲಕ್ಷಣಗಳಿಂದ ಕೂಡಿದ 4 ಸಾಲುಗಳನ್ನು ಹೊಂದಿರುತ್ತದೆ. ಪ್ರತಿಸಾಲಿನಲ್ಲಿಯೂ 20 ಅಕ್ಷರಗಳಿರುತ್ತವೆ. ಹಾಗೂ ಪ್ರತಿ ಪಾದದಲ್ಲಿ ಕ್ರಮವಾಗಿ ಭ, ರ, ನ, ಭ, ಭ, ರ ಎಂಬ 6 ಅಕ್ಷರಗಣಗಳೂ ಹಾಗೂ ಒಂದು ಲಘು ಮತ್ತು ಒಂದು ಗುರುವಿನಿಂದ ಕೂಡಿಕೊಂಡಿರುತ್ತವೆ.

ಉದಾ -

| | | | | | | |
|---|---|---|---|---|---|---|
| ಭ | ರ | ನ | ಭ | ಭ | ರ | ಲ ಗು |
| — U U | — U — | U U U | — U U | — U U | — U — | U — |
| ಚಾಗದ | ಭೋಗದ | ಕ್ಕರದ | ಗೇಯದ | ಗೊಟ್ಟಿಯ | ಲಂಪಿನಿಂ | ಪುಗ |
| ಭ | ರ | ನ | ಭ | ಭ | ರ | ಲ ಗು |
| — U U | — U — | U U U | — U U | — U U | — U — | U — |
| ಳ್ಾಗರ | ಮಾದಮಾ | ನಸರೆ | ಮಾನಸ | ರಂತವ | ರಾಗಿ ಪು | ಟ್ಟಲೇ |
| ಭ | ರ | ನ | ಭ | ಭ | ರ | ಲ ಗು |
| — U U | — U — | U U U | — U U | — U U | — U — | U — |
| ನಾಗಿಯು | ಮೇನೊತೀ | ರ್ದ ಪುದೆ | ತೀರದೊ | ಡಂ ಮರಿ | ದುಂಬಿಯಾ | ಗಿ ಮೇಣ್ |
| ಭ | ರ | ನ | ಭ | ಭ | ರ | ಲ ಗು |
| — U U | — U — | U U U | — U U | — U U | — U — | U — |
| ಕೋಗಿಲೆ | ಯಾಗಿಪು | ಟ್ಟುವುದು | ನಂದನ | ದೊಳ್ ಬನ | ವಾಸಿ ದೇ | ಶ ದೊಳ್ |

**ಸೂತ್ರ :** ಉತ್ಪಲಮಾಲೆಯಪ್ಪುದು ಭರಂನಭಭಂರಲಗಂ ನೆಗಳ್ದಿರಲ್

## ii) ಚಂಪಕ ಮಾಲಾ ವೃತ್ತ :-

ಈ ಪದ್ಯವು ಸಮಾನವಾದ ಲಕ್ಷಣಗಳನ್ನು ಹೊಂದಿದ 4 ಸಾಲುಗಳಿಂದ ಕೂಡಿಕೊಂಡಿರುತ್ತದೆ. ಪ್ರತಿ ಸಾಲಿನಲ್ಲಿ 21 ಅಕ್ಷರಗಳಿದ್ದು ಪ್ರತಿ ಸಾಲಿನಲ್ಲಿ ಕ್ರಮವಾಗಿ ನ, ಜ, ಭ, ಜ, ಜ, ಜ, ರ ಎಂಬ 7 ಅಕ್ಷರ ಗಣಗಳು ಬರುತ್ತವೆ. ಆದಿಪ್ರಾಸ ಕಂಡು ಬರುತ್ತದೆ.

ಉದಾ -

| | | | | | | |
|---|---|---|---|---|---|---|
| ನ | ಜ | ಭ | ಜ | ಜ | ಜ | ರ |
| U U U | U — U | — U U | U — U | U — U | U — U | — U — |
| ಎನಗ | ನು ಕೂಲ | ಮಕ್ಕೆ ಗು | ಣವಮ | ಣ್ನ ಜಾಣ್ಣು | ಡಿ ಪಂಪ | ನಿಂಪು ಪೊ |
| ನ | ಜ | ಭ | ಜ | ಜ | ಜ | ರ |
| U U U | U — U | — U U | U — U | U — U | — U — | — U — |
| ನನ್ನ ಬ | ಗೆ ನಾಗ | ವರ್ಮನ | ಬಹುಜ್ಞ | ತೆ ರನ್ನ | ನ ಕಾನ್ತಿ | ನಾಗಚಂ |
| U U U | U — U | — U U | U — U | U — U | — U — | — U — |
| ದ್ರನರ | ಸಭಾವ | ಮಗ್ಗಳ | ನ ವಕ್ರ | ತೆ ನೇಮಿ | ಯ ದೇಸೆ | ಪುಷ್ಪಬಾ |
| U U U | U — U | — U U | U — U | U — U | — U — | — U — |
| ಣನ ಮ್ರ | ದು ಬಂಧ | ಮೀ ಕವಿ | ಗಳಲ್ತೆ | ಜಿನೇಂದ್ರ | ಪುರಾಣ | ಕರ್ತೃಗಳ್ |

**ಸೂತ್ರ :** ನಜಭಜಜಂಜರಂ ಬಗೆಗೊಳ್ಳುತ್ತಿರೆ ಚಂಪಕಮಾಲೆಯೆಂದಪರ್

### iii) ಶಾರ್ದೂಲ ವಿಕ್ರೀಡಿತ ವೃತ್ತ :-

ಈ ಪದ್ಯವು ಸಮಾನವಾದ ಲಕ್ಷಣಗಳನ್ನು ಹೊಂದಿದ 4 ಸಾಲುಗಳಿಂದ ಕೂಡಿ ಕೊಂಡಿರುತ್ತದೆ. ಪ್ರತಿ ಸಾಲಿನಲ್ಲಿ 19 ಅಕ್ಷರಗಳು ಬರುತ್ತವೆ. ಅದರಂತೆ ಕ್ರಮವಾಗಿ ಪ್ರತಿ ಚರಣವು 'ಮ, ಸ, ಜ, ಸ, ತ, ತ ಎಂಬ 6 ಗಣ ಹಾಗೂ ಮೇಲೊಂದು ಗುರುವನ್ನು ಹೊಂದಿರುತ್ತದೆ.

| | | | | | | | |
|---|---|---|---|---|---|---|---|
| | ಮ<br>— — —<br>ಕಲ್ಲೊಳ್ ತೋ | ಸ<br>U U —<br>ರ್ಪ ಪೊಗರ್ | ಜ<br>U — U<br>ಸುವರ್ಣ | ಸ<br>U U —<br>ದ ಗುಣಂ | ತ<br>— — U<br>ಕಾಷ್ಠಂಗ | ತ<br>— — U<br>ಳೊಳ್ತೋರ್ಪ | ಗು<br>—<br>ಕಿ |
| **ಉದಾ -** | ಮ<br>— — —<br>ಚ್ಚೆಲ್ಲಾ ಕಿ | ಸ<br>U U —<br>ಚ್ಚಿನ ಚಿ | ಜ<br>U — U<br>ಹ್ನಮಾ ಕೆ | ಸ<br>U U —<br>ನೆಯಿರಲ್ | ತ<br>— — U<br>ಪಾಲೊಳ್ ಘೃ | ತ<br>— — U<br>ತ ಚ್ಛಾಯೆ | ಗು<br>—<br>ಯೆಂ |
| | ಮ<br>— — —<br>ದೆಲ್ಲರ್ ಬ | ಸ<br>U U —<br>ಣ್ಣಿ ಪರಂ | ಜ<br>U — U<br>ತುಟೀ ತ | ಸ<br>U U —<br>ನುವಿನೊಳ್ | ತ<br>— — U<br>ಚೈತನ್ಯ | ತ<br>— — U<br>ಮುಂ ಬೋಧ | ಗು<br>—<br>ಮುಂ |
| | ಮ<br>— — —<br>ಸೊಲ್ಲುಂ ಜೀ | ಸ<br>U U —<br>ವ ಗುಣಂ | ಜ<br>U — U<br>ಗಳೆಂದ | ಸ<br>U U —<br>ಆ ಪಿ ದಯ್ | ತ<br>— — U<br>ರತ್ನಾಕ | ತ<br>— — U<br>ರಾಧೀ ಶ್ವ | ಗು<br>—<br>ರಾ |


**ಸೂತ್ರ :** ಕಣ್ಗೊಪ್ಪಲ್ಮಸಜಂಸತಂತಗಮುಮಾಶಾರ್ದೂಲವಿಕ್ರೀಡಿತಂ

CET37U



































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

कन्नड कुमारभारती इयत्ता ९ वी (कन्नड भाषा)

₹ 65.00